ಮಂಗಳವಾರ, ಅಕ್ಟೋಬರ್ 14, 2025 | ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ವೈಭವ್ ಉಪನಾಯಕ



14 ವರ್ಷದ ಬ್ಯಾಟರ್ ವೈಭವ್ ಸೂರ್ಯವಂಶಿ ಅವರು ರಣಜಿ ಟ್ರೋಫಿ ಟೂರ್ನಿಯ ಮೊದಲ ಎರಡು ಪಂದ್ಯಗಳಿಗೆ ಬಿಹಾರ ತಂಡದ ಉಪ ನಾಯಕನಾಗಿ ನೇಮಕಗೊಂಡಿದ್ದಾರೆ



ಪ್ರತಿಭಟನೆ

ರಾಜ್ಯ ಸರ್ಕಾರದಲ್ಲಿನ ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯ ಸದಸ್ಯರು ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯ ಆವರಣದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು


Kaleesuwari
ಗೋಲ್ಡ್ ವಿನ್ನರ್
ನಿಮಗೆಲ್ಲರಿಗೂ
ಆನಂದ ಮತ್ತು ಆರೋಗ್ಯ
ತುಂಬಿದ ದೀಪಾವಳಿ ಹಬ್ಬದ
ಹಾರ್ದಿಕ ಶುಭಾಶಯಗಳು!
Gold Winner®
TRUSTED BY
MOTHERS
Kaleesuwari
Gold Winner
Refined Sunflower Oil
Clear, Light & Non-sticky
Zero Cholesterol
Vitamins A, D, E
Improves Digestion
80 QUALITY CHECKS
CLEAR & LIGHT
0% CHOLESTEROL
80 QUALITY CHECKS
- www.kaleesuwari.com | 99621 50000

ಮಂಗಳವಾರ, ಅಕ್ಟೋಬರ್ 14, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 284 | ಪುಟ 18
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಆಕಾಶ ಬುಟ್ಟಿ



ಮುಂಬೈನಲ್ಲಿ ದೀಪಾವಳಿ ಹಬ್ಬದ ತಯಾರಿ ಜೋರಾಗಿದ್ದು, ವ್ಯಕ್ತಿಯೊಬ್ಬರು ಆಕಾಶ ಬುಟ್ಟಿಯನ್ನು ತಯಾರಿಸುವುದರಲ್ಲಿ ನಿರತರಾಗಿದ್ದುದು ಹೀಗೆ

ಕಿತ್ತೂರು ಉತ್ಸವ



ಬೆಂಗಳೂರಿನಲ್ಲಿ ಸೋಮವಾರ ನಡೆದ ಕಿತ್ತೂರು ಉತ್ಸವದ ಜ್ಯೋತಿಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ 'ಕರ್ನಾಟಕ ಜಾನಪದ ಕಲಾವಿದರ ಒಕ್ಕೂಟ'ದ ಸದಸ್ಯರೊಬ್ಬರು ಅಘೋರಿ ವೇಷ ಧರಿಸಿ ನೃತ್ಯ ಪ್ರದರ್ಶಿಸಿ ಗಮನ ಸೆಳೆದರು

ಸೆನ್ಸೆಕ್ಸ್ 82,327 | ನಿಫ್ಟಿ 25,227 | $/₹ 88.68 | ಶುದ್ಧ ಬೆಳ್ಳಿ (kg) ₹1,93,600 (ಬೆಂಗಳೂರು)

ಸಿ.ಎಂ ಆಯ್ಕೆ: ವಿಭಿನ್ನ ಹೇಳಿಕೆ

ಭಿನ್ನ ಅಭಿಪ್ರಾಯ ವ್ಯಕ್ತಪಡಿಸಿದ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು/ ಬಾಗಲಕೋಟೆ: 'ಮುಖ್ಯಮಂತ್ರಿ ಆಯ್ಕೆಯಲ್ಲಿ ಯಾರ ತೀರ್ಮಾನ ನಿರ್ಣಾಯಕ' ಎಂಬ ವಿಷಯದ ಕುರಿತು ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ವಿಭಿನ್ನ ಹೇಳಿಕೆ ನೀಡಿದ್ದಾರೆ.

'ಮುಖ್ಯಮಂತ್ರಿ ಬದಲಾವಣೆ ವಿಷಯದಲ್ಲಿ ಹೈಕಮಾಂಡ್ ಜೊತೆ ಶಾಸಕರ ನಿರ್ಧಾರವೂ ಮುಖ್ಯವಾಗುತ್ತದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಬಾಗಲಕೋಟೆಯಲ್ಲಿ ಪ್ರತಿಪಾದಿಸಿದ್ದಾರೆ. ಆದರೆ, 'ಮುಖ್ಯಮಂತ್ರಿಯಾಗಲು ಶಾಸಕರ ಬಲ ಮುಖ್ಯವಲ್ಲ. ಎಲ್ಲ ನಿರ್ಧಾರಗಳನ್ನು ಹೈಕಮಾಂಡ್ ಮಾಡುತ್ತದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

'ಸುವರ್ಣ' ಸುದ್ದಿವಾಹಿನಿಗೆ ಇತ್ತೀಚೆಗೆ ಸಂದರ್ಶನ ನೀಡಿದ್ದ ಶಿವಕುಮಾರ್, 'ಶಾಸಕರ ಬಲಾಬಲದ ಮೇಲೆ ಮುಖ್ಯಮಂತ್ರಿ ಸ್ಥಾನ ನಿರ್ಧಾರ ಆಗುವುದಿಲ್ಲ. ಹೈಕಮಾಂಡ್ ಮಾತೇ ಅಂತಿಮ. ವರಿಷ್ಠರು ಹೇಳಿದ್ದನ್ನು ಕೇಳಬೇಕು. ಹೈಕಮಾಂಡ್‌ನವರು ಏನು ಕೆಲಸ ಕೊಡುತ್ತಾರೊ ಅದನ್ನು ನಾವು ಒಪ್ಪಿಕೊಳ್ಳಲೇಬೇಕು' ಎಂದಿದ್ದರು.

ಈ ಹೇಳಿಕೆ ಕುರಿತು ಬಾಗಲಕೋಟೆ ಜಿಲ್ಲೆಯ ಬಂಡಿಗಣಿ ಮಠದಲ್ಲಿ ಸುದ್ದಿಗಾರರು ಸೋಮವಾರ ಪ್ರಸ್ತಾಪಿಸಿದಾಗ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಹೈಕಮಾಂಡ್ ಆಶೀರ್ವಾದವೂ ಬೇಕು. ಶಾಸಕರ ಬೆಂಬಲ ಇಲ್ಲದೇ ಯಾರೂ ಮುಖ್ಯಮಂತ್ರಿಯಾಗಲು ಆಗುವುದಿಲ್ಲ. ಬಹುಮತ ಇದ್ದರೆ ಆಗಬಹುದು' ಎಂದರು.

'ಔತಣಕೂಟಕ್ಕೂ ಸಂಪುಟ ಪುನರ್‌ರಚನೆಗೂ ಯಾವುದೇ ಸಂಬಂಧ ಇಲ್ಲ. ಆಗಾಗ ಊಟಕ್ಕೆ ಕರೆಯುತ್ತೇನೆ. ಊಟಕ್ಕೆ ಕರೆದಿದ್ದರಲ್ಲಿ ಯಾವುದೇ ವಿಶೇಷವಿಲ್ಲ. ನಿಮಗೆ (ಮಾಧ್ಯಮ) ಹಾಗೂ ಬಿಜೆಪಿಯವರಿಗೆ ವಿಶೇಷವಾಗಿದೆ' ಎಂದು ನಕ್ಕರು.



ಮುಖ್ಯಮಂತ್ರಿ ಆಯೋಜಿಸಿದ್ದ ಔತಣಕೂಟದಲ್ಲಿ ಡಿ.ಕೆ.ಶಿವಕುಮಾರ್ ಮತ್ತು ಸಚಿವರು ಭಾಗಿಯಾಗಿದ್ದರು

ಶಾಸಕರ ಅಭಿಪ್ರಾಯ ಪಡೆದೇ ಆಯ್ಕೆ: ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಗೃಹ ಸಚಿವ ಜಿ. ಪರಮೇಶ್ವರ, 'ಸರ್ಕಾರ ರಚಿಸುವ ಸಂದರ್ಭದಲ್ಲಿ ಶಾಸಕಾಂಗ ಪಕ್ಷದ (ಸಿಎಲ್‌ಪಿ) ನಾಯಕ ಅಂದರೆ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವಾಗ ಶಾಸಕರ ಅಭಿಪ್ರಾಯ ತೆಗೆದುಕೊಂಡು ಪಕ್ಷದ ಪ್ರಧಾನ ಕಾರ್ಯದರ್ಶಿಗಳು, ವೀಕ್ಷಕರು ಹೈಕಮಾಂಡ್‌ಗೆ ತಲುಪಿಸುತ್ತಾರೆ. ಇಂಥವರ ಪರ ಇಷ್ಟು ಜನ ಇದ್ದಾರೆ ಎಂದು ಹೇಳುತ್ತಾರೆ. ಯಾರಿಗೆ ಬಹುಮತ ವ್ಯಕ್ತವಾಗುತ್ತದೆಯೊ ಆ ಹೆಸರು ಪ್ರಕಟಿಸಿ, ಅವರನ್ನು ಮುಖ್ಯಮಂತ್ರಿ ಮಾಡುತ್ತಾರೆ' ಎಂದರು.

'ಸಿದ್ದರಾಮಯ್ಯ ಅವರನ್ನು ಆಯ್ಕೆ ಮಾಡಿದ್ದು ಇದೇ ರೀತಿಯಲ್ಲಿ. ಹಿಂದೆ ಎಸ್.ಎಂ. ಕೃಷ್ಣ ಅವರನ್ನು ಆಯ್ಕೆ ಮಾಡುವಾಗಲೂ ಇದೇ ರೀತಿಯಲ್ಲಿ ಮಾಡಿದ್ದೇವೆ. ಶಾಸಕರ ಅಭಿಪ್ರಾಯ ತೆಗೆದುಕೊಳ್ಳುವುದು ಪದ್ಧತಿ' ಎಂದರು.

▶4

ಸಂಪುಟ ಪುನರ್‌ರಚನೆಯ ಸುಳಿವು

'ಹೈಕಮಾಂಡ್ ನೀಡುವ ಸೂಚನೆ ಪಾಲಿಸಲು ಎಲ್ಲರೂ ಮಾನಸಿಕವಾಗಿ ಸಿದ್ಧರಾಗಬೇಕು' ಎಂದು ಸಿದ್ದರಾಮಯ್ಯ ಅವರು ಸಂಪುಟ ಸಹೋದ್ಯೋಗಿಗಳಿಗೆ ಕಿವಿಮಾತು ಹೇಳಿದ್ದಾರೆ.

ಬಿಹಾರ ವಿಧಾನಸಭೆಯ ಚುನಾವಣೆಯ ಬಳಿಕ ರಾಜ್ಯದ ಸಚಿವ ಸಂಪುಟ ಪುನರ್‌ರಚನೆ ಆಗಲಿದೆ ಎಂಬ ಸದ್ದು ಕಾಂಗ್ರೆಸ್ ಪಾಳಯದಲ್ಲಿ ಜೋರಾಗುತ್ತಿದೆ. ಈ ಮಧ್ಯೆಯೇ, ಸಿದ್ದರಾಮಯ್ಯ ಅವರು ತಮ್ಮ ಸರ್ಕಾರಿ ನಿವಾಸ 'ಕಾವೇರಿ'ಯಲ್ಲಿ ಸಚಿವರಿಗೆ ಸೋಮವಾರ ರಾತ್ರಿ ಔತಣಕೂಟ ಆಯೋಜಿಸಿದ್ದರು. ಉಪಮುಖ್ಯಮಂತ್ರಿ ಶಿವಕುಮಾರ್ ಸೇರಿದಂತೆ ಬಹುತೇಕ ಸಚಿವರು ಭಾಗಿಯಾಗಿದ್ದರು.

▶4

ತನಿಖೆ ಸಿಬಿಐಗೆ ವಹಿಸಿದ 'ಸುಪ್ರೀಂ'

ನಟ ವಿಜಯ್ ರ್‍ಯಾಲಿ ವೇಳೆ ಕರೂರಿನಲ್ಲಿ ನಡೆದ ಕಾಲ್ತುಳಿತ



ನವದೆಹಲಿ (ಪಿಟಿಐ): ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಅಧ್ಯಕ್ಷ, ನಟ ವಿಜಯ್ ಅವರ ರ್‍ಯಾಲಿ ವೇಳೆ ಕರೂರಿನಲ್ಲಿ ನಡೆದ ಕಾಲ್ತುಳಿತ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿ ಸುಪ್ರೀಂ ಕೋರ್ಟ್ ಸೋಮವಾರ ಆದೇಶಿಸಿದೆ.

ನ್ಯಾಯಮೂರ್ತಿಗಳಾದ ಜೆ.ಕೆ ಮಾಹೇಶ್ವರಿ ಮತ್ತು ಎನ್.ವಿ. ಅಂಜಾರಿಯಾ ಅವರ ಪೀಠವು, ಸಿಬಿಐ ತನಿಖೆಯ ಮೇಲ್ವಿಚಾರಣೆಗೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಜಯ್ ರಸ್ತೋಗಿ ನೇತೃತ್ವದ ಸಮಿತಿಯನ್ನೂ ನೇಮಿಸಿದೆ.

ವಿಜಯ್ ಅವರು ಸೆಪ್ಟೆಂಬರ್ 27ರಂದು ಕರೂರಿನಲ್ಲಿ ರ್‍ಯಾಲಿ ನಡೆಸಿದ್ದ ವೇಳೆ ಕಾಲ್ತುಳಿತ ಸಂಭವಿಸಿತ್ತು. ಕಾಲ್ತುಳಿತದಲ್ಲಿ 41 ಮಂದಿ ಮೃತಪಟ್ಟಿದ್ದರು.

ಎಸ್‌ಐಟಿ ರಚನೆಗೆ ಮದ್ರಾಸ್ ಹೈಕೋರ್ಟ್ ನೀಡಿದ ಆದೇಶವನ್ನು ಪ್ರಶ್ನಿಸಿ ಟಿವಿಕೆ ಪಕ್ಷ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಅಕ್ಟೋಬರ್ 10ರಂದು ನಡೆಸಿದ್ದ ಪೀಠ, ಆದೇಶವನ್ನು ಕಾಯ್ದಿರಿಸಿತ್ತು.

▶5

'ತಪ್ಪು ಮಾಹಿತಿ ನೀಡಲಾಗಿದೆ'

ಚೆನ್ನೈ: ಕಾಲ್ತುಳಿತ ಬಗ್ಗೆ ಸಿಬಿಐ ತನಿಖೆಗೆ ಕೋರಿ ಸುಪ್ರೀಂ ಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸುವಾಗ ತಮಗೆ ತಪ್ಪು ಮಾಹಿತಿ ನೀಡಲಾಗಿದೆ ಎಂದು ಎರಡು ಸಂತ್ರಸ್ತ ಕುಟುಂಬಗಳು ಆರೋಪಿಸಿವೆ.

'ಕುಟುಂಬದ ಸದಸ್ಯರಿಗೆ ಪರಿಹಾರ ಮತ್ತು ಸರ್ಕಾರಿ ಉದ್ಯೋಗ ನೀಡುವುದಕ್ಕೆ ಸಂಬಂಧಿಸಿದ ಅರ್ಜಿ ಎಂದು ಭಾವಿಸಿ ಸಹಿ ಹಾಕಿದ್ದೇವೆ. ಅದು ಸಿಬಿಐ ತನಿಖೆ ಕೋರಿರುವ ಅರ್ಜಿ ಎಂಬ ಮಾಹಿತಿ ಇರಲಿಲ್ಲ' ಎಂದು ಹೇಳಿವೆ.

'ನಮ್ಮ ಪರವಾಗಿ ಸಿಬಿಐ ತನಿಖೆಗೆ ಕೋರಲಾಗಿದೆ ಎಂಬುದು ತಿಳಿದಿರಲಿಲ್ಲ. ಅರ್ಜಿಗೆ ಸಹಿ ಹಾಕಿರುವ ನನ್ನ ಪತಿ ಪನ್ನೀರಸೆಲ್ವಂ ಅವರು ನಮ್ಮನ್ನು ತೊರೆದು 9 ವರ್ಷಗಳಾಗಿವೆ' ಎಂದು ಕಾಲ್ತುಳಿತದಲ್ಲಿ ಪ್ರಾಣ ಕಳೆದುಕೊಂಡ 9 ವರ್ಷದ ಬಾಲಕನ ತಾಯಿ ಶರ್ಮಿಳಾ ಹೇಳಿದ್ದಾರೆ.

'ಪರಿಹಾರ ಮತ್ತು ಮಗನಿಗೆ ಉದ್ಯೋಗ ಸಿಗುತ್ತದೆ ಎಂಬ ಆಶಯದೊಂದಿಗೆ ಕೆಲವು ಕಾಗದಪತ್ರಗಳಿಗೆ ಸಹಿ ಹಾಕಿದ್ದೇನೆ' ಎಂದು ದುರ್ಘಟನೆಯಲ್ಲಿ ಪತ್ನಿಯನ್ನು ಕಳೆದುಕೊಂಡಿರುವ ದಿನಗೂಲಿ ನೌಕರ ಪಿ.ಸೆಲ್ವರಾಜ್ ಹೇಳಿದ್ದಾರೆ.

'ಆದೇಶ ರದ್ದುಗೊಳಿಸಲೂಬಹುದು'

ತನಿಖೆಯನ್ನು ಸಿಬಿಐಗೆ ವಹಿಸಿ ನೀಡಿರುವ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸುವ ಸಾಧ್ಯತೆಗಳಿವೆ ಎಂದು ಡಿಎಂಕೆ ಸೋಮವಾರ ಹೇಳಿದೆ.

'ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಅರ್ಜಿಯಲ್ಲಿ ತಮ್ಮ ಹೆಸರುಗಳನ್ನು ಸೇರಿಸಿದ್ದು ಅರಿವಿಗೆ ಬಂದಿಲ್ಲ ಎಂದು ಇಬ್ಬರು ವ್ಯಕ್ತಿಗಳು ನ್ಯಾಯಾಲಯಕ್ಕೆ ತಿಳಿಸಿದ್ದಾರೆ' ಎಂದು ತಮಿಳುನಾಡು ಸರ್ಕಾರವನ್ನು ಪ್ರತಿನಿಧಿಸಿದ ಡಿಎಂಕೆ ರಾಜ್ಯಸಭಾ ಸದಸ್ಯ ಮತ್ತು ವಕೀಲ ಪಿ. ವಿಲ್ಸನ್ ತಿಳಿಸಿದರು.

ಸುರಂಗ ರಸ್ತೆ: 121 ನ್ಯೂನತೆ ಪತ್ತೆ

• ನವೀನ್ ಮಿನೇಜಸ್


ಬೆಂಗಳೂರು: ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಹೆಬ್ಬಾಳದವರೆಗಿನ 16.5 ಕಿ.ಮೀ ಸುರಂಗ ರಸ್ತೆ ಅನುಷ್ಠಾನದಲ್ಲಿ ಅನಿಶ್ಚಿತತೆ ಕಂಡುಬಂದಿದೆ. ಸರ್ಕಾರವೇ ರಚಿಸಿರುವ ತಜ್ಞರ ಸಮಿತಿ ಯೋಜನೆಯಲ್ಲಿ 121 ನ್ಯೂನತೆಗಳನ್ನು ಗುರುತಿಸಿದೆ.

ಸುರಂಗ ರಸ್ತೆಯ ವಿಸ್ತೃತಾ ಯೋಜನಾ ವರದಿಯಲ್ಲಿ (ಡಿಪಿಆರ್) ತಜ್ಞರ ಸಮಿತಿ ಸಮಸ್ಯೆಗಳನ್ನು ಗುರುತಿಸಿರುವುದರಿಂದ ಸರ್ಕಾರ ಸುರಂಗ ರಸ್ತೆ ಯೋಜನೆ ಮುಂದು ವರಿಸುವ ಬಗ್ಗೆ ಮತ್ತೊಮ್ಮೆ ಆಲೋಚಿಸುವಂತಾಗಿದೆ.

ಸುರಂಗ ರಸ್ತೆ ಯೋಜನೆಯನ್ನು ರೂಪಿಸಿರುವವರು, ತಜ್ಞರ ಸಮಿತಿಯ ಕಳವಳವನ್ನು ದೂರ ಮಾಡಿದ್ದೇವೆ ಎಂದು ಹೇಳಿದ್ದರೂ, ಎಲ್ಲ ನ್ಯೂನತೆಗೂ ಸರಿಯಾದ ವಿವರಣೆ ಸಿಕ್ಕಿಲ್ಲ. ಪ್ರಮುಖವಾಗಿ, ಲಾಲ್‌ಬಾಗ್ ಬಳಿ ಸುರಂಗ ರಸ್ತೆಯ ಪ್ರವೇಶ–ನಿರ್ಗಮನ ಸೌಲಭ್ಯವನ್ನು ಕಲ್ಪಿಸುವ ಪ್ರಸ್ತಾವದಲ್ಲಿ ಸಮಗ್ರ ಭೂ ತಾಂತ್ರಿಕ ಅಧ್ಯಯನಗಳಾಗಿಲ್ಲ ಎಂಬುದನ್ನು ತಜ್ಞರ ಸಮಿತಿ ಹೇಳಿದೆ.

▶3A

ತಜ್ಞರ ಸಮಿತಿ ಗುರುತಿಸಿರುವ ನ್ಯೂನತೆಗಳು



- ಮೆಟ್ರೊ ಮಾರ್ಗಕ್ಕೆ ಪರ್ಯಾಯವಾಗಿರುವ ಸುರಂಗ ರಸ್ತೆಯ ಸಂಚಾರ ದಟ್ಟಣೆ ವೇಳೆ ಹೇಗಿರುತ್ತದೆ ಎಂಬ ದತ್ತಾಂಶ ಇಲ್ಲ
- ಪ್ರವೇಶ ಮತ್ತು ನಿರ್ಗಮನ ರ್‍ಯಾಂಪ್‌ಗಳ ಸ್ಥಳವನ್ನು ಇನ್ನಷ್ಟು ವಿಸ್ತರಿಸದಿದ್ದರೆ ವಾಹನ ದಟ್ಟಣೆ ಉಂಟಾಗುತ್ತದೆ
- ಹೆಬ್ಬಾಳ ಕೆರೆಯ ಕಾಲುವೆಯ ಮಾರ್ಗ ಬದಲಾಯಿಸುವುದರಿಂದ ವಿಮಾನ ನಿಲ್ದಾಣದ ರಸ್ತೆಯಲ್ಲಿ ಅಡಚಣೆ ಉಂಟಾಗುತ್ತದೆ
- ಅಂತರ್ಜಲ ಸೇರಿದಂತೆ ಪರಿಸರದ ಮೇಲಾಗುವ ಪರಿಣಾಮದ ಮಾಹಿತಿ ಲಭ್ಯವಿಲ್ಲ
- ಭೂಸ್ವಾಧೀನ, ಸೌಲಭ್ಯ ವರ್ಗಾವಣೆ, ಉಪಕರಣ, ಶುಲ್ಕ ಸಂಗ್ರಹ ವ್ಯವಸ್ಥೆ ಇತ್ಯಾದಿಗೆ ಒಟ್ಟಾರೆ ತಗಲುವ ವೆಚ್ಚವನ್ನು ಅಂದಾಜಿಸಿ, ಒದಗಿಸುವುದು ಸಾಮಾನ್ಯ ಪ್ರಕ್ರಿಯೆಗೆ ವಿರುದ್ಧವಾಗಿದೆ
- ಸುರಂಗ ರಸ್ತೆಯಲ್ಲಿ ಮುಂದಿನ 25 ವರ್ಷಗಳಲ್ಲಿನ ಸಂಚಾರದ ದೂರದೃಷ್ಟಿ ಇಟ್ಟುಕೊಂಡು ಪಥಗಳ ಸಂಖ್ಯೆಯನ್ನು ನಿರ್ಧರಿಸಬೇಕು. ಸಂಚಾರ ದತ್ತಾಂಶದ ಪ್ರಕಾರ, 2041ರ ವೇಳೆಗೆ 2 + 2 ಪಥಗಳ ಅಗತ್ಯವಿರುತ್ತದೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಭಾರತೀಯ ರೈಲ್ವೆ ಹಾಗೂ ಕ್ಯಾಟರಿಂಗ್ ಪ್ರವಾಸೋದ್ಯಮ ನಿಗಮದ ಪ್ರಕರಣ

ಲಾಲೂ ಕುಟುಂಬ ವಿರುದ್ಧ ದೋಷಾರೋಪ

ನವದೆಹಲಿ (ಪಿಟಿಐ): ಭಾರತೀಯ ರೈಲ್ವೆ ಹಾಗೂ ಕ್ಯಾಟರಿಂಗ್ ಪ್ರವಾಸೋದ್ಯಮ ನಿಗಮದ (ಐಆರ್‌ಸಿಟಿಸಿ) ಹಗರಣದಲ್ಲಿ ಆರ್‌ಜೆಡಿ ವರಿಷ್ಠ ಲಾಲೂ ಪ್ರಸಾದ್ ಮತ್ತು ಅವರ ಪತ್ನಿ ರಾಬ್ಡಿ ದೇವಿ, ಲಾಲೂ ಪುತ್ರ, ಬಿಹಾರ ವಿಧಾನಸಭೆಯ ವಿರೋಧ ಪಕ್ಷದ ನಾಯಕ ತೇಜಸ್ವಿ ಯಾದವ್ ವಿರುದ್ಧ ಇಲ್ಲಿನ ನ್ಯಾಯಾಲಯವು ದೋಷಾರೋಪ ನಿಗದಿಪಡಿಸಿದೆ. ಬಿಹಾರ ವಿಧಾನಸಭೆ ಚುನಾವಣೆ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ಈ ಬೆಳವಣಿಗೆಯೂ ಆರ್‌ಜೆಡಿಗೆ ತೀವ್ರ ಹಿನ್ನಡೆ ಎಂದು ವಿಶ್ಲೇಷಿಸಲಾಗಿದೆ.

ಐಆರ್‌ಸಿಟಿಸಿಗೆ ಸೇರಿದ 2 ಹೋಟೆಲ್‌ಗಳನ್ನು ಖಾಸಗಿ ಸಂಸ್ಥೆಯೊಂದಿಗೆ ಕಾರ್ಯಾಚರಣಾ ಒಪ್ಪಂದ ಮಾಡಿಕೊಳ್ಳುವ ಮೂಲಕ ಅವ್ಯವಹಾರವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ರಾಬ್ಡಿ ದೇವಿ ಹಾಗೂ ತೇಜಸ್ವಿ ಯಾದವ್ ವಿರುದ್ಧ ಕ್ರಿಮಿನಲ್ ಸಂಚು ಹಾಗೂ ವಂಚನೆ ಆರೋಪ ಹೊರಿಸಲಾಗಿದೆ ಎಂದು ರೌಸ್ ಅವೆನ್ಯೂ ನ್ಯಾಯಾಲಯದ ವಿಶೇಷ ನ್ಯಾಯಾಧೀಶ ವಿಶಾಲ್ ಗೊಗ್ನೆ ತಿಳಿಸಿದರು.

▶7

ಹೊರಗಿನವರಿಗೆ ಭಯಪಡಲ್ಲ– ತೇಜಸ್ವಿ ಕಿಡಿ

ಪಾಟ್ನಾ (ಪಿಟಿಐ): ತಮ್ಮ ವಿರುದ್ಧ ನ್ಯಾಯಾಲಯವು ದೋಷಾರೋಪ ನಿಗದಿಪಡಿಸಿದ ಬೆನ್ನಲ್ಲೇ, ಬಿಜೆಪಿ ವಿರುದ್ಧ ತೇಜಸ್ವಿ ಯಾದವ್ ಕಿಡಿಕಾರಿದ್ದಾರೆ.

'ನೈಜ ಬಿಹಾರಿ ವ್ಯಕ್ತಿಯು ಎಂದಿಗೂ ಹೊರಗಿನವರಿಗೆ ಭಯಪಡುವುದಿಲ್ಲ, ಜೀವ ಇರುವವರೆಗೂ ಬಿಜೆಪಿ ವಿರುದ್ಧ ಹೋರಾಟ ನಡೆಸುತ್ತೇನೆ' ಎಂದಿದ್ದಾರೆ.

'ನಮ್ಮನ್ನು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡುವುದಿಲ್ಲ ಎಂದು ತಿಂಗಳ ಹಿಂದೆ ಬಿಹಾರಕ್ಕೆ ಭೇಟಿ ನೀಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬೆದರಿಕೆ ಒಡ್ಡಿದ್ದರು. ನಾನು ಹೋರಾಟ ನಡೆಸಲಿದ್ದು, ಅದರಲ್ಲಿ ಜಯಶಾಲಿಯಾಗಲಿದ್ದೇನೆ. ನಾವು ಬಿಹಾರಿಗಳು. ನೈಜ ಬಿಹಾರಿಗಳಾಗಿದ್ದೇವೆ. ನಾವು ಹೊರಗಿನವರಿಗೆ ಬೆದರಲ್ಲ, ಜೈ ಬಿಹಾರ್, ಜೈ ಬಿಹಾರಿ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ. ತುಂತುರು ಮಳೆ ಸಾಧ್ಯತೆ

ಪೋಕ್ಸೊ ಪ್ರಕರಣ: ಆರೋಪಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೋಕ್ಸೊ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಯೊಬ್ಬ ಶೌಚಾಲಯ ಸ್ವಚ್ಛಗೊಳಿಸುವ ರಾಸಾಯನಿಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಕೆಂಗೇರಿ ನಿವಾಸಿ ಅಂಬರೀಶ್(50) ಆತ್ಮಹತ್ಯೆ ಮಾಡಿಕೊಂಡ ಆರೋಪಿ. ಕೆಂಗೇರಿಯಲ್ಲಿ ಒಂದೂವರೆ ತಿಂಗಳ ಹಿಂದೆ ಬಾಲಕಿ ಮೇಲೆ ಆರೋಪಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಪೋಷಕರು ಆರೋಪಿಯ ವಿರುದ್ಧ ಕೆಂಗೇರಿ ಠಾಣೆಯಲ್ಲಿ ದೂರು ನೀಡಿದ್ದು, ಪೊಲೀಸರು ಆತನ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಿಕೊಂಡಿದ್ದರು.

ಈ ವಿಚಾರ ತಿಳಿದ ಆರೋಪಿ ತಲೆಮರೆಸಿಕೊಂಡಿದ್ದ. ಒಂದೆರಡು ದಿನಗಳ ಹಿಂದಷ್ಟೇ ಕೆಂಗೇರಿಗೆ ವಾಪಸ್ ಆಗಿದ್ದ. ಭಾನುವಾರ ರಾತ್ರಿ ಮನೆಯಲ್ಲೇ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಕಟ್ಟಡದಿಂದ ಬಿದ್ದು ವಿದ್ಯಾರ್ಥಿ ಸಾವು

ಬೆಂಗಳೂರು: ರಿಚರ್ಡ್ಸ್ ಟೌನ್‌ನಲ್ಲಿರುವ ಶಾಲೆಯೊಂದರ ಕಟ್ಟಡದ ಎರಡನೇ ಮಹಡಿಯಿಂದ ಜಿಗಿದು 12ನೇ ತರಗತಿ ವಿದ್ಯಾರ್ಥಿ ಮೃತಪಟ್ಟಿರುವ ಘಟನೆ ಸೋಮವಾರ ನಡೆದಿದೆ.

ಈ ಸಂಬಂಧ ಪುಲಕೇಶಿ ನಗರ ಠಾಣೆ ಪೊಲೀಸರು ಯುಡಿಆರ್ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

'ಬೆಳಿಗ್ಗೆ 8.10ಕ್ಕೆ ಶಾಲೆಗೆ ಬಂದ 17 ವರ್ಷದ ವಿದ್ಯಾರ್ಥಿ, ಕಟ್ಟಡದ ಎರಡನೇ ಮಹಡಿಯಿಂದ ಕೆಳಗೆ ಹಾರಿದ್ದಾನೆ. ಈ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಆದರೆ, ಸ್ಪಷ್ಟವಾಗಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಪ್ರಕಟಣೆ ಹೊರಡಿಸಿರುವ ಶಾಲಾ ಆಡಳಿತ ಮಂಡಳಿ, 'ಶಾಲಾ ಕಟ್ಟಡದಿಂದ ಕೆಳಗೆ ಹಾರಿ ತೀವ್ರವಾಗಿ ಗಾಯಗೊಂಡಿದ್ದ ವಿದ್ಯಾರ್ಥಿಯನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ವಿದ್ಯಾರ್ಥಿ ಉತ್ತಮ ಕ್ರೀಡಾಪಟುವಾಗಿದ್ದು, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ. ಮಂಗಳವಾರ ಶಾಲೆಗೆ ರಜೆ ನೀಡಲಾಗಿದೆ' ಎಂದು ತಿಳಿಸಿದೆ.

ಅಡಿಕೆ ಮಾರಾಟ ಸಂಘಕ್ಕೆ ಆಯ್ಕೆ

ರಾಜರಾಜೇಶ್ವರಿ ನಗರ: ಬೆಂಗಳೂರು ಮತ್ತು ಮೈಸೂರು ವಿಭಾಗದ ರೈತರ ಅಡಿಕೆ ಮಾರಾಟ ಮತ್ತು ಪರಿಷ್ಕರಣ ಸಹಕಾರ ಸಂಘ ನಿಯಮಿತದ ಅಧ್ಯಕ್ಷರಾಗಿ ಡಿ. ಹನುಮಂತಯ್ಯ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಎಚ್. ಎನ್. ಶ್ರೀನಿವಾಸ ಗೌಡ (ಕುಣಿಗಲ್), ಕಾರ್ಯದರ್ಶಿಯಾಗಿ ಹೇಮಂತ್ ಕುಮಾರ್, ಬೆಂಗಳೂರು ದಕ್ಷಿಣ ನಿರ್ದೇಶಕರಾಗಿ ಬಿ. ಶಿವಣ್ಣ (ಕುಣಿಗಲ್), ಎಚ್. ಬಿ. ಚಂದ್ರು (ಚನ್ನಪಟ್ಟಣ), ಪಿ. ಮಹದೇವಯ್ಯ (ಮಳವಳ್ಳಿ), ಎಚ್. ಟಿ. ಮಂಜುನಾಥ್ (ದೊಡ್ಡಬಳ್ಳಾಪುರ), ಜಿ.ವಿ. ನಾರಾಯಣಸ್ವಾಮಿ (ಬೆಂಗಳೂರು ದಕ್ಷಿಣ), ಕೆ.ಚಂದ್ರಯ್ಯ (ಮಾಗಡಿ), ರಾಮಕೃಷ್ಣಯ್ಯ (ಚನ್ನಪಟ್ಟಣ), ಹನುಮಂತೇಗೌಡ, ಟಿ. ಮಂಜುನಾಥ್ (ಮಾಗಡಿ), ಎಚ್.ವಿ. ಹನುಮಂತ ರಾಯಪ್ಪ (ಚಿತ್ರದುರ್ಗ), ಜಿ. ಕೆಂಪೇಗೌಡ (ದೊಡ್ಡಬಳ್ಳಾಪುರ), ಪಿ. ಚಂದ್ರೇಗೌಡ (ರಾಮನಗರ), ಕುಮಾರ್ (ಮಾಗಡಿ), ಚಿನ್ನಸ್ವಾಮಿ (ಕನಕಪುರ), ಪುರುಷೋತ್ತಮ್ (ಮಾಗಡಿ), ಹೇಮಾ ಮತ್ತು ಲೀಲಾವತಿ (ಬೆಂಗಳೂರು) ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಗೆದ ರಸ್ತೆ: ಸಂಚಾರ ಅಯೋಮಯ

ನವರಂಗ ವೃತ್ತದಿಂದ ಒರಾಯನ್ ಮಾಲ್‌ವರೆಗೆ ನಿಧಾನಗತಿಯಲ್ಲಿ ಸಾಗಿದ ವೈಟ್ ಟಾಪಿಂಗ್ ಕಾಮಗಾರಿ

● ಖಲೀಲಅಹ್ಮದ ಶೇಖ

ಬೆಂಗಳೂರು: ರಾಜಾಜಿನಗರದ ನವರಂಗ ವೃತ್ತದಿಂದ ಒರಾಯನ್ ಮಾಲ್‌ವರೆಗಿನ ಡಾ. ರಾಜ್‌ಕುಮಾರ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೊಂಡಿದ್ದು, ರಸ್ತೆ ಹಾಗೂ ಪಾದಚಾರಿ ಮಾರ್ಗಗಳನ್ನು ಅಗೆಯಲಾಗಿದೆ. ವಿವಿಧ ಜಿಲ್ಲೆಗಳಿಂದ ರಾಜಧಾನಿಗೆ ಪ್ರವೇಶಿಸುವ ವಾಹನಗಳು ಮೆಜೆಸ್ಟಿಕ್‌ಗೆ ಸಂಪರ್ಕಿಸುವ ಪ್ರಮುಖ ಮಾರ್ಗವಾಗಿದ್ದು, ಬೆಳಗಿನ ಜಾವ ಹಾಗೂ ರಾತ್ರಿ ಸಮಯದಲ್ಲಿ ಸಂಚಾರ ದಟ್ಟಣೆ ಆಗುತ್ತಿದೆ. ರಸ್ತೆಯನ್ನು ಅಗೆದು ಹಾಕಿ ತಿಂಗಳು ಕಳೆದರೂ ಮುಚ್ಚಿಲ್ಲ. ಇದರಿಂದ ವಾಹನ ಸಂಚಾರಕ್ಕೆ ಸಂಚಕಾರ ಬಂದಿದೆ.

ಈ ರಸ್ತೆಯಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ಆರಂಭವಾಗಿದೆ. ಇದಕ್ಕಾಗಿ ಬೆಸ್ಕಾಂನವರು ಭೂಗತ ಕೇಬಲ್ ಹಾಗೂ ಜಲಮಂಡಳಿಯವರು ಕೊಳವೆಗಳನ್ನು ಅಳವಡಿಸಲು ಒಂದು ಬದಿಯ ಪಾದಚಾರಿ ಮಾರ್ಗಗಳಲ್ಲಿ ಚರಂಡಿ ಮೇಲಿನ ಕಾಂಕ್ರೀಟ್ ಸ್ಲ್ಯಾಬ್‌ಗಳು ಹಾಗೂ ಪೇವರ್ಸ್‌ಗಳನ್ನು ತೆಗೆದಿದ್ದಾರೆ. ಕೆಲವು ಕಡೆ ಗುಂಡಿಗಳನ್ನು ತೆಗೆಯಲಾಗಿದೆ. ಗುಂಡಿ ಹಾಗೂ ಸ್ಲ್ಯಾಬ್‌ಗಳನ್ನು ತೆಗೆದಿರುವ ಜಾಗದಲ್ಲಿ ಯಾವುದೇ ಸುರಕ್ಷತಾ ಕ್ರಮಗಳನ್ನು ಕೈಗೊಂಡಿಲ್ಲ.

ಈ ರಸ್ತೆಯಲ್ಲಿ ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದನ್ನು ಲೆಕ್ಕಿಸದ ದ್ವಿಚಕ್ರ ವಾಹನ ಸವಾರರು, ಆಟೊ ಚಾಲಕರು ಇದೇ ರಸ್ತೆಯಲ್ಲಿ ಬರುತ್ತಾರೆ. ಸಂಚಾರ ದಟ್ಟಣೆಗೆ ಇದೇ ಮುಖ್ಯ ಕಾರಣ. ಬೆಳಿಗ್ಗೆ 4ರಿಂದ ಮಧ್ಯಾಹ್ನ 10 ಗಂಟೆ ಹಾಗೂ ಸಂಜೆ 5 ರಿಂದ ರಾತ್ರಿ 11 ಗಂಟೆಯೊಳಗೆ ಈ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ ಎಂದು ಸಾರ್ವಜನಿಕರು ದೂರಿದರು.

'ಕೆಲವು ಒಳ ರಸ್ತೆಗಳಿಂದ ಈ ರಸ್ತೆಯನ್ನು ಸಂಪರ್ಕಿಸುವ ಜಾಗದಲ್ಲಿ ಅಗೆದಿರುವುದರಿಂದ ಅಲ್ಲಲ್ಲ ವಾಹನಗಳು ಸುತ್ತಿಬಳಸಿ ಹೋಗಬೇಕಿದೆ. ಪ್ರಕಾಶನಗರ, ಗಾಯತ್ರಿನಗರ, ಸುಬ್ರಹ್ಮಣ್ಯ ನಗರದ ಜನರು ದೂಳಿನಿಂದ ತೊಂದರೆ ಅನುಭವಿಸುತ್ತಿದ್ದಾರೆ. ಕೆಲ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಅಗೆದು ಹಾಗೆಯೇ ಬಿಡಲಾಗಿದೆ. ಸಾರ್ವಜನಿಕರ ಓಡಾಟಕ್ಕೆ ಸಮಸ್ಯೆ ಆಗಿದೆ. ಪಾದಚಾರಿ ಮಾರ್ಗವನ್ನು ಅಗೆದು ಚರಂಡಿ ಕಾಮಗಾರಿ ಕೈಗೊಂಡಿದ್ದು, ಅಂಗಡಿಗೆ ಹೋಗಲು ಯಾವುದೇ ರೀತಿಯ ವ್ಯವಸ್ಥೆ ಮಾಡಿಲ್ಲ. ಇದರಿಂದ ಗ್ರಾಹಕರೇ ಬರುತ್ತಿಲ್ಲ. ವ್ಯಾಪಾರ-ವಹಿವಾಟಿಗೆ ಧಕ್ಕೆಯಾಗಿದೆ' ಎಂದು ಸ್ಥಳೀಯ ಹೋಟೆಲ್, ಕಾಂಡಿಮೆಂಟ್ಸ್‌ನ ವ್ಯಾಪಾರಿಗಳು ಅಳಲು ತೋಡಿಕೊಂಡರು.

'ಅಭಿವೃದ್ಧಿ ಹೆಸರಿನಲ್ಲಿ ಚೆನ್ನಾಗಿರುವ ರಸ್ತೆಯನ್ನು ಅಗೆದು ಹಾಕಿದ್ದಾರೆ. ಪ್ರಭಾವಿಗಳಿಗೆ ನೀರು ಒದಗಿಸಲು ಇರುವ ರಸ್ತೆಯನ್ನು ಅಗೆದು ಹಾಳು ಮಾಡಿದ್ದಾರೆ. ಒಂದು ತಿಂಗಳಿಗೂ ಅಧಿಕ ಸಮಯದಿಂದ ದೂಳು ತಿನ್ನುತ್ತಿದ್ದೇವೆ. ಅಂಗಡಿ, ಹೋಟೆಲ್, ಬೇಕರಿಗಳಿಗೆ ಹೋಗುವಂತಿಲ್ಲ. ಎಲ್ಲ ಕಡೆ ದೂಳು ತುಂಬಿದೆ. ಈಗ ಮಳೆ ಬರುತ್ತಿರುವುದರಿಂದ ದೂಳು ಕಡಿಮೆಯಾಗಿದೆ. ಆದರೆ, ಮಳೆ ಹೆಚ್ಚಾದರೆ ಕೆಸರಲ್ಲಿ ಕಾಲು ಇಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ' ಎಂದು ದೂರಿದರು.

'ಡಾ. ರಾಜ್‌ಕುಮಾರ್ ರಸ್ತೆಯ ನವರಂಗ ವೃತ್ತದಿಂದ ಒರಾಯನ್ ಮಾಲ್‌ವರೆಗೆ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳಲಾಗಿದೆ. ಇಲ್ಲಿ ಒಳ ಚರಂಡಿ, ವಿದ್ಯುತ್ ಕೇಬಲ್ ಅಳವಡಿಕೆ, ಯುಟಿಲಿಟಿ ಪೈಪ್ ಅಳವಡಿಸುವ ಕಾಮಗಾರಿ ನಡೆಯುತ್ತಿದೆ. ಇದು ಮುಗಿದ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳಲಾಗುತ್ತದೆ' ಎಂದು ಬೆಂಗಳೂರು ಜಲ ಮಂಡಳಿಯ ಅಧಿಕಾರಿಗಳು ತಿಳಿಸಿದರು.

ಮುಖ್ಯಾಂಶಗಳು
- ಗುಂಡಿ, ಸ್ಲ್ಯಾಬ್‌ಗಳನ್ನು ತೆಗೆದಿರುವ ಜಾಗದಲ್ಲಿ ಸುರಕ್ಷತಾ ಕ್ರಮಗಳಿಲ್ಲ
- ರಸ್ತೆಯೆಲ್ಲ ದೂಳುಮಯ, ಹೆಚ್ಚಿದ ಸಂಚಾರ ದಟ್ಟಣೆ
- ಕುಸಿದ ವ್ಯಾಪಾರ–ವಹಿವಾಟು


ರಾಜಾಜಿನಗರದ ಡಾ.ರಾಜ್‌ಕುಮಾರ್ ರಸ್ತೆ ನವರಂಗ ವೃತ್ತದಲ್ಲಿ ವೈಟ್ ಟಾಪಿಂಗ್ ಕಾಮಗಾರಿಗಾಗಿ ಪಾದಚಾರಿ ಮಾರ್ಗ ಅಗೆಯಲಾಗಿದೆ. ವ್ಯಕ್ತಿಯೊಬ್ಬರು ತಮ್ಮ ಮಗನನ್ನು ಎತ್ತಿಕೊಂಡು ಚರಂಡಿಯನ್ನು ದಾಟಿಸಿದರು


ರಾಜಾಜಿನಗರದ ಡಾ. ರಾಜ್‌ಕುಮಾರ್ ರಸ್ತೆ ನವರಂಗ ವೃತ್ತದಲ್ಲಿ ವೈಟ್ ಟಾಪಿಂಗ್ ಕಾಮಗಾರಿಗಾಗಿ ರಸ್ತೆಯನ್ನು ಅಗೆಯಲಾಗಿದೆ
ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಸಾರ್ವಜನಿಕರು ಏನಂತಾರೆ?

ರಾಜ್ಯದ ಬಹುತೇಕ ಜಿಲ್ಲೆಗಳಿಗೆ ಈ ಮಾರ್ಗದ ಮೂಲಕವೇ ಬಸ್‌ಗಳು ಸಂಚರಿಸುತ್ತವೆ. ಒಂದು ತಿಂಗಳ ಹಿಂದೆ ರಸ್ತೆ ಅಗೆದು ಹಾಕಿರುವ ಪರಿಣಾಮ ಬಸ್‌ಗಳು ಬದಲಿ ಮಾರ್ಗದ ಮೂಲಕ ಸಂಚರಿಸುತ್ತಿವೆ. ಇದರಿಂದ ನಮ್ಮ ವ್ಯಾಪಾರಕ್ಕೆ ಹೊಡೆತ ಬಿದ್ದಿದೆ. ನಾಲ್ವರು ಕೆಲಸ ಮಾಡುತ್ತಿದ್ದ ಅಂಗಡಿಯಲ್ಲಿ ಈಗ ನಾನು ಒಬ್ಬನೇ ಕೆಲಸ ಮಾಡುತ್ತಿದ್ದೇನೆ. ಅಂಗಡಿ ಬಾಡಿಗೆ ಕಟ್ಟುವುದಕ್ಕೂ ಸಾಧ್ಯವಾಗುತ್ತಿಲ್ಲ.
ಚೇತನ್, ಕಾಂಡಿಮೆಂಟ್ಸ್ ಮಾಲೀಕ

ಅಭಿವೃದ್ಧಿಯ ಹೆಸರಿನಲ್ಲಿ ರಸ್ತೆ ಅಗೆದು ಹಾಗೆಯೇ ಬಿಡಲಾಗಿದೆ. ಇದರಿಂದ, ವ್ಯಾಪಾರಿಗಳಿಗೆ ಆರ್ಥಿಕ ಸಂಕಷ್ಟ ಎದುರಾಗಿದೆ. ಕೂಡಲೇ ಕಾಮಗಾರಿ ಪೂರ್ಣಗೊಳಿಸಬೇಕು.
ದಯಾನಂದ್, ಹೋಟೆಲ್ ಉದ್ಯಮಿ

ಡಾ. ರಾಜ್‌ಕುಮಾರ್ ರಸ್ತೆಯನ್ನು ಅಗೆದು ಹಾಕಿರುವ ಪರಿಣಾಮ ಇಡೀ ಪ್ರದೇಶವೆಲ್ಲ ದೂಳುಮಯವಾಗಿದೆ. ಇದರಿಂದ ಗ್ರಾಹಕರು ನಮ್ಮ ಹೋಟೆಲ್‌ಗೆ ಬರುತ್ತಿಲ್ಲ. ಹೋಟೆಲ್‌ಗೆ ಹಾಕಿರುವ ಬಂಡವಾಳವೂ ಬರುತ್ತಿಲ್ಲ. ಆದಾಯವೂ ಇಲ್ಲದೇ ನಮ್ಮ ಸ್ಥಿತಿ ಅತಂತ್ರವಾಗಿದೆ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಕಾಮಗಾರಿಗೆ ವೇಗ ನೀಡಬೇಕು.
ನಾಗರಾಜ್, ಹೋಟೆಲ್ ಮಾಲೀಕ

ಒಂದು ತಿಂಗಳ ಹಿಂದೆ ರಸ್ತೆಯನ್ನು ಅಗೆದು ಹಾಕಲಾಗಿದೆ. ಈ ಭಾಗದಲ್ಲಿರುವ ಹೋಟೆಲ್, ಬೇಕರಿಗಳಿಗೆ ಸಾರ್ವಜನಿಕರು ಬರುತ್ತಿಲ್ಲ. ಪಾರ್ಕಿಂಗ್ ಮಾಡಲು ಜಾಗವಿಲ್ಲ. ಎಲ್ಲಿ ನೋಡಿದರೂ ಮಣ್ಣಿನ ರಾಶಿ, ಅಗೆದಿರುವ ರಸ್ತೆಯೇ ಕಾಣುತ್ತಿದೆ. ನಮ್ಮ ಹೋಟೆಲ್‌ಗೆ ಬರುತ್ತಿದ್ದ ಗ್ರಾಹಕರ ಸಂಖ್ಯೆ ಕಡಿಮೆ ಆಗಿದೆ. ಕೂಡಲೇ ಕಾಮಗಾರಿಯನ್ನು ಪೂರ್ಣಗೊಳಿಸಬೇಕು.
ಅರುಣಿ, ಹೋಟೆಲ್ ಮಾಲಕಿ

ಮರಣೋತ್ತರ ವರದಿಯಲ್ಲಿ ಉಲ್ಲೇಖ ● ಕೊಲೆ ಪ್ರಕರಣ ದಾಖಲು

ಅಪಘಾತದಿಂದಲ್ಲ; ಹಲ್ಲೆಯಿಂದ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಳಿಮಾವು ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಎರಡು ತಿಂಗಳ ಹಿಂದೆ ರಸ್ತೆ ಅಪಘಾತದಲ್ಲಿ ಮೃತಪಟ್ಟ ಖಾಸಗಿ ಕಂಪನಿ ಉದ್ಯೋಗಿ ಅರುಣ್ ರಾಜ್ ಸಾವು ಪ್ರಕರಣ ಹೊಸ ತಿರುವು ಪಡೆದುಕೊಂಡಿದ್ದು, ಅರುಣ್ ಅವರು ರಸ್ತೆ ಅಪಘಾತದಿಂದ ಮೃತಪಟ್ಟಿಲ್ಲ, ಹಲ್ಲೆಯಿಂದ ಮೃತಪಟ್ಟಿದ್ದಾರೆ ಎಂಬುದು ಮರಣೋತ್ತರ ಪರೀಕ್ಷೆಯಲ್ಲಿ ಗೊತ್ತಾಗಿದೆ.

ಹೀಗಾಗಿ ಹುಳಿಮಾವು (ಕಾನೂನು ಹಾಗೂ ಸುವ್ಯವಸ್ಥೆ) ಠಾಣೆ ಪೊಲೀಸರು ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಬೇಗೂರಿನ ಹೊಂಗಸಂದ್ರ ನಿವಾಸಿ ಅರುಣ್ ರಾಜ್ (32) ಕೊಲೆಯಾದವರು. ಈ ಸಂಬಂಧ ಮೃತರ ತಂದೆ ಮುನಿರಾಜು ನೀಡಿದ ದೂರು ಆಧರಿಸಿ ಪೊಲೀಸರು ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಆಗಸ್ಟ್ 6ರಂದು ಬೇಗೂರು ಕಡೆಯಿಂದ ಬೇಗೂರು-ಕೊಪ್ಪ ರಸ್ತೆ ಕಡೆಗೆ ಅರುಣ್ ಬೈಕ್‌ನಲ್ಲಿ ಬರುವಾಗ ನಿಯಂತ್ರಣ ತಪ್ಪಿ ಬಿದ್ದಿದ್ದು, ತೀವ್ರ ರಕ್ತಸ್ರಾವ ಉಂಟಾಗಿತ್ತು. ಸ್ಥಳೀಯರು ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಈ ಸಂಬಂಧ ಹುಳಿಮಾವು ಸಂಚಾರ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದರು.

ಘಟನಾ ಸ್ಥಳದಲ್ಲಿ ಅಪಘಾತ ನಡೆದಿರುವ ಬಗ್ಗೆ ಯಾವುದೇ ಕುರುಹು ದೊರೆತಿರಲಿಲ್ಲ. ಮತ್ತೊಂದೆಡೆ ಮಗನನ್ನು ಕೊಲೆ ಮಾಡಲಾಗಿದೆ ಎಂದು ಮೃತನ ತಂದೆ ಆರೋಪಿಸಿದ್ದರು.

'ಮರಣೋತ್ತರ ಪರೀಕ್ಷೆಯಲ್ಲಿ ಸವಾರನ ತಲೆಗೆ ಬಲವಾದ ಪೆಟ್ಟು ಬಿದ್ದಿದ್ದು, ಕೈ-ಕಾಲಿಗೆ ತರಚಿದ ಗಾಯವಾಗಿದೆ. ಹೀಗಾಗಿ ರಸ್ತೆ ಮೇಲೆ ಬಿದ್ದಾಗ ಆಗಿರುವ ಗಾಯವಲ್ಲ. ಬಲವಾದ ವಸ್ತುವಿನಿಂದ ತಲೆಯ ಭಾಗಕ್ಕೆ ಹೊಡೆಯಲಾಗಿದೆ ಎಂದು ವರದಿ ತಿಳಿಸಿದೆ. ಪೂರಕವೆಂಬಂತೆ ಬೈಕ್ ಹಾಗೂ ಹೆಲ್ಮೆಟ್ ಗೆ ಹಾನಿಯಾಗಿರಲಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಬಗ್ಗೆ ಪ್ರತಿಕ್ರಿಯಿಸಿರುವ ಎಲೆಕ್ಟ್ರಾನಿಕ್ ಸಿಟಿ ಉಪವಿಭಾಗದ ಡಿಸಿಪಿ ನಾರಾಯಣ್, 'ಆಗಸ್ಟ್ 6ರಂದು ನೈಸ್ ರಸ್ತೆ ಬ್ರಿಡ್ಜ್ ಬಳಿ ಬೈಕ್ ಸವಾರ ಬಿದ್ದಿರುವುದನ್ನು ನೋಡಿ ಸ್ಥಳೀಯ ಆಟೊ ಚಾಲಕ ಖಾಸಗಿ ಆಸ್ಪತ್ರೆಗೆ ಸೇರಿಸಿದ್ದರು. ಆದರೆ, ಅವರು ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಮರಣೋತ್ತರ ಪರೀಕ್ಷೆ ವರದಿಯಲ್ಲಿ ಹಲ್ಲೆ ಮಾಡಿ ಹತ್ಯೆ ಮಾಡಲಾಗಿದೆ ಎಂದು ತಿಳಿಸಲಾಗಿದೆ. ಹಾಗಾಗಿ ಕೊಲೆ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ' ಎಂದು ಹೇಳಿದರು.

ಅರುಣ್ ಅವರ ಮೊಬೈಲ್ ನಾಪತ್ತೆಯಾಗಿದ್ದು, ಪರಿಚಯಸ್ಥರೇ ಅವರನ್ನು ಕೊಲೆ ಮಾಡಿರುವ ಸಾಧ್ಯತೆ ಇದೆ ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಬಸ್‌ನಲ್ಲಿ ವೈದ್ಯೆಗೆ ಲೈಂಗಿಕ ಕಿರುಕುಳ: ಆರೋಪಿ ಬಂಧನ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ವೈದ್ಯೆಗೆ ಲೈಂಗಿಕ ಕಿರುಕುಳ ನೀಡಿದ ವ್ಯಕ್ತಿಯನ್ನು ಸಹ ಪ್ರಯಾಣಿಕರು ಹಿಡಿದು ಸಂಜಯನಗರ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ.

ದಾಸರಹಳ್ಳಿಯ ಭುವನೇಶ್ವರಿನಗರದ ವೈದ್ಯೆ ನೀಡಿದ ದೂರಿನ ಮೇರೆಗೆ ದೊಡ್ಡಬಳ್ಳಾಪುರದ ಫೈರೋಜ್‌ಖಾನ್ (46) ಅವರನ್ನು ಬಂಧಿಸಿ, ಹೇಳಿಕೆ ದಾಖಲಿಸಿಕೊಂಡು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಸಂತ್ರಸ್ತ ವೈದ್ಯೆಯು ಅ.2ರಂದು ಸಂಜೆ ದೊಡ್ಡಬಳ್ಳಾಪುರ ದಿಂದ ಬೆಂಗಳೂರಿಗೆ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು. ಆಗ ಅದೇ ಬಸ್‌ಗೆ ಹತ್ತಿದ್ದ ಫೈರೋಜ್‌ಖಾನ್, ವೈದ್ಯೆಯ ಪಕ್ಕದ ಸೀಟಿನಲ್ಲೇ ಕುಳಿತಿದ್ದರು. ಬಸ್ ಹೆಬ್ಬಾಳದ ಎಸ್ಟೀಮ್ ಮಾಲ್‌ನ ಬಳಿ ಬಂದಾಗ ಆರೋಪಿ, ವೈದ್ಯೆಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾರೆ. ಸಾರ್ವಜನಿಕವಾಗಿ ಅವರ ಮುಂಗೈ ಮತ್ತು ತೊಡೆಯ ಭಾಗವನ್ನು ಮುಟ್ಟಿ, ಲೈಂಗಿಕ ಕಿರುಕುಳ ನೀಡಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

'ಆರೋಪಿಯ ಅನುಚಿತ ವರ್ತನೆಯಿಂದ ಕಸಿವಿಸಿಗೊಂಡ ವೈದ್ಯೆ, ಸಹೋದರನಿಗೆ ಕರೆ ಮಾಡಿ ಈ ವಿಷಯ ತಿಳಿಸಿದ್ದಾರೆ. ಜತೆಗೆ, ಬಸ್ ಚಾಲಕನಿಗೂ ಮಾಹಿತಿ ನೀಡಿದ್ದಾರೆ. ನಂತರ ವೈದ್ಯೆಯ ಸಹೋದರ, ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ ಫೈರೋಜ್‌ಖಾನ್‌ನ ದುರ್ವತನೆಯ ವಿಚಾರ ತಿಳಿಸಿದ್ದಾರೆ. ಇದರ ಬೆನ್ನಲ್ಲೇ ಪೊಲೀಸ್ ನಿಯಂತ್ರಣ ಕೊಠಡಿಯ ಸಿಬ್ಬಂದಿ ಹೊಯ್ಸಳ ಪೊಲೀಸರಿಗೆ ಮಾಹಿತಿ ರವಾನಿಸಿದ್ದಾರೆ. ನಂತರ ಹೊಯ್ಸಳ ಸಿಬ್ಬಂದಿಯು ಬ್ಯಾಪ್ಟಿಸ್ಟ್ ಆಸ್ಪತ್ರೆ ಬಳಿ ಬಸ್ ನಿಲ್ಲಿಸಿ, ಆರೋಪಿಯನ್ನು ಬಂಧಿಸಿದ್ದಾರೆ' ಎಂದು ತಿಳಿಸಿದರು.

ಫೈರೋಜ್‌ಖಾನ್ ವಿರುದ್ಧ ಲೈಂಗಿಕ ಕಿರುಕುಳ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ. ಆತ ರೇಷ್ಮೆ ಗೂಡಿನ ವ್ಯಾಪಾರಿ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ದಂಡುಪಾಳ್ಯದ ಇಬ್ಬರಿಗೆ ಪೆರೋಲ್

ಬೆಂಗಳೂರು: ಸರಣಿ ಕಳ್ಳತನ ಹಾಗೂ ಒಂಟಿ ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣಗಳಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ದಂಡುಪಾಳ್ಯ ಕೃಷ್ಣ ಮತ್ತು ದಂಡುಪಾಳ್ಯ ದೊಡ್ಡಹನುಮ ಅವರಿಗೆ ಅವರ ಸಂಬಂಧಿಕರ ಮರಣೋತ್ತರ ಕ್ರಿಯೆಯಲ್ಲಿ ಭಾಗವಹಿಸಲು ಅನುವಾಗುವಂತೆ ಹೈಕೋರ್ಟ್ 15 ದಿನಗಳ ಪೆರೋಲ್ ಮಂಜೂರು ಮಾಡಿದೆ.

ಈ ಸಂಬಂಧ ಇಬ್ಬರೂ ಅಪರಾಧಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಷರತ್ತುಬದ್ಧ ಪೆರೋಲ್ ಮಂಜೂರು ಮಾಡಿ ಆದೇಶಿಸಿತು.

ಸರ್ಕಾರದ ಪರ ವಕೀಲರು, 'ಪೆರೋಲ್ ಮೇಲೆ ತೆರಳಲಿರುವ ಅಪರಾಧಿಗಳಿಗೆ ಪೊಲೀಸರ ಎಸ್ಕಾರ್ಟ್ ಒದಗಿಸಲು ಆದೇಶಿಸಬೇಕು' ಎಂದು ಕೋರಿದರು. ಆದರೆ, ಇದಕ್ಕೆ ಅರ್ಜಿದಾರರ ಪರ ವಕೀಲ ವಕೀಲ ಸಿರಾಜುದ್ದೀನ್ ಆಕ್ಷೇಪಿಸಿದರು.

ಸುಲಿಗೆಕೋರನ ಬಂಧನ ನಗದು, ಬೈಕ್ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಸಾರ್ವಜನಿಕರನ್ನು ಬೆದರಿಸಿ ಹಣ ಹಾಗೂ ಮೊಬೈಲ್ ಸುಲಿಗೆ ಮಾಡಿದ್ದ ಆರೋಪಿಯನ್ನು ಬಂಧಿಸಿರುವ ಕೊತ್ತನೂರು ಠಾಣೆ ಪೊಲೀಸರು, ನಗದು ಸೇರಿ ₹1 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಸೈಯದ್ ಇಮ್ರಾನ್ ಅಲಿಯಾಸ್ ಕುಂಟ ಎಂಬಾತನನ್ನು ಬಂಧಿಸಿ, ₹3 ಸಾವಿರ ನಗದು, ಮೊಬೈಲ್ ಫೋನ್, ಮೂರು ದ್ವಿಚಕ್ರ ವಾಹನವನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಕ್ಟೋಬರ್ 13ರಂದು ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ಬೀಡಾ ಅಂಗಡಿಗಳಿಗೆ ಸಿಗರೇಟ್ ಪೂರೈಸುವ ಆನಂದ್ ಎಂಬುವರಿಗೆ ಚಾಕು ತೋರಿಸಿ ₹40 ಸಾವಿರ ನಗದು ಕಿತ್ತುಕೊಂಡು ಪರಾರಿಯಾಗಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ತನಿಖೆ ಕೈಗೊಂಡರು.

'ಬಾತ್ಮೀದಾರರ ಮಾಹಿತಿ ಆಧರಿಸಿ ವಿವಿಧ ಆಯಾಮಗಳಿಂದ ಮಾಹಿತಿ ಕಲೆ ಹಾಕಿ, ಆರೋಪಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಯಿತು. ನಗರದ ವಿವಿಧೆಡೆ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುವುದು ಗೊತ್ತಾಯಿತು. ಆರೋಪಿ ಬಂಧನದಿಂದ ಕೊತ್ತನೂರು, ಹೆಣ್ಣೂರು, ಕಾಡುಗೋಡಿ ಹಾಗೂ ಜೆ.ಸಿ. ನಗರ ಠಾಣಾ ವ್ಯಾಪ್ತಿಯಲ್ಲಿ ದಾಖಲಾಗಿದ್ದ ಸುಲಿಗೆ, ಮೊಬೈಲ್ ಹಾಗೂ ಬೈಕ್ ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ. ಆರೋಪಿಯಿಂದ ನಗದು, ಮೊಬೈಲ್ ಹಾಗೂ ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದರು.

ಮಾದಕ ವಸ್ತು ವಶ: ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಕೊಡಿಗೇಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪೃಥ್ವಿರಾಜ್, ನವೀನ್ ಕುಮಾರ್, ಹರಿಸಿಂಗ್ ಎಂಬುವರನ್ನು ಬಂಧಿಸಿ, ₹50 ಸಾವಿರ ಮೌಲ್ಯದ 21.26 ಗ್ರಾಂ ತೂಕದ ಎಂಡಿಎಂಎ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಕ್ಟೋಬರ್ 4ರಂದು ಆರೋಪಿಗಳು ಠಾಣಾ ವ್ಯಾಪ್ತಿಯ ಮಾಲ್ ಆಫ್ ಏಷ್ಯಾ ಹಿಂಭಾಗದ ರೈಲ್ವೆ ಕೆಳಸೇತುವೆ ಬಳಿ ಆಟೊದಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಆಧರಿಸಿ, ದಾಳಿ ನಡೆಸಲಾಯಿತು. ಹೊರ ರಾಜ್ಯದಿಂದ ಮಾದಕ ವಸ್ತು ಖರೀದಿಸಿ, ನಗರದ ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರನ್ನು ಗುರಿಯಾಗಿಸಿಕೊಂಡು ಮಾರಾಟ ಮಾಡುತ್ತಿದ್ದರು ಎಂದು ಹೇಳಿದ್ದಾರೆ.

ಮೇಕೆ ಕಳ್ಳತನ: ಆರೋಪಿಗಳು ಸೆರೆ

ಬೆಂಗಳೂರು: ವಿದ್ಯಾರಣ್ಯಪುರಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮೇಕೆಗಳನ್ನು ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿ, ₹4.25 ಲಕ್ಷ ಬೆಲೆ ಬಾಳುವ ಐದು ಮೇಕೆ ಹಾಗೂ ಒಂದು ಗೂಡ್ಸ್ ವಾಹನ ವಶಪಡಿಸಿಕೊಳ್ಳಲಾಗಿದೆ.

ಮೊಹಮ್ಮದ್ ಇರ್ಫಾನ್, ಚಾಂದ್ ಬಿನ್ ಬಂಧಿತ ಆರೋಪಿಗಳು. ರಾಮಚಂದ್ರಪುರ ನಿವಾಸಿ ಎಸ್.ಸುಬ್ರಮಣಿ ಅವರು ಚಾಮುಂಡೇಶ್ವರಿ ಲೇಔಟ್‌ನ ಶೆಡ್‌ನಲ್ಲಿ ಸಾಕಿದ್ದ ಐದು ಮೇಕೆಗಳನ್ನು ಸೆಪ್ಟೆಂಬರ್ 29ರ ರಾತ್ರಿ ಕಳವು ಮಾಡಲಾಗಿತ್ತು. ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕಿರುತೆರೆ ಕಲಾವಿದರ ಆರೋಪ: ಐವರ ವಿರುದ್ಧ ಎಫ್‌ಐಆರ್

ನಿವೇಶನ ನೀಡದೆ ₹1.6 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿರುತೆರೆ ಕಲಾವಿದರಿಗೆ ನಿವೇಶನ ನೀಡುವುದಾಗಿ ನಂಬಿಸಿ ಹಣ ಪಡೆದು, ವಂಚಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಐವರ ವಿರುದ್ಧ ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿ

ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್ (ಕೆಟಿವಿಎ) ಸದಸ್ಯೆ ಭಾವನಾ ಬೆಳಗೆರೆ ಅವರ ದೂರಿನ ಮೇರೆಗೆ ಎಎಸ್‌ಬಿ ಡೆವಲಪರ್ಸ್ ಆ್ಯಂಡ್ ಪ್ರಮೋಟರ್ಸ್‌ನ ಎಸ್. ಭಗೀರಥ, ಇತರ ಆರೋಪಿಗಳಾದ ಸಂಜೀವ್ ತಗಡೂರು, ಎಂ. ಗುರುಪ್ರಸಾದ್, ಎನ್. ರವೀಂದ್ರ, ಎ.ಎನ್. ಉಮಾಕಾಂತ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

'ಕಿರುತೆರೆ ಕಲಾವಿದರು ಸೇರಿಕೊಂಡು ಕರ್ನಾಟಕ ಟೆಲಿವಿಷನ್ ಅಸೋಷಿಯೇಷನ್ (ಕೆಟಿವಿಎ) ರಚಿಸಿಕೊಂಡಿದ್ದೇವೆ. ಕೆಟಿವಿಎ ನಿವೇಶನ ಸಮಿತಿ ಸದಸ್ಯರಾದ ಸಂಜೀವ್ ತಗಡೂರು, ರವೀಂದ್ರ, ಉಮಾಕಾಂತ್ ಮತ್ತು ಗುರುಪ್ರಸಾದ್ ಅವರ ಮಾತು ನಂಬಿ 2012-13ರಲ್ಲಿ ನಿವೇಶನ ಖರೀದಿಸುವ ಸಲುವಾಗಿ ಎಎಸ್‌ಬಿ ಕಂಪನಿಯಲ್ಲಿ ಟಿ.ಎಲ್.ಶರತ್ ಚಂದ್ರ, ಟಿ.ಎಲ್.ರಾಹುಲ್ ಹಾಗೂ ನಾನು ಹಣ ಹೂಡಿಕೆ ಮಾಡಿದ್ದೇವು. 2015ರಲ್ಲಿ ಭಗೀರಥ ಅವರು ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಗ್ರಾಮದ ನಿವೇಶನಗಳ ಶುದ್ಧ ಕ್ರಯವನ್ನು ರಾಜರಾಜೇಶ್ವರಿ ನಗರದ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಮಾಡಿದರು. ಬಳಿಕ ಖಾತಾಗಳನ್ನು ಖರೀದಿದಾರ ಹೆಸರಿಗೆ ವರ್ಗಾಯಿಸುವ ಸಂಬಂಧ ಕಂಪನಿ ಸದಸ್ಯರನ್ನು ಸಂಪರ್ಕಿಸಿದರೂ ಸಿಗಲಿಲ್ಲ. ಸಂಬಂಧಪಟ್ಟ ಇಲಾಖೆಯಲ್ಲಿ ವಿಚಾರಿಸಿದಾಗ ಸ್ವತ್ತು ನೋಂದಣಿ ಇಲ್ಲದಿರುವುದು ಗೊತ್ತಾಯಿತು' ಎಂದು ದೂರಿನಲ್ಲಿ ಆರೋಪಿಸಲಾಗಿದೆ.

'ನಿವೇಶನ ಖರೀದಿಗಾಗಿ ಕೆಟಿವಿಎ ಸದಸ್ಯರಿಂದ ಹಣ ಪಡೆದುಕೊಂಡು, ₹1.6 ಕೋಟಿ ದುರುಪಯೋಗ ಪಡಿಸಿಕೊಂಡಿದ್ದಾರೆ. ಮೋಸ ಮಾಡುವ ಉದ್ದೇಶದಿಂದ ಆರೋಪಿಗಳು ಬಡಾವಣೆಯ ನಕಲಿ ನಕ್ಷೆ, ದಾಖಲೆ ಸೃಷ್ಟಿಸಿದ್ದಾರೆ. ನಿವೇಶನ ಮಾರಾಟ ಮಾಡುವುದಾಗಿ 139 ಸದಸ್ಯರಿಂದ ಹಣ ಪಡೆದು ವಂಚಿಸಿರುವ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಆಗ್ರಹಿಸಿದ್ದಾರೆ.

16 ಮಂದಿ ಬಂಧನ, 40 ಕಂಪ್ಯೂಟರ್ ವಶ



ಬೆಂಗಳೂರು: ಪೊಲೀಸ್ ಅಧಿಕಾರಿ ಸೋಗಿನಲ್ಲಿ ಸಾರ್ವಜನಿಕರಿಗೆ ಕರೆ ಮಾಡಿ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವುದಾಗಿ ಬೆದರಿಸಿ, ಲಕ್ಷಾಂತರ ರೂಪಾಯಿ ಹಣ ಪಡೆದು ವಂಚನೆ ಮಾಡುತ್ತಿದ್ದ 16 ಆರೋಪಿಗಳನ್ನು ಎಚ್‌ಎಸ್‌ಆರ್ ಲೇಔಟ್ ಪೊಲೀಸರು ಬಂಧಿಸಿದ್ದಾರೆ.

ಎಚ್‌ಎಸ್‌ಆರ್ ಲೇಔಟ್ 27ನೇ ಮುಖ್ಯರಸ್ತೆಯಲ್ಲಿ ನಕಲಿ ಬಿಪಿಒ ಕಂಪನಿ ತೆರೆದು ಜನರಿಗೆ ಕರೆ ಮಾಡಿ ವಂಚಿಸುತ್ತಿರುವ ಬಗ್ಗೆ ಮಾಹಿತಿ ಸಂಗ್ರಹಿಸಿದ ಇನ್‌ಸ್ಪೆಕ್ಟರ್ ಹರೀಶ್ ಕುಮಾರ್ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಿದ್ದಾರೆ. 40ಕ್ಕೂ ಹೆಚ್ಚು ಕಂಪ್ಯೂಟರ್ ಸೇರಿದಂತೆ ಇತರೆ ಉಪಕರಣಗಳನ್ನ ವಶಕ್ಕೆ ಪಡೆದುಕೊಂಡಿದ್ದಾರೆ.

ಪ್ರಕರಣ ತನಿಖೆಯನ್ನು ಆಗ್ನೇಯ ವಿಭಾಗ ಸೈಬರ್ ಕ್ರೈಂ ಠಾಣೆ ಪೊಲೀಸರು ನಡೆಸುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಿಬಿಟ್ಸ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್ ಹೆಸರಿನಲ್ಲಿ ವಂಚಕರು ಕಳೆದ ಎರಡು ವರ್ಷಗಳ ಹಿಂದೆ ಬಿಪಿಒ ಕಂಪನಿ ತೆರೆದಿದ್ದರು. ಕಟ್ಟಡದ ಎರಡು ಮಹಡಿಗಳಲ್ಲಿ ಒಟ್ಟು 20 ರಿಂದ 25 ಮಂದಿ ಕೆಲಸ ಮಾಡುತ್ತಿದ್ದರು. ಆನ್‌ಲೈನ್‌ನಲ್ಲಿ ಕೆಲಸವೆಂದು ಹೇಳಿ ಉದ್ಯೋಗಿಗಳನ್ನು ನೇಮಕಾತಿ ಮಾಡಿಕೊಂಡು ಸಾರ್ವಜನಿಕರಿಗೆ ಹೇಗೆ ವಂಚಿಸಬೇಕೆಂದು ತರಬೇತಿ ನೀಡುತ್ತಿದ್ದರು. ಬಳಿಕ ಅಮೆರಿಕ ಸೇರಿ ವಿವಿಧ ದೇಶಗಳ ಪ್ರಜೆಗಳಿಗೆ ರಾತ್ರಿ ವೇಳೆ ಪೊಲೀಸರು ಸೇರಿದಂತೆ ವಿವಿಧ ತನಿಖಾ ಸಂಸ್ಥೆಗಳ ಸೋಗಿನಲ್ಲಿ ಕರೆ ಮಾಡಿ, ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವುದಾಗಿ ಬೆದರಿಸಿ ಸಹಾಯ ಮಾಡುವುದಾಗಿ ನಂಬಿಸಿ ವಂಚಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಚಾರ್ಜಿಂಗ್ ವೇಳೆ ಇ.ವಿ ಬೈಕ್ ಸ್ಫೋಟ

ಬೆಂಗಳೂರು: ಚಾರ್ಜಿಂಗ್ ವೇಳೆ ವಿದ್ಯುತ್ ಚಾಲಿತ (ಇವಿ) ಬೈಕ್ ಸ್ಫೋಟಗೊಂಡು, ಸುಟ್ಟು ಕರಕಲಾಗಿರುವ ಘಟನೆ ಬಸವೇಶ್ವರನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವ ಶಿವನಗರ ನಿವಾಸಿ ಮುಕೇಶ್, ಭಾನುವಾರ ರಾತ್ರಿ 11 ಗಂಟೆ ಸುಮಾರಿಗೆ ನೆಲಮಹಡಿಯಲ್ಲಿ ಬೈಕ್ ಅನ್ನು ಚಾರ್ಜಿಂಗ್‌ಗೆ ಹಾಕಿ, ಮೊದಲ ಮಹಡಿಯಲ್ಲಿರುವ ಮನೆಗೆ ಹೋಗಿದ್ದರು. ಕೆಲ ಹೊತ್ತಿನಲ್ಲೇ ಬೈಕ್ ಸ್ಫೋಟಗೊಂಡು ಬೆಂಕಿ ಕಾಣಿಸಿಕೊಂಡಿದ್ದು, ದಟ್ಟವಾದ ಹೊಗೆ ಆವರಿಸಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ತಕ್ಷಣ ಮನೆಯವರು ಗಮನಿಸಿ ಕೆಳಗೆ ಇಳಿದು ಬಂದು ನೋಡಿದಾಗ ಬೈಕ್‌ಗೆ ಹೊತ್ತಿಕೊಂಡಿದ್ದ ಬೆಂಕಿ ಪಕ್ಕದಲ್ಲೇ ನಿಲ್ಲಿಸಿದ್ದ ಸೈಕಲ್‌ಗೂ ಆವರಿಸಿರುವುದು ಕಂಡು ಬಂದಿದೆ. ಕೂಡಲೇ ಸ್ಥಳೀಯರ ನೆರವು ಪಡೆದು ಬೈಕ್ ಅನ್ನು ನೆಲಮಹಡಿಯಿಂದ ಎಳೆದು ಹೊರಗೆ ಹಾಕಿದ್ದಾರೆ. ಅದರಿಂದ ಮನೆಗೆ ಬೆಂಕಿ ವ್ಯಾಪಿಸುವುದು ತಪ್ಪಿದಂತಾಗಿದೆ ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಮಾಹಿತಿ ನೀಡಿದರು. ರಾಜಾಜಿನಗರದ ಅಗ್ನಿಶಾಮಕ ದಳ ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸಿದರು. ಬೈಕ್ ಸ್ಫೋಟಕ್ಕೆ ನಿಖರ ಕಾರಣ ಗೊತ್ತಾಗಿಲ್ಲ. ಬಸವೇಶ್ವರ ನಗರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಘಟನೆ ಸಂಬಂಧ ಯಾರೂ ದೂರು ನೀಡಿಲ್ಲ ಎಂದು ಹೇಳಿದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಜೋಷ್ನಾಗೆ ಕಿರೀಟ

ಭಾರತದ ಸ್ಕ್ವಾಷ್ ತಾರೆ ಜೋಷ್ನಾ ಚಿನ್ನಪ್ಪ ಅವರು ಜಪಾನ್ ಓಪನ್ ಫೈನಲ್‌ನಲ್ಲಿ ಈಜಿಪ್ಟ್‌ನ ಹಯಾ ಅಲಿ ಅವರನ್ನು ಮಣಿಸಿ ತಮ್ಮ 11ನೇ ಪಿಎಸ್‌ಎ ಟೂರ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು



ನಿಯಮ ಸಡಿಲ

ಇಪಿಎಫ್‌ಒ ಸಂಘಟನೆಯ ಟ್ರಸ್ಟಿಗಳ ಮಂಡಳಿಯು ಪಿ.ಎಫ್ ಹಣ ಹಿಂಪಡೆಯಲು ಇರುವ ನಿಯಮಗಳನ್ನು ಸಡಿಲಗೊಳಿಸುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿದೆ

ಆರ್‌ಎಸ್‌ಎಸ್ ನಿರ್ಬಂಧ: ವಾಗ್ವಾದ

ರಾಷ್ಟ್ರೀಯ ಸ್ವಯಂ ಸೇವಕ ಸಂಘವು (ಆರ್‌ಎಸ್‌ಎಸ್) ಸರ್ಕಾರಿ ಸ್ಥಳಗಳಲ್ಲಿ ನಡೆಸುವ ಚಟುವಟಿಕೆಗಳಿಗೆ ನಿಷೇಧ ಹೇರುವ ಕುರಿತಂತೆ ಬಿಜೆಪಿ– ಕಾಂಗ್ರೆಸ್ ನಾಯಕರ ಮಧ್ಯೆ ವಾಗ್ವಾದ ಆರಂಭವಾಗಿದೆ. ಈ ಬಗ್ಗೆ ಸಚಿವ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು. ಇದು, ರಾಜಕೀಯ ಕಲಹಕ್ಕೆ ಕಾರಣವಾಗಿದೆ

ನಿರ್ಬಂಧಕ್ಕೆ ತ.ನಾಡು ಮಾದರಿ: ಸಿ.ಎಂ

ಬಾಗಲಕೋಟೆ: ‘ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳನ್ನು ನಿರ್ಬಂಧಿಸುವ ಕುರಿತು ತಮಿಳುನಾಡು ಸರ್ಕಾರ ಕೈಗೊಂಡ ಕ್ರಮವನ್ನು ಪರಿಶೀಲಿಸಿ, ಪರಿಗಣಿಸುವಂತೆ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದೇನೆ’ ಎಂದು ಸಿದ್ದರಾಮಯ್ಯ ಹೇಳಿದರು. ಬಾಗಲಕೋಟೆಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಆರ್‌ಎಸ್‌ಎಸ್ ಸಂಘಟನೆ ತನ್ನ ಚಟುವಟಿಕೆಗಳಿಗೆ ಸರ್ಕಾರಿ ಸ್ಥಳಗಳನ್ನು ಬಳಸಿಕೊಳ್ಳುತ್ತಿದೆ. ತಮಿಳುನಾಡು ರಾಜ್ಯದಲ್ಲಿ ಇದನ್ನು ನಿರ್ಬಂಧಿಸಿದಂತೆ ರಾಜ್ಯದಲ್ಲಿಯೂ ನಿರ್ಬಂಧಿಸಬೇಕು ಎಂದು ಸಚಿವ ಪ್ರಿಯಾಂಕ್ ಖರ್ಗೆ ಪತ್ರ ಬರೆದಿದ್ದಾರೆ’ ಎಂದರು.

ನಿಷೇಧಿಸಿ ಎಂದಿಲ್ಲ: ಪ್ರಿಯಾಂಕ್

ಬೆಂಗಳೂರು: ‘ಆರ್‌ಎಸ್‌ಎಸ್ ನಿಷೇಧ ಮಾಡಿ ಎಂದು ನಾನು ಎಲ್ಲಿ ಹೇಳಿದ್ದೇನೆ? ಸರ್ಕಾರಿ ಸ್ಥಳಗಳಲ್ಲಿ ಚಟುವಟಿಕೆಗಳಿಗೆ ಅವಕಾಶ ಬೇಡ ಅಂದಿದ್ದೇನೆ ಅಷ್ಟೇ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಸ್ಪಷ್ಟನೆ ನೀಡಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ನಾನು ಒಬ್ಬ ಹಿಂದೂ. ಹಿಂದೂ ಧರ್ಮದ ವಿರೋಧಿ ಅಲ್ಲ. ನಾನು ಆರ್‌ಎಸ್‌ಎಸ್ ವಿರೋಧಿ’ ಎಂದರು.

‘ಕರಾವಳಿ, ಮಲೆನಾಡಿನಲ್ಲಿ ಯಾರು ಬಲಿಯಾಗಿದ್ದಾರೆ? ಅವರ ಮಾಹಿತಿ ತೆಗೆಯಿರಿ. ದಲಿತ, ಹಿಂದುಳಿದ ವರ್ಗದವರು ದೊಣ್ಣೆ ಹಿಡಿದು ಓಡಾಡಿದರೆ ಒಪ್ಪುತ್ತಾರಾ? ಶಾಲೆಗಳಲ್ಲಿ ಆರ್‌ಎಸ್‌ಎಸ್‌ನಿಂದ ನಡೆಯುತ್ತಿರುವ ಬ್ರೈನ್ ವಾಷಿಂಗ್ ನಿಲ್ಲಬೇಕು’ ಎಂದರು.

‘ಸರ್ದಾರ್ ಪಟೇಲ್ ಆರ್‌ಎಸ್‌ಎಸ್ ಅನ್ನು ನಿಷೇಧಿಸಿದ್ದರು. ನಮ್ಮ ನಿಯತ್ತು ರಾಷ್ಟ್ರ ಧ್ವಜಕ್ಕೆ ಇರುತ್ತದೆ ಎಂದು ಆಗ ಆರ್‌ಎಸ್‌ಎಸ್‌ನವರು ಕ್ಷಮೆ ಕೋರಿದ್ದರು. ಹೀಗಾಗಿ ನಿಷೇಧ ತೆರವು ಮಾಡಲಾಗಿತ್ತು. ಇದು ವಿಷಕಾರಿ ಎಂದು ನೆಹರೂ ಅವರಿಗೆ ಪಟೇಲರು ಪತ್ರ ಬರೆದಿದ್ದರು. ಬಿಜೆಪಿಯವರು ಈಗ ಪಟೇಲರ ಪ್ರತಿಮೆ ನಿರ್ಮಿಸಿದ್ದಾರೆ’ ಎಂದು ಹೇಳಿದರು.

‘ಫ್ಯಾಸಿಸ್ಟ್ ಸಂಘಟನೆ’

‘ಆರ್‌ಎಸ್‌ಎಸ್ ಒಂದು ರಾಜಕೀಯ, ಫ್ಯಾಸಿಸ್ಟ್ ಸಂಘಟನೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಪ್ರಿಯಾಂಕ್ ಖರ್ಗೆ ಹೇಳಿಕೆಯನ್ನು ಸಮರ್ಥಿಸಿದ ಅವರು, ‘ಸರ್ಕಾರಿ ಜಾಗವನ್ನು ಆರ್‌ಎಸ್‌ಎಸ್ ಉಪಯೋಗಿಸುವುದು ಸರಿಯಲ್ಲ. ಬೇಕಾದರೆ ಅವರು ಖಾಸಗಿ ಜಾಗವನ್ನು ಉಪಯೋಗ ಮಾಡಿಕೊಳ್ಳಲಿ’ ಎಂದರು.

‘ಸರ್ಕಾರಿ ಶಾಲೆ, ಕಾಲೇಜುಗಳಲ್ಲಿ ಚಟುವಟಿಕೆ ನಡೆಸಲು ಆರ್‌ಎಸ್‌ಎಸ್‌ಗೆ ಅವಕಾಶ ನೀಡಬಾರದು. ಕೇಂದ್ರ ಸರ್ಕಾರ ಕೂಡ ಅಧಿಕಾರಿಗಳಿಗೆ ಆರ್‌ಎಸ್‌ಎಸ್ ಸದಸ್ಯರಾಗಲು ಅವಕಾಶ ಕೊಡಬಾರದು’ ಎಂದರು. ‘ಆರ್‌ಎಸ್‌ಎಸ್ ರಾಜಕೀಯದಲ್ಲಿ ನೇರವಾಗಿ ಭಾಗಿಯಾಗಿರುವುದು ಸಾರ್ವಜನಿಕರಿಗೂ ಗೊತ್ತಿದೆ. ಆರ್‌ಎಸ್‌ಎಸ್, ಬಿಜೆಪಿ, ಬಜರಂಗದಳ, ಎಬಿವಿಪಿ ಎಲ್ಲವೂ ರಾಜಕೀಯ ಸಂಸ್ಥೆಗಳು. ಸಚಿವರ ಬದಲಾವಣೆ, ಸರ್ಕಾರ ತೆಗೆಯುವುದರಲ್ಲಿ ಇವರ ಪಾತ್ರವಿದೆ’ ಎಂದು ದೂರಿದರು.

‘ದ್ವೇಷ, ಕೋಮುಗಲಭೆ ಮಾಡುವುದೇ ಆರ್‌ಎಸ್‌ಎಸ್ ಸಿದ್ಧಾಂತ. ಆರ್‌ಎಸ್‌ಎಸ್‌ನವರು ಏನಾದರೂ ತ್ಯಾಗ ಮಾಡಿದ್ದಾರಾ.. ಏನೂ ಇಲ್ಲ’ ಎಂದೂ ಹೇಳಿದರು.

‘ಮುಸ್ಲಿಂ ಭಯೋತ್ಪಾದಕರನ್ನು ಟೀಕಿಸಿದ್ದೀರಾ?’

‘ಕಾಂಗ್ರೆಸ್ ಎಂಬ ಅಧಿಕಾರ ಸೃಷ್ಟಿಯ ಫ್ಯಾಕ್ಟರಿ ಹೊರತುಪಡಿಸಿದಂತೆ ನಿಮ್ಮ ಜೀವನದಲ್ಲಿ ಯಾವ ರಾಷ್ಟ್ರ ಭಕ್ತ ಸಂಘಟನೆಯಲ್ಲಿ ಸೇವೆ ಸಲ್ಲಿಸಿದ್ದೀರಿ ಎಂದು ಆಧಾರ ಸಹಿತ ಮಾಹಿತಿ ಕೊಡಿ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದರು.

‘ಹಿಂದೂ ಸಂಘಟನೆಗಳನ್ನು ಹೊರತುಪಡಿಸಿ ನಿಮ್ಮ ರಾಜಕೀಯ ಜೀವನದಲ್ಲಿ ಇತರೆ ಕೋಮುವಾದಿ ಸಂಘಟನೆಗಳ ಬಗ್ಗೆ, ಭಯೋತ್ಪಾದಕತೆಯ ಕುರಿತು, ಮುಸ್ಲಿಂ ಮೂಲಭೂತವಾದಿ ಸಂಸ್ಥೆಗಳ ಕುಕೃತ್ಯಗಳ ಕುರಿತು ಎಂದಾದರೂ ಒಮ್ಮೆಯಾದರೂ ನೀವು ಟೀಕೆ- ಟಿಪ್ಪಣಿ ಮಾಡಿದ್ದೀರಾ’ ಎಂದು ಪ್ರಶ್ನಿಸಿದರು.

2B

ಆರ್‌ಎಸ್‌ಎಸ್ ಚಟುವಟಿಕೆಗೆ ನಿರ್ಬಂಧ ಹೇರುವ ವಿಚಾರ ಗೃಹ ಇಲಾಖೆಗೆ ಬಂದರೆ ಅದರ ಸಾಧಕ ಬಾಧಕಗಳ ಬಗ್ಗೆ ಪರಿಶೀಲನೆ ಮಾಡುತ್ತೇವೆ

ಜಿ. ಪರಮೇಶ್ವರ, ಗೃಹ ಸಚಿವ

ಜನ ನಿಮಗೆ ಅಧಿಕಾರ ಕೊಟ್ಟಿರುವುದು ಬರೀ ರಾಜಕಾರಣ ಮಾಡುವುದಕ್ಕೆ ಅಲ್ಲ. ಆರ್‌ಎಸ್‌ಎಸ್ ಬಗ್ಗೆ ಟೀಕಿಸುವ ನಿಮ್ಮ ಖಯಾಲಿ ಬಿಟ್ಟು, ನಿಮಗೆ ಕೊಟ್ಟಿರುವ ಜವಾಬ್ದಾರಿ ನಿರ್ವಹಿಸಿ

ಆರ್. ಅಶೋಕ, ವಿರೋಧ ಪಕ್ಷದ ನಾಯಕ

ಕಲಾ ಪ್ರದರ್ಶನ

ಪ್ರಜಾವಾಣಿ ಚಿತ್ರ: ರಂಜು ಪಿ.



ವಿಧಾನಸೌಧದ ಮುಂಭಾಗ ಸೋಮವಾರ ಆಯೋಜಿಸಿದ್ದ ಕಿತ್ತೂರು ಉತ್ಸವದ ಜ್ಯೋತಿ ಯಾತ್ರೆಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ‘ಕರ್ನಾಟಕ ಜಾನಪದ ಕಲಾವಿದರ ಒಕ್ಕೂಟ’ದ ಸದಸ್ಯರು ಬೇಡರ ವೇಷ, ವೀರಗಾಸೆ ಮತ್ತು ಅಘೋರಿ ವೇಷ ಧರಿಸಿ ನೃತ್ಯ ಪ್ರದರ್ಶಿಸಿ ಗಮನ ಸೆಳೆದರು

‘ಎಸ್‌ಐಟಿ ರಚನೆ ಸಾಧ್ಯವಿಲ್ಲ’

ಪ್ರಜಾವಾಣಿ ವಾರ್ತೆ/ಪಿಟಿಐ

ಮತ ಕಳವು

ನವದೆಹಲಿ: ಕರ್ನಾಟಕದ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಮಹದೇವಪುರ ಮತ್ತು ಕಲಬುರಗಿ ಜಿಲ್ಲೆಯ ಆಳಂದ ವಿಧಾನಸಭೆ ಕ್ಷೇತ್ರ ಸೇರಿದಂತೆ ದೇಶದ ವಿವಿಧೆಡೆ ನಡೆದಿದೆ ಎನ್ನಲಾದ ಮತ ಕಳವು ಆರೋಪಕ್ಕೆ ಸಂಬಂಧಿಸಿ ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ಎಸ್‌ಐಟಿ ರಚಿಸಲು ಆದೇಶಿಸುವಂತೆ ಕೋರಿ ಸುಪ್ರೀಂ ಕೋರ್ಟ್ ವಕೀಲ ಮತ್ತು ಕಾಂಗ್ರೆಸ್ ಮುಖಂಡ ರೋಹಿತ್ ಪಾಂಡೆ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜಾಯ್ ಮಾಲ್ಯಾ ಬಾಗ್ಚಿ ಅವರ ಪೀಠ ನಡೆಸಿತು.

‘ಇದು ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಎಂದು ಹೇಳುತ್ತಿದ್ದೀರಿ. ಇದು ನಿಜವೂ ಇರಬಹುದು. ಆದರೆ, ನಿಮ್ಮ ಕೋರಿಕೆಯನ್ನು ಚುನಾವಣಾ ಆಯೋಗದ ಮುಂದಿಡಿ’ ಎಂದು ಪೀಠವು ಹೇಳಿತು. ಇದಕ್ಕೆ ಪ್ರತಿಕ್ರಿಯಿಸಿದ ರೋಹಿತ್, ‘ನಾವು ಆಯೋಗಕ್ಕೆ ಮನವಿ ಮಾಡಿದ್ದೇವೆ. ಆಯೋಗವು ಅದನ್ನು ಸ್ವೀಕರಿಸಿಯೇ ಇಲ್ಲ’ ಎಂದರು.

‘ನಮ್ಮ ಮನವಿಯ ಕುರಿತು ನಿರ್ಧಾರ ತೆಗೆದುಕೊಳ್ಳಲು ಆಯೋಗಕ್ಕೆ ಕಾಲಮಿತಿಯನ್ನು ವಿಧಿಸಿ’ ಎಂದು ರೋಹಿತ್ ಪೀಠವನ್ನು ಕೋರಿದರು. ಪೀಠವು ಈ ಮನವಿಯನ್ನೂ ತಿರಸ್ಕರಿಸಿತು. ‘ಇಂಥ ಸೂಚನೆ ನೀಡಲು ಸಾಧ್ಯವಿಲ್ಲ’ ಎಂದಿತು.

ಮತ ಕಳ್ಳತನದ ಕುರಿತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ನಡೆಸಿದ ಮಾಧ್ಯಮ-ಗೋಷ್ಠಿಗಳನ್ನು ಉಲ್ಲೇಖಿಸಿ ಪಿಐಎಲ್ ಸಲ್ಲಿಸಲಾಗಿತ್ತು. ರಾಹುಲ್ ಅವರು ಉಲ್ಲೇಖಿಸಿದ ಅಂಕಿ–ಅಂಶಗಳನ್ನೂ ಅರ್ಜಿಯಲ್ಲಿ ದಾಖಲಿಸಲಾಗಿತ್ತು.

ಅರ್ಜಿಯಲ್ಲೇನಿತ್ತು?

- ಮತದಾರರ ಪಟ್ಟಿ ತಯಾರಿ, ನಿರ್ವಹಣೆ, ಪ್ರಕಟಣೆಯಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಘನತೆಯನ್ನು ತೋರುವಂತೆ ಚುನಾವಣಾ ಆಯೋಗಕ್ಕೆ ಮಾರ್ಗಸೂಚಿ ಪ್ರಕಟಿಸಿ. ಪಟ್ಟಿಯಲ್ಲಿ ಮತದಾರರ ಹೆಸರುಗಳನ್ನು ಅಳಿಸಿ ಹಾಕಲು, ಪಟ್ಟಿಯಲ್ಲಿ ಎರಡು ಎರಡು ಬಾರಿ ಹೆಸರು ನಮೂದು ಆಗುವುದನ್ನು ತಡೆಯಲು ಮತ್ತು ಕಾಲ್ಪನಿಕ ಹೆಸರುಗಳು ಪಟ್ಟಿಯಲ್ಲಿ ಸೇರದಂತೆ ಎಚ್ಚರಿಕೆ ವಹಿಸಲೂ ಮಾರ್ಗಸೂಚಿ ನೀಡಬೇಕು
- ಕಂಪ್ಯೂಟರ್ ಸ್ವಯಂಚಾಲಿತವಾಗಿ ಪರಿಶೀಲಿಸಬಲ್ಲ ಸ್ವರೂಪದಲ್ಲಿರುವ ಡಿಜಿಟಲ್ ಮತದಾರರ ಪಟ್ಟಿಯನ್ನು ಒದಗಿಸುವಂತೆ ಆಯೋಗಕ್ಕೆ ಸೂಚಿಸಿ. ಇದರಿಂದ ಪಟ್ಟಿಯ ಪರಿಶೀಲನೆಗೆ ಅನುಕೂಲವಾಗಲಿದೆ
- ಮತ ಕಳ್ಳತನ ಆರೋಪವು ಒಂದು ವೇಳೆ ನಿಜವೇ ಆಗಿದ್ದಲ್ಲಿ, ‘ಒಬ್ಬ ವ್ಯಕ್ತಿ ಒಂದು ವೋಟು’ ಎಂಬ ಸಂವಿಧಾನದ 325 ಮತ್ತು 326ನೇ ವಿಧಿಯ ಮೂಲಾಧಾರಕ್ಕೆ ಪೆಟ್ಟು ಬೀಳಲಿದೆ. ಕಾನೂನಾತ್ಮಕವಾಗಿ ಮತದಾನ ನಡೆಯಬೇಕು ಎನ್ನುವ ಮೌಲ್ಯವನ್ನೇ ಅಪಮೌಲ್ಯಗೊಳಿಸಿದಂತಾಗುತ್ತದೆ

ಪ್ಯಾಲೆಸ್ಟೀನ್ ಕೈದಿಗಳ ಬಿಡುಗಡೆ ಮಾಡಿದ ಇಸ್ರೇಲ್

20 ಒತ್ತೆಯಾಳು ಬಿಡುಗಡೆ

ದೀರ್ ಅಲ್–ಬಲಾಹ್ (ಗಾಜಾ ಪಟ್ಟಿ) (ಎಪಿ): ಗಾಜಾದಲ್ಲಿ ಒತ್ತೆಯಾಳುಗಳಾಗಿದ್ದ ಕೊನೆಯ 20 ಮಂದಿಯನ್ನು ಕದನ ವಿರಾಮ ಒಪ್ಪಂದದ ಭಾಗವಾಗಿ ಹಮಾಸ್ ಸೋಮವಾರ ಬಿಡುಗಡೆ ಮಾಡಿದೆ.

ಸೋಮವಾರ ಮುಂಜಾನೆ ಏಳು ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಾಗಿತ್ತು. ಕೆಲವು ಗಂಟೆಗಳ ನಂತರ ಉಳಿದ 13 ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಾಗಿದೆ. ಈ 20 ಮಂದಿ ತಮ್ಮ ಕುಟುಂಬಗಳನ್ನು ಸೇರಿದ್ದು, ಅವರು ವೈದ್ಯಕೀಯ ತಪಾಸಣೆಗೆ ಒಳಗಾಗುವ ಸಾಧ್ಯತೆ ಇದೆ.

ಉಳಿದ 28 ಒತ್ತೆಯಾಳುಗಳ ಮೃತದೇಹಗಳನ್ನೂ ಹಮಾಸ್ ಶೀಘ್ರವೇ ಹಸ್ತಾಂತರಿಸಲಿದೆ.

10

ಎಲ್ಲಾ ಒತ್ತೆಯಾಳುಗಳ ಬಿಡುಗಡೆ ಸ್ವಾಗತಾರ್ಹ. ಪ್ರದೇಶದಲ್ಲಿ ಶಾಂತಿ ಸ್ಥಾಪಿಸುವ ಡೊನಾಲ್ಡ್ ಟ್ರಂಪ್ ಅವರ ಪ್ರಾಮಾಣಿಕ ಪ್ರಯತ್ನಕ್ಕೆ ಭಾರತ ಬೆಂಬಲ ನೀಡಿತ್ತು

ನರೇಂದ್ರ ಮೋದಿ, ಪ್ರಧಾನಿ

ಒತ್ತೆಯಾಳುಗಳ ಬಿಡುಗಡೆ ಬಳಿಕ ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ಇದಕ್ಕಾಗಿ ಅವಿರತ ರಾಜತಾಂತ್ರಿಕ ಪ್ರಯತ್ನ ಮಾಡಿದ ಅಮೆರಿಕ, ಈಜಿಪ್ಟ್, ಕತಾರ್ ಮತ್ತು ಟರ್ಕಿಗೆ ಧನ್ಯವಾದಗಳು


ಕಿಯರ್ ಸ್ಟಾರ್ಮರ್, ಬ್ರಿಟನ್ ಪ್ರಧಾನಿ



ಇಸ್ರೇಲ್ ವಶದಲ್ಲಿದ್ದ ಪ್ಯಾಲೆಸ್ಟೀನಿಯನ್ ಕೈದಿಯೊಬ್ಬರು ಬಿಡುಗಡೆಯಾದ ಬಳಿಕ ಸಂಬಂಧಿಕರನ್ನು ಬಿಗಿದಪ್ಪಿದರು —ಎಎಫ್‌ಪಿ ಚಿತ್ರ

ಚಿಟಿಕೆ ಸುದ್ದಿ

ಎಸ್‌ಜಿಎಸ್‌ಗೆ ಪುವೆಂಪು ಪ್ರಶಸ್ತಿ


ಸಿದ್ಧರಾಮಯ್ಯ

ಮಂಗಳೂರು: ಕಾಸರಗೋಡು ಬದಿಯಡ್ಕದ ಡಾ.ಪುಂಡೂರು ವೆಂಕಟರಾಜ ಪುಣಿಂಚಿತ್ತಾಯ ಪ್ರತಿಷ್ಠಾನದ ವಾರ್ಷಿಕ 'ಪುವೆಂಪು ಪ್ರಶಸ್ತಿ'ಗೆ ಸಾಹಿತಿ ಪ್ರೊ. ಎಸ್.ಜಿ ಸಿದ್ಧರಾಮಯ್ಯ ಅವರನ್ನು ಆಯ್ಕೆ ಮಾಡಲಾಗಿದೆ.

'ಪ್ರಶಸ್ತಿ ₹25 ಸಾವಿರ ನಗದು ಒಳಗೊಂಡಿದೆ. ಅ. 15ರಂದು ಮಂಜೇಶ್ವರ ಸಮೀಪದ ಕೇರಳ ತುಳು ಅಕಾಡೆಮಿ ಸಭಾಂಗಣದಲ್ಲಿ ನಡೆಯುವ ಪುವೆಂಪು ನೆನಪು ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದು' ಎಂದು ಆಯ್ಕೆ ಸಮಿತಿ ಮುಖ್ಯಸ್ಥ ರಾಧಾಕೃಷ್ಣ ಕೆ.ಉಳಿಯತ್ತಡ್ಕ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬಾರದ ವೇತನ ಆತ್ಮಹತ್ಯೆ


ಭಾಗ್ಯವತಿ ಅಗ್ಗಿಮಠ

ಸೇಡಂ (ಕಲಬುರಗಿ ಜಿಲ್ಲೆ): ಮೂರು ತಿಂಗಳಿಂದ ವೇತನ ಪಾವತಿಸಿಲ್ಲ ಎಂದು ನೊಂದು ತಾಲ್ಲೂಕಿನ ಮಳಖೇಡ ಗ್ರಾಮದ ಗ್ರಂಥಾಲಯ ಮೇಲ್ವಿಚಾರಕಿ ಗ್ರಂಥಾಲಯದಲ್ಲೇ ಸೋಮವಾರ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಳಖೇಡ ಗ್ರಾಮದ ಭಾಗ್ಯವತಿ ವಿಶ್ವೇಶ್ವರಯ್ಯ ಅಗ್ಗಿಮಠ (40) ಮೃತರು. ಅವರಿಗೆ ಪತಿ, ಪುತ್ರಿ, ಪುತ್ರ ಇದ್ದಾರೆ.

'ಮೂರು ತಿಂಗಳಿಂದ ವೇತನ ಪಾವತಿ ಆಗಿರಲಿಲ್ಲ. ಅಧಿಕಾರಿಗಳು ಸತಾಯಿಸುತ್ತಿದ್ದರು. ಇದೇ ಕಾರಣಕ್ಕೆ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆ ಪತ್ರ ಬರೆದಿಟ್ಟಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ದಿಢೀರ್ ಪ್ರತಿಭಟನೆ: ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರಕ್ಕೆ ಒತ್ತಾಯಿಸಿ ಸಂಬಂಧಿಕರು, ಮುಖಂಡರು ಗ್ರಂಥಾಲಯದ ಎದುರು ಪ್ರತಿಭಟಿಸಿದರು.

ಲೋಕಾಯುಕ್ತ ಬಲೆಗೆ ಪಿಡಿಒ


ಸಚಿನ್

ಮದ್ದೂರು (ಮಂಡ್ಯ ಜಿಲ್ಲೆ): ಪೌತಿ ಖಾತೆ ಮಾಡಿಕೊಡಲು ₹5 ಸಾವಿರ ಲಂಚ ಪಡೆಯುತ್ತಿದ್ದ ತಾಲ್ಲೂಕಿನ ಕೊಪ್ಪ ಹೋಬಳಿಯ ಬೆಕ್ಕಳಲೆ ಗ್ರಾಮ ಪಂಚಾಯಿತಿ ಪ್ರಭಾರ ಪಿಡಿಒ ಸಚಿನ್ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದರು. ತಾಲ್ಲೂಕಿನ ತಗ್ಗಹಳ್ಳಿಯಲ್ಲಿ ಅವರು ಪಿಡಿಒ ಆಗಿದ್ದಾರೆ.

ಗ್ರಾಮದ ಶಿವಲಿಂಗಯ್ಯ ದೂರು ನೀಡಿದ್ದರು. ಲೋಕಾಯುಕ್ತ ಇನ್‌ಸ್ಪೆಕ್ಟರ್‌ಗಳಾದ ಬ್ಯಾಟರಾಯಗೌಡ, ಕುಮಾರ್ ಕಾರ್ಯಾಚರಣೆ ನಡೆಸಿದರು.

'ಗ್ಯಾರಂಟಿ' ವಿರುದ್ಧ ಮಾತನಾಡಿಲ್ಲ'

ದಾಂಡೇಲಿ (ಉತ್ತರ ಕನ್ನಡ ಜಿಲ್ಲೆ): 'ನಾನು ಗ್ಯಾರಂಟಿ ಯೋಜನೆಗಳ ವಿರುದ್ಧ ಮಾತನಾಡಿಲ್ಲ. ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಬೇಕಿಲ್ಲ' ಎಂದು ಶಾಸಕ ಆರ್.ವಿ.ದೇಶಪಾಂಡೆ ಸೋಮವಾರ ತಿಳಿಸಿದ್ದಾರೆ.

'ಅರಿವಿಗೆ ಬಾರದಷ್ಟು ವೇಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯೋಜನೆ ಜಾರಿಗೊಳಿಸುತ್ತಾರೆ ಎಂದಿದ್ದೇನೆ' ಎಂದು ಗ್ಯಾರಂಟಿ ಯೋಜನೆಗಳ ಜಾರಿ ಕುರಿತ ತಮ್ಮ ಮಾತಿಗೆ ಪೂರಕವಾಗಿ ಹೇಳಿಕೆ ನೀಡಿದ್ದಾರೆ.

'ಸಿದ್ದರಾಮಯ್ಯ ಅವರಲ್ಲಿ ಜನಪರ ಮನೋಭಾವ ಇರುವ ಕಾರಣಕ್ಕೆ ಗ್ಯಾರಂಟಿ ಯೋಜನೆ ಜಾರಿಗೊಳಿಸಿದ್ದಾರೆ. ಅವು ಬಡವರ, ದುರ್ಬಲರ ಕಲ್ಯಾಣಕ್ಕೆ ಪೂರಕವಾಗಿವೆ' ಎಂದಿದ್ದಾರೆ.

ಅಮಲು ಸಿರಪ್ ಮಾರಾಟ: ಬಂಧನ



ದಾವಣಗೆರೆ: ಅಮಲು ಬರುವ ಸಿರಪ್ ಬಾಟಲಿಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ದ್ವಿಚಕ್ರ ವಾಹನ ಸೇರಿ ₹1.25 ಲಕ್ಷ ಮೌಲ್ಯದ ವಿವಿಧ ಕಂಪನಿಗಳ ಸಿರಪ್ ಬಾಟಲಿ ಮತ್ತು ಮಾತ್ರೆಗಳನ್ನು ವಶಪಡಿಸಿಕೊಂಡಿದ್ದಾರೆ.

ಸ್ಥಳೀಯ ನಿವಾಸಿಗಳಾದ ಶಿವಕುಮಾರ, ಅಜಿಮುದ್ದೀನ್, ಮಹಮದ್ ಶಾರೀಕ್, ಚನ್ನಗಿರಿ ತಾಲ್ಲೂಕಿನ ಹೊನ್ನೇಬಾಗಿಬ ಸೈಯದ್ ಬಾಬು ಹಾಗೂ ಚನ್ನಗಿರಿ ಅಬ್ದುಲ್ ಗಫರ್ ಬಂಧಿತರು.

ಮಾದಕ ದ್ರವ್ಯ ನಿಗ್ರಹ ಪಡೆಯ ಸಿಬ್ಬಂದಿ ಗಸ್ತಿನಲ್ಲಿದ್ದಾಗ ಅಕ್ರಮವಾಗಿ ಅಮಲು ಬರುವ ಸಿರಪ್ ಬಾಟಲಿಗಳನ್ನು ಮಾರುತ್ತಿರುವುದು ಕಂಡುಬಂದಿತ್ತು. ಪ್ರಕರಣ ದಾಖಲಾಗಿದೆ.

'ಕಾಂಗ್ರೆಸ್ ಮನೆಗಳಿಂದಲೇ ಹಣ'

ಪ್ರಿಯಾಂಕ್‌ಗೆ ಅಜ್ಞಾನ, ಅಧಿಕಾರದ ಮದ ಬಿಜೆಪಿಯ ಎನ್.ರವಿಕುಮಾರ್ ವಾಗ್ದಾಳಿ

ಪ್ರಜಾವಾಣಿ ವಾರ್ತೆ


ರವಿಕುಮಾರ್

ಮಂಗಳೂರು: 'ಆರ್‌ಎಸ್‌ಎಸ್‌ಗೆ ಕಾಂಗ್ರೆಸ್ ಮನೆಗಳಿಂದಲೇ ಹಣ ಬರುತ್ತಿದೆ ಎಂಬುದು ಪ್ರಿಯಾಂಕ್ ಖರ್ಗೆಗೆ ತಿಳಿದಿಲ್ಲ. ಅಜ್ಞಾನ ಮತ್ತು ಅಧಿಕಾರದ ಮದದಿಂದ ಅವರು ಆರ್‌ಎಸ್‌ಎಸ್ ಬಗ್ಗೆ ಇಲ್ಲಸಲ್ಲದ ಮಾತು ಆಡುತ್ತಿದ್ದಾರೆ' ಎಂದು ವಿಧಾನ ಪರಿಷತ್ ವಿಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಹೇಳಿದರು.

ಸೋಮವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒಳ್ಳೆಯ ಕಾರ್ಯಗಳನ್ನು ಮಾಡುವುದಾಗಿ ಅಭಿನಂದಿಸಿ ಕಾಂಗ್ರೆಸ್ ಕಾರ್ಯಕರ್ತರ ತಾಯಂದಿರೇ ಆರ್‌ಎಸ್‌ಎಸ್‌ಗೆ ಹಣ ಕೊಡುತ್ತಾರೆ. ಕಾಂಗ್ರೆಸ್‌ನಲ್ಲಿ ಇರುವ ಬಹುತೇಕರಿಗೆ ಆರ್‌ಎಸ್‌ಎಸ್ ಬಗ್ಗೆ ಒಳ್ಳೆಯ ಅಭಿಪ್ರಾಯ ಇದೆ' ಎಂದು ಪ್ರತಿಪಾದಿಸಿದರು.

'ಆರ್‌ಎಸ್‌ಎಸ್ ಯಾರನ್ನೂ ಶತ್ರುಗಳಾಗಿ ಕಾಣವುದಿಲ್ಲ. ಪ್ರಿಯಾಂಕ್ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರು ಆರ್‌ಎಸ್‌ಎಸ್ ಶಾಖೆಗೆ ಬಂದು ಚಟುವಟಿಕೆ ನೋಡಿ ವಾಸ್ತವವನ್ನು ತಿಳಿದುಕೊಳ್ಳಲಿ. ಅಲ್ಲಿ ಅನೇಕ ಶಿಕ್ಷಕರು ಇದ್ದಾರೆ. ಪ್ರಿಯಾಂಕ್ ಅವರಿಗೆ ಒಳ್ಳೆಯತನದ ಪಾಠ ಹೇಳಲು ಒಬ್ಬ ಶಿಕ್ಷಕ ಸಾಕು' ಎಂದು ಹೇಳಿದರು.'

'ಆರ್‌ಎಸ್‌ಎಸ್ ಬಗ್ಗೆ ಕೆಟ್ಟಅಭಿಪ್ರಾಯ ಮೂಡಿಸುವಂತೆ ಪ್ರಿಯಾಂಕ್ ಅವರಿಗೆ ಆಮಿಷ ಒಡ್ಡಿ ರಾಹುಲ್ ಗಾಂಧಿ ಛೂ ಬಿಟ್ಟಿದ್ದಾರೆ. ಬಿ.ಕೆ ಹರಿಪ್ರಸಾದ್ ಕೂಡಾ ಸಂಘಟನೆಯ ಬಗ್ಗೆ ಮಾತನಾಡತೊಡಗಿದ್ದಾರೆ. ಹರಿಪ್ರಸಾದ್ ಏನೇ ಮಾಡಿದರೂ ಸಚಿವರಾಗುವುದು ಸಾಧ್ಯವಿಲ್ಲ' ಎಂದು ರವಿಕುಮಾರ್ ಹೇಳಿದರು.

> **ಪ್ರಿಯಾಂಕ್ ಖರ್ಗೆ ಸಚಿವರು. ಸರ್ಕಾರಕ್ಕೆ ಮನವಿ ಕೊಟ್ಟಿದ್ದಾರೆ. ಯಾವುದಾದರೂ ಸಂವಿಧಾನ ವಿರೋಧಿ ವಿಚಾರ ಇದ್ದರೆ, ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಲಿದೆ**
> **ಪಿ.ಎಂ.ನರೇಂದ್ರಸ್ವಾಮಿ**
> ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ

'ನೀನ್ಯಾವ ಪುಟಗೋಸಿ?'


ಗದಗ: 'ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ, ಇಂದಿರಾಗಾಂಧಿ, ರಾಜೀವ್ ಗಾಂಧಿ ಅವರಿಗೇ ಆರ್‌ಎಸ್‌ಎಸ್ ನಿಷೇಧಿಸಲು ಸಾಧ್ಯವಾಗಲಿಲ್ಲ. ಇನ್ನು, ನೀನ್ಯಾವ ಪುಟಗೋಸಿ?' ಎಂದು ನರಗುಂದ ಶಾಸಕ ಸಿ.ಸಿ.ಪಾಟೀಲ ಅವರು ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಇಲ್ಲಿ ವಾಗ್ದಾಳಿ ನಡೆಸಿದರು.

'ತಂದೆ ಎಐಸಿಸಿ ಅಧ್ಯಕ್ಷ ಎಂಬ ಕಾರಣಕ್ಕೆ ಪ್ರತಿ ವಿಷಯದಲ್ಲೂ ಮೂಗು ತೂರಿಸುತ್ತಾರೆ. ಆರ್‌ಎಸ್‌ಎಸ್ ವಿರುದ್ಧ ನಿಷೇಧಕ್ಕೆ ಪತ್ರ ಬರೆದಿರುವುದು, ಅದಕ್ಕೆ ಸಹಿ ಹಾಕಿ, ಮುಂದಿನ ಕ್ರಮಕ್ಕೆ ಸಿ.ಎಂ ಆದೇಶಿಸಿದ್ದು ಸರಿಯಲ್ಲ. ಕೆಲವೇ ವರ್ಷಗಳಲ್ಲಿ ನಿನಗೆ (ಪ್ರಿಯಾಂಕ್ ಖರ್ಗೆ), ನಿಮ್ಮಪ್ಪನಿಗೆ ಮತದಾರರು ತಕ್ಕ ಪಾಠ ಕಲಿಸುತ್ತಾರೆ' ಎಂದು ಇಲ್ಲಿ ಸುದ್ದಿಗೋಷ್ಠಿಯಲ್ಲಿ ಏಕವಚನದಲ್ಲಿ ಹರಿಹಾಯ್ದರು.

'ಸರ್ಕಾರಕ್ಕೆ ತಾಕತ್ತಿದ್ದರೆ ಪಿಎಫ್‌ಐ, ಎಸ್‌ಡಿಪಿಐನಂತಹ ದೇಶದ್ರೋಹಿ ಸಂಘಟನೆಗಳನ್ನು ನಿಷೇಧಿಸಲಿ' ಎಂದು ಅವರು ಸವಾಲು ಹಾಕಿದರು.

'ಸೇವೆ ಅಲ್ಲಗಳೆಯಲಾಗದು, ತಪ್ಪುಗಳಿದ್ದರೆ ನಿವಾರಿಸಲು ಯತ್ನಿಸಿ'

ಉಡುಪಿ: 'ಆರ್‌ಎಸ್‌ಎಸ್ ಚಟುವಟಿಕೆ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಅಭಿಪ್ರಾಯ ತಿಳಿಸುವ ಹಕ್ಕು ಅವರಿಗೆ ಇದೆ. ಮುಖ್ಯಮಂತ್ರಿ ಎಲ್ಲರ ಜೊತೆ ಚರ್ಚಿಸಿ ಯೋಗ್ಯ ತೀರ್ಮಾನ ತೆಗೆದುಕೊಳ್ಳುವ ವಿಶ್ವಾಸವಿದೆ' ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.


ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

ಸುದ್ದಿಗಾರರ ಜೊತೆ ಸೋಮವಾರ ಇಲ್ಲಿ ಮಾತನಾಡಿದ ಅವರು, 'ಆರ್‌ಎಸ್‌ಎಸ್ ತನ್ನ ಹೆಸರಿನಂತೆ ರಾಷ್ಟ್ರೀಯ ಸೇವೆಯನ್ನು ಮಾಡುತ್ತಿದೆ. ವ್ಯವಸ್ಥೆಯಲ್ಲಿ ಕೆಲವು ತಪ್ಪುಗಳಾಗುವುದು ಸಹಜ. ತಪ್ಪುಗಳು ಇದೆಯೋ ಇಲ್ಲವೋ ವಿಮರ್ಶಿಸಬೇಕು' ಎಂದರು.

'ಒಬ್ಬರಿಗೆ ಸರಿ ಎಂದು ಕಂಡದ್ದು ಮತ್ತೊಬ್ಬರಿಗೆ ತಪ್ಪು ಎಂದೆನಿಸಬಹುದು. ತಪ್ಪುಗಳಿದ್ದರೆ ನಿವಾರಿಸುವ ನಿಟ್ಟಿನಲ್ಲಿ ಪ್ರಯತ್ನಿಸಿ' ಎಂದು ಸ್ವಾಮೀಜಿ ಸಲಹೆ ಮಾಡಿದ್ದಾರೆ.

'ಆರ್‌ಎಸ್‌ಎಸ್ ನೂರು ವರ್ಷಗಳಿಂದ ಮಾಡುತ್ತಿರುವ ದೇಶ ಸೇವೆ ಮತ್ತು ಅದರಿಂದ ದೇಶಕ್ಕಾಗಿರುವ ಲಾಭ ಗಮನಿಸಬೇಕು. ಪ್ರಾಕೃತಿಕ ವಿಕೋಪ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸೇವೆಯನ್ನು ಅಲ್ಲಗಳೆಯಲಾಗದು' ಎಂದರು.

ಬಿಜೆಪಿಯಿಂದ 'ಪೋಸ್ಟರ್' ತಿರುಗೇಟು

ಕಲಬುರಗಿ: ಆರ್‌ಎಸ್‌ಎಸ್ ಕಾರ್ಯ ಚಟುವಟಿಕೆ ನಿಷೇಧ ಕೋರಿ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದನ್ನು ಖಂಡಿಸಿ ಬಿಜೆಪಿ ನಾಯಕರು ಆರ್‌ಎಸ್‌ಎಸ್ ಪರ 'ಪೋಸ್ಟರ್' ಪ್ರಚಾರ ನಡೆಸಿದ್ದಾರೆ.



ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತ ಸೇರಿದಂತೆ ವಿವಿಧೆಡೆ 'ಯಾರು ಭಾರತವನ್ನು ಪ್ರೀತಿಸುತ್ತಾರೋ ಅವರು ಆರ್‌ಎಸ್‌ಎಸ್ ಅನ್ನೂ ಪ್ರೀತಿಸುತ್ತಾರೆ' ಎಂಬ ಬರಹವುಳ್ಳ ಪೋಸ್ಟರ್ ಅಂಟಿಸಿದ್ದಾರೆ.

'ಪ್ರಿಯಾಂಕ್ ಖರ್ಗೆ ಉದ್ಧಟತನದ ಹೇಳಿಕೆ ಕೊಟ್ಟಿದ್ದಾರೆ. ಅದಕ್ಕೆ ತಿರುಗೇಟು ನೀಡಲು ಯುವಜನರು ಸೇರಿ ಪೋಸ್ಟರ್ ಅಂಟಿಸುತ್ತಿದ್ದೇವೆ. ರಾಷ್ಟ್ರ ಭಕ್ತರೆಲ್ಲರೂ ಇದರಲ್ಲಿ ಪಾಲ್ಗೊಂಡಿದ್ದಾರೆ. ಸೈದ್ಧಾಂತಿಕ ಅಭಿಯಾನ ಮುಂದುವರಿಯಲಿದೆ' ಎಂದು ಮುಖಂಡರಾದ ಅಮರನಾಥ ಪಾಟೀಲ, ಶಿವರಾಜ ಪಾಟೀಲ ಹೇಳಿದ್ದಾರೆ.

'ಏನು ಮಾಡಲು ಸಾಧ್ಯ?'


ಸುನೀಲ್ ಕುಮಾರ್

ಉಡುಪಿ: 'ಆರ್‌ಎಸ್‌ಎಸ್ ಎಂದರೆ ಸೇವೆ, ದೇಶಭಕ್ತಿ, ಶಿಸ್ತು. ಅದು ಇಂದಿರಾ ಗಾಂಧಿಗೇ ಹೆದರಿಲ್ಲ, ನೆಹರೂ ಮುಂದೆ ಮಂಡಿಯೂರಿಲ್ಲ. ಇನ್ನು ಪ್ರಿಯಾಂಕ್‌ಗೆ ಏನು ಮಾಡಲು ಸಾಧ್ಯ' ಎಂದು ಶಾಸಕ ಸುನಿಲ್ ಕುಮಾರ್ ಹೇಳಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪ್ರಿಯಾಂಕ್ ಅವರ ಅಧಿಕಾರ ಶಾಶ್ವತ ಅಲ್ಲ. ಆರ್‌ಎಸ್‌ಎಸ್ ಶಾಶ್ವತ. ಅದರ ವಿಚಾರ ಶಾಶ್ವತ' ಎಂದರು.

'ಎರಡೂವರೆ ವರ್ಷಗಳಿಂದ ಗ್ರಾಮೀಣಾಭಿವೃದ್ಧಿ ಇಲಾಖೆ ಕೋಮಾ ಸ್ಥಿತಿಯಲ್ಲಿದೆ. ಖಾತೆ ನಿಭಾಯಿಸಲಾಗದೇ ವಿಫಲರಾಗಿದ್ದಾರೆ. ಗ್ರಾಮೀಣ ರಸ್ತೆಗಳು ಗುಂಡಿ ಬೀಳಲು ಪ್ರಿಯಾಂಕ್ ಕಾರಣ. ಒಂದು ಕಿ.ಮೀ ರಸ್ತೆ ನಿರ್ಮಾಣ ಮಾಡಲಾಗಿಲ್ಲ. ಆದರೂ ಆರ್‌ಎಸ್‌ಎಸ್ ಟೀಕಿಸುವ ಧಾರ್ಷ್ಟ್ಯ ಪ್ರದರ್ಶಿಸಿದ್ದಾರೆ' ಎಂದರು.

ಸುದ್ದಿ 2 ನಿಮಿಷ

ಜೆಎಸ್‌ಎಸ್: ಮಾರಿಷಸ್‌ನಲ್ಲಿ ಎಂಬಿಬಿಎಸ್ ಕೋರ್ಸ್

ಮೈಸೂರು: 'ಇಲ್ಲಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯು (ಜೆಎಸ್‌ಎಸ್‌ಎಎಚ್‌ಇಆರ್) ಮಾರಿಷಸ್‌ನಲ್ಲಿ ಐದು ವರ್ಷದ ಎಂಬಿಬಿಎಸ್ ಕೋರ್ಸ್ ಪ್ರಾರಂಭಿಸಲು ಅಲ್ಲಿನ ಸರ್ಕಾರದ ಉನ್ನತ ಶಿಕ್ಷಣ ಆಯೋಗದಿಂದ ಅನುಮೋದನೆ ಸಿಕ್ಕಿದೆ' ಎಂದು ಕುಲಪತಿ ಬಿ. ಸುರೇಶ್ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು, 'ನ್ಯಾಷನಲ್ ಮೆಡಿಕಲ್ ಕೌನ್ಸಿಲ್ ಮಾರ್ಗಸೂಚಿಯಂತೆ 100 ಸೀಟುಗಳ ಕೋರ್ಸ್ ನವೆಂಬರ್‌ನಲ್ಲಿ ಆರಂಭವಾಗಲಿದ್ದು, ನೀಟ್ ಅರ್ಹತೆಯುಳ್ಳವರು ಪ್ರವೇಶ ಪಡೆಯಬಹುದು. ಭಾರತೀಯ ಪಠ್ಯಕ್ರಮದ ಬೋಧನೆ ಇರಲಿದೆ' ಎಂದು ಹೇಳಿದರು.

'ಬಹುತೇಕ ಬೋಧಕರು ಇಲ್ಲಿನವರೇ. ಫಾರಿನ್ ಮೆಡಿಕಲ್ ಗ್ರಾಜುಯೇಟ್ ಪರೀಕ್ಷೆಗೆ ತರಬೇತಿಯನ್ನೂ ನೀಡಲಾಗುವುದು. ಭಾರತದಲ್ಲಿ ಆಗುವಷ್ಟೆ ಖರ್ಚು ಅಲ್ಲೂ ಆಗಲಿದೆ' ಎಂದರು.



'ವಕೋಯಾಸ್ ಉಪನಗರದ ಬೋನ್‌ಟೇರ್‌ನ 8 ಎಕರೆ ಪ್ರದೇಶದ ಕ್ಯಾಂಪಸ್‌ನಲ್ಲಿರುವ ಅಕಾಡೆಮಿಯಲ್ಲಿ ಅಂತರರಾಷ್ಟ್ರೀಯ ದರ್ಜೆಯ ತರಗತಿ ಕೊಠಡಿಗಳು, ಪ್ರಯೋಗಾಲಯಗಳು, ಸಿಮ್ಯುಲೇಷನ್ ಮತ್ತು ಕೌಶಲ ತರಬೇತಿ, ಹಾಗೂ ವಸತಿ ಸೌಲಭ್ಯಗಳಿವೆ. ಆರೋಗ್ಯ ಇಲಾಖೆಯ ಎಸ್‌ಎಸ್‌ಆರ್‌ಎನ್ ಆಸ್ಪತ್ರೆ ಸೇರಿ ಒಟ್ಟು 600 ಹಾಸಿಗೆಗಳ ಸೌಲಭ್ಯವನ್ನು ಕ್ಲಿನಿಕಲ್ ತರಬೇತಿಗೆ ಒದಗಿಸಿದೆ' ಎಂದರು.

ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉಪಸ್ಥಿತರಿದ್ದರು.

'ದೆಹಲಿ ಭೇಟಿಗೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ'

ಮಂಗಳೂರು: 'ನನ್ನ ನವದೆಹಲಿ ಭೇಟಿಗೆ ವಿಶೇಷ ಅರ್ಥ ನೀಡುವ ಅಗತ್ಯ ಇಲ್ಲ' ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ (ಕೆಎಸ್‌ಪಿಸಿಬಿ) ಹಾಗೂ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಬೆಂಗಳೂರಿನಲ್ಲಿ ಅ.18–19ರಂದು ಕೆಎಸ್‌ಪಿಸಿಬಿ ಸುವರ್ಣ ಮಹೋತ್ಸವ ಆಚರಣೆ ನಡೆಯಲಿದ್ದು, ಇದಕ್ಕೆ ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು, ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಆಹ್ವಾನಿಸಲು ಹೋಗುತ್ತಿದ್ದೇನೆ' ಎಂದರು.

ಸಚಿವ ಸಂಪುಟದಲ್ಲಿ ಸ್ಥಾನ ಪಡೆಯುವ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, 'ಇದು ಪಕ್ಷದ ಆಂತರಿಕ ವಿಚಾರ' ಎಂದು ಹೇಳಿದರು.

ಆರ್‌ಎಸ್‌ಎಸ್ ಕುರಿತು ಪ್ರಿಯಾಂಕ್ ಖರ್ಗೆ ಹೇಳಿಕೆ ಕುರಿತ ಪ್ರಶ್ನೆಗೆ, 'ಯಾವ ಅರ್ಥದಲ್ಲಿ ಅವರು ಹೇಳಿಕೆ ನೀಡಿದ್ದಾರೋ ಗೊತ್ತಿಲ್ಲ. ಸನಾತನ ಧರ್ಮ ಯಾರೊಬ್ಬರ ಸ್ವತ್ತಲ್ಲ. ಅದರ ಹೆಸರಿನಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರತ್ತ ಶೂ ಎಸೆಯಲು ಯತ್ನಿಸಿದ್ದು ಘೋರ ಕೃತ್ಯ. ಅದನ್ನು ಸನಾತನ ಧರ್ಮದ ಹೆಸರಿನಲ್ಲಿ ಸಮರ್ಥಿಸುವುದು ಸರಿಯಲ್ಲ' ಎಂದು ಹೇಳಿದರು.

'ಹಸಿ ಬರಗಾಲ' ಘೋಷಿಸಲು ಆಗ್ರಹ

ಪ್ರಜಾವಾಣಿ ವಾರ್ತೆ


'ಕಲಬುರಗಿ ಬಂದ್' ಕರೆ ನೀಡಿದ್ದ ವಿವಿಧ ಸಂಘಟನೆಗಳ ಮುಖಂಡರು ಕಲಬುರಗಿಯ ಜಗತ್ ವೃತ್ತದಲ್ಲಿ ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು ಪ್ರಜಾವಾಣಿ ಚಿತ್ರ

ಕಲಬುರಗಿ: ಅತಿವೃಷ್ಟಿ ಬಾಧಿತ ಕಲಬುರಗಿಯನ್ನು 'ಹಸಿ ಬರಗಾಲ ಜಿಲ್ಲೆಯಾಗಿ ಘೋಷಣೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ಸೋಮವಾರ ನೀಡಿದ್ದ 'ಕಲಬುರಗಿ ಬಂದ್' ಕರೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಕಲಬುರಗಿ ಕೇಂದ್ರ ಬಸ್ ನಿಲ್ದಾಣ ಹಾಗೂ ಪ್ರಮುಖ ಮಾರ್ಗಗಳಲ್ಲಿ ರೈತ ಪರ, ಕಾರ್ಮಿಕ ಪರ, ವಿದ್ಯಾರ್ಥಿ ಪರ, ಮಹಿಳಾ ಪರ ಸಂಘಟನೆಗಳು ಬೀದಿಗಿಳಿದು ಹೋರಾಟ ನಡೆಸಿದವು.

ನಗರದಲ್ಲಿ ಸಾರಿಗೆ ಬಸ್‌ಗಳ ಓಡಾಟ ಮಧ್ಯಾಹ್ನ ತನಕ ಬಂದ್ ಆಗಿತ್ತು. ಇದರಿಂದ ಪ್ರಯಾಣಿಕರು ಪರದಾಡಿದರು.

'ನಗರದ ವ್ಯಾಪ್ತಿಯಲ್ಲಿ ಶೇ 30ರಿಂದ 40ರಷ್ಟು ಬಸ್‌ಗಳ ಸೇವೆ ವ್ಯತ್ಯಯವಾಗಿದೆ' ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ತಿಳಿಸಿದರು.

ಸೂಪರ್ ಮಾರ್ಕೆಟ್ ಪ್ರದೇಶದ ಶೇ90ರಷ್ಟು ವ್ಯಾಪಾರಿಗಳು ವಹಿವಾಟು ನಿಲ್ಲಿಸಿದ್ದರು. ಎಪಿಎಂಸಿಯಲ್ಲೂ ವಹಿವಾಟು ನಡೆಯಲಿಲ್ಲ. ನಗರದಲ್ಲಿನ ಪೆಟ್ರೋಲ್ ಬಂಕ್‌ಗಳೂ 'ಬಂದ್' ಬೆಂಬಲಿಸಿ ಮಧ್ಯಾಹ್ನ 3ರವರೆಗೆ ಗ್ರಾಹಕರಿಗೆ ಸೇವೆಯನ್ನು ಸ್ಥಗಿತಗೊಳಿಸಿದ್ದವು.

ಬಳಿಕ ನಗರೇಶ್ವರ ಶಾಲೆಯಿಂದ ಜಗತ್ ವೃತ್ತದ ರೈತ ಮುಖಂಡರು ಟ್ರ್ಯಾಕ್ಟರ್‌ಗಳೊಂದಿಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. 'ಕೇಂದ್ರ, ರಾಜ್ಯ ಸರ್ಕಾರಗಳು ಜಿಲ್ಲೆಯ ಅತಿವೃಷ್ಟಿಯನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಬೇಕು. ಪ್ರತಿ ಎಕರೆಗೆ ₹25 ಸಾವಿರ ಪರಿಹಾರ ಘೋಷಿಸಬೇಕು' ಎಂದು ಆಗ್ರಹಿಸಿದರು.

'ಮೂರ್ಖತನ'

ಮೈಸೂರು: 'ಸಂಘದ ಗಣವೇಷದಲ್ಲಿ ವಿಧಾನಸಭೆಗೆ ಬರುತ್ತೇವೆ, ಏನು ಮಾಡುತ್ತೀರಾ' ಎಂದು ಬಿಜೆಪಿ ಶಾಸಕ ಟಿ.ಎಸ್. ಶ್ರೀವತ್ಸ ಪ್ರಶ್ನಿಸಿದ್ದಾರೆ.

ಸಚಿವ ಪ್ರಿಯಾಂಕ್ ಪತ್ರ ಹಾಗೂ ಅದಕ್ಕೆ ಮುಖ್ಯಮಂತ್ರಿ ಪ್ರತಿಕ್ರಿಯಿಸಿರುವುದು ಮೂರ್ಖತನದ ಪರಮಾವಧಿ' ಎಂದು ದೂರಿದರು.

'ನನ್ನನ್ನು ಯಾಕೆ ದ್ವೇಷಿಸುತ್ತೀರಿ?'

ಪ್ರಜಾವಾಣಿ ವಾರ್ತೆ


ಸಿದ್ದರಾಮಯ್ಯ

ಬಾಗಲಕೋಟೆ: 'ಬಸವಣ್ಣನನ್ನು ಸಾಂಸ್ಕೃತಿಕ ನಾಯಕ ಎಂದು ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಮಾಡಲಿಲ್ಲ. ನಾನು ಮಾಡಿದೆ. ಆದರೂ ನನ್ನನ್ನು ಏಕೆ ದ್ವೇಷಿಸಿತ್ತೀರಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ, ಶಾಸಕ ವಿಜಯಾನಂದ ಕಾಶಪ್ಪನವರ ಅವರನ್ನು ಪ್ರಶ್ನಿಸಿದರು.

ಜಿಲ್ಲೆಯ ಬಂಡಿಗಣಿ ಮಠದಲ್ಲಿ ಸೋಮವಾರ ವಿಶ್ವಶಾಂತಿಗಾಗಿ ಸರ್ವಧರ್ಮ ಮಹಾಸಂಗಮ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಬಸವಣ್ಣನನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿ, ಸರ್ಕಾರಿ ಕಚೇರಿಗಳಲ್ಲಿ ಭಾವಚಿತ್ರ ಹಾಕುವಂತೆ ಆದೇಶಿಸಿದ್ದೇನೆ'' ಎಂದರು.

ಆಗ ಕಾಶಪ್ಪನವರ, 'ಇಲ್ಲ ಸರ್. ನಾವು ಬಹಳ ಪ್ರೀತಿ ಮಾಡುತ್ತೇವೆ' ಎಂದರು. ಅದಕ್ಕೆ ಸಿದ್ದರಾಮಯ್ಯ, 'ನೀನು ಮಾಡಲಪ್ಪ. ನೀನು ನನ್ನ ಅಭಿಮಾನಿ ಯಾವಾಗಲೂ. ಕೆಲವರು ಯಾಕೆ ದ್ವೇಷಿಸುತ್ತಾರೆ ಎಂಬುದು ನನಗಂತೂ ಗೊತ್ತಿಲ್ಲ. ನಾನು ಬಸವಣ್ಣನವರ ಕಟ್ಟಾ ಅನುಯಾಯಿ. 2013ರಲ್ಲಿ ಬಸವ ಜಯಂತಿಯಂದೇ ಪ್ರಮಾಣ ವಚನ ಸ್ವೀಕರಿಸಿದೆ. ಬಸವಣ್ಣನವರ ಸಮ ಸಮಾಜ ನಿರ್ಮಾಣವೇ ಸರ್ಕಾರದ ಗುರಿ' ಎಂದರು.

ಆರ್‌ಎಸ್‌ಎಸ್ ನಿರ್ಬಂಧ: ವಾಗ್ವಾದ

ಬಿಜೆಪಿ ಎದುರಿಸಿ: ಕಾರಜೋಳ

ಬೆಂಗಳೂರು: 'ಆರ್‌ಎಸ್‌ಎಸ್ ರಾಜಕೀಯ ಪಕ್ಷವಲ್ಲ. ಆರ್‌ಎಸ್‌ಎಸ್ ನೇತಾರ ಮೋಹನ್ ಭಾಗವತ್ ರಾಜಕಾರಣಿಯಲ್ಲ. ನೀವು ಎದುರಿಸಬೇಕಾಗಿರುವುದು ಬಿಜೆಪಿಯನ್ನೇ ಹೊರತು ಆರ್‌ಎಸ್‌ಎಸ್ ಅನ್ನು ಅಲ್ಲ' ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು.

'ನೀವು ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿಯವರನ್ನು ಎದುರಿಸಿ. ಅದನ್ನು ಬಿಟ್ಟು ಜನರಲ್ಲಿ ಸುಳ್ಳು ಮಾಹಿತಿ ಹೇಳಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯವರನ್ನು ಮೆಚ್ಚಿಸಲು ಆರ್‌ಎಸ್‌ಎಸ್ ಟೀಕೆ ಮಾಡುವುದನ್ನು ದೇಶದ 140 ಕೋಟಿ ಜನ ಸಹಿಸುವುದಿಲ್ಲ' ಎಂದರು.

'ಕಾಂಗ್ರೆಸ್ ಮುಖಂಡರಾದ ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ಮಕ್ಕಳಿಗೆ ಸರಿಯಾದ ಪಾಠ ಹೇಳಿಕೊಡಬೇಕು. ಯಾವ್ಯಾವುದೋ ಕಾರಣಕ್ಕಾಗಿ ಯಾರ್ಯಾರನ್ನೊ ಮೆಚ್ಚಿಸಲು ರಾಷ್ಟ್ರ ಪ್ರೇಮದಿಂದ 100 ವರ್ಷ ನಿಸ್ವಾರ್ಥ ಸೇವೆ ಮಾಡಿದ ಆರ್‌ಎಸ್‌ಎಸ್ ಮತ್ತು ಸ್ವಯಂ ಸೇವಕರನ್ನು ಟೀಕಿಸುವುದು ಸರಿಯಲ್ಲ. ಸಂಘದಲ್ಲಿ ಜಾತಿ, ಧರ್ಮ ಸೇರಿದಂತೆ ಯಾವ ತಾರತಮ್ಯವಿಲ್ಲ' ಎಂದು ಹೇಳಿದರು.

'ಮುಸ್ಲಿಂ ಭಯೋತ್ಪಾದಕರನ್ನು ಟೀಕಿಸಿದ್ದೀರಾ?'


ಒಂದನೇ ಪುಟದಿಂದ...

ದೇಶದ ಮೇಲೆ ಹಲವು ಬಾರಿ ದಾಳಿ ಮಾಡಿದ್ದ ವಿಧ್ವಂಸಕ ಕೃತ್ಯಗಳಲ್ಲಿ ತೊಡಗುವ ಮುಸ್ಲಿಂ ಭಯೋತ್ಪಾದಕರು ಹಾಗೂ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳ ಚಟುವಟಿಕೆಗಳ ಕುರಿತು ಎಂದಾದರೂ ಟೀಕಿಸಿದ್ದೀರಾ? ಖಂಡಿಸಿದ್ದೀರಾ' ಎಂದು ಪ್ರಶ್ನಿಸಿದರು.

'ನಿಮ್ಮ ಕುಟುಂಬದ ಇತಿಹಾಸದತ್ತ ಮೆಲುಕುಹಾಕಿ. ರಜಾಕಾರರ ದಾಳಿಯ ನಡುವೆ ನಿಮ್ಮ ಪೂಜ್ಯ ತಂದೆಯವರು ಹೇಗೆ ಬದುಕುಳಿದರು ಎಂಬುದನ್ನು ಒಮ್ಮೆ ಅವಲೋಕನ ಮಾಡಿ, ಆದಾಗ್ಯೂ ನೀವು ರಜಾಕಾರರು ಹಾಗೂ ರಜಾಕಾರ ಸಂಸ್ಕೃತಿಯನ್ನು ಒಮ್ಮೆಯೂ ಟೀಕಿಸಲಿಲ್ಲ' ಎಂದು ದೂರಿದರು.

ಚಿಕ್ಕಮಗಳೂರು: 19ರಿಂದ ಎರಡು ದಿನ ದೇವೀರಮ್ಮ ಉತ್ಸವ

ಪ್ರಜಾವಾಣಿ ವಾರ್ತೆ


ದೇವೀರಮ್ಮ ದೇಗುಲ

ಚಿಕ್ಕಮಗಳೂರು: ವರ್ಷಕ್ಕೊಮ್ಮೆ ದರ್ಶನಕ್ಕೆ ಅವಕಾಶ ಇರುವ ಬೆಟ್ಟದ ತುದಿಯಲ್ಲಿನ ಬಿಂಡಿಗ ದೇವೀರಮ್ಮ ಉತ್ಸವ ಇದೇ 19, 20ರಂದು ನಡೆಯಲಿದೆ.

'ಇದೇ ಮೊದಲ ಬಾರಿಗೆ ಎರಡು ದಿನ ಅಂದರೆ ಅ.19 ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆ ತನಕ, 20ರಂದು ಬೆಳಿಗ್ಗೆ 7ರಿಂದ ಪೂಜೆ ಮಧ್ಯಾಹ್ನ 3 ಗಂಟೆ ತನಕ ದೇವಿ ದರ್ಶನಕ್ಕೆ ಅವಕಾಶ ಸಿಗಲಿದೆ' ಎಂದು ದೇಗುಲ ವ್ಯವಸ್ಥಾಪನಾ ಸಮಿತಿಯ ಕುಲಶೇಖರ್ ತಿಳಿಸಿದರು.


ಬರಿಗಾಲಿನಲ್ಲೇ ಭಕ್ತರು ಬೆಟ್ಟ ಏರಬೇಕಿದೆ. ಮಳೆ ಇರುವುದರಿಂದ 15ರಿಂದ 60 ವರ್ಷದೊಳಗಿನವರಿಗೆ ಮಾತ್ರ ಬೆಟ್ಟ ಏರಲು ಅವಕಾಶ ನೀಡಲಾಗಿದೆ.

ಮುಳ್ಳಯ್ಯನಗಿರಿ, ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ, ಗಾಳಿಕೆರೆ ಹಾಗೂ ಮಾಣಿಕ್ಯಧಾರಾ ಜಲಪಾತಕ್ಕೆ ಬರುವ ಇತರೆ ಪ್ರವಾಸಿಗರಿಗೆ ಎರಡೂ ದಿನ (ಅ.19ರ ಬೆಳಿಗ್ಗೆ 6ರಿಂದ 20ರ ಸಂಜೆ 6 ಗಂಟೆ ತನಕ) ಪ್ರವೇಶವನ್ನು ಜಿಲ್ಲಾಡಳಿತ ನಿರ್ಬಂಧಿಸಿದೆ.

ಗಿರಿಭಾಗದಲ್ಲಿ ಇರುವ ಹೋಂಸ್ಟೇ, ರೆಸಾರ್ಟ್ ಮತ್ತು ವಸತಿ ಗೃಹಗಳಿಗೆ ಈಗಾಗಲೇ ಮುಂಗಡವಾಗಿ ಕೊಠಡಿ ಕಾಯ್ದಿರಿಸಿರುವ ಪ್ರವಾಸಿಗರಿಗೆ ಪ್ರವೇಶ ದೊರೆಯಲಿದೆ. ಆದರೆ, ಅವರಿಗೆ ಸೀತಾಳಯ್ಯನಗಿರಿ, ಮುಳ್ಳಯ್ಯನಗಿರಿ, ಮಾಣಿಕ್ಯಧಾರ ಪ್ರವಾಸಕ್ಕೆ ನಿರ್ಬಂಧ ಇರಲಿದೆ. ಮುಳ್ಳಯ್ಯನಗಿರಿಗೆ ಎರಡೂ ದಿನ ಆನ್‌ಲೈನ್ ಬುಕ್ಕಿಂಗ್ ಕೂಡ ರದ್ದುಪಡಿಸಲಾಗಿದೆ.

ರಾಜು ತಾಳಿಕೋಟೆ ಇನ್ನಿಲ್ಲ

ಪ್ರಜಾವಾಣಿ ವಾರ್ತೆ



ಧಾರವಾಡ: ರಂಗಾಯಣ ನಿರ್ದೇಶಕ, ಹಾಸ್ಯ ನಟ, ರಂಗಕರ್ಮಿ ರಾಜು ತಾಳಿಕೋಟೆ (ರಾಜೇಸಾಬ್ ಮುಕ್ತಂಸಾಬ್ ಯಂಕಂಚಿ) (60) ಅವರು ಮಣಿಪಾಲದ ಕಸ್ತೂರಬಾ ಆಸ್ಪತ್ರೆಯಲ್ಲಿ ಸೋಮವಾರ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಇದ್ದಾರೆ.

'ಉಡುಪಿ ಜಿಲ್ಲೆ ಹೆಬ್ರಿಗೆ ಚಲನಚಿತ್ರ ಚಿತ್ರೀಕರಣಕ್ಕೆ ತೆರಳಿದ್ದ ರಾಜು ಅವರಿಗೆ ಭಾನುವಾರ ರಾತ್ರಿ ಹೃದಯ ಮತ್ತು ಉಸಿರಾಟದ ಸಮಸ್ಯೆ ಕಾಡಿತು. ಆಸ್ಪತ್ರೆಯಲ್ಲಿ ತುರ್ತಾಗಿ 'ಆ್ಯಂಜಿಯೊಪ್ಲಾಸ್ಟಿ' ಚಿಕಿತ್ಸೆ ಮಾಡಿದೆವು. ಚಿಕಿತ್ಸೆಗೆ ಸ್ಪಂದಿಸದೆ ಕೊನೆಯುಸಿರೆಳೆದರು' ಎಂದು ಕಸ್ತೂರಬಾ ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ರಾಜು ಅವರು 2024ರ ಆಗಸ್ಟ್ 16ರಂದು ಧಾರವಾಡದ ರಂಗಾಯಣ ನಿರ್ದೇಶಕರಾಗಿ ಕಾರ್ಯಭಾರ ವಹಿಸಿಕೊಂಡಿದ್ದರು. ಕೆಲವೇ ದಿನಗಳಲ್ಲಿ 'ಬಹುಭಾಷಾ ನಾಟಕೋತ್ಸವ' ಆಯೋಜಿಸಿದ್ದ ಅವರು, ಹಲವು ಯೋಜನೆಗಳ ಬಗ್ಗೆ ಕನಸು ಕಂಡಿದ್ದರು.

ವಿಜಯಪುರ ಜಿಲ್ಲೆಯ ತಾಳಿಕೋಟೆ ಗ್ರಾಮದಲ್ಲಿ ಮುಕ್ತಂ ಸಾಬ್ ಮತ್ತು ಮೆಹಬೂಬ್ ಜಾನ್ ದಂಪತಿಯ ಪುತ್ರನಾಗಿ ಜನಿಸಿದ ರಾಜು, 4ನೇ ತರಗತಿವರೆಗೆ ಮಾತ್ರ ಶಿಕ್ಷಣ ಪಡೆದು ರಂಗಭೂಮಿಯತ್ತ ಆಕರ್ಷಿತರಾದರು.

ತಂದೆ ಮುಕ್ತಂ ಸಾಬ್ ಮಾಲೀಕತ್ವದ ಖಾಸ್ಗತೇಶ್ವರ ನಾಟಕ ಸಂಘದ 'ಸತ್ಯ ಹರಿಶ್ಚಂದ್ರ' ನಾಟಕದಲ್ಲಿ ಲೋಹಿತಾಶ್ವ ಪಾತ್ರ, 'ರೇಣುಕಾ ಯಲ್ಲಮ್ಮ' ನಾಟಕದಲ್ಲಿ ಬಾಲ ಪರಶುರಾಮ ಪಾತ್ರದ ಮೂಲಕ ನಟನೆ ಆರಂಭಿಸಿದರು. ಹಿಂದೆ ಹೋಟೆಲ್ ಮಾಣಿಯಾಗಿ, ಲಾರಿ ಕ್ಲೀನರ್, ಗೇಟ್ ಕೀಪರ್ ಆಗಿ ಕೆಲಸ ಮಾಡಿದ್ದರು.

ಕಂಪನಿಯಲ್ಲಿ ಅನಿರೀಕ್ಷಿತವಾಗಿ ರಾಜು ಅವರಿಗೆ 'ತಾಳಿ ತಕರಾರು' ನಾಟಕದಲ್ಲಿ ಅಭಿನಯಿಸುವ ಅವಕಾಶ ಸಿಕ್ಕಿತು. ಸುಧೀರ್ ಅವರ ಜತೆ 'ಸಿಂಧೂರ ಲಕ್ಷ್ಮಣ', ನಟಿ ಉಮಾಶ್ರೀ ಅವರ ಜತೆ 'ಬಸ್ ಕಂಡಕ್ಟರ್' ನಾಟಕಗಳಲ್ಲಿ ಅಭಿನಯಿಸಿದರು.

ರಾಜು ಅವರು ಹಾಸ್ಯ ನಟನೆಗೆ ಹೆಸರಾಗಿದ್ದರು. ಅವರ 'ಕಲಿಯುಗದ ಕುಡುಕ' ನಾಟಕವು ಸಾವಿರಕ್ಕೂ ಹೆಚ್ಚು ಪ್ರದರ್ಶನ ಕಂಡಿತ್ತು. 1998ರಲ್ಲಿ ಖಾಸ್ಗತೇಶ್ವರ ನಾಟಕ ಮಂಡಳಿ ಪುನರ್ ಸ್ಥಾಪಿಸಿದರು. 'ಹ್ಯಾಂಗರ ಬರಿ ನಕ್ಕೋತ ಹೋಗ್ರಿ', 'ಮುತ್ತೈದೆ ನೀ ಮತ್ತೊಮ್ಮೆ ಬಾ' ಸಹಿತ ಹಲವು ನಾಟಕಗಳಲ್ಲಿ ಪಾತ್ರ ಮಾಡಿದ್ದರು.

'ಮನಸಾರೆ', 'ಪಂಚರಂಗಿ', 'ಪರಮಾತ್ಮ' ಸಹಿತ ಹಲವು ಸಿನಿಮಾಗಳಲ್ಲಿ ನಟಿಸಿದ್ದರು. 'ಹಾಸ್ಯ ರತ್ನಾಕರ', 'ಹಾಸ್ಯ ಸಾಮ್ರಾಟ' ಸಹಿತ ಹಲವು ಬಿರುದುಗಳು, ಪ್ರಶಸ್ತಿಗಳು ಸಂದಿದ್ದವು.

'ಧಾರವಾಡದ ರಂಗಾಯಣದ ಆವರಣದಲ್ಲಿ ಮಂಗಳವಾರ ಬೆಳಿಗ್ಗೆ 7 ರಿಂದ 8ರವರೆಗೆ ರಾಜು ಅವರ ಪಾರ್ಥೀವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಚಿಕ್ಕ ಸಿಂದಗಿಯಲ್ಲಿ ಮಂಗಳವಾರ ಅಂತ್ಯಕ್ರಿಯೆ ನೆರವೇರಲಿದೆ' ಎಂದು ಕುಟುಂಬದವರು ತಿಳಿಸಿದ್ದಾರೆ.


ಧರ್ಮಸ್ಥಳ ಪ್ರಕರಣ • ಹಣಕಾಸು ವರ್ಗಾವಣೆ ಕುರಿತು ಪ್ರಶ್ನೆ

ಸಾಕ್ಷಿ ದೂರುದಾರನ ಪತ್ನಿ, ಸೋದರಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧಗಳಲ್ಲಿನ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ಸಾಕ್ಷಿ ದೂರುದಾರನ ಪತ್ನಿ ಹಾಗೂ ಸಹೋದರಿಯನ್ನು ವಿಶೇಷ ತನಿಖಾ ತಂಡದವರು ಸೋಮವಾರ ವಿಚಾರಣೆಗೆ ಒಳಪಡಿಸಿದ್ದಾರೆ.

'ಸಾಕ್ಷಿ ದೂರುದಾರನ ಕುಟುಂಬಕ್ಕೆ ಹಣಕಾಸು ವರ್ಗಾವಣೆ ಆಗಿರುವ ಕುರಿತು ಮಾಹಿತಿ ಕಲೆ ಹಾಕಲು ಆತನ ಪತ್ನಿ, ಅಕ್ಕನನ್ನು ಎಸ್‌ಐಟಿ ಕಚೇರಿಗೆ ಕರೆಸಿ ವಿಚಾರಿಸಲಾಗಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.



'ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಹಾಗೂ ಧರ್ಮಸ್ಥಳ ಹೊರ ಠಾಣೆಯಲ್ಲಿ ಈ ಹಿಂದೆ ಕರ್ತವ್ಯ ನಿರ್ವಹಿಸಿದ್ದ ಕೆಲ ಪೊಲೀಸ್ ಸಿಬ್ಬಂದಿಯನ್ನೂ ವಿಚಾರಣೆಗೆ ಒಳಪಡಿಸಲಾಗಿದೆ. ಕೆಲ ಅಸಹಜ ಸಾವುಗಳ ಶವಗಳನ್ನು ವಿಲೇವಾರಿ ಮಾಡಿದಾಗ ಕರ್ತವ್ಯ ನಿರ್ವಹಿಸಿದ್ದವರಿಂದ ಮಾಹಿತಿ ಕಲೆ ಹಾಕಲಾಗಿದೆ' ಎಂದು ತಿಳಿಸಿವೆ.

ಮಹೇಶ್ ಶೆಟ್ಟಿ ತಿಮರೋಡಿ ಮನೆಗೆ ಎಸ್‌ಐಟಿ ಅಧಿಕಾರಿಗಳು ಸೋಮವಾರ ಭೇಟಿ ನೀಡಿದ್ದರು.

'ಸಾಕ್ಷಿ ದೂರುದಾರ ಮಹೇಶ್ ಶೆಟ್ಟಿ ತಿಮರೋಡಿ ಮನೆಯಲ್ಲಿದ್ದಾಗ ಒಂದು ವಿಡಿಯೊ ಚಿತ್ರೀಕರಿಸಲಾಗಿತ್ತು. ಆ ವಿಡಿಯೊ ಚಿತ್ರೀಕರಿಸಿದ್ದು ಮಹೇಶ್ ಶೆಟ್ಟಿ ಅವರ ಮಗಳು. ಹಾಗಾಗಿ ಆಕೆಯ ಹೇಳಿಕೆ ಪಡೆಯಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಧರ್ಮಸ್ಥಳ ಗ್ರಾಮದಲ್ಲಿ ಹಿಂದೆ ನಡೆದಿದ್ದ ಪದ್ಮಲತಾ, ವೇದವಲ್ಲಿ, ಆನೆ ಮಾವುತ ನಾರಾಯಣ ಮತ್ತು ಆತನ ಸೋದರಿ ಯಮುನಾ ಮತ್ತಿತರ ಕೊಲೆಗಳ ಮರು ತನಿಖೆಗೆ ಒತ್ತಾಯಿಸಿ ಸೌಜನ್ಯಾ ಅವರ ತಾಯಿ ಕುಸುಮಾವತಿ ಮತ್ತು ಇತರರು ಈಚೆಗೆ ದೂರು ನೀಡಿದ್ದರು.

'ಆ ದೂರಿನ ತನಿಖೆಯನ್ನು ನ್ಯಾಯಾಲಯದ ಅನುಮತಿ ಇಲ್ಲದೇ ಕೈಗೆತ್ತಿಕೊಳ್ಳಲಾಗದು. ಈ ಬಗ್ಗೆ ದೂರುದಾರರಿಗೂ ತಿಳಿಸಿದ್ದೇವೆ' ಎಂದು ಮೂಲಗಳು ಸ್ಪಷ್ಟಪಡಿಸಿವೆ.

'ಐಐಎಸ್ಸಿ ತಜ್ಞರ ಸಹಾಯ ಯಾಚನೆ'

ಎಸ್‌ಐಟಿಯ ಒಂದು ತಂಡವು ಮೂಳೆಗಳ ಅವಶೇಷದ ಮೂಲ ಪತ್ತೆ ಕಾರ್ಯದಲ್ಲಿ ನಿರತವಾಗಿದೆ. ವಂಶವಾಹಿಗಳ ವಿಶ್ಲೇಷಣೆಯಲ್ಲಿ ವಿಶೇಷ ಪರಿಣತಿ ಹೊಂದಿರುವ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕರನ್ನು ತಂಡವು ಸಂಪರ್ಕಿಸಿ ತನಿಖೆಗೆ ಸಹಾಯ ಯಾಚಿಸಿದೆ ಎಂದು ಮೂಲಗಳು ತಿಳಿಸಿವೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.70	9,880	8,008
ಹಾರಂಗಿ	2,859	2,857.89	949	1,000
ಕಬಿನಿ	2,284	2,283.46	2,129	825
ಹೇಮಾವತಿ	2,922	2,917.45	7,996	6,610
ಲಿಂಗನಮಕ್ಕಿ	1,819	1,815.90	4,606	5,636
ಸೂಪಾ (ಮೀ)	564	559.08	1,008.65	3,766
ಮಾಣಿ	595	593.90	583	654
ತುಂಗಭದ್ರಾ	1,633	1,626.06	15,265	12,828
ಮಲಪ್ರಭಾ	2,079.5	2,079.50	394	394
ಘಟಪ್ರಭಾ	2,175	2,174.76	839	1,158
ಭದ್ರಾ *	186	184.1	3,204	3,204
ಆಲಮಟ್ಟಿ (ಮೀ)	519.6	519.60	15,960	15,960
ನಾರಾಯಣಪುರ (ಮೀ)	492.25	492.22	16,000	12,943

* ನೆಲಮಟ್ಟದಿಂದ

303 ಗ್ರಾಮ ಜಿಬಿಎ ಯೋಜನಾ ಪ್ರದೇಶ

ಬಿಎಂಐಸಿಎಪಿಎ ಪ್ರದೇಶ ಸದ್ಯಕ್ಕೆ ಸೇರಿಲ್ಲ; ಮಾಸ್ಟರ್ ಪ್ಲಾನ್‌ನಂತೆಯೇ ಕೆಐಎಡಿಬಿ ಅನುಮೋದನೆ ನೀಡಬೇಕು

• ಆರ್.ಮಂಜುನಾಥ್

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ನಗರ ಯೋಜನೆಯ ಜವಾಬ್ದಾರಿಯಿಂದ ಮುಕ್ತಗೊಳಿಸಲಾಗಿದೆ.

'ಗ್ರೇಟರ್ ಬೆಂಗಳೂರು ಪ್ರದೇಶ'ವನ್ನು (ಹಿಂದಿನ ಬಿಬಿಎಂಪಿ) 'ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶ'ವೆಂದು ಘೋಷಿಸಲಾಗಿದ್ದು, ನಗರ ಯೋಜನೆಯ ಸಂಪೂರ್ಣ ಜವಾಬ್ದಾರಿಯನ್ನು ಜಿಬಿಎಗೆ ವಹಿಸಲಾಗಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ– 1961ರಂತೆ 'ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶ'ವನ್ನು ಅಕ್ಟೋಬರ್ 10ರಂದು ಘೋಷಿಸಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಬಿಎಂಐಸಿಎಪಿಎ ಸೇರಿಲ್ಲ

'ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶ'ದಲ್ಲಿ ಬೆಂಗಳೂರು– ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್‌ನ ಸ್ಥಳೀಯ ಯೋಜನಾ ಪ್ರದೇಶವನ್ನು (ಬಿಎಂಐಸಿಎಪಿಎ) ಸೇರಿಸಿಲ್ಲ. ಹೀಗಾಗಿ, 719.29 ಚದರ ಕಿ.ಮೀ ವ್ಯಾಪ್ತಿಯ ಜಿಬಿಎ ಪ್ರದೇಶದಲ್ಲಿ, 683 ಚದರ ಕಿ.ಮೀ ಮಾತ್ರ ಈಗ 'ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶ'ವಾಗಿದೆ. ನೈಸ್‌ನೊಂದಿಗೆ ಭೂ ವ್ಯಾಜ್ಯ ಇರುವುದರಿಂದ ಈ ಪ್ರದೇಶವನ್ನು ಸದ್ಯಕ್ಕೆ ಸೇರಿಸಿಲ್ಲವಾದರೂ, ಮುಂದಿನ ದಿನಗಳಲ್ಲಿ ಸೇರಿಸಲಾಗುತ್ತದೆ ಎಂದು ನಗರ ಯೋಜನೆ ವಿಭಾಗದ ಅಧಿಕಾರಿಗಳು ತಿಳಿಸಿದರು.

ಬಿಡಿಎ ಹಾಗೂ ಸರ್ಕಾರದಿಂದ ಈ ಹಿಂದಿನ ಎಲ್ಲ ನಿಯಮಗಳು, ಆದೇಶಗಳು, ನಿರ್ದೇಶನಗಳು, ಅನುಮೋದನೆ/ ಮಂಜೂರಾತಿಗಳು ಮುಂದುವರಿಯಲಿವೆ. 'ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶ'ದ ಮಹಾಯೋಜನೆ ಅನುಮೋದನೆ ಆಗುವವರೆಗೂ ಪರಿಷ್ಕೃತ ಮಾಸ್ಟರ್ ಪ್ಲಾನ್ (ಆರ್‌ಎಂಪಿ–2015) ಮತ್ತು ವಲಯ ನಿಯಮಾವಳಿಗಳನ್ನು ಅನುಸರಿಸಬೇಕು ಎಂದು ಹೇಳಲಾಗಿದೆ.

ಬಿಡಿಎಯಿಂದ ನಗರ ಯೋಜನೆ ಜವಾಬ್ದಾರಿಯನ್ನು ಜಿಬಿಎಗೆ ವಹಿಸಬೇಕೆಂಬ ನಿರ್ಣಯ ಜಿಬಿಎ ಮೊದಲ



ಸಭೆಯಲ್ಲಿ ಅಂಗೀಕರಿಸಲಾಗಿತ್ತು. ಆ ಪ್ರಕಾರ ಅಧಿಸೂಚನೆ ಹೊರಡಿಸಲಾಗಿದೆ.

ಜಿಬಿಎ 'ಯೋಜನಾ ಪ್ರಾಧಿಕಾರ'ವೂ ಆಗಿದ್ದು, ತನ್ನ ವ್ಯಾಪ್ತಿಯಲ್ಲಿನ ವಸತಿ ಬಡಾವಣೆಗಳು, ಕೈಗಾರಿಕಾ ಬಡಾವಣೆಗಳನ್ನು ಅನುಮೋದಿಸುವ ಅಧಿಕಾರವನ್ನು ಹೊಂದಿದೆ. ಅಲ್ಲದೆ ನಗರದ ಮಾಸ್ಟರ್ ಪ್ಲಾನ್ ತಯಾರಿಸುವ ಜವಾಬ್ದಾರಿಯನ್ನು ಹೊಂದಿದ್ದು, ಅದನ್ನು ನಗರ ಪಾಲಿಕೆಗಳು ಕಟ್ಟುನಿಟ್ಟಾಗಿ ಅನುಸರಿಸುವಂತೆ ಮೇಲ್ವಿಚಾರಣೆ ಮಾಡಲಿದೆ.

ಜಿಬಿಎ ರೂಪಿಸುವ ಮಾಸ್ಟರ್ ಪ್ಲಾನ್‌ನಂತೆಯೇ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ತನ್ನ ವ್ಯಾಪ್ತಿಯ ಕೈಗಾರಿಕಾ ಬಡಾವಣೆ ಹಾಗೂ ಕಟ್ಟಡಗಳ ನಕ್ಷೆಯನ್ನು ಅನುಮೋದಿಸಬೇಕಾಗುತ್ತದೆ.

ಯೋಜನಾ ಪ್ರಾಧಿಕಾರವಾಗಿರುವ ಜಿಬಿಎ ತನ್ನ ವಾರ್ಷಿಕ ವರದಿ, ಲೆಕ್ಕ ತಪಾಸಣಾ ವರದಿ, ಆಯವ್ಯಯವನ್ನು ಪ್ರತಿ ಹಣಕಾಸು ವರ್ಷದ ಅಂತ್ಯಕ್ಕೆ ಸರ್ಕಾರಕ್ಕೆ ಸಲ್ಲಿಸಬೇಕು. ಸ್ಥಳೀಯ ಯೋಜನಾ ಪ್ರಕ್ರಿಯೆಗಳನ್ನು ನಿರ್ವಹಿಸಲು ಜಿಬಿಎ ಮುಖ್ಯ ಆಯುಕ್ತರು ಅಧಿಕಾರಿಗಳ ಸಮಿತಿಯನ್ನು ರಚಿಸಲಿದ್ದಾರೆ. ಈಗಾಗಲೇ ಜಿಬಿಎಯಲ್ಲಿ ನಗರ ಯೋಜನೆ ಅಧಿಕಾರಿಗಳಿದ್ದು, ಅವರನ್ನು ಒಳಗೊಂಡ ಸಮಿತಿ ಕಾರ್ಯನಿರ್ವಹಿಸಲಿದೆ.

ಅಂಕಿ ಅಂಶಗಳು

68,351 ಹೆಕ್ಟೇರ್
ಜಿಬಿಎ ಸ್ಥಳೀಯ ಯೋಜನಾ ಪ್ರಾಧಿಕಾರದ ಒಟ್ಟು ಪ್ರದೇಶ

60,627 ಹೆಕ್ಟೇರ್
303 ಗ್ರಾಮಗಳ ವ್ಯಾಪ್ತಿ

7,724 ಹೆಕ್ಟೇರ್
ಬೆಂಗಳೂರು ಕೇಂದ್ರ ಪೇಟೆ ಪ್ರದೇಶದ ವ್ಯಾಪ್ತಿ

ಎಷ್ಟು ಗ್ರಾಮ, ಯಾವ ತಾಲ್ಲೂಕು– ಹೋಬಳಿ?

ಗ್ರಾಮ	ತಾಲ್ಲೂಕು	ಹೋಬಳಿ
1	ಆನೇಕಲ್	ಸರ್ಜಾಪುರ
11	ಬೆಂ.ಪೂರ್ವ	ಬಿದರಹಳ್ಳಿ
47	ಬೆಂ.ಪೂರ್ವ	ಕೆ.ಆರ್. ಪುರ
33	ಬೆಂ.ಪೂರ್ವ	ವರ್ತೂರು
1	ಬೆಂ.ಉತ್ತರ	ಜಾಲ
30	ಬೆಂ.ಉತ್ತರ	ಕಸಬಾ
43	ಬೆಂ.ಉತ್ತರ	ಯಲಹಂಕ
40	ಬೆಂ.ಉತ್ತರ	ಯಶವಂತಪುರ
39	ಬೆಂ.ದಕ್ಷಿಣ	ಬೇಗೂರು
15	ಬೆಂ.ದಕ್ಷಿಣ	ಕೆಂಗೇರಿ
43	ಬೆಂ.ದಕ್ಷಿಣ	ಉತ್ತರಹಳ್ಳಿ

'ಕಕ್ಷಿದಾರರ ನಿರೀಕ್ಷೆ ಹುಸಿಗೊಳಿಸಬೇಡಿ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಕಕ್ಷಿದಾರನ ನಿರೀಕ್ಷೆಗಳಿಗೆ ತಕ್ಕಂತೆ ಕಾನೂನಿನ ಜ್ಞಾನ, ಪ್ರಕರಣಗಳ ಅಧ್ಯಯನದ ಮೂಲಕ ಅನುಭವ ಪಡೆದುಕೊಂಡು ಉತ್ತಮ ವಕೀಲರಾಗಿ ವೃತ್ತಿಯಲ್ಲಿ ಬೆಳವಣಿಗೆ ಹೊಂದಬೇಕು' ಎಂದು ಹೈಕೋರ್ಟ್ ನ್ಯಾಯಮೂರ್ತಿ ಇ.ಎಸ್. ಇಂದ್ರೇಶ್ ತಿಳಿಸಿದರು.

ಸಿಡೇದಹಳ್ಳಿಯ ಸೌಂದರ್ಯ ಕಾನೂನು ಕಾಲೇಜಿನಲ್ಲಿ 3ನೇ ಅಖಿಲ ಭಾರತ ಅಣಕು ನ್ಯಾಯಾಲಯ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

'ಈಗ ತಾಂತ್ರಿಕವಾಗಿ ನಾವು ಎಲ್ಲಾ ಕ್ಷೇತ್ರದಲ್ಲೂ ಸಾಧಿಸಿದ್ದೇವೆ. ಬೆರಳ ತುದಿಯಲ್ಲೇ ಪ್ರಕರಣಗಳ ಮಾಹಿತಿ ಸಿಗಲಿದೆ. ಆದರೆ, ಪ್ರಕರಣಗಳ ಆಳ ಅಧ್ಯಯನ, ವಿಶ್ಲೇಷಣಾತ್ಮಕ ನೋಟ, ತಜ್ಞರ ಅನುಭವ ಪಡೆದುಕೊಳ್ಳುವುದರಿಂದ ಮಾತ್ರ ಯಶಸ್ವಿ ವಕೀಲರಾಗಬಹುದು' ಎಂದರು.

ಕಾಲೇಜಿನ ಕಾರ್ಯನಿರ್ವಾಹಕ ಅಧಿಕಾರಿ ಎಂ.ಕೀರ್ತನ್ ಕುಮಾರ್, ತುಮಕೂರು ವಿವಿ ಪರೀಕ್ಷಾಂಗ ಕುಲಸಚಿವ ಎನ್.ಸತೀಶ್ ಗೌಡ, ಸರ್ಕಾರಿ ವಕೀಲ ಎಸ್.ಎಸ್. ಮಹೇಂದ್ರ, ಡಿ.ಎಂ. ಹೆಗಡೆ, ಪ್ರಾಂಶುಪಾಲ ವಿಶ್ವಾಸ್ ಪುಟ್ಟಸ್ವಾಮಿ ಉಪಸ್ಥಿತರಿದ್ದರು.



ಸಿಡೇದಹಳ್ಳಿ ಸೌಂದರ್ಯ ಕಾನೂನು ಕಾಲೇಜಿನಲ್ಲಿ ನಡೆದ ಅಖಿಲ ಭಾರತ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದ ಆರ್.ವಿ ಇನ್‌ಸ್ಟಿಟ್ಯೂಷನ್ ಆಫ್ ಲೀಗಲ್ ಸ್ಟಡೀಸ್‌ನ ವಿದ್ಯಾರ್ಥಿಗಳಿಗೆ ಟ್ರೋಫಿ ಮತ್ತು ₹30,000 ಚೆಕ್ ವಿತರಿಸಲಾಯಿತು

'ಮಹಿಳಾ ಸಮೀಕ್ಷೆದಾರರಿಗೆ ಭದ್ರತೆ ಕಲ್ಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ನೇಮಕವಾಗಿರುವ ಮಹಿಳಾ ಸಮೀಕ್ಷೆದಾರರನ್ನು ಸಾರ್ವಜನಿಕರು ಅವಮಾನಿಸಿರುವ ಪ್ರಕರಣಗಳು ವರದಿಯಾಗಿವೆ. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಮಹಿಳಾ ಸಿಬ್ಬಂದಿಗೆ ಭದ್ರತೆ ಕಲ್ಪಿಸಬೇಕು' ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ತಿಳಿಸಿದ್ದಾರೆ.

ಈ ಬಗ್ಗೆ ಜಿಬಿಎ ಮುಖ್ಯ ಆಯುಕ್ತರಿಗೆ ಪತ್ರ ಬರೆದಿರುವ ಅವರು, 'ಸಮೀಕ್ಷೆದಾರರಿಗೆ ವಾರ್ಡ್ ಹಂಚಿಕೆಯಾಗಿದೆ. ಆದರೆ, ಮನೆಗಳನ್ನು ಸರಿಯಾಗಿ ಹಂಚಿಕೆ ಮಾಡದೇ ಇರುವುದರಿಂದ ಗೊಂದಲ ಉಂಟಾಗಿದೆ. ಕೂಡಲೇ ವಾರ್ಡ್ ಹಾಗೂ ಮನೆಗಳನ್ನು ಸರಿಯಾಗಿ ಹಂಚಿಕೆ ಮಾಡಬೇಕು. ಕೆಲವು ಸಮೀಕ್ಷೆದಾರರ ಮೊಬೈಲ್‌ನಲ್ಲಿ ಆ್ಯಪ್ ಕಾರ್ಯನಿರ್ವಹಿಸುತ್ತಿಲ್ಲ. ಆಧಾರ್ ಒಟಿಪಿ ಸರಿಯಾಗಿ ಬರುತ್ತಿಲ್ಲ ಹಾಗೂ ಆ್ಯಪ್‌ನ ಸರ್ವರ್ ಸೇರಿದಂತೆ ತಾಂತ್ರಿಕ ಸಮಸ್ಯೆಗಳು ಆಗುತ್ತಿದ್ದು, ಇದರಿಂದ ಸಮೀಕ್ಷೆಗೆ ಅಡ್ಡಿಯಾಗುತ್ತಿದೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಮತದಾರರ ಪಟ್ಟಿಯಲ್ಲಿ ಹೆಸರು ಇದ್ದರೂ, ಕೆಲವರ ಬಳಿ ಮತದಾರರ ಚೀಟಿ ಇಲ್ಲ. ಹೀಗಾಗಿ ಮತದಾರರ ಚೀಟಿ ಇಲ್ಲವೆಂದು ನಮೂದಿಸಿ ಮುಂದಕ್ಕೆ ಹೋಗುವ ಅನಿವಾರ್ಯತೆ ಎದುರಾಗಿದೆ. ಇದರಿಂದ ಸಮೀಕ್ಷಾ ಕಾರ್ಯ ವಿಳಂಬವಾಗುತ್ತಿದೆ. ಆದ್ದರಿಂದ ಮತದಾರರ ಚೀಟಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು' ಎಂದು ಸೂಚಿಸಿದ್ದಾರೆ.

'ಕೆಲ ಸಮೀಕ್ಷೆದಾರರಿಗೆ ಇದುವರೆಗೂ ಗುರುತಿನ ಚೀಟಿ, ಸಮೀಕ್ಷೆಗೆ ಬೇಕಾದ ಫಾರಂಗಳು ಹಾಗೂ ಕಿಟ್‌ಗಳನ್ನು ಪೂರೈಕೆ ಮಾಡಿಲ್ಲ. ಮಹಿಳಾ ಸಿಬ್ಬಂದಿಗೆ ದೂರದ ವಾರ್ಡ್‌ಗಳನ್ನು ನಿಗದಿಪಡಿಸಿರುವುದರಿಂದ ನಿತ್ಯ ಓಡಾಡಲು ತೊಂದರೆ ಆಗುತ್ತಿದೆ. ಆದ್ದರಿಂದ ಅವರನ್ನು ಹತ್ತಿರದ ವಾರ್ಡ್‌ಗಳಲ್ಲಿ ನೇಮಿಸಬೇಕು. ಇದೇ ತಿಂಗಳಲ್ಲಿ ದೀಪಾವಳಿ ಹಬ್ಬ ಬರುತ್ತಿದೆ. ಮಾನವೀಯ ನೆಲೆಯಲ್ಲಿ ಸಮೀಕ್ಷೆದಾರರಿಗೆ ಹಬ್ಬ ಆಚರಿಸಲು ಅವಕಾಶ ನೀಡಬೇಕು. ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ಕೈಗೊಂಡ ಕ್ರಮದ ಕುರಿತು ಆಯೋಗಕ್ಕೆ ವರದಿ ನೀಡಬೇಕು' ಎಂದು ಸೂಚಿಸಿದ್ದಾರೆ.

'ಸಮೀಕ್ಷೆಯ ಅವಧಿ ಕಡಿತಗೊಳಿಸಿ'

'ಬೆಳಿಗ್ಗೆ 9 ರಿಂದ ರಾತ್ರಿ 8 ಗಂಟೆಯವರೆಗೆ ಸಮೀಕ್ಷೆ ನಡೆಸಲು ಮಹಿಳಾ ಸಿಬ್ಬಂದಿಗೆ ಸೂಚಿಸಲಾಗುತ್ತಿದೆ. ಮಹಿಳಾ ಸಿಬ್ಬಂದಿ ಮನೆಯಲ್ಲಿ ಚಿಕ್ಕ ಮಕ್ಕಳು, ಅನಾರೋಗ್ಯ ಪೀಡಿತ ಅತ್ತೆ–ಮಾವು ಹಾಗೂ ತಂದೆ–ತಾಯಿಗಳನ್ನು ಹೊಂದಿರುತ್ತಾರೆ. ಇವರನ್ನು ನೋಡಿಕೊಳ್ಳಲು ಸಮಸ್ಯೆ ಆಗುತ್ತಿದೆ. ಹಾಗಾಗಿ ಮಹಿಳಾ ಸಮೀಕ್ಷೆದಾರರಿಗೆ ಸುರಕ್ಷತೆ ಹಾಗೂ ಭದ್ರತೆಯ ದೃಷ್ಟಿಯಿಂದ ಸಮೀಕ್ಷಾ ಅವಧಿಯನ್ನು ಕಡಿತಗೊಳಿಸಿ, ಸಂಜೆ 6 ಗಂಟೆವರೆಗೆ ನಿಗದಿಪಡಿಸುವ ಆದೇಶ ಹೊರಡಿಸಬೇಕು' ಎಂದು ಡಾ. ನಾಗಲಕ್ಷ್ಮೀ ಚೌಧರಿ ಜಿಬಿಎ ಮುಖ್ಯ ಆಯುಕ್ತರಿಗೆ ಮನವಿ ಮಾಡಿದ್ದಾರೆ.



ಡಾ.ನಾಗಲಕ್ಷ್ಮಿ ಚೌಧರಿ

ಹೊರ ವರ್ತುಲ ರಸ್ತೆ ಸುಸ್ಥಿತಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಜಂಕ್ಷನ್‌ನಿಂದ ನಾಯಂಡಹಳ್ಳಿ ಜಂಕ್ಷನ್‌ವರೆಗಿನ ಹೊರ ವರ್ತುಲ ರಸ್ತೆಯನ್ನು ಸುಸ್ಥಿತಿಯಲ್ಲಿ ಇಡಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಹೊರ ವರ್ತುಲ ರಸ್ತೆ ಹಾಗೂ ಸರ್ವೀಸ್ ರಸ್ತೆಗಳನ್ನು ಸೋಮವಾರ ಪರಿಶೀಲಿಸಿದ ಅವರು, ಹೆಬ್ಬಾಳ ಜಂಕ್ಷನ್ ಕೆಳಭಾಗದಲ್ಲಿ ವೆಟ್ ಮಿಕ್ಸ್ ಹಾಕಲಾಗಿದ್ದು, ತಕ್ಷಣ ಅದಕ್ಕೆ ಡಾಂಬರೀಕರಣ ಮಾಡಬೇಕು. ಪಾದಚಾರಿಗಳ ಸಂಚಾರಕ್ಕೆ ಅನುಕೂಲವಾಗುವಂತೆ 'ಹೈ ರೈಸ್ ಪಾದಚಾರಿ ಕ್ರಾಸಿಂಗ್' ನಿರ್ಮಿಸಬೇಕು ಎಂದರು.

ಭದ್ರಪ್ಪ ಲೇಔಟ್ ಮೇಲ್ಸೇತುವೆ ಬಳಿಯ ಸರ್ವೀಸ್ ರಸ್ತೆ ಹಾಳಾಗಿದ್ದು, ಹೈ ಡೆನ್ಸಿಟಿ ಕಾರಿಡಾರ್ ಯೋಜನೆಯಡಿ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ. ಇದೇ ಸ್ಥಳದಲ್ಲಿ ಕೆ-ರೈಡ್ ವತಿಯಿಂದ ಕಾಮಗಾರಿ ನಡೆಯುತ್ತಿರುವುದರಿಂದ, ಆ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಸರ್ವೀಸ್ ರಸ್ತೆಯ ದುರಸ್ತಿಯನ್ನು ಶೀಘ್ರ ಪೂರ್ಣಗೊಳಿಸಲು ಸೂಚಿಸಿದರು.

ಬಿಇಎಲ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದ್ದು, ಜಂಕ್ಷನ್‌ನಲ್ಲಿ ರಸ್ತೆ ಮೇಲ್ಮೈ ಹಾಳಾಗಿರುವುದನ್ನು ವೈಟ್ ಟಾಪಿಂಗ್ ಗುತ್ತಿಗೆದಾರರಿಂದಲೇ ಮುಚ್ಚಿಸುವಂತೆ ಸೂಚಿಸಿದರು.

ಹೊರ ವರ್ತುಲ ರಸ್ತೆಯಲ್ಲಿರುವ ಎಲ್ಲ ಗುಂಡಿಗಳನ್ನು ತಕ್ಷಣ ಮುಚ್ಚಬೇಕು. ರಾಜ್ ಕುಮಾರ್ ಸಮಾಧಿಯಿಂದ ನಾಗರಭಾವಿ ಜಂಕ್ಷನ್‌ವರೆಗಿನ ಸರ್ವೀಸ್ ರಸ್ತೆಗಳಲ್ಲಿರುವ ಗುಂಡಿಗಳು, ಹಾಳಾದ ಮೇಲ್ಮೈಯನ್ನು ಸರಿಪಡಿಸಬೇಕು. ಗೊರಗುಂಟೆ ಪಾಳ್ಯ ಕೈಗಾರಿಕಾ ಪ್ರದೇಶದ ರಸ್ತೆ ಸಂಪೂರ್ಣ ಹಾಳಾಗಿರುವುದರಿಂದ, ಅದನ್ನೂ ದುರಸ್ತಿಪಡಿಸಬೇಕು ಎಂದರು.

ಕಂಠೀರವ ಸ್ಟುಡಿಯೊ ಜಂಕ್ಷನ್ ಬಳಿ ಜಲಮಂಡಳಿಯ ಕಾಮಗಾರಿ ನಡೆಯುತ್ತಿದ್ದು, ಒಳಚರಂಡಿ ನೀರು ರಸ್ತೆ ಮೇಲೆ ಹರಿಯುತ್ತಿರುವುದನ್ನು ಗಮನಿಸಿದ ಮಹೇಶ್ವರ್ ರಾವ್, ಜಲಮಂಡಳಿ ಅಧ್ಯಕ್ಷರಿಗೆ ಕರೆ ಮಾಡಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ತಿಳಿಸಿದರು.

ಸುಮನಹಳ್ಳಿ ಜಂಕ್ಷನ್ ಮೇಲ್ಸೇತುವೆ ಕೆಳಭಾಗದಲ್ಲಿ ತ್ಯಾಜ್ಯ ಇರದಂತೆ ಕ್ರಮ ಕೈಗೊಂಡು ಸ್ವಚ್ಛತೆ ಕಾಪಾಡಬೇಕು ಎಂದರು.

ಪರಿಶೀಲನೆ ವೇಳೆ ಅನೇಕ ಸ್ಥಳಗಳಲ್ಲಿ ಅನಾಥ ವಾಹನಗಳು ಕಂಡುಬಂದಿದ್ದು, ಅವುಗಳನ್ನು ರಸ್ತೆ ಬದಿಯಿಂದ ತೆರವುಗೊಳಿಸಲು ಸೂಚಿಸಿದರು.

ಶಾಸಕ ರವಿ ಸುಬ್ರಮಣ್ಯ, ನಗರ ಪಾಲಿಕೆಗಳ ಆಯುಕ್ತರಾದ ಪೊಮ್ಮಲ ಸುನೀಲ್ ಕುಮಾರ್, ಕೆ.ವಿ. ರಾಜೇಂದ್ರ, ಜಂಟಿ ಆಯುಕ್ತ ಮೊಹಮ್ಮದ್ ನಯೀಮ್ ಮೊಮಿನ್, ಮುಖ್ಯ ಎಂಜಿನಿಯರ್‌ಗಳಾದ ರಾಘವೇಂದ್ರ ಪ್ರಸಾದ್, ರಾಜೇಶ್, ರಂಗನಾಥ್, ಯಮುನಾ, ಸ್ವಯಂಪ್ರಭಾ ಇದ್ದರು.

'ರೈತ, ಯುವ ಜನರ ಹೋರಾಟ ಬೆಸೆದರೆ ಅಭಿವೃದ್ಧಿ ಸಾಧ್ಯ'

ಯುವ ಪರಿವರ್ತನೆ ಯಾತ್ರೆ ಸಮಾಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನ ಸಾಮಾನ್ಯರ ವೇದಿಕೆ ವತಿಯಿಂದ ಅ. 2ರಂದು ಬೀದರ್‌ನಲ್ಲಿ ಪ್ರಾರಂಭಗೊಂಡ ಯುವ ಪರಿವರ್ತನೆ ಯಾತ್ರೆ ಸೋಮವಾರ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಕೊನೆಗೊಂಡಿತು.

ಯಾತ್ರೆಯ ಪ್ರಧಾನ ಸಂಚಾಲಕ ಮುಧೋಳ ಯಲ್ಲಪ್ಪ ಹೆಗಡೆ ಮಾತನಾಡಿ, 'ರಾಜ್ಯದಲ್ಲಿ ಬಿಡಿ ಬಿಡಿಯಾಗಿ ನಡೆಯುತ್ತಿರುವ ರೈತ ಹೋರಾಟಗಳು ಮತ್ತು ಯುವ ಜನರ ಹೋರಾಟಗಳನ್ನು ಬೆಸೆಯುವ ಕೆಲಸ ಮಾಡಬೇಕಿದೆ. ಆಗ ಮಾತ್ರ ಇಡೀ ಕನ್ನಡ ನಾಡಿನ ಅಭಿವೃದ್ಧಿ ಸಾಧ್ಯ' ಎಂದು ಹೇಳಿದರು.

'ಇನ್‌ಸೈಟ್ಸ್ ಐಎಎಸ್' ಸಂಸ್ಥೆಯ ಸಂಸ್ಥಾಪಕ ಜಿ.ಬಿ. ವಿನಯಕುಮಾರ್ ಮಾತನಾಡಿ, 'ನಿರಂತರತೆ ಮಾತ್ರ ಯಾವುದೇ ಚಳವಳಿಯನ್ನು ಯಶಸ್ಸಿನ ಕಡೆ ಕೊಂಡೊಯ್ಯುತ್ತದೆ' ಎಂದರು.

ದ್ರಾವಿಡ ಕನ್ನಡಿಗರು ಸಂಘಟನೆಯ ಮಂಡ್ಯ ಅಬಿ ಒಕ್ಕಲಿಗ ಮಾತನಾಡಿ, 'ಉತ್ತರ ಕರ್ನಾಟಕ ಜನ ಜೀವನ ದರ್ಶನವಾಗಿ ಈ ಯಾತ್ರೆಯಿಂದ ಮನ ಕಲಕಿದೆ. ಸಮಗ್ರ ಕನ್ನಡನಾಡು ನುಡಿ ಅಭಿವೃದ್ಧಿ ಆಗಬೇಕೆಂದರೆ ಹಳೇ ಮೈಸೂರು ಭಾಗದ ಎಲ್ಲ ವೈಚಾರಿಕ ಹೋರಾಟಗಾರರು ಉತ್ತರ ಕರ್ನಾಟಕದ ಹೋರಾಟಗಾರರಿಗೆ ಬೆಂಬಲವಾಗಿ ನಿಲ್ಲಬೇಕಿದೆ' ಎಂದರು.

ಜನ ಸಾಮಾನ್ಯರ ವೇದಿಕೆಯ ಶಿವಲಿಂಗ ಬಿದರಿ, ಮನು ವಿಶ್ವಕರ್ಮ, ಶಂಕರ್ ಬಾಗಲಕೋಟೆ, ಲೀಲಾ ಶಿವಮೊಗ್ಗ, ಭೂಮಿಕ ತರಿಕೆರೆ, ಆನಂದ್ ಬೌದ್ಧ ಬೆಂಗಳೂರು ಉಪಸ್ಥಿತರಿದ್ದರು.



ಜನ ಸಾಮಾನ್ಯರ ವೇದಿಕೆ ಹಮ್ಮಿಕೊಂಡಿದ್ದ ಯುವ ಪರಿವರ್ತನೆ ಯಾತ್ರೆಯ ಸಮಾರೋಪದಲ್ಲಿ ಜಿ.ಬಿ. ವಿನಯಕುಮಾರ್ ಮಾತನಾಡಿದರು

ರಾಮಣ್ಣ ಸೇರಿ ನಾಲ್ವರಿಗೆ 'ಗೌರವ ಪುರಸ್ಕಾರ'

ಬೆಂಗಳೂರು: ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ ನೀಡುವ 2025ನೇ ಸಾಲಿನ ಗೌರವ ಪುರಸ್ಕಾರಕ್ಕೆ ಪತ್ರಕರ್ತ ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ, ಉದಯಭಾನು ಕಲಾಸಂಘದ ಸ್ಥಾಪಕ ಕಾರ್ಯದರ್ಶಿ ಎಂ. ನರಸಿಂಹ ಮತ್ತು ಕನ್ನಡಪರ ಹೋರಾಟಗಾರ ಸಿ.ಕೆ. ರಾಮೇಗೌಡ ಆಯ್ಕೆಯಾಗಿದ್ದಾರೆ.

ಪುರಸ್ಕಾರವು ₹10 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕಗಳನ್ನು ಒಳಗೊಂಡಿದೆ.

ಅಕ್ಟೋಬರ್ 21ರಂದು ಬೆಂಗಳೂರಿನ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಾಹಿತಿಗಳಾದ ಹಂ.ಪ. ನಾಗರಾಜಯ್ಯ, ಎಸ್.ಜಿ. ಸಿದ್ಧರಾಮಯ್ಯ ಅವರು ಗೌರವ ಪುರಸ್ಕಾರ ಪ್ರದಾನ ಮಾಡಲಿದ್ದಾರೆ ಎಂದು ಒಕ್ಕೂಟದ ಅಧ್ಯಕ್ಷ ಎಂ. ತಿಮ್ಮಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಾಹಕರಿಗೆ ದೀಪಾವಳಿ ಕೊಡುಗೆ

ಬೆಂಗಳೂರು: ಬೆಂಗಳೂರು ಟ್ರೇಡ್ಸ್ ಅಸೋಸಿಯೇಷನ್ ತನ್ನ ಗ್ರಾಹಕರಿಗಾಗಿ ದೀಪಾವಳಿ ಉಡುಗೊರೆಯ ಕೊಡುಗೆಯನ್ನು ನೀಡಲಿದೆ.

ಅಸೋಸಿಯೇಷನ್‌ನ ಸದಸ್ಯ ವರ್ತಕರಿಂದ ವಸ್ತುಗಳನ್ನು ಖರೀದಿ ಮಾಡುವ ಗ್ರಾಹಕರಿಗೆ ಲಕ್ಕಿಡ್ರಾ ಕೂಪನ್‌ಗಳನ್ನು ನೀಡಲಾಗುತ್ತದೆ. ಇದು ಅ.23ರವರೆಗೆ ಜಾರಿಯಲ್ಲಿ ಇರಲಿದೆ.

ಚಿನ್ನದ ನಾಣ್ಯಗಳು, ರೇಷ್ಮೆ ಸೀರೆಗಳು, ಬಟ್ಟೆಗಳು ಮತ್ತು ಇತರ ಕೊಡುಗೆಗಳು ಉಚಿತ ಉಡುಗೊರೆಗಳ ರೂಪದಲ್ಲಿ ಸಿಗಲಿವೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.



ಹಾಸನ ಜಿಲ್ಲೆಯ ಶ್ರವಣಬೆಳಗೊಳದ ಬಾಹುಬಲಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಸಿಗಳನ್ನು ನೆಡುವ ಉದ್ದೇಶಕ್ಕಾಗಿ ₹75 ಲಕ್ಷದ ಚೆಕ್‌ಅನ್ನು ಎಸ್‌ಬಿಐ ವ್ಯವಸ್ಥಾಪಕ ನಿರ್ದೇಶಕ ರಾಣಾ ಅಶುತೋಷ್ ಕುಮಾರ್ ಸಿಂಗ್, ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕಿ ಜೂಹಿ ಸ್ಮಿತಾ ಸಿನ್ಹಾ ಅವರು ಈಚೆಗೆ ನೀಡಿದರು

ಗೆಲುವು ಶ್ರಮಿಕನ ಸ್ವತ್ತು: ಪ್ರಕಾಶನಾಥ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಬಾಹ್ಯಾಕಾಶ ವಿಜ್ಞಾನದ ಮಾಹಿತಿಗಳನ್ನು ಸಮರ್ಪಕವಾಗಿ ಬಳಸಿಕೊಂಡು ಯುವ ಸಮೂಹ ದೇಶದ ಅಭಿವೃದ್ಧಿಗೆ ಕಾಣಿಕೆ ನೀಡಬೇಕು ಎಂದು ಇಸ್ರೊ ಮಾಜಿ ಅಧ್ಯಕ್ಷ ಡಾ. ಎಸ್. ರಂಗರಾಜನ್ ಹೇಳಿದರು.

ಬಿಜಿಎಸ್ ಬಿ ಸ್ಕೂಲಿನ ಪ್ರಥಮ ಬಿಎಸ್‌ಸಿ, ಬಿಕಾಂ, ಬಿಸಿಎ ಹಾಗೂ ಬಿಬಿಎ ತರಗತಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಬಾಹ್ಯಾಕಾಶ ವಿಜ್ಞಾನದ ವ್ಯಾಪ್ತಿ ವಿಸ್ತಾರವಾಗಿದೆ. ಉದ್ಯೋಗ ಸೃಜನೆ ಹಾಗೂ ಅಭಿವೃದ್ಧಿಗೆ ಪ್ರೇರಕ ಶಕ್ತಿಯಂತಿರುವ ಬಾಹ್ಯಾಕಾಶ ವಿಜ್ಞಾನ ಅವಕಾಶಗಳ ಆಗರವಾಗಿದೆ ಎಂದರು.

ಬಿಜಿಎಸ್ ಮತ್ತು ಎಸ್‌ಜೆಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ. ಪ್ರಕಾಶನಾಥ ಸ್ವಾಮೀಜಿ ಮಾತನಾಡಿ, 'ಬುದ್ಧ, ಬಸವಣ್ಣನ ಸಂದೇಶಗಳು ಸಮಾಜಕ್ಕೆ ಅಪಥ್ಯವಾಗಿವೆ. ಹೀಗಾಗಿಯೇ ಯುವ ಸಮುದಾಯದಲ್ಲಿ ಸಂಸ್ಕಾರದ ಕೊರತೆ ಎದ್ದು ಕಾಣುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಗೆಲುವು ಶ್ರಮಿಕನ ಸ್ವತ್ತು. ಪ್ರತಿಯೊಂದು ಸಾಧನೆಯ ಹಿಂದೆ ಅಪಾರ ಪರಿಶ್ರಮವಿರುತ್ತದೆ. ಕಾಲಹರಣ ಮಾಡಿದರೆ ಭವಿಷ್ಯದ ಜೀವನ ದುಸ್ತರವಾಗಲಿದೆ ಎಂದು ಎಚ್ಚರಿಸಿದರು.

ಕಾಗ್ನಿಝೆಂಟ್ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ಹಿರಿಯ ವ್ಯವಸ್ಥಾಪಕಿ ಸುದರ್ಶನಿ ಪುಟ್ಟಪ್ಪ ಮಾತನಾಡಿ, ವಿದ್ಯಾರ್ಥಿಗಳು ಸೋಲನ್ನು ಸಕಾರಾತ್ಮಕವಾಗಿ ಸ್ವೀಕರಿಸುವ ಮನೋಬಲ ವೃದ್ಧಿಸಿಕೊಳ್ಳಬೇಕು. ನಿರಂತರ ಪ್ರಯತ್ನಕ್ಕೆ ಫಲ ನಿಶ್ಚಿತ ಎಂದರು.

ನಟಿ ಅನನ್ಯ ಅಮರ್, ಬಿಜಿಎಸ್ ಅಕಾಡೆಮಿಕ್ ಡೈರೆಕ್ಟರ್ ಡಾ. ಪುಟ್ಟರಾಜು, ಬಿಜಿಎಸ್ ಬಿ ಶಾಲೆಯ ಪ್ರಾಂಶುಪಾಲೆ ಮಮತಾ. ಜೆ. ರೂಪಿಕಾ ಪಾಲ್ಗೊಂಡಿದ್ದರು.




ಬಿಜಿಎಸ್ ಬಿ ಸ್ಕೂಲ್ ತರಗತಿಗಳ ಆರಂಭೋತ್ಸವದಲ್ಲಿ ಡಾ. ಪ್ರಕಾಶನಾಥ ಸ್ವಾಮೀಜಿ, ಎಸ್. ರಂಗರಾಜನ್, ಪುಟ್ಟರಾಜು, ಸುದರ್ಶನಿ ಪುಟ್ಟರಾಜು, ಡಾ. ಮಮತಾ. ಜೆ, ಅನನ್ಯ ಅಮರ್, ರೂಪಿಕಾ ಪಾಲ್ಗೊಂಡಿದ್ದರು

ನಿಧನ ವಾರ್ತೆ

ಸೈಯದ್ ಅಮ್ಜದ್ ಅಹಮದ್

ಬೆಂಗಳೂರು: ಕಲ್ಲಿಕೋಟೆ ವಿಶ್ವ ವಿದ್ಯಾಲಯದ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ನಿವೃತ್ತ ಪ್ರಾಧ್ಯಾಪಕ ಸೈಯದ್ ಅಮ್ಜದ್ ಅಹಮದ್ (76) ಅವರು ಸೋಮವಾರ ನಿಧನರಾಗಿದ್ದಾರೆ. ಇವರಿಗೆ ಪತ್ನಿ ಮತ್ತು ಪುತ್ರ ಇದ್ದಾರೆ.



ಅಮ್ಜದ್ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿಯೂ ಸಂಶೋಧಕರಾಗಿ ಕಾರ್ಯನಿರ್ವಹಿಸಿದ್ದರು. ನಿವೃತ್ತಿಯ ನಂತರ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯುನ್ಮಾನ ವಿಭಾಗದಲ್ಲಿ ಸಂಶೋಧನೆಯಲ್ಲಿ ನಿರತರಾಗಿದ್ದರು. ಜಯಮಹಲ್ ರಸ್ತೆಯಲ್ಲಿರುವ ಅಲ್ ಕುದ್ದೂಸ್ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಹಸಿರು ಬೆಂಗಳೂರಿಗೆ ಹೊಸ ಯೋಜನೆ

ಜೈವಿಕ ಉದ್ಯಾನ, ಶ್ವಾಸ ತಾಣಗಳ ಹೆಚ್ಚಳಕ್ಕೆ ಅರಣ್ಯ ಇಲಾಖೆ ಸಿದ್ಧತೆ

• ಉಮೇಶ ಭಟ್ಟ ಪಿ.ಎಚ್.

ಬೆಂಗಳೂರು: ಬೆಂಗಳೂರಿನಲ್ಲಿ ಹೊಸದಾಗಿ ಒಂದಷ್ಟು ಹಸಿರು ತಾಣಗಳನ್ನು ರೂಪಿಸುವ ಚಟುವಟಿಕೆಗಳು ಗರಿಗೆದರಿವೆ. 'ಅಂದದೂರು ಬೆಂಗಳೂರು, ಆನಂದದ ತವರೂರು' ಎನ್ನುವ ಆ ಹಾಡು ಮತ್ತೆ ಗುನುಗುನಿಸುವಂತೆ ಮಾಡುತ್ತಿವೆ.

ಹಲವು ದಶಕಗಳ ಹಿಂದಿನ ಹಾಡು ಮತ್ತು ಅಂದಿನ ಬೆಂಗಳೂರಿನ ಚಿತ್ರಣ ಒಂದಕ್ಕೊಂದು ಪೂರಕವಾಗಿದ್ದವು. ಮೂರು ದಶಕಗಳ ನಗರೀಕರಣದ ಭರಾಟೆಯಲ್ಲಿ ಬೆಂಗಳೂರಿನ ಆ ಹಿರಿಮೆ ಕಳೆದು ಹೋಗಿತ್ತು. ಮತ್ತೆ ಹಸಿರು ತಾಣಗಳು ಹೆಚ್ಚು ಮಾಡುವ ಪ್ರಯತ್ನಗಳು ಆರಂಭಗೊಂಡಿವೆ.

ಲಾಲ್‌ಬಾಗ್, ಕಬ್ಬನ್‌ಪಾರ್ಕ್ ನಂತಹ ಪ್ರಮುಖ ತಾಣಗಳು ಈಗಲೂ ಬೆಂಗಳೂರಿನ ಆಕರ್ಷಣೆ. ನಗರದಲ್ಲಿ ಹತ್ತಕ್ಕೂ ಹೆಚ್ಚು ದೊಡ್ಡ ಉದ್ಯಾನಗಳು, 200ಕ್ಕೂ ಅಧಿಕ ಸಣ್ಣ ಉದ್ಯಾನಗಳಿವೆ. ಇವುಗಳನ್ನು ಸಂರಕ್ಷಿಸುವುದರ ಜೊತೆಗೆ ಹೊಸದಾಗಿ ಜೈವಿಕ ಉದ್ಯಾನಗಳನ್ನು ರೂಪಿಸುವ ಕಾರ್ಯಗಳಿಗೆ ಚಾಲನೆ ದೊರೆತಿದೆ.

ಬೆಂಗಳೂರು ಸುತ್ತಮುತ್ತ ಒತ್ತುವರಿ ಆಗಿದ್ದ ಅರಣ್ಯ ಪ್ರದೇಶ ಮಾತ್ರವಲ್ಲದೇ, ಅರಣ್ಯ ಇಲಾಖೆ ನೀಡಿದ್ದ ಉದ್ದೇಶಿತ ಉಪಯೋಗಗಳಿಗೆ ಬಳಕೆಯಾಗದ ಜಮೀನುಗಳನ್ನು ಮೂರ್ನಾಲ್ಕು ವರ್ಷಗಳಿಂದ ಹಿಂಪಡೆಯಲಾಗುತ್ತಿದೆ. ಅಲ್ಲಿ ವಿಶಾಲವಾದ ಜೈವಿಕ ಉದ್ಯಾನಗಳನ್ನು ನಿರ್ಮಿಸಿ ಶ್ವಾಸ ಪ್ರದೇಶಗಳನ್ನಾಗಿ ಮಾಡಲಾಗುತ್ತಿದೆ.

ಹೀಗಿರಲಿದೆ ಹೊಸ ಉದ್ಯಾನ

ಮೊದಲ ಹಂತದಲ್ಲಿ ಯಲಹಂಕ ಸಮೀಪದ ಮಾದಪ್ಪನಹಳ್ಳಿಯಲ್ಲಿ ವಿಶಾಲ ಉದ್ಯಾನ ನಿರ್ಮಿಸಲಾಗುತ್ತದೆ.

ದಶಕಗಳಿಂದಲೂ ಮಾದಪ್ಪನ ಹಳ್ಳಿಯ ಅರಣ್ಯದಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನೀಲಗಿರಿ ಮರ ಬೆಳೆಸಿದೆ. ಅಲ್ಲಿ ಹೊನ್ನೆ, ಬೀಟೆ, ಜಾಲಿ, ಕಗ್ಗಲಿ, ಎಲಚಿ, ಚಿಗರೆ, ಹೊಳೆಮತ್ತಿ, ಮತ್ತಿ, ಕರಿಮತ್ತಿ ಮೊದಲಾದ 800 ಮರಗಳಿವೆ. ಇವುಗಳ ಜತೆಗೆ ಸ್ಥಳೀಯ ಪ್ರಭೇದದ ಬಿಲ್ವ, ಮಹಾಬಿಲ್ವ, ನೇರಳೆ, ಮತ್ತಿ, ಆಲ, ಅರಳಿ ಜತೆಗೆ ಪಶ್ಚಿಮ ಘಟ್ಟದಲ್ಲಿರುವ ಪ್ರಭೇದದ ಸಸ್ಯಗಳನ್ನು ಬೆಳೆಸುವ ಚಟುವಟಿಕೆಗಳು ಶುರುವಾಗಿವೆ.

ಇಂದಿರಾ ಗಾಂಧಿ ಜೈವಿಕ ಉದ್ಯಾನ, ವಿಶ್ವಗುರು ಬಸವಣ್ಣ ದಿವ್ಯೌಷಧೀಯ ಸಸ್ಯವನ, ಅಂಬೇಡ್ಕರ್ ಪಕ್ಷಿ ಲೋಕ, ನಾಡಪ್ರಭು ಕೆಂಪೇಗೌಡ ಕಿರು ಮೃಗಾಲಯ ಹಾಗೂ ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನ ಇದರಲ್ಲಿ ಸೇರಿವೆ.

'ಮಾದಪ್ಪನಹಳ್ಳಿಯಿಂದ 4-5 ಕಿ.ಮೀ. ದೂರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸಿರುವ ಶಿವರಾಮಕಾರಂತ ಬಡಾವಣೆಯೂ ಇದೆ. ಇಲ್ಲಿ ಉದ್ಯಾನ ನಿರ್ಮಾಣ ಮಾಡುವುದರಿಂದ ಪರಿಸರ ಪ್ರವಾಸೋದ್ಯಮಕ್ಕೆ ವಿಪುಲ ಅವಕಾಶ ಇರಲಿದೆ. ಯಲಹಂಕ ಸುತ್ತಮುತ್ತ ಇರುವ ನೂರಾರು ವಸತಿ ಬಡಾವಣೆಗಳ ಜನರಿಗೆ ಇದು ಉತ್ತಮ ಶ್ವಾಸತಾಣ ಮತ್ತು ಜನಾಕರ್ಷಣೆಯ ಪ್ರವಾಸಿ ಸ್ಥಳವೂ ಆಗಲಿದೆ' ಎಂದು ಬೆಂಗಳೂರು ನಗರ ಉಪ ಅರಣ್ಯ ಸಂರಕ್ಷಣಾಧಿಕಾರಿ ರವೀಂದ್ರಕುಮಾರ್ ತಿಳಿಸಿದರು.



ಇಂಗಾಲದ ಡೈ ಆಕ್ಸೈಡ್ ತಗ್ಗಿಸಲು ಬೆಂಗಳೂರಿನಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮರಗಳಿಲ್ಲ. ಹಸಿರು ಪ್ರದೇಶ ಹೆಚ್ಚಿಸುವ ಯೋಜನೆಗಳು ಶೀಘ್ರ ಜಾರಿಯಾಗಬೇಕು

ಎ.ಎನ್.ಯಲ್ಲಪ್ಪರೆಡ್ಡಿ, ಪರಿಸರವಾದಿ



ಜೈವಿಕ ಉದ್ಯಾನವಾಗಲಿರುವ ಮಾದಪ್ಪನಹಳ್ಳಿ ಅರಣ್ಯ

ಬ್ರ್ಯಾಂಡ್ ಬೆಂಗಳೂರು

ಯಾವೆಲ್ಲ ಯೋಜನೆಗಳು

- ಮಾದಪ್ಪನಹಳ್ಳಿಯಲ್ಲಿ 153.39 ಎಕರೆ ಪ್ರದೇಶ ದಲ್ಲಿ ಜೈವಿಕ ಉದ್ಯಾನ
- 5678.32 ಎಕರೆ ಜಾಗ ಗ್ರೇಟರ್ ಹೆಸರುಘಟ್ಟ ಮೀಸಲು ಪ್ರದೇಶ ಎಂದು ಘೋಷಣೆ
- ಕಂಟೋನ್ಮೆಂಟ್‌ನ 8.61 ಎಕರೆ ಪ್ರದೇಶ ಜೀವ ವೈವಿಧ್ಯ ಪಾರಂಪರಿಕ ತಾಣ
- ಎಚ್‌ಎಂಟಿಗೆ ನೀಡಿದ್ದ 280 ಎಕರೆಯಲ್ಲಿ ಜೈವಿಕ ಉದ್ಯಾನ ರೂಪಿಸಲು ಯೋಜನೆ



ಮಾದಪ್ಪನಹಳ್ಳಿ ಉದ್ಯಾನ ನಿರ್ಮಾಣಕ್ಕೆ ಮೊದಲ ಹಂತದಲ್ಲಿ ₹ 20 ಕೋಟಿ ಮಂಜೂರು ಮಾಡಿ ಡಿಪಿಆರ್ ಸಿದ್ದಪಡಿಸಲಾಗುತ್ತಿದೆ.

ಈಶ್ವರ ಖಂಡ್ರೆ, ಅರಣ್ಯ ಸಚಿವ

ಭಿನ್ನ ವರದಿಗಳು

ಬೆಂಗಳೂರಿನ ಹಸಿರು ಹಾದಿಯ ಕುರಿತಾಗಿ ಎರಡು ಪ್ರಮುಖ ಸಂಸ್ಥೆಗಳು ನೀಡಿರುವ ವರದಿಗಳು ನೈಜ ಸ್ಥಿತಿ ಬಿಡಿಸಿಡುತ್ತವೆ.

ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಸಂಶೋಧಕರು 2024ರಲ್ಲಿ ನಡೆಸಿದ್ದ ಸಮೀಕ್ಷೆಯು ಬೆಂಗಳೂರಿನ ಹಸಿರು ಹಾದಿ ಕ್ಷೀಣಿಸಿರುವುದನ್ನು ಉಲ್ಲೇಖಿಸಿತ್ತು.

'ಐದು ದಶಕಗಳಲ್ಲಿ, ನಗರದ ಶೇ 93ರಷ್ಟು ಪ್ರದೇಶವು ಕಾಂಕ್ರೀಟ್ ಆಗಿ ಕೆರೆ ಸಹಿತ ಜಲತಾಣಗಳನ್ನು, ಅರಣ್ಯ ಪ್ರದೇಶವನ್ನು ಕಳೆದುಕೊಂಡಿದೆ. ಐದು ದಶಕಗಳಿಗೆ ಹೋಲಿಸಿದರೆ ಅರಣ್ಯ ಪ್ರದೇಶ ಶೇ 88ರಷ್ಟು ಕ್ಷೀಣಿಸಿದೆ.

ಕಟ್ಟಡಗಳ ನಿರ್ಮಾಣ ಹೆಚ್ಚಾಗಿರುವುದು ಈಗಿನ ಸ್ಥಿತಿಗೆ ಕಾರಣ. ಹಸಿರು ಪ್ರದೇಶ ಉಳಿಸಿಕೊಳ್ಳಲು ಆಡಳಿತಗಾರರು ಒತ್ತು ನೀಡಲೇಬೇಕು' ಎನ್ನುವ ಸಲಹೆಯನ್ನು ನೀಡಲಾಗಿತ್ತು.

ಅದೇ ರೀತಿ ಇಂಡಿಯಾ ಸ್ಟೇಟ್ ಆಫ್ ಫಾರೆಸ್ಟ್ ರಿಪೋರ್ಟ್ 2023ರ ಪ್ರಕಾರ, ಬೆಂಗಳೂರಿನಲ್ಲಿ 2021ರಲ್ಲಿನ ಮೌಲ್ಯ ಮಾಪನಕ್ಕಿಂತ ಶೇ 0.59 ರಷ್ಟು ಅರಣ್ಯ ಹೆಚ್ಚಳವಾಗಿದೆ.

ಒಟ್ಟು ಅರಣ್ಯದ ವ್ಯಾಪ್ತಿ 89.61 ಚದರ ಕಿಲೋಮೀಟರ್ ವಿಸ್ತರಿಸಿದೆ. ದೆಹಲಿ (194.15 ಕಿ.ಮೀ.) ಮತ್ತು ಮುಂಬೈ (110.84 ಕಿ.ಮೀ.) ಅರಣ್ಯ ಪ್ರದೇಶ ಹೊಂದಿದ್ದು, ಮೊದಲೆರಡು ಸ್ಥಾನದಲ್ಲಿವೆ. ನಂತರದ ಸ್ಥಾನದಲ್ಲಿ ಬೆಂಗಳೂರು ಇದೆ.

ಹೋರಾಟ ಹತ್ತಿಕ್ಕುತ್ತಿರುವ ಸರ್ಕಾರ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನ್ಯಾಯ ಕೇಳಿಕೊಂಡು ಸರ್ಕಾರಿ ಕಚೇರಿಗಳಿಗೆ ಹೋದರೆ, ಅಕ್ರಮಗಳನ್ನು ಪ್ರಶ್ನಿಸಿದರೆ, ಪೊಲೀಸರನ್ನು ಕರೆಸಿ ಸುಳ್ಳು ದೂರು ದಾಖಲು ಮಾಡುವ ಕೆಲಸ ಮಾಡಲಾಗುತ್ತಿದೆ' ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಆರೋಪಿಸಿದೆ.

'ಕೆಆರ್‌ಎಸ್ ಪಕ್ಷದ ಹೋರಾಟ ಮತ್ತು ಧ್ವನಿಯನ್ನು ರಾಜ್ಯ ಸರ್ಕಾರ ಹತ್ತಿಕ್ಕುತ್ತಿದ್ದು, ಪೊಲೀಸ್ ಇಲಾಖೆಯಲ್ಲಿನ ಭ್ರಷ್ಟ ಅಧಿಕಾರಿಗಳನ್ನು ಬಳಸಿಕೊಂಡು, ಪಕ್ಷದ ಪದಾಧಿಕಾರಿಗಳ ಮತ್ತು ಕಾರ್ಯಕರ್ತರ ಮೇಲೆ ಸುಳ್ಳು ದೂರುಗಳನ್ನು ದಾಖಲಿಸುವ, ಬಂಧಿಸುವ ಕೆಲಸವನ್ನು ಮಾಡುತ್ತಿದೆ. ದೇಶದಲ್ಲಿ ಸಂವಿಧಾನಕ್ಕೆ ಅಪಾಯ ಬಂದಿದೆ, ಅಘೋಷಿತ ತುರ್ತು ಪರಿಸ್ಥಿತಿ ಜಾರಿಯಲ್ಲಿದೆ ಎಂದು ಹೇಳುವ ಕಾಂಗ್ರೆಸ್ ಪಕ್ಷದವರೇ, ರಾಜ್ಯದಲ್ಲಿ ಸಂವಿಧಾನಬದ್ಧ ಹಕ್ಕುಗಳನ್ನು ದಮನ ಮಾಡುತ್ತಿದ್ದಾರೆ' ಎಂದು ಪಕ್ಷದ ಜಂಟಿ ಕಾರ್ಯದರ್ಶಿ ಎಲ್. ಜೀವನ್ ತಿಳಿಸಿದ್ದಾರೆ.

'ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪಕ್ಷದ ಕಾರ್ಯಕರ್ತರ ವಿರುದ್ಧ ಎರಡು ಸುಳ್ಳು ಪ್ರಕರಣಗಳನ್ನು ದಾಖಲಿಸಿ, ಬಂಧಿಸಲಾಗಿತ್ತು. ಪಕ್ಷದ ಗೌರವಾಧ್ಯಕ್ಷ ರವಿ ಕೃಷ್ಣಾರೆಡ್ಡಿ ಹಾಗೂ ಇತರರ ವಿರುದ್ಧ ವಿಧಾನ ಸೌಧ ಪೊಲೀಸ್ ಠಾಣೆಯಲ್ಲಿ ಸುಳ್ಳು ದೂರು ದಾಖಲಿಸಲಾಗಿದೆ. ಪೊಲೀಸರ ಈ ಕೃತ್ಯದ ಹಿಂದೆ ಭ್ರಷ್ಟ ಕಾಂಗ್ರೆಸ್ ಸರ್ಕಾರದ ಕೈವಾಡವಿದ್ದು, ಇದು ಸಂವಿಧಾನ ವಿರೋಧಿ ಕೃತ್ಯವಾಗಿದೆ. ದಕ್ಷ ಆಡಳಿತ ನೀಡುವ ಕಡೆ ಗಮನ ನೀಡಬೇಕು ಹಾಗೂ ಇಂತಹ ಅಕ್ರಮಗಳನ್ನು ತಕ್ಷಣವೇ ನಿಲ್ಲಿಸಬೇಕು' ಎಂದು ತಿಳಿಸಿದ್ದಾರೆ.

ಜಾನಪದ ಲೋಕದಲ್ಲಿ ಕಳ್ಳತನ

ರಾಮನಗರ: ನಗರದ ಹೊರವಲಯದಲ್ಲಿರುವ ಜಾನಪದ ಲೋಕಕ್ಕೆ ಭಾನುವಾರ ಮಧ್ಯರಾತ್ರಿ ನುಗ್ಗಿರುವ ಕಳ್ಳರು, ಸುಮಾರು ₹1.46 ಲಕ್ಷ ಮೌಲ್ಯದ ವಸ್ತುಗಳನ್ನು ಕದ್ದೊಯ್ದಿದ್ದು, ವಿವಿಧ ವಸ್ತುಗಳನ್ನು ಹಾನಿ ಮಾಡಿದ್ದಾರೆ. ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸೋಮವಾರ ಪ್ರಕರಣ ದಾಖಲಾಗಿದೆ.

ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಪ್ರೊ.ಹಿ.ಚಿ. ಬೋರಲಿಂಗಯ್ಯ ಮತ್ತು ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್ ಕಚೇರಿ, ಲೋಕದ ಆವರಣದಲ್ಲಿರುವ ಮೂರು ಅತಿಥಿ ಗೃಹಗಳಲ್ಲಿ ಕಳ್ಳತನ ನಡೆದಿದೆ. ರಾತ್ರಿ 12.30ಕ್ಕೆ ಬಂದಿರುವ ಕಳ್ಳರು, ಎತ್ತಿನಗಾಡಿಯ ನೊಗ ಹಾಗೂ ಕಲ್ಲಿನಿಂದ ಕಿಟಕಿ ಮುರಿದು ಒಳ ನುಗ್ಗಿದ್ದಾರೆ ಎಂದು ಜಾನಪದ ಲೋಕದ ಕಾರ್ಯನಿರ್ವಹಣಾ ಅಧಿಕಾರಿ ದೂರಿನಲ್ಲಿ ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

'ಪಂಜಾಬ್ ಮಾದರಿ ಪರಿಹಾರ ನೀಡಿ'

ಬೆಂಗಳೂರು: 'ಅತಿವೃಷ್ಟಿಯಿಂದ ಬೆಳೆ ಹಾನಿಯಾದ ರೈತರಿಗೆ ಭಗವಂತ ಮಾನ್ ನೇತೃತ್ವದ ಪಂಜಾಬ್ ಸರ್ಕಾರವು ಘೋಷಿಸಿರುವಂತೆ, ರಾಜ್ಯ ಸರ್ಕಾರವೂ ರೈತರಿಗೂ ಪ್ರತಿ ಎಕರೆಗೆ ₹ 20 ಸಾವಿರ ಪರಿಹಾರ ನೀಡಬೇಕು' ಎಂದು ಆಮ್ ಆದ್ಮಿ ಪಕ್ಷ ಆಗ್ರಹಿಸಿದೆ.

'ರಾಜ್ಯದಲ್ಲಿ ಹೆಕ್ಟೇರ್ ಲೆಕ್ಕದಲ್ಲಿ ಖುಷ್ಕಿ ಭೂಮಿಯಾದರೆ ₹17,000 ಮತ್ತು ನೀರಾವರಿ ಭೂಮಿಯಾದರೆ 25,000 ಪರಿಹಾರ ಘೋಷಿಸಲಾಗಿದೆ. ಇದು ಅರೆಕಾಸಿನ ಮಜ್ಜಿಗೆಯಂತಿದೆ. ಉತ್ತರ ಕರ್ನಾಟಕದ ರೈತರು ಖಾಸಗಿ ಸಾಲ ಪಡೆದು ತೊಂದರೆಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಗೆ ಬಂದಿದ್ದಾರೆ' ಎಂದು ಪಕ್ಷದ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ ತಿಳಿಸಿದ್ದಾರೆ.

'ಪಂಜಾಬ್ ಸರ್ಕಾರ ಕ್ಷಿಪ್ರಗತಿಯಲ್ಲಿ ಸಮೀಕ್ಷೆಗಳನ್ನು ಪೂರ್ಣಗೊಳಿಸಿ ದೇಶದಲ್ಲೇ ಹೆಚ್ಚಿನ ಪರಿಹಾರ ಘೋಷಿಸಿದೆ. ರಾಜ್ಯದಲ್ಲಿ ಕೃಷಿ ಅಧಿಕಾರಿಗಳ ನಿಧಾನ ಗತಿಯಿಂದಾಗಿ ಮೂರ್ನಾಲ್ಕು ತಿಂಗಳಾದರೂ ಸಮೀಕ್ಷೆ ಮುಗಿಯುವುದಿಲ್ಲ' ಎಂದಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಹಲಸೂರಿನ ಸುಧರ್ಮ ಸಾಂಸ್ಕೃತಿಕ ಸಂಘವು 2025–26ನೇ ಶೈಕ್ಷಣಿಕ ಸಾಲಿಗೆ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನಿಸಿದೆ.

ಸಂಘವು ನಡೆಸುವ ಜಾನಪದ ಡಿಪ್ಲೊಮಾ ಹಾಗೂ ವಿವಿಧ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಬೋಧಿಸಲು ಆಸಕ್ತ ಅಭ್ಯರ್ಥಿಗಳು ಇದೇ 18ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 94480 26212 ಸಂಪರ್ಕಿಸಬಹುದು.

'ದೇಶದ ಅಭಿವೃದ್ಧಿಗೆ ಮೋದಿ ಅವಿರತ ಯತ್ನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನರೇಂದ್ರ ಮೋದಿ ಪ್ರಧಾನಿಯಾಗಿರುವ 11 ವರ್ಷದ ಅವಧಿಯಲ್ಲಿ ದೇಶದ ಸರ್ವತೋಮುಖ ಅಭಿವೃದ್ಧಿಗೆ ಅವಿರತವಾಗಿ ಶ್ರಮಿಸುತ್ತಿದ್ದಾರೆ' ಎಂದು ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ನಗರದ ದೇವಾಂಗ ಸಂಘದಲ್ಲಿ ಕೊಂಡೆವೂರು ಮಠದ ನಿತ್ಯಾನಂದ ಯೋಗಾಶ್ರಮ ಮೋದಿ ಅವರ 75ನೇ ಜನ್ಮ ದಿನದ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ ವಿಷ್ಣು ಸಹಸ್ರನಾಮ ಹವನ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಸದೃಢ ಭಾರತ ಕಟ್ಟುವಲ್ಲಿ ತಮ್ಮದೇ ರೀತಿಯಲ್ಲಿ ಮೋದಿ ಅವರು ಕೆಲಸ ಮಾಡುತ್ತಿದ್ದು, ಅವರಿಗೆ ಒಳ್ಳೆಯ ಆರೋಗ್ಯ ಸಿಗಲಿ ಎಂದು ಜನ ಎಲ್ಲೆಡೆ ಹಾರೈಸುತ್ತಿದ್ದಾರೆ. ನಿತ್ಯಾನಂದ ಯೋಗಾಶ್ರಮವೂ ನಾನಾ ಸಾಮಾಜಿಕ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ' ಎಂದರು.

ಹಂಪಿ ಹೇಮಕೂಟ ಸಂಸ್ಥಾನದ ದಯಾನಂದಪುರಿ ಸ್ವಾಮೀಜಿ, ಕೊಂಡೆವೂರು ಮಠದ ಯೋಗಾನಂದ ಸರಸ್ವತಿ ಸ್ವಾಮೀಜಿ, ರಾಜ್ಯಸಭಾ ಸದಸ್ಯರಾದ ಜಗ್ಗೇಶ್, ನಾರಾಯಣ್, ಮಾಜಿ ಸದಸ್ಯ ಕೆ.ಸಿ. ರಾಮಮೂರ್ತಿ, ನಿವೃತ್ತ ಐಪಿಎಸ್ ಅಧಿಕಾರಿ ಜಿ.ರಮೇಶ್, ಶಂಕರ ಕಣ್ಣಿನ ಆಸ್ಪತ್ರೆಯ ಎಸ್.ಗುರುಪ್ರಸಾದ್, ಧರ್ಮಪ್ರಸಾದ್ ಹಾಜರಿದ್ದರು.

ಬೆಂಗಳೂರಿನ ಶಂಕರ್ ಕಣ್ಣಿನ ಆಸ್ಪತ್ರೆ, ಮಂಗಳೂರಿನ ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ದಯಾನಂದ ಪೈ ಹಾಗೂ ಸತೀಶ್ ಪೈ ಚಾರಿಟಬಲ್ ಟ್ರಸ್ಟ್, ಒನ್‌ಸೈಟ್ ಎಸ್ಸಿಲೋರ್ ಲುಕ್ಸೋಟಿಕಾ ಫೌಂಡೇಷನ್ ಸಹಯೋಗದಲ್ಲಿ ನಡೆದ ನೇತ್ರ ಚಿಕಿತ್ಸಾ ಶಿಬಿರದಲ್ಲಿ 500 ಮಂದಿಗೆ ತಪಾಸಣೆ ನಡೆಸಿ ಕೆಲವರಿಗೆ ಕನ್ನಡಕ ವಿತರಿಸಲಾಯಿತು. ಮಠದ ಗೋಶಾಲೆಯಲ್ಲಿ ಉತ್ಪಾದಿಸಿರುವ ಸ್ವದೇಶಿ ಸೋಪುಗಳನ್ನು ವಿತರಣೆ ಮಾಡಲಾಯಿತು.



ನಗರದ ದೇವಾಂಗ ಸಂಘದಲ್ಲಿ ಕೊಂಡೆವೂರು ಮಠದ ನಿತ್ಯಾನಂದ ಯೋಗಾಶ್ರಮ ನರೇಂದ್ರ ಮೋದಿ ಅವರ 75 ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ಶ್ರೀ ವಿಷ್ಣು ಸಹಸ್ರನಾಮ ಹವನ ಕಾರ್ಯಕ್ರಮದಲ್ಲಿ ಗಾಯತ್ರಿ ದೇವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು ಪ್ರಜಾವಾಣಿ ಚಿತ್ರ

ವಿದ್ಯಾ ವಾಚಸ್ಪತಿ ಪ್ರಶಸ್ತಿ



ಕನ್ನಡ ಬೋಧನೆ ಮಾಡುತ್ತಿರುವ ಉಪನ್ಯಾಸಕರಿಗೆ ಬೆಂಗಳೂರಿನ ಸಮರ್ಥ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನವು ಶಿಕ್ಷಕರ ದಿನದ ಅಂಗವಾಗಿ ಕೊಡುವ 2025ರ ಸಾಲಿನ ವಿದ್ಯಾ ವಾಚಸ್ಪತಿ ಪ್ರಶಸ್ತಿಯನ್ನು ಶೇಷಾದ್ರಿಪುರಂ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಎಸ್.ರಾಮಲಿಂಗೇಶ್ವರ (ಸಿಸಿರಾ) ಅವರಿಗೆ ಪ್ರದಾನ ಮಾಡಲಾಯಿತು. ಶಿಕ್ಷಣ ತಜ್ಞ ವೂಡೇ ಪಿ ಕೃಷ್ಣ, ಅಂಕಣಕಾರ ಎಸ್.ಷಡಕ್ಷರಿ, ಸಹಕಾರ ಧುರೀಣ ಎಂ.ಆರ್.ವೆಂಕಟೇಶ್, ಬೇಲಿ ಮಠದ ಶಿವರುದ್ರ ಸ್ವಾಮೀಜಿ, ಪ್ರತಿಷ್ಠಾನದ ವಿಜಯ ಸಮರ್ಥ ಹಾಜರಿದ್ದರು

ನಗರದಲ್ಲಿ ಇಂದು

ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅನಿಕೇತನ–ದೃಷ್ಟಿಕೋನ ಕಾರ್ಯಕ್ರಮ: ಆಯೋಜನೆ: ಆಂತರಿಕ ಗುಣಮಟ್ಟ ಖಾತ್ರಿ ಘಟಕ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಸಭಾಂಗಣ, ಬೆಳಿಗ್ಗೆ 10.30

ನೂತನ ಶೈಕ್ಷಣಿಕ ಕಟ್ಟಡದ ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಡಾ.ಎಂ.ಸಿ. ಸುಧಾಕರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ ಮತ್ತು ಸ್ಥಳ: ನೃಪತುಂಗ ವಿಶ್ವವಿದ್ಯಾಲಯ, ನೃಪತುಂಗ ರಸ್ತೆ, ಬೆಳಿಗ್ಗೆ 11

ಶಿಕ್ಷಕರ ದಿನಾಚರಣೆ: ಅತಿಥಿಗಳು: ರಮೇಶ್ ಬಿ., ಎ. ನವೀನ್ ಜೋಸೆಫ್, ಜಲಜಾ ಕೆ.ಆರ್., ವಿಜಯಲಕ್ಷ್ಮಿ ಎಂ.ವಿ., ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಮಧ್ಯಾಹ್ನ 2

'ಸಾಹಿತ್ಯ ಮತ್ತು ವೈದ್ಯಲೋಕ' ದತ್ತಿ ಉಪನ್ಯಾಸ: ಡಾ.ಸಿ. ನಂದಿನಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಒಡನಾಡಿ ಬಂಧು ಸಿಜಿಕೆ–75 ಮಾಸದ ನೆನಪು ಸರಣಿ ಕಾರ್ಯಕ್ರಮ–5 'ದಾಳ' ನಾಟಕ ಪ್ರದರ್ಶನ: ಅತಿಥಿಗಳು: ಕೆ.ವಿ. ನಾಗರಾಜ ಮೂರ್ತಿ, ಎಸ್.ಜಿ. ಸಿದ್ಧರಾಮಯ್ಯ, ನಾಟಕದ ನಿರ್ದೇಶನ: ಮೈಕೊ ಶಿವಶಂಕರ್, ಆಯೋಜನೆ: ರಂಗದರ್ಶನ ಪ್ರದರ್ಶನ ಕಲಾ ಕೇಂದ್ರ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.45



ಕೆ.ವಿ. ನಾಗರಾಜ ಮೂರ್ತಿ

ಹಾಸ್ಮಾಟ್ ಆಸ್ಪತ್ರೆ ಸಂಸ್ಥಾಪಕರ ದಿನ

ಬೆಂಗಳೂರು: ಅಶೋಕ ನಗರದಲ್ಲಿರುವ ಹಾಸ್ಮಾಟ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸೋಮವಾರ ಸಂಸ್ಥಾಪಕರ ದಿನ ಆಚರಿಸಲಾಯಿತು.

ಸಂಸ್ಥಾಪಕರಾದ ಡಾ.ಥಾಮಸ್ ಚಾಂಡಿ ಅವರಿಗೆ ಗೌರವ ಸಲ್ಲಿಸುವ ಸಲುವಾಗಿ ಅವರ ಪ್ರತಿಮೆ ಸ್ಥಾಪಿಸಲಾಗಿದೆ. ಅಲ್ಲದೇ ಮಗ್ರಾತ್ ರಸ್ತೆಯಲ್ಲಿರುವ ಆಸ್ಪತ್ರೆಯಲ್ಲಿ ಹೊಸ ಒಪಿಡಿ ವಿಭಾಗ ಪ್ರಾರಂಭಿಸಲಾಗಿದೆ. ಸಂಸ್ಥಾಪಕರ ದಿನದ ಭಾಗವಾಗಿ ಜಿಬಿಎ ಸಹಯೋಗದಲ್ಲಿ ಮಗ್ರಾತ್ ರಸ್ತೆ, ವಿವೇಕನಗರ ಮತ್ತು ವಿಕ್ಟೋರಿಯಾ ಲೇಔಟ್‌ನಲ್ಲಿ ಒಂದು ವಾರ ಕಾಲ ಸ್ವಚ್ಛ ಬೆಂಗಳೂರು ಅಭಿಯಾನ ನಡೆಸಲಾಯಿತು.

ಆಸ್ಪತ್ರೆಯ ಮೇಕ್ ಮಿ ವಾಕ್ ಯೋಜನೆ ಮೂಲಕ ಯುವ ಜನರ ಬದುಕು ಬದಲಿಸುವ ಕಾರ್ಯ ಮುಂದುವರಿಸುವುದಾಗಿ ಪ್ರಕಟಿಸಲಾಯಿತು.

'ಥಾಮಸ್ ಚಾಂಡಿ ಅವರು ಜನಾನುರಾಗಿ ವೈದ್ಯರಾಗಿ ಸೇವೆ ಮಾಡಿದರು. ಸಂಸ್ಥೆಗಳನ್ನು ಕಟ್ಟಿದರೂ ವಾಣಿಜ್ಯ ನೆಲೆಯಲ್ಲಿ ಎಂದೂ ನೋಡಲಿಲ್ಲ. ಈಗ ಅವರ ಮಕ್ಕಳು ತಂದೆಯ ಪರಂಪರೆ ಮುಂದುವರೆಸಿದ್ದಾರೆ' ಎಂದು ಗಣ್ಯರು ನೆನಪಿಸಿಕೊಂಡರು.

ಬೆಂಗಳೂರು ಪ್ರಾಂತ್ಯದ ಆರ್ಚ್‌ಬಿಷಪ್ ಪೀಟರ್ ಮಚಾಡೊ, ಶಾಂತಿನಗರ ಶಾಸಕ ಎನ್. ಎ. ಹ್ಯಾರಿಸ್, ಈಜು ಪಟು ನಿಶಾ ಮಿಲೆಟ್, ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕಿ ಅನೀಶಾ ಚಾಂಡಿ ಎಕಾರ್ಟ್ ಭಾಗವಹಿಸಿದ್ದರು.



ನಗರದ ಹಾಸ್ಮಾಟ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸೋಮವಾರ ಸಂಸ್ಥಾಪಕರ ದಿನ ಆಚರಿಸಲಾಯಿತು. ಶಾಸಕ ಹ್ಯಾರಿಸ್, ಈಜುಪಟು ನಿಶಾ ಮಿಲ್ಲೆಟ್, ಅನೀಶಾ ಚಾಂಡಿ ಎಕಾರ್ಟ್ ಹಾಜರಿದ್ದರು

ಸುರಂಗ ರಸ್ತೆ: 121 ನ್ಯೂನತೆ ಪತ್ತೆ

ಒಂದನೇ ಪುಟದಿಂದ...

ಯೋಜನೆ ಅನುಷ್ಠಾನವಾಗುವ ಶೇ 90ರಷ್ಟು ಪ್ರದೇಶದಲ್ಲಿ ಎಲ್ಲ ರೀತಿಯ ಸ್ವಾಧೀನ ಪ್ರಕ್ರಿಯೆಯನ್ನು ಮುಗಿಸಿರಬೇಕು. ಇದರಿಂದ ಸಮಯ ಹಾಗೂ ವೆಚ್ಚ ಹೆಚ್ಚಾಗುವುದನ್ನು ತಪ್ಪಿಸಬಹುದು ಎಂದು ತಜ್ಞರ ಸಮಿತಿ ಹೇಳಿದ್ದು, ಇದನ್ನು ಈವರೆಗೂ ಯೋಜನೆ ರೂಪಿಸಿದವರು ಪಾಲಿಸಿಲ್ಲ.

ಡಿಪಿಆರ್‌ನಲ್ಲಿ ಲೋಪ ಕಂಡಬಂದ ಸಂದರ್ಭದಲ್ಲಿ, ಬೆಂಗಳೂರು ಮೆಟ್ರೊ ರೈಲ್ ಕಾರ್ಪೊರೇಷನ್ ಲಿಮಿಟೆಡ್‌ನ (ಬಿಎಂಆರ್‌ಸಿಎಲ್) ಕಾರ್ಯಕಾರಿ ನಿರ್ದೇಶಕ (ಸಿವಿಲ್) ಎಸ್. ಹೆಗ್ಗರೆಡ್ಡಿ ನೇತೃತ್ವದಲ್ಲಿ ಈ ವರ್ಷದ ಏಪ್ರಿಲ್‌ನಲ್ಲಿ ತಜ್ಞರ ಸಮಿತಿಯನ್ನು ಸರ್ಕಾರ ರಚಿಸಿತ್ತು. ಸುರಂಗ ರಸ್ತೆ ತಜ್ಞ ವಿನೋದ್ ಶುಕ್ಲ, ರಸ್ತೆ ಸುರಕ್ಷತೆ ತಜ್ಞ ಬಿ. ಅಶ್ವತ್ಥ್ ಕುಮಾರ್, ಲೋಕೋಪಯೋಗಿ ಇಲಾಖೆಯ ನಿವೃತ್ತ ಮುಖ್ಯ ಎಂಜಿನಿಯರ್ ಮಾಧವ ಅವರು ಸಮಿತಿ ಸದಸ್ಯರಾಗಿದ್ದಾರೆ.

ತಜ್ಞರ ಸಮಿತಿ 89 ಪುಟಗಳ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಡಿಪಿಆರ್‌ನಲ್ಲಿ 121 ನ್ಯೂನತೆಗಳನ್ನು 50 ಪುಟಗಳಲ್ಲಿ ವಿವರಿಸಿದೆ. ಪ್ರಮುಖವಾಗಿ, ಯೋಜನೆಯ ಪ್ರದೇಶ, ಅಲೈನ್‌ಮೆಂಟ್, ಭೂಲಭ್ಯತೆ, ಸಂಚಾರ, ಪ್ರವೇಶ–ನಿರ್ಗಮನ ಸ್ಥಳಗಳಲ್ಲಿ ಹಲವು ಸಮಸ್ಯೆಗಳ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

ತಜ್ಞರ ಸಮಿತಿ ಕಂಡುಹಿಡಿದ ನ್ಯೂನತೆಗಳಲ್ಲಿ ಬಹುತೇಕ ಸಮಸ್ಯೆಗಳಿಗೆ ಬಿ–ಸ್ಮೈಲ್ ಪರಿಹಾರಗಳನ್ನು ನೀಡಿದೆಯಾದರೂ, ಭೂವೈಜ್ಞಾನಿಕ ಮತ್ತು ಭೂತಾಂತ್ರಿಕ ತಪಾಸಣೆಗಳನ್ನು ಡಿಪಿಆರ್ ತಯಾರಿಸುವ ಸಮಯದಲ್ಲಿ ನಡೆಸಿಲ್ಲ. ಇದು ಸಾಮಾನ್ಯ ಪ್ರಕ್ರಿಯೆಗೆ ವಿರುದ್ಧವಾಗಿದೆ. ಬೆಂಗಳೂರಿನಲ್ಲಿ ಮೆಟ್ರೊ ಸುರಂಗದ ಅನುಭವದ ಮೇಲೆ ಸುರಂಗ ರಸ್ತೆ ಯೋಜನೆ ಅನುಷ್ಠಾನದಲ್ಲಿ ಸಮಯ ಹೆಚ್ಚಾಗಲಿದೆ. ಸುರಂಗ ರಸ್ತೆ ಯೋಜನೆಯ ವೆಚ್ಚವೂ ಶೇ 10ರಿಂದ ಶೇ 15ರಷ್ಟು ಹೆಚ್ಚಾಗಲಿದೆ ಎಂದು ಸಮಿತಿ ತಿಳಿಸಿದೆ.

'ಭೂತಾಂತ್ರಿಕ ಸಮೀಕ್ಷೆಯನ್ನು ನಾವೂ ನಡೆಸಿದ್ದೇವೆ. ಟೆಂಡರ್ ಪಡೆಯುವ ಗುತ್ತಿಗೆದಾರರು ಇದೇ ರೀತಿಯ ಸಮೀಕ್ಷೆಯನ್ನು ಕಾಮಗಾರಿ ಆರಂಭಕ್ಕೆ ಮುನ್ನ ನಡೆಸಬೇಕಾಗಿರುವುದು ಸಾಮಾನ್ಯ ಪ್ರಕ್ರಿಯೆ. ತಜ್ಞರ ಸಮಿತಿ ಕೇಳಿರುವ ಎಲ್ಲ ಪ್ರಶ್ನೆಗಳಿಗೂ ಸಮಂಜಸವಾಗಿ ಉತ್ತರ ನೀಡಲಾಗಿದೆ' ಎಂದು ಬಿ–ಸ್ಮೈಲ್‌ನ ತಾಂತ್ರಿಕ ನಿರ್ದೇಶಕ ಬಿ.ಎಸ್.ಪ್ರಹ್ಲಾದ್ ತಿಳಿಸಿದರು.

'ಸರ್ಕಾರ ಸುರಂಗ ರಸ್ತೆ ಯೋಜನೆ ಕೈಬಿಡಬೇಕು. ಟೆಂಡರ್ ಆಹ್ವಾನಕ್ಕೂ ಮುನ್ನ ಅಗತ್ಯವಾಗಿರುವ ಭೂವೈಜ್ಞಾನಿಕ ಅಧ್ಯಯನ ಮಾಡದಿರುವುದನ್ನು ಸರ್ಕಾರ ನಿರ್ಲಕ್ಷಿಸಬಾರದು' ಎಂದು ತಜ್ಞರ ಸಮಿತಿ ವರದಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದಿರುವ ಪರಿಸರ ಕಾರ್ಯಕರ್ತ ಡಿ.ಟಿ. ದೇವರೆ ಹೇಳಿದರು.

ಕಾಡಾನೆ ದಾಳಿ: ಅಪಾರ ಬೆಳೆ ನಾಶ

ಪ್ರಜಾವಾಣಿ ವಾರ್ತೆ

ಕನಕಪುರ: ಕಾಡಾನೆಗಳ ಗುಂಪೊಂದು ಭಾನುವಾರ ರಾತ್ರಿ ತಾಲ್ಲೂಕಿನ ನಾರಾಯಣಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆಬ್ಬಳ್ಳಿ ಮತ್ತು ಬೆಟ್ಟಳ್ಳಿ ಸುತ್ತಮುತ್ತಲಿನ ಜಮೀನುಗಳಿಗೆ ನುಗ್ಗಿ ಭತ್ತ, ರಾಗಿ, ತೆಂಗಿನ ಸಸಿ, ಮಾವಿನ ಗಿಡ, ರೇಷ್ಮೆ ತೋಟ, ಭತ್ತದ ಪೈರು ನಾಶಗೊಳಿಸಿವೆ.

ಕೆಬ್ಬಳ್ಳಿಯ ಶಿವರಾಜು, ಶಿವಣ್ಣ, ಮಲ್ಲೇಶ್, ಲಿಂಗೇಗೌಡ, ಬೆಟ್ಟೇಗೌಡನ ದೊಡ್ಡಿ ರವಿಕುಮಾರ್, ಕಾಶಿಗೌಡ, ಕುಮಾರ್ ಅವರ ರಾಗಿ, ಬೈರೇಗೌಡ ಮುಂತಾದವರು ಜಮೀನುಗಳಿಗೆ ಕಾಡಾನೆ ಹಿಂಡು ದಾಳಿ ನಡೆಸಿದೆ.

ಅರಣ್ಯ ಇಲಾಖೆ ಅಧಿಕಾರಿಗಳು ಕಾಡಾನೆ ದಾಳಿ ತಡೆಗಟ್ಟುತ್ತಿಲ್ಲ ಎಂದು ಸಂತ್ರಸ್ತ ರೈತರ ಆಕ್ರೋಶ ವ್ಯಕ್ತಪಡಿಸಿದರು.

ಕನ್ನಡ ಕುಸಿಯುತ್ತಿರುವ ಕಾಲಘಟ್ಟದಲ್ಲಿದ್ದೇವೆ: ಬಿಳಿಮಲೆ

ಬೆಂಗಳೂರು: 'ನಾವಿಂದು ಕನ್ನಡ ಕುಸಿಯುತ್ತಿರುವ ಕಾಲಘಟ್ಟದಲ್ಲಿದ್ದೇವೆ. ಇಂತಹ ಸಂದರ್ಭದಲ್ಲಿ ಹಳೆಗನ್ನಡವನ್ನು ವಿದ್ಯಾರ್ಥಿಗಳಿಗೆ ಓದಿಸುವುದಾದರೂ ಹೇಗೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಪ್ರಶ್ನಿಸಿದರು.

ಜೈನ ಮಿಲನ್, ಬೆಂಗಳೂರು ಸೆಂಟ್ರಲ್, ಯನಗರದ ಶ್ರೀಚಕ್ರೇಶ್ವರಿ ಮಹಿಳಾ ಸಮಾಜ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಜೈನ ಸಾಹಿತ್ಯ ಸಿರಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

'ಕರ್ನಾಟಕದಲ್ಲಿದ್ದ ಬೌದ್ಧ ಧರ್ಮ ಸಂಸ್ಕೃತದೆಡೆ ಹೊರಳುವ ಕಾಲಕ್ಕೆ, ಜೈನ ಧರ್ಮವು ಜನಭಾಷೆಯನ್ನು ತನ್ನ ಧರ್ಮ ಪ್ರಚಾರಕ್ಕೆ ಬಳಸಿಕೊಂಡು ಕನ್ನಡ ಸಾಹಿತ್ಯಕ್ಕೂ ಮಹತ್ತರವಾದ ಕೊಡುಗೆ ನೀಡಿತು. ಕವಿರಾಜಮಾರ್ಗಕಾರ ಹೇಳುವ 'ಕಸವರಮೆಂಬುದು ನೆರೆ ಸೈರಿಸಲಾರ್ಪಡೆ ಪರವಿಚಾರಮುಮಂ, ಧರ್ಮಮುಮಂ' ಎಂಬುದು, ಪಂಪನ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಮಾತುಗಳು ಈಗ ಅತ್ಯಂತ ಅಗತ್ಯವಾಗಿದೆ' ಎಂದರು.

ವಿಶೇಷ ಉಪನ್ಯಾಸ ನೀಡಿದ ಸಾಹಿತಿ ಹಂಪ ನಾಗರಾಜಯ್ಯ, 'ಕನ್ನಡದ ಜತೆಗೆ ತಮಿಳು ಹಾಗೂ ತೆಲುಗಿನ ಮೊಟ್ಟ ಮೊದಲ ಲೇಖಕರೂ ಜೈನರು. ಮರೆಯಾಗುತ್ತಿರುವ ಕನ್ನಡ ಸಾಹಿತ್ಯವನ್ನು ಮುಂದಿನ ತಲೆಮಾರಿಗೆ ದಾಟಿಸುವ ಬಹುದೊಡ್ಡ ಜವಾಬ್ದಾರಿ ನಮ್ಮೆಲ್ಲರದ್ದು' ಎಂದು ಹೇಳಿದರು.



ಮಾಗಡಿ: ಜನ ಸಂಪರ್ಕ ಸಭೆಯಲ್ಲಿ ತಹಶೀಲ್ದಾರ್, ಎಡಿಎಲ್‌ಆರ್‌ಗೆ ಶಾಸಕ ತರಾಟೆ

'ಕೆಲಸ ಮಾಡದಿದ್ದರೆ ಮುಖಕ್ಕೆ ಹೊಡಿತಿನಿ'

ಪ್ರಜಾವಾಣಿ ವಾರ್ತೆ

ಮಾಗಡಿ (ರಾಮನಗರ): 'ನಿಮ್ಮ ಯೋಗ್ಯತೆಗೆ ರೈತರ ಕೆಲಸವನ್ನು ಸರಿಯಾಗಿ ಮಾಡುವುದಕ್ಕೆ ಆಗುವುದಿಲ್ಲವೆ? ಹೀಗೆ ಮಾಡಿದರೆ ನಿಮ್ಮ ಮುಖಕ್ಕೆ ಹೊಡಿತಿನಿ. ನಿಮ್ಮಿಂದಾಗಿ ಜನ ನಮಗೆ ಉಗಿಯುತ್ತಿದ್ದಾರೆ. ನಿಮ್ಮ ಘನ ಕಾರ್ಯಕ್ಕೆ ಇಬ್ಬರನ್ನೂ ರಸ್ತೆಯಲ್ಲಿ ನಿಲ್ಲಿಸಿ ಹಾರ ಹಾಕಿ ಸನ್ಮಾನ ಮಾಡ್ತಿನಿ. ರೈತರ ವಿಷಯದಲ್ಲಿ ತಮಾಷೆ ಮಾಡುತ್ತಿದ್ದೀರಾ...?

ತಾಲ್ಲೂಕು ಕಚೇರಿಯಲ್ಲಿ ಸೋಮವಾರ ನಡೆದ ಜನ ಸಂಪರ್ಕ ಸಭೆಯಲ್ಲಿ ಶಾಸಕ ಎಚ್.ಸಿ. ಬಾಲಕೃಷ್ಣ ಅವರು ಮಾಗಡಿ ತಹಶೀಲ್ದಾರ್ ಮತ್ತು ಭೂ ದಾಖಲೆಗಳ ಸಹಾಯಕ ನಿರ್ದೇಶಕರನ್ನು ತರಾಟೆಗೆ ತೆಗೆದುಕೊಂಡ ರೀತಿ ಇದು.

'ಪೋಡಿ ದುರಸ್ತಿಗೆ ಅರ್ಜಿ ಕೊಟ್ಟು ತಿಂಗಳುಗಳಾದರೂ ಅಧಿಕಾರಿಗಳು ಕೆಲಸ ಮಾಡದೆ ನಿರ್ಲಕ್ಷ್ಯ ತೋರುತ್ತಿದ್ದಾರೆ' ಎಂದು ರೈತರೊಬ್ಬರು ಅಳಲು ತೋಡಿಕೊಂಡರು.

ಆಗ ಬಾಲಕೃಷ್ಣ ಅವರು ಪಕ್ಕದಲ್ಲಿದ್ದ ತಹಶೀಲ್ದಾರ್ ಶರತ್ ಕುಮಾರ್ ಅವರನ್ನು ಅರ್ಜಿ ಕುರಿತು ವಿಚಾರಿಸಿದರು. ಅವರು ಭೂ ದಾಖಲೆಗಳ ಇಲಾಖೆಯ ಸಹಾಯಕ ನಿರ್ದೇಶಕ ಆನಂದಕುಮಾರ್ ಅವರತ್ತ ಬೆರಳು ತೋರಿಸಿದರು. ಆನಂದಕುಮಾರ್ ಮತ್ತೆ ತಹಶೀಲ್ದಾರ್ ಅವರತ್ತ ಮುಖ ಮಾಡಿದರು.

ಇದರಿಂದ ಕೆರಳಿದ ಬಾಲಕೃಷ್ಣ, 'ಜನ ಸಂಪರ್ಕ ಸಭೆಯಲ್ಲಿ ಬರುವ ಅರ್ಜಿಗಳನ್ನು ಮುಂದಿನ ಸಭೆಯ ಹೊತ್ತಿಗೆ ವಿಲೇವಾರಿ ಮಾಡಬೇಕು. ನಿನ್ನ ಮೇಲೆ ಅವನು, ಅವನ ಮೇಲೆ ನೀನು ಹೇಳಿಕೊಂಡು ರೈತರ ಕೆಲಸ ಮಾಡದೆ ತಮಾಷೆ ಮಾಡುತ್ತಿದ್ದೀರಾ? ಇಬ್ಬರಿಗೆ ನಾಚಿಕೆ ಆಗುವುದಿಲ್ಲವೆ?' ಎಂದು ಹರಿಹಾಯ್ದರು.

'ತಾಲ್ಲೂಕು ಆಡಳಿತಾಧಿಕಾರಿಯಾದ ನೀನು ಅರ್ಜಿ ಕುರಿತು ಏನಾಗಿದೆ ಎಂದು ತಿಳಿದುಕೊಂಡು ಪರಿಹರಿಸದೆ, ಅವನ ಮೇಲೆ ಹೇಳುತ್ತಿದ್ದಿಯಾ? ನಾವು ಕೊಡುವ ಗೌರವವನ್ನು ಉಳಿಕೊಂಡು ಕೆಲಸ ಮಾಡಿ. ಈಗಲೇ ರೈತನ ದೂರು ಏನೆಂದು ಬರೆದುಕೊಂಡು ನಾಳೆಯೊಳಗೆ ಸಮಸ್ಯೆ ಬಗೆಹರಿಸಬೇಕು' ಎಂದು ಸೂಚಿಸಿದರು.



ಮಾಗಡಿಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಶಾಸಕ ಎಚ್.ಸಿ. ಬಾಲಕೃಷ್ಣ ಅವರು ತಹಶೀಲ್ದಾರ್ ಶರತ್ ಕುಮಾರ್ ಮತ್ತು ಭೂ ದಾಖಲೆಗಳ ಇಲಾಖೆಯ ಸಹಾಯಕ ನಿರ್ದೇಶಕ ಆನಂದಕುಮಾರ್ ಅವರನ್ನು ತರಾಟೆಗೆ ತೆಗೆದುಕೊಂಡರು

ಮುಖ್ಯಾಂಶಗಳು

- ಅಧಿಕಾರಿಗಳ ನಿರ್ಲಕ್ಷ್ಯ: ಅಳಲು ತೋಡಿಕೊಂಡ ರೈತರು
- ಸಮಸ್ಯೆ ಬಗೆಹರಿಸಲು ಒಂದು ದಿನದ ಗಡುವು

ಜೈಲಿಗೆ ರಾಷ್ಟ್ರೀಯ ಮಹಿಳಾ ಆಯೋಗ ಭೇಟಿ

ಅಕ್ರಮಗಳ ಆರೋಪ: ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮಗಳ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯರು ಸೋಮವಾರ ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಆಯೋಗದ ಅಧ್ಯಕ್ಷೆ ವಿಜಯ ರಹತ್‌ಕರ್ ಮತ್ತು ಸದಸ್ಯ ಕಾರ್ಯದರ್ಶಿ ಸುದೀಪ್ ಜೈನ್, ಸದಸ್ಯರಾದ ಡೆಲಿನಾ ಖೋಂಗ್ಡಪ್, ಮಮತಾ ಕುಮಾರ, ಡಾ ಅರ್ಚನಾ ಮಜುಂದಾರ್ ಮತ್ತು ಇತರೆ ಅಧಿಕಾರಿಗಳು ಬೆಳಿಗ್ಗೆ 8 ಗಂಟೆಗೆ ಜೈಲಿಗೆ ಭೇಟಿ ನೀಡಿ, ಹಾಜರಾತಿ ಪುಸ್ತಕ ಹಾಗೂ ಕೆಲವೊಂದು ದಾಖಲೆಗಳನ್ನು ಪರಿಶೀಲನೆ ನಡೆಸಿದರು.

ನಂತರ ಮಹಿಳಾ ಬ್ಯಾರಕ್‌ಗಳಿಗೆ ತೆರಳಿ ಸಜಾ ಬಂಧಿಗಳು ಹಾಗೂ ವಿಚಾರಣಾಧೀನ ಕೈದಿಗಳ ಜತೆ ಸುಮಾರು ಎರಡು ತಾಸು ಚರ್ಚಿಸಿದರು. ಈ ವೇಳೆ ಕೆಲ ಮಹಿಳಾ ಕೈದಿಗಳು, ಜೈಲಿನಲ್ಲಿರುವ ಕೆಲವೊಂದು ಅವ್ಯವಸ್ಥೆ ಬಗ್ಗೆ ದೂರು ನೀಡಿದರು ಎಂದು ಹೇಳಲಾಗಿದೆ. ಈ ವೇಳೆ ಆಯೋಗದಿಂದಾಗುವ ಉಪಯೋಗಗಳ ಬಗ್ಗೆ ಕೈದಿಗಳಿಗೆ ವಿವರಿಸಲಾಯಿತು.

ಆ ಬಳಿಕ ಜೈಲಿನ ಮುಖ್ಯಸ್ಥರೊಂದಿಗೆ ಸಭೆ ನಡೆಸಿದ ವಿಜಯ ರಹತ್‌ಕರ್ ಮತ್ತು ತಂಡ, ಮಹಿಳಾ ಕೈದಿಗಳಿಗೆ ಜೈಲಿನಲ್ಲಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಬಳಿಕ ಆಯೋಗದ ಮುಖ್ಯಸ್ಥರು, ಮಹಿಳಾ ಕೈದಿಗಳಿಗೆ ಯಾವುದೇ ರೀತಿಯ ತೊಂದರೆ ಉಂಟಾಗಬಾರದು, ಕೈದಿಗಳ ಮೇಲೆ ದೌರ್ಜನ್ಯ ನಡೆಸಬಾರದು ಎಂದು ಎಚ್ಚರಿಕೆ ನೀಡಿದ್ದಾರೆ ಎನ್ನಲಾಗಿದೆ.

ಬಳಿಕ ರಾಜ್ಯ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಹಾಗೂ ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿದರು. ಈ ವೇಳೆ ಪೊಲೀಸ್ ಇಲಾಖೆಯಿಂದ ಆಯೋಜಿಸಿರುವ ಒನ್ ಸ್ಟಾಪ್ ಒನ್ ಸಖಿ, ಸೇಫ್ಟಿ ಐ ಲ್ಯಾಂಡ್, ಕಮಾಂಡ್ ಸೆಂಟರ್, ಮನೆ ಮನೆಗೆ ಪೊಲೀಸ್ ಹಾಗೂ ಮಹಿಳಾ ಮತ್ತು ಮಕ್ಕಳ ಸುರಕ್ಷತೆಗಳ ಬಗ್ಗೆ ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ ಮಹಿಳಾ ಆಯೋಗ ಮೆಚ್ಚುಗೆ ವ್ಯಕ್ತಪಡಿಸಿತ್ತು.

ಇದೇ ವೇಳೆ ಮಹಿಳೆಯರ ಮತ್ತು ಮಕ್ಕಳ ಮೇಲಿನ ದೂರುಗಳನ್ನು ತ್ವರಿತವಾಗಿ ಪರಿಶೀಲಿಸಿ, ಸಂವೇದನಾ ಶೀಲ ರೀತಿಯಲ್ಲಿ ಪರಿಹಾರ ಒದಗಿಸುವ ಬಗ್ಗೆ ಮಹಿಳಾ ಆಯೋಗದ ಅಧ್ಯಕ್ಷರು ಸಲಹೆ ನೀಡಿದರು.

ಸಭೆಯಲ್ಲಿ ರಾಜ್ಯ ಕಾನೂನು ಮತ್ತು ಸುವ್ಯವಸ್ಥೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಹಿತೇಂದ್ರ, ನಗರ ಪೊಲೀಸ್ ಆಯುಕ್ತ ಸೀಮಾಂತ್ ಕುಮಾರ್ ಸಿಂಗ್, ಡಿಸಿಪಿ ಅನಿತಾ ಹದ್ದಣ್ಣನವರ್, ಎಚ್. ಶೇಖರ್ ಹಾಗೂ ಇತರೆ ಹಿರಿಯ ಅಧಿಕಾರಿಗಳು ಇದ್ದರು.



ರಾಜ್ಯ ಪೊಲೀಸ್ ಪ್ರಧಾನ ಕಚೇರಿಯಲ್ಲಿ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ವಿಜಯ ರಹತ್‌ಕರ್ ಅವರು ಸಭೆ ನಡೆಸಿದರು. ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ, ಸೀಮಾಂತ್ ಕುಮಾರ್ ಸಿಂಗ್, ಹಿತೇಂದ್ರ ಉಪಸ್ಥಿತರಿದ್ದರು

'ಮಹಿಳೆಯರ ಸುರಕ್ಷತೆಯೇ ನಮ್ಮ ಆದ್ಯತೆ'

'ಮಹಿಳೆಯರ ಗೌರವ, ಸಬಲೀಕರಣ ಮತ್ತು ಭದ್ರತೆ ನಮ್ಮ ಆದ್ಯತೆ ಆಗಿದೆ' ಎಂದು ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ವಿಜಯಾ ರಾಹತ್ಕರ್ ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸೋಮವಾರ ಆಯೋಜಿಸಿದ್ದ 'ರಾಷ್ಟ್ರೀಯ ಮಹಿಳಾ ಆಯೋಗ ಅಪ್ ಕೇ ದ್ವಾರ್–ಮಹಿಳಾ ಜನ್ ಸುನ್ವಾಹಿ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಮಹಿಳೆಯರ ಸಮಸ್ಯೆಗಳಿಗೆ ತ್ವರಿತವಾಗಿ ಪರಿಹಾರ ಒದಗಿಸಲು ಹಾಗೂ ಅಹವಾಲುಗಳನ್ನು ಸ್ವೀಕರಿಸಿ ಪರಿಹಾರ ನೀಡಲು ಈ ಕಾರ್ಯಕ್ರಮವನ್ನು ದೇಶದಾದ್ಯಂತ ಹಮ್ಮಿಕೊಳ್ಳಲಾಗುತ್ತಿದೆ. ಈಗ ಆಯೋಗವೇ ಮಹಿಳೆಯರ ಬಳಿ ಬರುತ್ತಿದೆ. ಸೋಮವಾರ ಮತ್ತು ಮಂಗಳವಾರ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ತುಮಕೂರು ಜಿಲ್ಲೆಯ ಮಹಿಳೆಯರ ಅಹವಾಲುಗಳನ್ನು ಪರಿಶೀಲಿಸಿ, ಸ್ಥಳದಲ್ಲಿಯೇ ಪರಿಹಾರ ಕಲ್ಪಿಸಲಾಗುವುದು' ಎಂದು ಭರವಸೆ ನೀಡಿದರು.

'ಆಯೋಗವು ಮಹಿಳೆಯರ ಅಹವಾಲುಗಳ ಜೊತೆಗೆ ಸಮಾಜದಲ್ಲಿ ನಡೆಯುವ ಅಸಮಾನತೆ, ಅನ್ಯಾಯಗಳ ವಿರುದ್ಧ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಳ್ಳುತ್ತದೆ. ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ ಹೊಸ ಕಾನೂನು, ನೀತಿ ರೂಪಿಸುವಲ್ಲಿ ಆಯೋಗ ಮಹತ್ವದ ಪಾತ್ರ ವಹಿಸುತ್ತದೆ' ಎಂದರು.

ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯರಾದ ಡೆಲಿನಾ ಕಾಂಡು, ಮಮತಾ ಕುಮಾರಿ, ಅರ್ಚನಾ ಮುಜೆಂಡಾ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ, ಬೆಂಗಳೂರು ನಗರ ಪೊಲೀಸ್ ಕಮೀಷನರ್ ಸೀಮಾಂತ್ ಕುಮಾರ್ ಸಿಂಗ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶಮ್ಲಾ ಇಕ್ಬಾಲ್ ಉಪಸ್ಥಿತರಿದ್ದರು.

ಅಪಘಾತ: ಮಗ ಸಾವು, ತಂದೆಗೆ ಗಾಯ

ಮಾಗಡಿ: ಮಾಗಡಿ- ಹುಲಿಯೂರು ದುರ್ಗ ಮುಖ್ಯರಸ್ತೆ ಕೊಂಡಹಳ್ಳಿ ಗೇಟ್ ಸಮೀಪ ಸೋಮವಾರ ಚಾಲಕನ ನಿಯಂತ್ರಣ ಕಳೆದುಕೊಂಡ ಕಾರೊಂದು ಎದುರಿನಿಂದ ಬರುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದ್ದು, ಬೈಕ್ ಹಿಂಬದಿ ಕುಳಿತಿದ್ದ ಮಗ ಸ್ಥಳದಲ್ಲಿ ಮೃತಪಟ್ಟು, ತಂದೆ ಗಾಯಗೊಂಡಿದ್ದಾರೆ. ಕುಣಿಗಲ್ ತಾಲೂಕಿನ ನಾಗನಹಳ್ಳಿ ಗ್ರಾಮದ ಹರ್ಷ(14) ಸಾವಿಗೀಡಾದ ಬಾಲಕ. ಆತ ಮಾಗಡಿ ತಾಲ್ಲೂಕಿನ ದೋಣಕುಪ್ಪೆಯ ಸಿಎಂಎಸ್ ಮಾಡೆಲ್ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಎಂಟನೇ ತರಗತಿ ಓದುತ್ತಿದ್ದ.

ದೀಪಾವಳಿ: 2500 ವಿಶೇಷ ಬಸ್

ಮೆಜೆಸ್ಟಿಕ್, ಮೈಸೂರು ರಸ್ತೆ, ಶಾಂತಿನಗರದಿಂದ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾರಾಂತ್ಯ ಮತ್ತು ದೀಪಾವಳಿ ಒಟ್ಟಿಗೆ ಬಂದಿವೆ. ಈ ಸಮಯದಲ್ಲಿ ಊರಿಗೆ, ಪ್ರವಾಸಕ್ಕೆ ಹೋಗುವವರ ಸಂಖ್ಯೆ ಹೆಚ್ಚಲಿರುವುದರಿಂದ ಕೆಎಸ್‌ಆರ್‌ಟಿಸಿ 2,500 ವಿಶೇಷ ಬಸ್‌ಗಳನ್ನು ರಸ್ತೆಗಿಳಿಸಲು ನಿರ್ಧರಿಸಿದೆ.

ಅ.17ರಿಂದ ನ.20ರವರೆಗೆ ನಾಲ್ಕು ದಿನ ಬೆಂಗಳೂರಿನಿಂದ ವಿವಿಧ ಪ್ರದೇಶಗಳಿಗೆ ಹಾಗೂ ಅ.22 ಹಾಗೂ 26ರಂದು ವಿವಿಧೆಡೆಗಳಿಂದ ಬೆಂಗಳೂರಿಗೆ ವಿಶೇಷ ಸಾರಿಗೆ ಇರಲಿದೆ.

ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣ ಮತ್ತು ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣಗಳಿಂದ ಬಸ್‌ಗಳು ಸಂಚರಿಸಲಿವೆ. ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚುವರಿ ಬಸ್‌ಗಳಲ್ಲಿ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಸೌಲಭ್ಯ ಕಲ್ಪಿಸಲಾಗಿದೆ. ಪ್ರಯಾಣಿಕರು ಬಸ್ ನಿಲ್ದಾಣಗಳಿಗೆ ತೆರಳುವ ಮುನ್ನ ಮುಂಗಡ ಕಾಯ್ದಿರಿಸಲಾಗಿರುವ ಟಿಕೆಟ್‌ಗಳ ಮೇಲೆ ನಮೂದಿಸಲಾಗಿರುವ ಬಸ್ ನಿಲ್ದಾಣ, ಪಿಕ್‌ಅಪ್ ಪಾಯಿಂಟ್ ಮಾಹಿತಿ ಗಮನಿಸುವಂತೆ ಕೋರಲಾಗಿದೆ.

www.ksrtc.karnataka.gov.in ವೆಬ್‌ಸೈಟ್ ಮೂಲಕ ಇ-ಟಿಕೆಟ್ ಬುಕ್ ಮಾಡಬಹುದು. ನಾಲ್ಕು ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಕಾಯ್ದಿರಿಸಿದಲ್ಲಿ ಶೇ 5ರಷ್ಟು ರಿಯಾಯಿತಿ ಸಿಗಲಿದೆ.

ಹೋಗುವ ಮತ್ತು ಬರುವ ಪ್ರಯಾಣದ ಟಿಕೆಟ್ ಒಟ್ಟಿಗೆ ಕಾಯ್ದಿರಿಸಿದರೆ ವಾಪಸ್ಸಾಗುವ ದರದಲ್ಲಿ ಶೇ 10ರಷ್ಟು ರಿಯಾಯಿತಿ ಸಿಗಲಿದೆ ಎಂದು ಕೆಎಸ್‌ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರು ತಿಳಿಸಿದ್ದಾರೆ.

ಎಲ್ಲೆಲ್ಲಿಗೆ ಬಸ್ ಸೌಲಭ್ಯ?

ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ, ಹೊರರಾಜ್ಯಗಳ ಮದುರೈ, ಕುಂಭಕೋಣಂ, ಚೆನ್ನೈ, ಕೊಯಮತ್ತೂರ್, ತಿರುಚ್ಚಿ, ಪಾಲಕ್ಕಾಡ್, ತ್ರಿಶ್ಶೂರ್, ಎರ್ನಾಕುಲಂ, ಕೋಯಿಕ್ಕೋಡ್, ತಿರುಪತಿ, ವಿಜಯವಾಡ, ಹೈದರಾಬಾದ್ ಸಹಿತ ವಿವಿಧೆಡೆ ವಿಶೇಷ ಬಸ್‌ಗಳು ಸಂಚರಿಸಲಿವೆ.





ಪ್ರಧಾನಿ ನರೇಂದ್ರ ಮೋದಿ ಅವರನ್ನು ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌. ಯಡಿಯೂರಪ್ಪ ಅವರು ನವದೆಹಲಿಯಲ್ಲಿ ಸೋಮವಾರ ಭೇಟಿ ಮಾಡಿ ದೀಪಾವಳಿ ಹಬ್ಬದ ಶುಭಾಶಯ ತಿಳಿಸಿದರು

ಸಾವಿರಕ್ಕೂ ಅಧಿಕ ರೋಬೊಟಿಕ್ ಶಸ್ತ್ರಚಿಕಿತ್ಸೆ

ಬೆಂಗಳೂರು: 'ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಒಂದು ಸಾವಿರಕ್ಕೂ ಅಧಿಕ ರೋಬೊಟಿಕ್ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗಿದೆ. ಬಿಪಿಎಲ್ ಕುಟುಂಬದ ಸದಸ್ಯರಿಗೆ ಉಚಿತವಾಗಿ ಈ ಶಸ್ತ್ರಚಿಕಿತ್ಸೆಯನ್ನು ಮಾಡಲಾಗುತ್ತಿದೆ' ಎಂದು ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹಸಿನ್ ಹೇಳಿದರು.

ಸಂಸ್ಥೆಯ ಸ್ತ್ರೀರೋಗ ಗಂಥಿ ವಿಜ್ಞಾನ ವಿಭಾಗ ಮತ್ತು ಕರ್ನಾಟಕ ಸ್ಟೇಟ್ ಚಾಪ್ಟರ್ ಅಸೋಸಿಯೇಷನ್ ಆಫ್ ಗೈನಕಾಲಾಜಿಕ್ ಆಂಕಾಲಜಿಸ್ಟ್ ಆಫ್ ಇಂಡಿಯಾ ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡಿದ್ದ ರೋಬೊಟಿಕ್ ಶಸ್ತ್ರ-ಚಿಕಿತ್ಸೆ ಕಾರ್ಯಾಗಾರಕ್ಕೆ ಚಾಲನೆ ನೀಡಿ, ಮಾತನಾಡಿದರು.

'ಬೆಳಗಾವಿ, ತುಮಕೂರು, ರಾಯಚೂರು ಸೇರಿದಂತೆ ರಾಜ್ಯದ ಹಲವೆಡೆ ಪೆರಿಫೆರಲ್ ಕ್ಯಾನ್ಸರ್ ಘಟಕಗಳನ್ನು ತೆರೆಯಲಾಗುತ್ತಿದೆ' ಎಂದರು.

ಸಂಸ್ಥೆ ನಿರ್ದೇಶಕ ಡಾ.ಟಿ. ನವೀನ್, ಸ್ತ್ರೀರೋಗ ಗಂಥಿ ವಿಜ್ಞಾನ ವಿಭಾಗದ ಮುಖ್ಯಸ್ಥೆ ಡಾ.ಕೆ.ಶೋಭಾ ಹಾಜರಿದ್ದರು.



ಕೊಡಗು ಎಫ್‌ಸಿಯ ಲಾಲ್‌ಕ್ರಾಸ್ಮಾವಿಯಾ (ಬಲ) ಮತ್ತು ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ಆಟಗಾರ ಚೆಂಡಿಗಾಗಿ ಸೆಣಸಾಟ ನಡೆಸಿದರು

ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ

ಕೊಡಗು ಎಫ್‌ಸಿ ತಂಡಕ್ಕೆ ಜಯ

ಬೆಂಗಳೂರು: ಸಾಂಘಿಕ ಪ್ರದರ್ಶನ ನೀಡಿದ ಕೊಡಗು ಎಫ್‌ಸಿ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 6–0ಯಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಮತ್ತೊಂದು ಪಂದ್ಯದಲ್ಲಿ ಸೌತ್ ಯುನೈಟೆಡ್ ಎಫ್‌ಸಿ ತಂಡವು 4–1ರಿಂದ ಭಾರತ್ ಬೆಂಗಳೂರು ತಂಡವನ್ನು ಸೋಲಿಸಿತು. ಇನ್ನೊಂದು ಪಂದ್ಯದಲ್ಲಿ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವು 4–2ರಿಂದ ಎಚ್‌ಎಎಲ್ ತಂಡವನ್ನು ಮಣಿಸಿತು.

'ಸುಸ್ಥಿರ ಸಮಾಜಕ್ಕೆ ಸರ್ವರಿಗೂ ಶಿಕ್ಷಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ವರ್ಗದ ಜನರಿಗೆ ಶಿಕ್ಷಣ ಖಾತ್ರಿಯಾದಾಗ ಸುಸ್ಥಿರ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಶಿರಸಿ ಶಾಸಕ ಭೀಮಣ್ಣ ನಾಯ್ಕ ಹೇಳಿದರು.


ಮೆಂಡಾ ಫೌಂಡೇಷನ್, ಸೆಲ್ಕೊ ಸೋಲಾರ್ ಹಮ್ಮಿಕೊಂಡಿದ್ದ 'ಶಿಕ್ಷಣ ಮತ್ತು ಸುಸ್ಥಿರತೆ' ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಮೆಂಡಾ ಫೌಂಡೇಷನ್ ಹಾಗೂ ಸೆಲ್ಕೊ ಸೋಲಾರ ಸಂಸ್ಥೆಗಳ ಕಾರ್ಯ ಮಾದರಿಯಾಗಿದೆ. ಅದೇ ರೀತಿ ಸ್ವಯಂ ಸೇವಾ ಸಂಸ್ಥೆಗಳು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳಬೇಕು ಎಂದರು.

ಕೇಂದ್ರ, ರಾಜ್ಯ ಸರ್ಕಾರಗಳು, ಮಠಗಳು, ಮಿಷನರಿಗಳು ಶಿಕ್ಷಣಕ್ಕೆ ಸಾಕಷ್ಟು ಆದ್ಯತೆ ನೀಡಿದರೂ ದೇಶದಲ್ಲಿ ಸಂಪೂರ್ಣ ಸಾಕ್ಷರತೆ ಸಾಧ್ಯವಾಗಿಲ್ಲ. ಈ ಕುರಿತು ಸಾಕಷ್ಟು ಅಧ್ಯಯನ, ಚರ್ಚೆಯ ಅಗತ್ಯವಿದೆ. ನಗರ ಪ್ರದೇಶಗಳ ಶಾಲೆಗಳಿಗೆ ಇರುವ ಸೌಕರ್ಯ ಗ್ರಾಮೀಣ ಶಾಲೆಗಳಲ್ಲೂ ಸಿಗಬೇಕು. ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು, ಶಾಸಕರು, ಸಂಸದರು ಶಾಲೆಗಳನ್ನು ದತ್ತುಪಡೆದು ಅಭಿವೃದ್ಧಿ ಮಾಡಬೇಕು ಎಂದು ಸಲಹೆ ನೀಡಿದರು.

ಸೆಲ್ಕೊ ಸಿಇಒ ಮೋಹನ ಭಾಸ್ಕರ ಹೆಗಡೆ, ಉಪ ಪ್ರಧಾನ ವ್ಯವಸ್ಥಾಪಕರಾದ ಗುರುಪ್ರಸಾದ್ ಶೆಟ್ಟಿ, ಸುದೀಪ್ತ ಘೋಷ್, ಶೇಖರ ಶೆಟ್ಟಿ, ಸಂಹಿತಾ ಭಟ್ಟಾಚಾರ್ಯ, ಪ್ರದ್ಯುಮ್ನ ಉಪಾಧ್ಯಾಯ, ಮುಖ್ಯ ವ್ಯವಸ್ಥಾಪಕ ಪಾರ್ಥಸಾರಥಿ, ಶಿಕ್ಷಣ ತಜ್ಞರಾದ ವಸಂತ ಕುಮಾರ್ ಶೆಟ್ಟಿ, ನಾಗರತ್ನಾ, ಗಣಪತಿ ಹೆಗಡೆ, ಸಹನಾ ಹೆಗಡೆ ಉಪಸ್ಥಿತರಿದ್ದರು.



ವಿಚಾರ ಸಂಕಿರಣದಲ್ಲಿ ಸಂಹಿತಾ ಭಟ್ಟಾಚಾರ್ಯ, ವಸಂತಕುಮಾರ್ ಶೆಟ್ಟಿ, ಭೀಮಣ್ಣ ನಾಯ್ಕ, ಮೋಹನ್ ಭಾಸ್ಕರ್ ಹೆಗಡೆ, ಗುರುಪ್ರಸಾದ್ ಶೆಟ್ಟಿ ಭಾಗವಹಿಸಿದ್ದರು.



ಜೈನ್ ಹೆರಿಟೇಜ್ ಶಾಲಾ ತಂಡವು ಕೆಎಸ್‌ಸಿಎ 16 ವರ್ಷದೊಳಗಿನ (ಐ ಡಿವಿಷನ್) ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಕೆ.ಎಂ. ರಾಮಪ್ರಸಾದ್ ಶೀಲ್ಡ್ ಗೆದ್ದುಕೊಂಡಿತು. (ಮೊದಲ ಸಾಲು) ಎಡದಿಂದ; ದಕ್ಷ್ ಜೆ.ಎನ್, ಅರ್ನವ್ ಅನಿಲ್, ನಕುಲ್ ದೇವ್ ಶೆಟ್ಟಿ ಕೆ, ವಿಧತ್ ಎಸ್, ವಂಶ್ ಪ್ರತಾಪ್ ಸಿಂಗ್, ಸಿದ್ಧಾರ್ಥ್ ಕೈಲಾಶ್ ಗಾಯಕವಾಡ, ವೈಭವ್ ರಾಮ್ ಕೆ, ಶಿವಂ ಯೋಗೇಶ್ ಮೆಹರೆ, ರಿಷಬ್ ಹಿರೇಮಠ. (ಎರಡನೇ ಸಾಲು) ಶ್ರೇಹಾನ್ ಚವ್ಹಾಣ್, ಆರ್ಯ ರಾಜ್, ಸಾಮ್ರಾಟ್ ಆದಿತ್ಯ ಪಿ, ಓಂ ಜುಮಾನಿ, ಸಾತ್ವಿಕ್ ಡಿ, ಆರ್ಯಸಿಂಹ ನರೇಂದ್ರಸಿಂಗ್ ಚಾವ್ಡಾ, ನಿಯಂತ ಸಂತೋಷ್ ಕುಲಕರ್ಣಿ, ರವಿಪತಿ ಉದಯ್ ವೇಣುಗೋಪಾಲ್ ಚೌಧರಿ. (ಕುಳಿತವರು) ಚಿರಂಜೀವಿ (ಕೋಚ್), ಆದಿತ್ಯ ಝಾ (ನಾಯಕ), ಅರ್ಚನಾ ವಿಶ್ವನಾಥ್ (ನಿರ್ದೇಶಕಿ), ಜಾಲಿ ಜೋಸೆಫ್ (ಪ್ರಾಂಶುಪಾಲರು), ಕೃಷ್ಣ (ಕ್ರೀಡಾ ಸಲಹೆಗಾರ), ಅರುಣ್ ರೆಡ್ಡಿ (ಕ್ರೀಡಾ ಸಂಯೋಜಕ).

ವೃಂದಾ ದಿನೇಶ್ ಅಜೇಯ ಶತಕ ಕರ್ನಾಟಕಕ್ಕೆ ಸುಲಭ ಗೆಲುವು

ಬೆಂಗಳೂರು: ವೃಂದಾ ದಿನೇಶ್ (ಔಟಾಗದೇ 118;58ಎ) ಅವರ ಅಮೋಘ ಶತಕದ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ ಸೀನಿಯರ್ ಮಹಿಳೆಯರ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಸೋಮವಾರ 65 ರನ್‌ಗಳಿಂದ ಹರಿಯಾಣ ತಂಡವನ್ನು ಮಣಿಸಿತು.

ಗ್ವಾಲಿಯರ್‌ನ ಕ್ಯಾಪ್ಟನ್ ರೂಪ್ ಸಿಂಗ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲ ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡ 20 ಓವರ್‌ಗಳಲ್ಲಿ ಮೂರು ವಿಕೆಟ್‌ಗೆ 187 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಹರಿಯಾಣ ತಂಡ 8 ವಿಕೆಟ್‌ಗೆ 123 ರನ್ ಗಳಿಸಲಷ್ಟೇ ಶಕ್ತವಾಯಿತು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 20 ಓವರ್‌ಗಳಲ್ಲಿ 3 ವಿಕೆಟ್‌ಗೆ 187 (ಶಿಶಿರಾ ಎ ಗೌಡ 20, ವೃಂದಾ ದಿನೇಶ್ ಔಟಾಗದೇ 118, ನಿಕಿ ಪ್ರಸಾದ್ 34). **ಹರಿಯಾಣ:** 20 ಓವರ್‌ಗಳಲ್ಲಿ 8 ವಿಕೆಟ್‌ಗೆ 123. (ದೀಯಾ ಯಾದವ್ 60; ರಾಜೇಶ್ವರಿ ಗಾಯಕವಾಡ್ 23ಕ್ಕೆ 3, ಸಹನಾ ಎಸ್. ಪವಾರ್ 26ಕ್ಕೆ 3). **ಫಲಿತಾಂಶ:** ಕರ್ನಾಟಕಕ್ಕೆ 65 ರನ್‌ಗಳ ಜಯ



ವೃಂದಾ ದಿನೇಶ್



ಪೊಲೀಸ್ ಧ್ವಜದೊಂದಿಗೆ (ಎಡದಿಂದ) ಬಸವರಾಜ್ ಪಾಸ್ಚಪುರ, ಅಮ್ಜಾ ಹುಸೇನ್ (ಕರ್ನಾಟಕ ರಾಜ್ಯ ಪೊಲೀಸ್ ತಂಡದ ವ್ಯವಸ್ಥಾಪಕ ಕಮಾಂಡೆಂಟ್) ಮತ್ತು ಗಿರೀಶ್ ಟಿ.ಎಸ್‌.

ಪೆಂಕಾಕ್ ಸಿಲಾಟ್: ರಾಜ್ಯ ಪೊಲೀಸರಿಗೆ ಬೆಳ್ಳಿ ಪದಕ

ಬೆಂಗಳೂರು: ಕರ್ನಾಟಕದ ಪೊಲೀಸ್ ತಂಡವನ್ನು ಪ್ರತಿನಿಧಿಸಿದ್ದ ಬಸವರಾಜ್ ಪಾಶ್ಚಾಪುರ ಮತ್ತು ಗಿರೀಶ್ ಟಿ.ಎಸ್. ಅವರು ಜಮ್ಮು ಕಾಶ್ಮೀರದ ಶ್ರೀನಗರದ ಶೇರ್ ಐ. ಕಾಶ್ಮೀರ ಒಳಾಂಗಣ ಕ್ರೀಡಾಂಗಣದಲ್ಲಿ ಈಚೆಗೆ ನಡೆದ 10ನೇ ಅಖಿಲ ಭಾರತೀಯ ಪೊಲೀಸ್ ಜೂಡೊ ಕ್ಲಸ್ಟರ್ -2025ರ ಪೆಂಕಾಕ್ ಸಿಲಾಟ್ ಕ್ರೀಡೆಯಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ.

ಬಸವರಾಜ್ ಅವರು ಬೆಂಗಳೂರಿನ ಐಎಸ್‌ಡಿ ಪೊಲೀಸ್ ಇನ್‌ಸ್ಪೆಕ್ಟರ್ ಆಗಿ ಮತ್ತು ಗಿರೀಶ್ ಅವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೆಡ್ ಕಾನ್‌ಸ್ಟೆಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

‘ಸಮೀಕ್ಷೆ: ಪ್ರಮಾಣಪತ್ರ ಸಲ್ಲಿಕೆ’

ಈಗಾಗಲೇ ಸಲ್ಲಿಕೆ: ಕೋರ್ಟ್‌ಗೆ ರಾಜ್ಯ ಸರ್ಕಾರ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಸಂಗ್ರಹಿಸಲಾಗುತ್ತಿರುವ ದತ್ತಾಂಶ ಸಂರಕ್ಷಣೆಯನ್ನು ಹೇಗೆ ಮಾಡಲಾಗುತ್ತಿದೆ ಎಂಬುದರ ವಿವರಗಳನ್ನು ವಿಸ್ತೃತ ಪ್ರಮಾಣಪತ್ರದ ಮೂಲಕ ಕೋರ್ಟ್‌ಗೆ ಈಗಾಗಲೇ ಸಲ್ಲಿಸಲಾಗಿದೆ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಕಾಯ್ದೆ–1995ರ ಕಲಂ 9ಕ್ಕೆ ತರಲಾಗಿರುವ ತಿದ್ದುಪಡಿ ರದ್ದುಗೊಳಿಸುವಂತೆ ಕೋರಿ ಎಚ್.ಕಾಂತರಾಜ ಸಮಿತಿ ವರದಿಯನ್ನು ಆಕ್ಷೇಪಿಸಿ ಬೀದರ್‌ನ ಶಿವರಾಜ್ ಕಣಶೆಟ್ಟಿ ಮತ್ತಿತರರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ‘ಸಮಾಜ ಸಂಪರ್ಕ ವೇದಿಕೆ’ ಪರ ಹಾಜರಿದ್ದ ಹೈಕೋರ್ಟ್ ವಕೀಲ ಕೆ.ಅಭಿಷೇಕ್, ‘ಕಳೆದ ಸೆಪ್ಟೆಂಬರ್ 25ರಂದು ನಡೆದ ವಿಚಾರಣೆ ವೇಳೆ ನ್ಯಾಯಪೀಠ, ಸಮೀಕ್ಷೆ ಮುಂದುವರಿಕೆಗೆ ಅನುಮತಿಸಿತ್ತು. ಸಂಗ್ರಹಿಸಲಾಗುವ ದತ್ತಾಂಶಗಳ ಸಂರಕ್ಷಣೆಯ ಕುರಿತು ಪ್ರಮಾಣಪತ್ರ ಸಲ್ಲಿಸಬೇಕು ಎಂದು ಆಯೋಗಕ್ಕೆ ನಿರ್ದೇಶಿಸಿತ್ತು. ಆದರೆ, ಈತನಕ ಸರ್ಕಾರ ಪ್ರಮಾಣಪತ್ರ ಸಲ್ಲಿಸಿಲ್ಲ ಅಥವಾ ಅದರ ಪ್ರತಿಯನ್ನು ನಮಗೆ ಒದಗಿಸಿಲ್ಲ’ ಎಂದು ಆಕ್ಷೇಪಿಸಿದರು.

‘ಇದಕ್ಕೆ ನ್ಯಾಯಪೀಠ, ‘ಪ್ರಮಾಣಪತ್ರ ಸಲ್ಲಿಸಲು ಆಯೋಗಕ್ಕೆ ಒಂದು ವಾರ ಕಾಲಾವಕಾಶ ನೀಡಲಾಗಿತ್ತಲ್ಲವೇ? ಪರಿಶೀಲನೆ ನಡೆಸಿ. ಒಂದು ವೇಳೆ ಸಲ್ಲಿಕೆ ಆಗದಿದ್ದರೆ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿ’ ಎಂದು ಅಭಿಷೇಕ್ ಅವರಿಗೆ ಸೂಚಿಸಿತು.

ವಿಡಿಯೊ ಕಾನ್ಫರೆನ್ಸ್ ಮುಖಾಂತರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು, ‘ಪ್ರಮಾಣ ಪತ್ರ ಸಲ್ಲಿಸಲು ಆಯೋಗಕ್ಕೆ ಹೈಕೋರ್ಟ್ ಒಂದು ದಿನ ಕಾಲಾವಕಾಶ ನೀಡಿತ್ತು, ಅದರಂತೆ ಪ್ರಮಾಣಪತ್ರ ಸಲ್ಲಿಸಲಾಗಿದೆ. ಅದರ ಪ್ರತಿಯನ್ನು ಅರ್ಜಿದಾರರಿಗೆ ಒದಗಿಸಲಾಗುವುದು’ ಎಂದರು.

ಏತನ್ಮಧ್ಯೆ, ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರು, ‘ಹಾಲಿ ಸಮೀಕ್ಷೆಯನ್ನು ಪ್ರಶ್ನಿಸಲಾದ ಅರ್ಜಿಗಳ ವಿಚಾರಣೆಯನ್ನು ಡಿಸೆಂಬರ್ 5ಕ್ಕೆ ನಿಗದಿಪಡಿಸಲಾಗಿದೆ. ಅಂದೇ ಈ ಅರ್ಜಿಗಳನ್ನೂ ವಿಚಾರಣೆಗೆ ನಿಗದಿಪಡಿಸಬಹುದು’ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಅರ್ಜಿಗಳ ವಿಚಾರಣೆಯನ್ನು ಡಿಸೆಂಬರ್ 5ಕ್ಕೆ ಮುಂದೂಡಿತು.

‘ತಿಮರೋಡಿ ಏನೆಂಬುದು ಜನಕ್ಕೆ ಗೊತ್ತಿದೆ’

‘ಮಹೇಶ್ ಶೆಟ್ಟಿ ತಿಮರೋಡಿ ಅವರನ್ನು ಗಡಿಪಾರು ಮಾಡಿ ಹೊರಡಿಸಲಾಗಿರುವ ಆದೇಶದಲ್ಲಿ ಯಾವುದೇ ಕಾನೂನು ಪ್ರಕ್ರಿಯೆ ಲೋಪ ಆಗಿಲ್ಲ. ಸೌಜನ್ಯ ಚಳವಳಿ ಹೆಸರಲ್ಲಿ ಅವರು ಏನು ಮಾಡುತ್ತಿದ್ದಾರೆ ಎಂಬುದು ಸಾರ್ವಜನಿಕರಿಗೆ ಗೊತ್ತಿದೆ’ ಎಂದು ಅಡ್ವೊಕೇಟ್ ಜನರಲ್ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದರು.

ತಮ್ಮನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ಒಂದು ವರ್ಷದ ಅವಧಿಗೆ ಗಡಿಪಾರು ಮಾಡಿ ಪುತ್ತೂರು ಉಪ ವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್ ಹೊರಡಿಸಿರುವ ಆದೇಶ ಪ್ರಶ್ನಿಸಿ ಮಹೇಶ್ ಶೆಟ್ಟಿ ತಿಮರೋಡಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ತಿಮರೋಡಿ ಪರ ಪದಾಂಕಿತ ಹಿರಿಯ ವಕೀಲ ತಾರಾನಾಥ ಪೂಜಾರಿ, ‘ನಮ್ಮ ಅರ್ಜಿದಾರರ ವಿರುದ್ಧ ಹೊರಡಿಸಲಾಗಿರುವ ಆದೇಶದಲ್ಲಿ ವ್ಯಾಪಕ ಕಾನೂನು ಪ್ರಕ್ರಿಯೆ ಲೋಪ ಆಗಿದೆ’ ಎಂದು ಆರೋಪಿಸಿದರು.

‘ರಾಜ್ಯ ಸರ್ಕಾರ ಮತ್ತು ಗೃಹ ಇಲಾಖೆ ತಿಮರೋಡಿ ವಿರುದ್ಧ ದ್ವೇಷ ಭಾವನೆ ಹೊಂದಿದೆ. ಅವರ ವಿರುದ್ಧ ಕ್ರಿಮಿನಲ್ ಪ್ರಕರಣಗಳು ಬಾಕಿ ಇವೆ ಎಂಬುದರ ಕುರಿತಾದ ಯಾವುದೇ ವಿವರಗಳನ್ನು ಸಮರ್ಪಕವಾಗಿ ಒದಗಿಸಿಲ್ಲ. ಈಗಾಗಲೇ ಸುಮಾರು 10 ಪ್ರಕರಣಗಳಲ್ಲಿ ಅವರ ವಿರುದ್ಧ ತನಿಖಾಧಿಕಾರಿಗಳು ಬಿ ಅಂತಿಮ ವರದಿ ಸಲ್ಲಿಸಿದ್ದಾರೆ. ಅವರು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ದೊಂಬಿ ಮಾಡಿ ಗಲಾಟೆ ನಡೆಸುವ ಸಾಧ್ಯತೆ ಇರುತ್ತದೆ ಎಂದಿದ್ದಾರೆ. ಆದರೆ, ಇದಕ್ಕೆ ಸಾಕ್ಷ್ಯಗಳೇ ಇಲ್ಲ’ ಎಂದು ಆಕ್ಷೇಪಿಸಿದರು. ಇದನ್ನು ಬಲವಾಗಿ ಅಲ್ಲಗಳೆದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ‘ಅರ್ಜಿದಾರರ ಪರ ವಕೀಲರು ನ್ಯಾಯಾಲಯಕ್ಕೆ ಹೇಳುತ್ತಿರುವ ವಿವರಗಳು ಸರಿಯಿಲ್ಲ. ಸ್ಥಳೀಯ ನಿವಾಸಿಯಾಗಿರುವ ಮಹೇಶ್ ಶೆಟ್ಟಿ ತಿಮರೋಡಿ ಸೌಜನ್ಯ ಚಳವಳಿ ಹೆಸರಲ್ಲಿ ಏನು ಮಾಡುತ್ತಿದ್ದಾರೆ ಎಂಬುದು ಸಾರ್ವಜನಿಕರಿಗೆ ಗೊತ್ತಿದೆ. ಸರ್ಕಾರ ಸಹಜ ನ್ಯಾಯತತ್ವಕ್ಕೆ ವಿರುದ್ಧವಾಗಿ ನಡೆದುಕೊಂಡಿಲ್ಲ’ ಎಂದು ವಿವರಿಸಿದರು.

ಸುದೀರ್ಘ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಆದೇಶ ಕಾಯ್ದಿರಿಸುವುದಾಗಿ ತಿಳಿಸಿತು. ಅಂತೆಯೇ, ಗಡಿಪಾರು ಆದೇಶಕ್ಕೆ ಸಂಬಂಧಿಸಿದಂತೆ ತಿಮರೋಡಿ ವಿರುದ್ಧ ಆತುರದ ಕ್ರಮ ಜರುಗಿಸದಂತೆ ಈ ಹಿಂದೆ ಹೊರಡಿಸಿದ್ದ ಮಧ್ಯಂತರ ಆದೇಶವನ್ನು ವಿಸ್ತರಿಸಿತು.





ಶಾಸಕ ವೀರೇಂದ್ರ ಬಂಧನ: ಕಾಯ್ದಿರಿಸಿದ ಆದೇಶ

ಬೆಂಗಳೂರು: ‘ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ ಅವರನ್ನು ಅಕ್ರಮ ಹಣ ವರ್ಗಾವಣೆ ಕಾಯ್ದೆ ಅಡಿ ಬಂಧಿಸುವ ದಿನ ಅವರ ವಿರುದ್ಧ ಯಾವುದೇ ಎಫ್ಐಆರ್ ವಿಚಾರಣೆಗೆ ಬಾಕಿ ಇರಲಿಲ್ಲ. ಆದಾಗ್ಯೂ, ಅವರನ್ನು ಕಾನೂನು ಮೀರಿ ಜಾರಿ ನಿರ್ದೇಶನಾಲಯವು (ಇ.ಡಿ) ಬಂಧಿಸಿದೆ’ ಎಂದು ವೀರೇಂದ್ರ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

‘ವೀರೇಂದ್ರ ಬಂಧನವನ್ನು ಅಕ್ರಮ ಎಂದು ಘೋಷಿಸಬೇಕು’ ಎಂದು ಕೋರಿ ಅವರ ಪತ್ನಿ ಆರ್.ಡಿ.ಚೈತ್ರಾ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪೂರ್ಣಗೊಳಿಸಿ ಆದೇಶ ಕಾಯ್ದಿರಿಸಿತು.

ವಿಚಾರಣೆ ವೇಳೆ ವೀರೇಂದ್ರ ಪರ ಸುಪ್ರೀಂ ಕೋರ್ಟ್ ಪದಾಂಕಿತ ಹಿರಿಯ ವಕೀಲ ಸಿದ್ಧಾರ್ಥ ದವೆ, ‘ವೀರೇಂದ್ರ ಅವರನ್ನು ಬಂಧಿಸುವಾಗ ಇ.ಡಿ ನಂಬಲರ್ಹ ಕಾರಣಗಳನ್ನೇ ನೀಡಿಲ್ಲ. ಪ್ರತ್ಯೇಕವಾಗಿ ಪ್ರಕರಣ ದಾಖಲಿಸಿ, ಪಿಎಂಎಲ್ಎ (ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ–2002) ಕಲಂ 50ರ ಅಡಿ ನೋಟಿಸ್ ನೀಡಿ ಪ್ರತಿಕ್ರಿಯೆ ದಾಖಲಿಸಿಕೊಂಡು ಕಾನೂನು ಪ್ರಕಾರ ಮುಂದುವರಿಯಬೇಕಿತ್ತು. ಆದರೆ, ಇಲ್ಲಿ ಅದ್ಯಾವುದನ್ನೂ ಮಾಡದ ತನಿಖಾ ಸಂಸ್ಥೆ ಸ್ವೇಚ್ಛೆಯಿಂದ ನಡೆದುಕೊಂಡಿದೆ’ ಎಂದು ಆಕ್ಷೇಪಿಸಿದರು.

‘ಇದನ್ನು ಆಕ್ಷೇಪಿಸಿದ ಇ.ಡಿ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, ‘ವೀರೇಂದ್ರ ಅವರನ್ನು ವಿಸ್ತೃತ ತನಿಖೆಯ ಬಳಿಕವೇ ಬಂಧಿಸಲಾಗಿದೆ. ಬಂಧಿಸುವುದಕ್ಕೂ ಮುನ್ನ ಅವರಿಗೆ ಸಂಬಂಧಿತ ಕಾರಣಗಳನ್ನು ನೀಡಲಾಗಿದೆ. ಆಕ್ಷೇಪಣೆಯಲ್ಲಿ ಅವರು ಎಂದೂ ಕಥಾನಾಯಕ ಎಂಬುದನ್ನು ವಿವರವಾಗಿ ತಿಳಿಸಲಾಗಿದೆ. ಭಾರತದಲ್ಲಿ ಹಣ ಸಂಗ್ರಹಿಸಿ ಕ್ಯಾಸಿನೊ ಆರಂಭಿಸಲು ಅದನ್ನು ವಿದೇಶಕ್ಕೆ ರವಾನಿಸಿರುವುದು ಅವರ ಅಪರಾಧ ಪ್ರಕ್ರಿಯೆಯಾಗಿದೆ’ ಎಂದರು. ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಆದೇಶ ಕಾಯ್ದಿರಿಸುವುದಾಗಿ ತಿಳಿಸಿತು.

ನೇಮಕಾತಿ: ವಿವರ ಒದಗಿಸಲು ಹೈಕೋರ್ಟ್ ನಿರ್ದೇಶನ

‘ಆರೋಗ್ಯ ಕವಚ–108 ಸೇವೆ’ ಯೋಜನೆಯಡಿ ಹೊರಗುತ್ತಿಗೆ ಚಾಲಕರು (ಪೈಲಟ್) ಹಾಗೂ ತುರ್ತು ಚಿಕಿತ್ಸಾ ತಂತ್ರಜ್ಞರನ್ನು (ಇಎಂಟಿ) ನೇಮಕ ಮಾಡಿಕೊಳ್ಳುವ ತನಕ ಈವರೆಗೆ ಸೇವೆ ಸಲ್ಲಿಸಿದ ಸಿಬ್ಬಂದಿಯನ್ನೇ ಮುಂದುವರಿಸುವಂತಿಲ್ಲವೇ’ ಎಂದು ರಾಜ್ಯ ಸರ್ಕಾರವನ್ನು ಪ್ರಶ್ನಿಸಿರುವ ಹೈಕೋರ್ಟ್, ‘ಯಾವ್ಯಾವ ಜಿಲ್ಲೆಗಳಲ್ಲಿ ನೇಮಕಾತಿ ಪ್ರಕ್ರಿಯೆ ನಡೆದಿದೆ ಎಂಬುದರ ಬಗ್ಗೆ ಎರಡು ದಿನಗಳಲ್ಲಿ ಮಾಹಿತಿ ನೀಡಿ’ ಎಂದು ನಿರ್ದೇಶಿಸಿದೆ.

ಈ ಸಂಬಂಧ ‘ಅಖಿಲ ಕರ್ನಾಟಕ 108 ಆ್ಯಂಬುಲೆನ್ಸ್ ನೌಕರರ ಹಿತರಕ್ಷಣಾ ಸಂಘ’ದ ಪ್ರಧಾನ ಕಾರ್ಯದರ್ಶಿ ಮತ್ತಿತರರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ಏಕಸದಸ್ಯ ಪೀಠ ಸೋಮವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಅಭಿತ್ಯ ಸೋಂಧಿ, ‘ಈ ಹಿಂದಿನ ಒಪ್ಪಂದ ರದ್ದುಪಡಿಸಿ ಹೊಸ ನೇಮಕಾತಿಗೆ ಸರ್ಕಾರ ಮುಂದಾಗಿದೆ. ಸೇವಾ ಭದ್ರತೆ ಮತ್ತು ಮಾನವೀಯ ದೃಷ್ಟಿಯಿಂದ ಈ ಪ್ರಕರಣವನ್ನು ಪರಿಗಣಿಸಿ, ಬಾಕಿ ವಿಷಯಗಳು ಇತ್ಯರ್ಥವಾಗುವ ತನಕ ನೇಮಕಾತಿ ಅಧಿಸೂಚನೆಗೆ ತಡೆ ನೀಡಬೇಕು’ ಎಂದು ಕೋರಿದರು.

‘ಇದನ್ನು ಆಕ್ಷೇಪಿಸಿದ ಸರ್ಕಾರದ ಪರ ವಕೀಲರು, ‘ಜಿಲ್ಲಾವಾರು ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ಅವರನ್ನೇ ಮುಂದುವರಿಸುವುದಾಗಿ ಸಾರಾಸಗಟು ಭರವಸೆ ನೀಡಲು ಬರುವುದಿಲ್ಲ. ಏಕೆಂದರೆ, ಈಗ ಸೇವೆಯಲ್ಲಿದ್ದವರು ಜಿವಿಕೆ–ಇಎಂಆರ್ಐ ಸಂಸ್ಥೆಯ ಸಿಬ್ಬಂದಿ’ ಎಂದು ವಿವರಿಸಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಈವರೆಗೆ ಯಾವ್ಯಾವ ಜಿಲ್ಲೆಗಳಲ್ಲಿ ನೇಮಕಾತಿ ಪ್ರಕ್ರಿಯೆ ಆಗಿದೆ ಎಂಬ ಬಗ್ಗೆ ಮಾಹಿತಿ ನೀಡಿ’ ಎಂದು ನಿರ್ದೇಶಿಸಿ ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಿತು.


ಸುದ್ದಿ 2 ನಿಮಿಷ

ಮನೆಗೆ ಮರಳಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ

ಬೆಂಗಳೂರು: ಆರೋಗ್ಯ ಸಮಸ್ಯೆಯಿಂದ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಗುಣಮುಖರಾಗಿದ್ದು, ಮನೆಗೆ ಸೋಮವಾರ ಮರಳಿದರು.

‘ಸೂಕ್ತ ಚಿಕಿತ್ಸೆಯಿಂದ, ದೇವರ ಮತ್ತು ಜನರ ಆಶೀರ್ವಾದದಿಂದ ದೇವೇಗೌಡರು ಗುಣಮುಖರಾಗಿದ್ದಾರೆ. ಹದಿನೈದು ದಿನ ಸಂಪೂರ್ಣ ವಿಶ್ರಾಂತಿಗೆ ವೈದ್ಯರು ಸಲಹೆ ನೀಡಿದ್ದಾರೆ. ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಸಹಕರಿಸಬೇಕು’ ಎಂದು ಅವರ ಪುತ್ರ, ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಪದ್ಮನಾಭನಗರದಲ್ಲಿರುವ ದೇವೇಗೌಡರ ಮನೆಗೆ ಭೇಟಿ ನೀಡಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಶಾಸಕರಾದ ಮುನಿರತ್ನ, ಸತೀಶ ರೆಡ್ಡಿ, ಸಿ.ಟಿ. ರವಿ ಅವರು ಆರೋಗ್ಯ ವಿಚಾರಿಸಿದರು.



200 ಹೆಚ್ಚುವರಿ ವೈದ್ಯಕೀಯ ಸೀಟು ಲಭ್ಯ

ಬೆಂಗಳೂರು: ವೈದ್ಯಕೀಯ ಕೌನ್ಸೆಲಿಂಗ್ ಸಮಿತಿ (ಎಂಸಿಸಿ) ರಾಜ್ಯದ ನಾಲ್ಕು ಖಾಸಗಿ ಕಾಲೇಜುಗಳಿಗೆ ತಲಾ 50 ಹೆಚ್ಚುವರಿ ಸೀಟು ಮಂಜೂರು ಮಾಡಿದೆ. ಹೊಸದಾಗಿ ಲಭಿಸಿದ ಎಲ್ಲ 200 ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮೂರನೇ ಸುತ್ತಿನ ಸೀಟು ಹಂಚಿಕೆಗೆ ಪರಿಗಣಿಸಿದೆ.

ಆಪ್ಷನ್ಸ್ ನಮೂದಿಸಲು ಅ.15ರ ಬೆಳಿಗ್ಗೆ 8ರವರೆಗೆ ಅವಕಾಶ ನೀಡಿದೆ. ಶಿವಮೊಗ್ಗದ ಸುಬ್ಬಯ್ಯ, ಬೆಂಗಳೂರಿನ ಬಿಜಿಎಸ್, ತುಮಕೂರಿನ ಶ್ರೀದೇವಿ, ಮಂಗಳೂರಿನ ಎ.ಜೆ. ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚುವರಿ ಸೀಟು ಲಭಿಸಿದೆ. ಹೆಚ್ಚುವರಿ ಸೀಟುಗಳೂ ಸೇರಿ 3ನೇ ಸುತ್ತಿಗೆ 377 ವೈದ್ಯಕೀಯ ಸೀಟುಗಳು ಲಭ್ಯವಿದ್ದು, ಒಟ್ಟಾರೆ ಪ್ರಸಕ್ತ ಸಾಲಿನಲ್ಲಿ 10,216 ವೈದ್ಯಕೀಯ ಸೀಟುಗಳು ಸಿಕ್ಕಿವೆ.

ಮೊದಲ ಮತ್ತು ಎರಡನೇ ಸುತ್ತಿನಲ್ಲಿ ವೈದ್ಯಕೀಯ ಸೀಟು ಹಂಚಿಕೆಯಾಗಿ ಕಾಲೇಜುಗಳಿಗೆ ವರದಿ ಮಾಡಿಕೊಂಡವರು ನಾಲ್ಕು ಕಾಲೇಜುಗಳ ಹೆಚ್ಚುವರಿ ಸೀಟು ಹಂಚಿಕೆಯಲ್ಲಿ ಭಾಗವಹಿಸಬಹುದು. ಅ.15ರ ಬೆಳಿಗ್ಗೆ 11ರಿಂದ ಅ.16ರ ಬೆಳಿಗ್ಗೆ 8ರವರೆಗೆ ಆಪ್ಷನ್ಸ್ ದಾಖಲಿಸಬಹುದು. ಮುಂಗಡ ಶುಲ್ಕ ಪಾವತಿಸುವ ಅಗತ್ಯವಿಲ್ಲ. ಆದರೆ, ಯಾರಿಗೆ ಸೀಟು ಹಂಚಿಕೆಯಾಗಿಲ್ಲವೊ ಅಂಥವರು ಮುಂಗಡ ಶುಲ್ಕ ಕಟ್ಟಬೇಕು. ಈ ಸುತ್ತಿನಲ್ಲಿ ಸೀಟು ಹಂಚಿಕೆಯಾದವರು ಕಾಲೇಜುಗಳಿಗೆ ಪ್ರವೇಶ ಪಡೆಯುವುದು ಕಡ್ಡಾಯ. 180 ದಂತ ವೈದ್ಯಕೀಯ ಸೀಟುಗಳು ಹಂಚಿಕೆಗೆ ಲಭ್ಯವಿವೆ ಎಂದು ಕೆಇಎ ಹೇಳಿದೆ.

ಏಕತಾ ನಡಿಗೆ: ಬಿಜೆಪಿ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ವ್ಯಕ್ತಿತ್ವವನ್ನು ಯುವ ಜನರಿಗೆ ಪರಿಚಯಿಸಲು ಪ್ರತಿಯೊಂದು ಲೋಕಸಭಾ ಕ್ಷೇತ್ರದಲ್ಲಿ ಏಕತಾ ನಡಿಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂಗೌಡ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ‘ಪಟೇಲ್ ಅವರ ಕುರಿತ ಮಾಹಿತಿ ಯುವ ಜನರಿಗೆ ತಲುಪಿಸುವಲ್ಲಿ ಸರ್ಕಾರಗಳು ಎಡವಿವೆ ಎಂಬ ಭಾವನೆ ಜನರಲ್ಲಿದೆ. ಆದ್ದರಿಂದ ದೇಶವ್ಯಾಪಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ’ ಎಂದರು.



ಇದಕ್ಕೆ ಪೂರಕವಾಗಿ ಕೇಂದ್ರ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಪಟೇಲ್ ಅವರ ಜೀವನ-ಆದರ್ಶಗಳ ಕುರಿತು ಚರ್ಚಾ ಸ್ಪರ್ಧೆ, ವಿಚಾರಸಂಕಿರಣ, ಪ್ರಬಂಧ ಸ್ಪರ್ಧೆ, ಪಟೇಲ್ ಅವರ ಸಾಧನೆಗಳ ಕುರಿತು ರೀಲ್ಸ್ ಮಾಡಲು ಅವಕಾಶವಿದೆ. ರೀಲ್ಸ್ ಅನ್ನು ಮೈಭಾರತ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು ಎಂದು ಅವರು ವಿವರಿಸಿದರು.

ಇದೇ 31ರಿಂದ ನವೆಂಬರ್ 25ರವರೆಗೆ ಪ್ರತಿ ಲೋಕಸಭಾ ಕ್ಷೇತ್ರದಲ್ಲಿ 8ರಿಂದ 10 ಕಿ.ಮೀ ದೂರವನ್ನು ಪಾದಯಾತ್ರೆ ಮೂಲಕ ಜನ ಸಮೂಹವನ್ನು ತಲುಪಲಾಗುವುದು. ಇದರಲ್ಲಿ ಲೋಕಸಭಾ ಸದಸ್ಯರು, ಶಾಸಕರು, ಚುನಾಯಿತ ಪ್ರತಿನಿಧಿಗಳು ಭಾಗವಹಿಸುತ್ತಾರೆ ಎಂದರು.

‘ಸ್ವದೇಶಿ ವಸ್ತುಗಳ ಬಳಕೆ ಮಾಡುವ ಪ್ರತಿಜ್ಞೆ ಸ್ವೀಕಾರ ನಡೆಯಲಿದೆ. ಸ್ವದೇಶಿ ಮೇಳಗಳ ಆಯೋಜನೆಯೂ ನಡೆಯಲಿದೆ. ಯೋಗ ಮತ್ತು ಆರೋಗ್ಯ ಶಿಬಿರಗಳನ್ನೂ ಆಯೋಜಿಸಲಿದ್ದೇವೆ. ಇದರಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳನ್ನೂ ತೊಡಗಿಸಿಕೊಳ್ಳಲಾಗುವುದು. ಮಾಲ್, ಉದ್ಯಾನವನಗಳು ಸೇರಿದಂತೆ ಯುವಜನ ಸೇರುವ ಸ್ಥಳಗಳಲ್ಲಿ ಸರ್ದಾರ್ ಪಟೇಲ್ ಅವರ ಜೀವನ ಕುರಿತಾದ ಬೀದಿ ನಾಟಕಗಳನ್ನೂ ಆಯೋಜಿಸಲಾಗಿದೆ’ ಎಂದು ಹೇಳಿದರು.

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾಗುವ 5 ಜನ ಯುವಕರಿಗೆ ರಾಷ್ಟ್ರೀಯ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವ ಅವಕಾಶ ಲಭಿಸಲಿದೆ. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯ ಕಾರ್ಯದರ್ಶಿ ವಿನಯ್ ಬಿದರೆ, ಡಾ.ಮಲ್ಲಿಕಾರ್ಜುನ ಬಾಳೆಕಾಯಿ ಇದ್ದರು.

ನೀರಾಟ...

ಪ್ರಜಾವಾಣಿ ಚಿತ್ರ



ಕೋಲಾರ ಜಿಲ್ಲೆಯ ಬೇತಮಂಗಲದ ಬಳಿ ಪಾಲಾರ್ ನದಿಯು ತುಂಬಿ ಕೋಡಿ ಹರಿಯುತ್ತಿದ್ದು, ಪ್ರವಾಸಿಗರು ಸಂಭ್ರಮಿಸಿದರು

‘ಕ್ವಾಂಟಮ್ ಆರ್ಥಿಕ ರಾಜ್ಯವಾಗಿ ಅಭಿವೃದ್ಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 2035ರ ವೇಳೆಗೆ ಕರ್ನಾಟಕವನ್ನು 20 ಶತಕೋಟಿ ಡಾಲರ್ ಮೊತ್ತದ ವಹಿವಾಟಿನ ‘ಕ್ವಾಂಟಮ್ ಆರ್ಥಿಕ ರಾಜ್ಯ’ವಾಗಿ ಅಭಿವೃದ್ಧಿಪಡಿಸಲಾಗುವುದು. ಅಲ್ಲದೇ, ಬೆಂಗಳೂರು ನಗರದಲ್ಲಿ ಕ್ಯೂ–ಸಿಟಿ (ಕ್ವಾಂಟಮ್ ಸಿಟಿ) ಸ್ಥಾಪಿಸಲು ಭೂಮಿ ನಿಗದಿಪಡಿಸಲಾಗಿದೆ ಎಂದು ವಿಜ್ಞಾನ–ತಂತ್ರಜ್ಞಾನ ಸಚಿವ ಎನ್.ಎಸ್ ಬೋಸರಾಜು ಹೇಳಿದ್ದಾರೆ.

ಸ್ವಿಟ್ಜರ್ಲೆಂಡ್‌ನ ಜಿನಿವಾದ ಬಯೋಟೆಕ್ ಕ್ಯಾಂಪಸ್‌ನಲ್ಲಿ ಆಯೋಜಿಸಲಾಗಿದ್ದ ‘ಸ್ವಿಸ್‌ನೆಕ್ಸ್ಟ್ ಕ್ವಾಂಟಮ್ ಸಮಿಟ್’ನಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕ್ವಾಂಟಮ್ ಕ್ಷೇತ್ರದಲ್ಲಿ ಸಹಭಾಗಿತ್ವ, ಸಂಶೋಧನೆ ಹಾಗೂ ಆವಿಷ್ಕಾರಕ್ಕೆ ವಿಪುಲ ಅವಕಾಶಗಳಿದ್ದು, ಸಹಭಾಗಿತ್ವದ ಸಂಶೋಧನೆಗೆ ಕರ್ನಾಟಕ ರಾಜ್ಯ ಸರ್ಕಾರದ ಜೊತೆ ಕೈಜೋಡಿಸುವಂತೆ ಭೋಸರಾಜು ಸಲಹೆ ನೀಡಿದರು.



ಎನ್.ಎಸ್ ಬೋಸರಾಜು

ಭಾರತ ಸರ್ಕಾರ ಸುಮಾರು ₹6,000 ಕೋಟಿ ವೆಚ್ಚದಲ್ಲಿ ರಾಷ್ಟ್ರೀಯ ಕ್ವಾಂಟಮ್ ಮಿಷನ್ ಆರಂಭಿಸಿದೆ. ಈ ಮಿಷನ್ ನಾವೀನ್ಯ, ಕೌಶಲ ಮತ್ತು ಸ್ಟಾರ್ಟ್ ಅಪ್ ಬೆಂಬಲದ ಮೂಲಕ 50ರಿಂದ 1000 ಕ್ಯೂ ಬಿಟ್ ಕ್ವಾಂಟಮ್ ಕಂಪ್ಯೂಟರ್‌ಗಳನ್ನು ಅಭಿವೃದ್ಧಿಪಡಿಸುವುದು, ಸುರಕ್ಷಿತ ಕ್ವಾಂಟಮ್ ಸಂವಹನ ಜಾಲಗಳನ್ನು ನಿರ್ಮಿಸುವುದು ಮತ್ತು ಕಂಪ್ಯೂಟಿಂಗ್, ಸಂವಹನ, ಸಂವೇದನೆ ಮತ್ತು ಸಾಮಗ್ರಿಗಳಿಗಾಗಿ ರಾಷ್ಟ್ರೀಯ ಕೇಂದ್ರಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ. ಕರ್ನಾಟಕ ಈ ರಾಷ್ಟ್ರೀಯ ದೃಷ್ಟಿಕೋನವನ್ನು ಅಳವಡಿಸಿಕೊಂಡಿರುವ ಪ್ರಮುಖ ರಾಜ್ಯವಾಗಿ ಹೊರಹೊಮ್ಮಿದೆ ಎಂದರು.

ಇದೇ ಸಂದರ್ಭದಲ್ಲಿ ಬೋಸರಾಜು ಅವರು ಕ್ಯೂ–ಸಿಟಿ ಫೇಸ್ ಒನ್‌ನ ಪರಿಕಲ್ಪನೆಯ ವಿಡಿಯೊವನ್ನು ಅನಾವರಣಗೊಳಿಸಿದರು.

ಸಿ.ಎಂ ಆಯ್ಕೆ: ವಿಭಿನ್ನ ಹೇಳಿಕೆ

ಒಂದನೇ ಪುಟದಿಂದ...

ಅಭಿಪ್ರಾಯ ತೆಗೆದುಕೊಳ್ಳುವುದಿಲ್ಲ ಎನ್ನುವುದು ಅವರಿಗೆ (ಹೈಕಮಾಂಡ್) ಬಿಟ್ಟಿದ್ದು. ಅದಕ್ಕೆ ನಾವು ಹೈಕಮಾಂಡ್ ತೀರ್ಮಾನ ಎನ್ನುವುದು. ಹೈಕಮಾಂಡ್ ತೀರ್ಮಾನಕ್ಕೆ ಎಲ್ಲರೂ ಗೌರವ ಕೊಡುತ್ತಾರೆ’ ಎಂದೂ ಹೇಳಿದರು.

ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ‘ಶಾಸಕರ ಅಭಿಪ್ರಾಯದ ಮೇಲೆಯೇ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ವೀಕ್ಷಕರನ್ನು ಕಳುಹಿಸಿ ಎಲ್ಲವನ್ನೂ ತಿಳಿದುಕೊಂಡು ನಿರ್ಧಾರ ತೆಗೆದುಕೊಳ್ಳುತ್ತದೆ’ ಎಂದರು.

ಸಂಪುಟ ಪುನರ್‌ರಚನೆಯ ಸುಳಿವು

ಒಂದನೇ ಪುಟದಿಂದ...

ಸಚಿವರ ಜೊತೆ ಮುಖ್ಯಮಂತ್ರಿ ಲೋಕಾಭಿರಾಮವಾಗಿ ಚರ್ಚೆ ನಡೆಸಿದರು.

‘ಬಿಹಾರ ವಿಧಾನಸಭೆ ಚುನಾವಣೆ ಕುರಿತು ಸಿದ್ದರಾಮಯ್ಯ ಪ್ರಸ್ತಾಪಿಸಿ ದರು. ಹಿಂದಿ ಭಾಷೆ ಬಲ್ಲ ಸಚಿವರು ಸಕ್ರಿಯವಾಗಿ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಬೇಕು. ಹೈಕಮಾಂಡ್ ನೀಡುವ ಜವಾಬ್ದಾರಿ ವಹಿಸಿಕೊಂಡು ಕಾರ್ಯಪ್ರವೃತ್ತರಾಗಬೇಕು ಎಂದು ಸಲಹೆ ನೀಡಿದರು. ಸಚಿವರ ಕಾರ್ಯವೈಖರಿಯ ಮೇಲೆ ಹೈಕಮಾಂಡ್ ನಿಗಾವಹಿಸಿದೆ. ಸಂಪುಟ ಪುನರ್‌ರಚನೆಯ ವೇಳೆ ಇದು ಪರಿಗಣನೆಗೆ ಬರಬಹುದು. ಈ ಬಗ್ಗೆ ಜಾಗ್ರತೆ ವಹಿಸುವಂತೆ ಸೂಚಿಸಿದರು’ ಎಂದು ಗೊತ್ತಾಗಿದೆ.

‘ಮುಂಬರುವ ಸ್ಥಳೀಯ ಸಂಸ್ಥೆಗಳು ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಚುನಾವಣೆಯನ್ನು ಗಮನದಲ್ಲಿ ಇಟ್ಟುಕೊಂಡು ಸಕ್ರಿಯವಾಗಿ ಕೆಲಸ ಮಾಡಬೇಕು’ ಎಂದೂ ಸೂಚನೆ ನೀಡಿದರು ಎಂದೂ ತಿಳಿದುಬಂದಿದೆ.

ಇಬ್ಬರಿಗೆ ಕನಕ ಗೌರವ ಪುರಸ್ಕಾರ

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು 2025–26ನೇ ಸಾಲಿನ ಕನಕ ಗೌರವ ಪುರಸ್ಕಾರಕ್ಕೆ ಮೈಸೂರಿನ ಅಕ್ಕಮಹಾದೇವಿ ಹಾಗೂ ಕನಕ ಯುವ ಪುರಸ್ಕಾರಕ್ಕೆ ಬೀದರ್‌ನ ರವೀಂದ್ರ ಲಂಜವಾಡಕರ್ ಅವರನ್ನು ಆಯ್ಕೆ ಮಾಡಿದೆ.

ಕನಕ ಗೌರವ ಪುರಸ್ಕಾರಕ್ಕೆ ಆಯ್ಕೆಯಾಗಿರುವ ಅಕ್ಕಮಹಾದೇವಿ ಅವರು ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಅಧ್ಯಯನ ಕೇಂದ್ರದ ಸಹಾಯಕ ಪ್ರಾಧ್ಯಾಪಕಿಯಾಗಿದ್ದರು. ಈ ಪುರಸ್ಕಾರವು ₹75 ಸಾವಿರ ನಗದು, ಫಲಕವನ್ನು ಒಳಗೊಂಡಿದೆ.

ಕನಕ ಯುವ ಪುರಸ್ಕಾರಕ್ಕೆ ಆಯ್ಕೆಯಾಗಿರುವ ರವೀಂದ್ರ ಲಂಜವಾಡಕರ್ ಅವರು ವೃತ್ತಿಯಿಂದ ಪ್ರಥಮದರ್ಜೆ ಸಹಾಯಕರು. ಸಮಾಜಮುಖಿ ದಾಸ ಸಾಹಿತ್ಯ ಕುರಿತು ಸಂಶೋಧನೆ ನಡೆಸಿದ್ದಾರೆ. ಈ ಪುರಸ್ಕಾರವು ₹50 ಸಾವಿರ ನಗದು, ಫಲಕ ಒಳಗೊಂಡಿದೆ ಎಂದು ಕೇಂದ್ರದ ಅಧ್ಯಕ್ಷ ಕಾ.ತ.ಚಿಕ್ಕಣ್ಣ ತಿಳಿಸಿದ್ದಾರೆ.



ರವೀಂದ್ರ ಲಂಜವಾಡಕರ್



ಅಕ್ಕಮಹಾದೇವಿ

ಸಂಕ್ಷಿಪ್ತ ಸುದ್ದಿ

ಡ್ರಾಪ್ ನೆಪದಲ್ಲಿ ಅತ್ಯಾಚಾರ; ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಪಾದಚಾರಿ ಯುವತಿಯನ್ನು ‘ಮನೆಗೆ ಕರೆದೊಯ್ದು ಬಿಡುತ್ತೇವೆ’ ಎಂದು ನಂಬಿಸಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಅತ್ಯಾಚಾರ ನಡೆಸಿದ್ದ ಇಬ್ಬರನ್ನು ಚಿಕ್ಕಬಳ್ಳಾಪುರ ಮಹಿಳಾ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಬಳ್ಳಾಪುರ ನಗರದ ಸಿಖಂದರ್ ಮತ್ತು ಜನಾರ್ದನಾಚಾರಿ ಬಂಧಿತರು. ಮಂಚೇನಹಳ್ಳಿ ತಾಲ್ಲೂಕಿನ ಯುವತಿಯು ಮನೆಯವರಿಂದ ಅನಾದರಕ್ಕೆ ಒಳಗಾಗಿದ್ದಳು ಎಂದು ತಿಳಿದು ಬಂದಿದೆ.

ತಾಲ್ಲೂಕಿನ ಶ್ರೀನಿವಾಸ ಸಾಗರ ಬಳಿ ಶನಿವಾರ ನಡೆದು ಹೊರಟಿದ್ದ ಯುವತಿಯನ್ನು ಮಾತನಾಡಿಸಿದ ಆರೋಪಿಗಳು, ‘ಚಿಕ್ಕಬಳ್ಳಾಪುರಕ್ಕೆ ತಲುಪಿಸುತ್ತೇವೆ ಬನ್ನಿ’ ಎಂದು ಬೈಕ್‌ನಲ್ಲಿ ಹತ್ತಿಸಿಕೊಂಡಿದ್ದಾರೆ. ಗೊಲ್ಲಹಳ್ಳಿ ಕ್ರಾಸ್ ಬಳಿ ಆರೋಪಿಗಳು ಯುವತಿ ಮೇಲೆ ಅತ್ಯಾಚಾರ ನಡೆಸಿ ಚಿಕ್ಕಬಳ್ಳಾಪುರಕ್ಕೆ ಕರೆತಂದು ಬಿಟ್ಟಿದ್ದಾರೆ. ಯುವತಿ ಬಸ್ ನಿಲ್ದಾಣದಲ್ಲಿ ಮಲಗಿದ್ದಾಳೆ. ನಂತರ ಮತ್ತೆ ಬಸ್ ನಿಲ್ದಾಣಕ್ಕೆ ಬಂದ ಆರೋಪಿಗಳು, ‘ನಿಮ್ಮ ಊರಿಗೆ ಕರೆದುಕೊಂಡು ಹೋಗುತ್ತೇವೆ’ ಎಂದು ನಂಬಿಸಿದ್ದಾರೆ.

ಗೌರಿಬಿದನೂರು ಮಾರ್ಗದ ಕಣಿವೆ ಪ್ರದೇಶಕ್ಕೆ ಕರೆದೊಯ್ದು ಮತ್ತೆ ಅತ್ಯಾಚಾರ ನಡೆಸಿದ್ದಾರೆ. ಬಳಿಕ ಸಮೀಪದ ಪೆಟ್ರೋಲ್ ಬಂಕ್ ಬಳಿ ಯುವತಿಯನ್ನು ಬಿಟ್ಟು ಹೋಗಿದ್ದಾರೆ. ಯುವತಿಯನ್ನು ಗಮನಿಸಿದ ಪೆಟ್ರೋಲ್ ಬಂಕ್ ಸಿಬ್ಬಂದಿ ಆಕೆಯಿಂದ ವಿಷಯ ತಿಳಿದು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲಿಸಿದ ಪೊಲೀಸರು ಭಾನುವಾರ ಆರೋಪಿಗಳನ್ನು ಬಂಧಿಸಿದ್ದಾರೆ.

ರಂದೀಪ್ ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಪಿ.ಮಣಿವಣ್ಣನ್ ಅವರ ಬಳಿ ಇದ್ದ ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ ಹುದ್ದೆಯ ಹೆಚ್ಚುವರಿ ಜವಾಬ್ದಾರಿ ಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಡಿ. ರಂದೀಪ್ ಅವರಿಗೆ ವಹಿಸಲಾಗಿದೆ.

ಎಂಎಸ್‌ಎಂಇ ನಿರ್ದೇಶಕ ನಿತೇಶ್ ಪಾಟೀಲ್ ಅವರನ್ನು ಮೈಸೂರು ಕಂದಾಯ ವಿಭಾಗದ ಪ್ರಾದೇಶಿಕ ಆಯುಕ್ತರಾಗಿ, ಆರ್.ರಾಮಚಂದ್ರನ್ ಅವರನ್ನು ಕರ್ನಾಟಕ ಆರೋಗ್ಯ ಸುರಕ್ಷಾ ಟ್ರಸ್ಟ್ ಕಾರ್ಯನಿರ್ವಾಹಕ ನಿರ್ದೇಶಕರಾಗಿ, ಬಿ.ಸಿ.ಸುರೇಶ್ ಅವರನ್ನು ಎಂಎಸ್‌ಎಂಇ ನಿರ್ದೇಶಕರಾಗಿ, ಎಂ.ಎಸ್.ದಿವಾಕರ ಅವರನ್ನು ಕರ್ನಾಟಕ ರಾಜ್ಯ ಪ್ರಕೃತಿ ವಿಕೋಪ ನಿರ್ವಹಣಾ ಕೇಂದ್ರದ ನಿರ್ದೇಶಕರಾಗಿ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶ ಹೊರಡಿಸಿದೆ.

ಕೇರಳ ಸಿ.ಎಂ ಪುತ್ರಿ ಮೇಲ್ಮನವಿ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಫ್ಟ್‌ವೇರ್ ಸೇವೆ ಒದಗಿಸಿದ ನೆಪದಲ್ಲಿ ಬಹುಕೋಟಿ ತೆರಿಗೆ ವಂಚನೆ ಆರೋಪಕ್ಕೆ ಸಂಬಂಧಿಸಿದಂತೆ ಎಸ್‌ಎಫ್‌ಐಒ (ಸೀರಿಯಸ್ ಫ್ರಾಡ್ ಇನ್ವೆಸ್ಟಿಗೇಷನ್ ಆಫೀಸ್) ತನಿಖೆಯನ್ನು ಪ್ರಶ್ನಿಸಿ, ‘ಎಕ್ಸಾಲಾಜಿಕ್ ಸಲ್ಯೂಷನ್ಸ್ ಪ್ರೈವೆಟ್ ಲಿಮಿಟೆಡ್ ಕಂಪನಿ’ ನಿರ್ದೇಶಕಿಯೂ ಆದ, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪುತ್ರಿ ಟಿ.ವೀಣಾ ಅವರ ಅರ್ಜಿ ವಜಾಗೊಳಿಸಿದ್ದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗಿದೆ.

ಈ ಸಂಬಂಧ ವೀಣಾ ಸಲ್ಲಿಸಿರುವ ರಿಟ್ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಅರ್ಜಿದಾರರ ವಿರುದ್ಧ ಯಾವುದೇ ಆತುರದ ಕ್ರಮ ಕೈಗೊಳ್ಳದಂತೆ ರಕ್ಷಣೆ ನೀಡಬೇಕು’ ಎಂದು ಕೋರಿದರು. ಆದರೆ, ಇದನ್ನು ನಿರಾಕರಿಸಿದ ನ್ಯಾಯಪೀಠ ಪ್ರತಿವಾದಿಗಳಾದ ಎಸ್‌ಎಫ್‌ಐಒ ನಿರ್ದೇಶಕ ಮತ್ತು ಕೇಂದ್ರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಮಹಾ ನಿರ್ದೇಶಕರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಡಿಸೆಂಬರ್ 3ಕ್ಕೆ ಮುಂದೂಡಿತು.

ಏಕಪರದೆಗಳಿಗೆ ಕಾಂತಾರ ಜೀವಸಂಚಾರ

• ಅಭಿಲಾಷ್ ಪಿ.ಎಸ್.

'ಏಕ್ಕ', 'ಸು ಫ್ರಮ್ ಸೋ', 'ಏಳುಮಲೆ' ಸಿನಿಮಾದ ಯಶಸ್ಸಿನಿಂದ 2025ರ ದ್ವಿತೀಯಾರ್ಧ ಆರಂಭವಾಗಿತ್ತು. ಇವು ಏಕಪರದೆ ಚಿತ್ರಮಂದಿರಗಳಿಗೆ ಪ್ರೇಕ್ಷಕರನ್ನು ಮರಳಿ ತಂದರೆ, ಅ.2ರಂದು ತೆರೆಕಂಡ ನಟ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಕಾಂತಾರ: ಒಂದು ದಂತಕಥೆ, ಚಾಪ್ಟರ್–1' ಸಿನಿಮಾ ಚಿತ್ರಮಂದಿರಗಳನ್ನು ಪ್ರೇಕ್ಷಕರಿಂದ ಭರ್ತಿಯಾಗಿಸಿದೆ.

ಬಿಡುಗಡೆಯಾದ ಮೊದಲ ವಾರದಲ್ಲಿ ವಿಶ್ವದಾದ್ಯಂತ ₹509.25 ಕೋಟಿ ಗಳಿಸಿದ್ದ ಈ ಸಿನಿಮಾ ಇಲ್ಲಿಯವರೆಗೂ ₹655 ಕೋಟಿ ಬಾಚಿದೆ. ಕರ್ನಾಟಕದಲ್ಲೇ ಸಿನಿಮಾ ₹191 ಕೋಟಿಯಷ್ಟು ಗಳಿಸಿದೆ. 'ಕಾಂತಾರ ಚಾಪ್ಟರ್ 1' ರಾಜ್ಯದಲ್ಲಿ ಅತಿ ಹೆಚ್ಚು ಗಳಿಕೆ ಮಾಡಿದ ಸಿನಿಮಾ ಎಂದು ಚಿತ್ರತಂಡ ಮಾಹಿತಿ ನೀಡಿದೆ. ಈ ಮೂಲಕ ಸಿನಿಮಾವು ಸೊರಗಿದ್ದ ಏಕಪರದೆ ಚಿತ್ರಮಂದಿರಗಳಿಗೆ ಉಸಿರು ತುಂಬಿದೆ. ರಾಜಧಾನಿ ಬೆಂಗಳೂರಿನ ಪ್ರತಿ ಏಕಪರದೆ ಚಿತ್ರಮಂದಿರಗಳಲ್ಲಿ ಮೊದಲ ವಾರ ಸುಮಾರು ₹80 ಲಕ್ಷದಿಂದ ₹1 ಕೋಟಿವರೆಗೆ ಗಳಿಕೆಯಾಗಿದೆ. 'ಕಾಂತಾರ' ಸಿನಿಮಾ ಗುರುವಾರವೇ (ಅ.2) ತೆರೆಕಂಡಿತ್ತು. ಅದಕ್ಕೂ ಮೊದಲೇ ಅಂದರೆ ಅ.1ರ ಸಂಜೆಯಿಂದಲೇ ಪ್ರೀಮಿಯರ್ ಶೋಗಳು ಇದ್ದವು. ಈ ವಿಶೇಷ ಪ್ರದರ್ಶನಕ್ಕೆ ಏಕಪರದೆ ಚಿತ್ರಮಂದಿರಗಳಲ್ಲೇ ₹400 ದರ ನಿಗದಿಯಾಗಿತ್ತು. ಅ.2ರಿಂದ ಏಕಪರದೆ ಚಿತ್ರಮಂದಿರಗಳಲ್ಲಿ ಈ ಸಿನಿಮಾದ ಟಿಕೆಟ್ ದರ ₹150–₹200ರವರೆಗಿದೆ. ಹಿಂದೆ ಇವೇ ಚಿತ್ರಮಂದಿರಗಳಲ್ಲಿ ಇತರೆ ಸಿನಿಮಾಗಳ ಟಿಕೆಟ್‌ಗೆ ₹100–₹120 ಇತ್ತು. ಈ ದರ ಏರಿಕೆಯ ಕಾರಣದಿಂದಲೂ ಏಕಪರದೆ ಚಿತ್ರಮಂದಿರಗಳಲ್ಲಿ ಒಟ್ಟು ಗಳಿಕೆ ಹೆಚ್ಚಾಗಿದೆ. ವರ್ಷದ ಮೊದಲಾರ್ಧದಲ್ಲಿ ಕಳೆಗುಂದಿದ್ದ ಏಕಪರದೆ ಚಿತ್ರಮಂದಿರಗಳಿಗೆ ಇದೀಗ ಜೀವಕಳೆ ಬಂದಿದೆ.

ಸೆ.19ರವರೆಗೂ ಪ್ರತಿ ಶುಕ್ರವಾರ ಸರಾಸರಿ ಐದಾರು ಕನ್ನಡ ಸಿನಿಮಾಗಳು ತೆರೆಕಾಣುತ್ತಿದ್ದವು. ಕಾಂತಾರ ಬಿಡುಗಡೆಗೂ ಒಂದು ವಾರ ಮುನ್ನ (ಸೆ.26) ಎರಡು ಕನ್ನಡ ಸಿನಿಮಾಗಳು ತೆರೆಕಂಡಿದ್ದವು. ಅಲ್ಲಿಂದ ಇಲ್ಲಿಯವರೆಗೂ 'ಕಾಂತಾರ' ಬಿಟ್ಟರೆ ಬೇರೆ ಕನ್ನಡ ಸಿನಿಮಾ ತೆರೆಕಂಡಿಲ್ಲ. ಸೆಪ್ಟೆಂಬರ್‌ನಲ್ಲಿ ಇಪ್ಪತ್ತಕ್ಕೂ ಅಧಿಕ ಕನ್ನಡ ಸಿನಿಮಾಗಳು ಬಿಡುಗಡೆಯಾದರೂ ಸದ್ಯ ಇವು ಯಾವುವೂ ಚಿತ್ರಮಂದಿರಗಳಲ್ಲಿಲ್ಲ.

'ಕಾಂತಾರ ಸಿನಿಮಾ ಬರುತ್ತಿದೆ ಎನ್ನುವ ಕಾರಣಕ್ಕೆ



ರುಕ್ಮಿಣಿ ವಸಂತ್, ರಿಷಬ್

ಯಾವುದೇ ಬೇರೆ ಕನ್ನಡ ಸಿನಿಮಾಗಳೂ ಕಳೆದ ಒಂದೆರಡು ವಾರದಲ್ಲಿ ಬಿಡುಗಡೆಯಾಗಿಲ್ಲ. ಸ್ಪರ್ಧೆ ಬೇಡವೆಂದು ದೂರವಿದ್ದರು. ತಿಂಗಳಾಂತ್ಯದಿಂದ ಹೊಸ ಕನ್ನಡ ಸಿನಿಮಾಗಳು ಬರಲಿವೆ. ಕರ್ನಾಟಕದಲ್ಲಿ ಸುಮಾರು 500 ಚಿತ್ರಮಂದಿರಗಳಿವೆ. ಇವುಗಳಲ್ಲಿ ಶೇಕಡ 75ರಷ್ಟು ಚಿತ್ರಮಂದಿರಗಳಿಗೆ ಜನರು ಬಂದಾಗ ಚಿತ್ರರಂಗದ ಅಭಿವೃದ್ಧಿ ಎಂದು ಪರಿಗಣಿಸುತ್ತೇವೆ. ನಮ್ಮ ಚಿತ್ರಮಂದಿರದಲ್ಲಿ ಒಂದು ವಾರಕ್ಕೆ 35 ಪ್ರದರ್ಶನ ವಿರುತ್ತದೆ. ಪ್ರೀಮಿಯರ್‌ನಿಂದ ಲೆಕ್ಕ ಹಿಡಿದರೆ ನಮ್ಮಲ್ಲಿ 'ಕಾಂತಾರ'ದ 43 ಪ್ರದರ್ಶನವನ್ನು 9 ದಿನದಲ್ಲಿ ನೀಡಿದ್ದೇವು.

ಊದಿಕೊಂಡ ಕಾಲು ತೋರಿಸಿದ ರಿಷಬ್!


'ಕಾಂತಾರ' ಸಿನಿಮಾ ಚಿತ್ರೀಕರಣದ ಸಂದರ್ಭದಲ್ಲಿ ಸಾಕಷ್ಟು ಸಮಸ್ಯೆಗಳು, ಅವಘಡಗಳನ್ನು ರಿಷಬ್ ಶೆಟ್ಟಿ ಎದುರಿಸಿದ್ದರು. ನಾಲ್ಕೈದು ಬಾರಿ ಸಾವಿನ ಕದ ತಟ್ಟಿ ಬಂದಿದ್ದೆ ಎಂದು ಬಹಿರಂಗವಾಗಿಯೇ ತಿಳಿಸಿದ್ದರು. ಇದೀಗ ಕ್ಲೈಮ್ಯಾಕ್ಸ್ ಚಿತ್ರೀಕರಣದ ಸಂದರ್ಭದಲ್ಲಿ ಎದುರಿಸಿದ ದೈಹಿಕ ನೋವನ್ನೂ ಸಾಮಾಜಿಕ ಮಾಧ್ಯಮಗಳ ಮೂಲಕ ರಿಷಬ್ ಹಂಚಿಕೊಂಡಿದ್ದಾರೆ. ಶೂಟಿಂಗ್ ಹಂತದಲ್ಲಿ ಕಾಲು ಊದಿಕೊಂಡಿದ್ದ ಚಿತ್ರವನ್ನು ಪೋಸ್ಟ್ ಮಾಡಿದ್ದಾರೆ. 'ಕಾಲು ಊದಿಕೊಂಡಿತ್ತು, ದೇಹ ನಿತ್ರಾಣವಾಗಿತ್ತು. ಇವತ್ತು ಕೋಟ್ಯಂತರ ಜನ ನೋಡಿ ಮೆಚ್ಚುವ ಹಾಗೆ ಆಗಿದೆ. ಇದು ನಾವು ನಂಬಿರುವ ಶಕ್ತಿಗಳ ಆಶೀರ್ವಾದದಿಂದ ಮಾತ್ರ ಸಾಧ್ಯ' ಎಂದು ಉಲ್ಲೇಖಿಸಿದ್ದಾರೆ ರಿಷಬ್.



ಇದರಿಂದ ನಮಗೆ ₹1.10 ಕೋಟಿ ಕಲೆಕ್ಷನ್ ಆಗಿದ್ದು, ಇದರಲ್ಲಿ ಸುಮಾರು ₹81 ಲಕ್ಷ ವಿತರಕರಿಗೆ ದೊರೆಯಲಿದೆ. ಇದರಲ್ಲಿ ನಮಗೆ ನಿಗದಿಯಾದ ಬಾಡಿಗೆಯನ್ನು ನೀಡುತ್ತಾರೆ. ನಮ್ಮ ಚಿತ್ರಮಂದಿರದ ಇತಿಹಾಸದಲ್ಲಿ ಒಂದು ವಾರದಲ್ಲಿ ಇಷ್ಟು ಕಲೆಕ್ಷನ್ ಆಗಿದ್ದು ಇದೇ ಮೊದಲು. ಹೆಚ್ಚಿನ ಪ್ರೇಕ್ಷಕರು, ಟಿಕೆಟ್ ದರ ಹೆಚ್ಚಳವಾಗಿರುವುದೂ ಈ ದಾಖಲೆಗೆ ಕಾರಣ. ಬೆಂಗಳೂರಿನ ಬಹುತೇಕ ಏಕಪರದೆ ಚಿತ್ರಮಂದಿರಗಳಲ್ಲಿ ಇಷ್ಟೇ ಗಳಿಕೆಯಾಗಿದೆ' ಎನ್ನುತ್ತಾರೆ ಪ್ರದರ್ಶಕರ ಸಂಘದ ಅಧ್ಯಕ್ಷ ಕೆ.ವಿ. ಚಂದ್ರಶೇಖರ್.

'ಮುಂದೆ ಸ್ಟಾರ್ ಸಿನಿಮಾಗಳ ಹರಿವು ಜೋರಾಗಿಯೇ ಇರಲಿದ್ದು, ಚಿತ್ರಮಂದಿರಗಳಲ್ಲಿ ಹೌಸ್‌ಫುಲ್ ಬೋರ್ಡ್‌ಗಳು ನಿರಂತರವಾಗಿರಲಿದೆ' ಎಂದರು ಚಂದ್ರಶೇಖರ್.

'ಆಂಧ್ರ ಕಿಂಗ್' ಉಪ್ಪಿ



ಉಪೇಂದ್ರ

ನಟ ಉಪೇಂದ್ರ 'ಆಂಧ್ರ ಕಿಂಗ್ ಸೂರ್ಯ' ಆಗಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ.

ಅವರು ನಟಿಸಿರುವ 'ಆಂಧ್ರ ಕಿಂಗ್ ತಾಲೂಕಾ' ಎಂಬ ತೆಲುಗು ಸಿನಿಮಾ ನ.28ರಂದು ತೆರೆಕಾಣುತ್ತಿದೆ. ಈ ಸಿನಿಮಾದ ಟೀಸರ್ ಬಿಡುಗಡೆಯಾಗಿದ್ದು, ತೆಲುಗಿನ ಸ್ಟಾರ್ ಹೀರೊ 'ಸೂರ್ಯ' ಆಗಿ ಉಪೇಂದ್ರ ಕಾಣಿಸಿಕೊಂಡಿದ್ದಾರೆ. ಈ ಹೀರೊನ ಅಭಿಮಾನಿಯ ಸುತ್ತ ಈ ಸಿನಿಮಾದ ಕಥೆಯಿದೆ. ಹೀಗಾಗಿಯೇ ಸಿನಿಮಾಗೆ ಅಭಿಮಾನಿಯೊಬ್ಬನ ಆತ್ಮಕಥೆ ಎಂಬ ಅಡಿಬರಹವಿದೆ.

ರಾಮ್ ಪೋತಿನೇನಿ ನಾಯಕನಾಗಿ ಈ ಸಿನಿಮಾದಲ್ಲಿ ನಟಿಸಿದ್ದಾರೆ. ಟೀಸರ್‌ನಲ್ಲಿ ಕೇವಲ ಉಪೇಂದ್ರ ಅವರ ಕಟೌಟ್‌ಗಳನ್ನಷ್ಟೇ ತೋರಿಸಲಾಗಿದ್ದು, ಅವರು ನಟಿಸಿರುವ ದೃಶ್ಯಗಳು ಇಲ್ಲ. ಮಧ್ಯಮ ವರ್ಗದ ಕುಟುಂಬದ ಯುವಕನೊಬ್ಬ 'ಆಂಧ್ರ ಕಿಂಗ್'ನ ಅಪ್ಪಟ ಅಭಿಮಾನಿ. ಆತನ ಹಾಗೂ 'ಸೂರ್ಯ'ನ ನಡುವಿನ ಭಾವನಾತ್ಮಕ ಕಥೆಯನ್ನು ಸಿನಿಮಾ ಹೊಂದಿದೆ ಎಂದಿದೆ ಚಿತ್ರತಂಡ. 'ಮಿಸ್ ಶೆಟ್ಟಿ ಮಿಸ್ಟರ್ ಪೋಲಿಶೆಟ್ಟಿ' ಸಿನಿಮಾ ನಿರ್ದೇಶಿಸಿದ್ದ ಮಹೇಶ್ ಬಾಬು ಪಿ. ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದು, ನಾಯಕಿಯಾಗಿ ಭಾಗ್ಯಶ್ರೀ ಬೋರ್ಸೆ ನಟಿಸಿದ್ದಾರೆ.


'ಮಹಾಲಯ' ಚಿತ್ರಕ್ಕೆ ಶ್ರೀಮುರಳಿ ಕ್ಲ್ಯಾಪ್

ಮೋಹನ್ ಮಾಯಣ್ಣ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿರುವ 'ಮಹಾಲಯ' ಸಿನಿಮಾದ ಚಿತ್ರೀಕರಣಕ್ಕೆ ನಟ ಶ್ರೀಮುರಳಿ ಕ್ಲ್ಯಾಪ್ ಮಾಡುವ ಮೂಲಕ ಇತ್ತೀಚೆಗೆ ಚಾಲನೆ ನೀಡಿದರು.

ಪರ್ಪಲ್ ರಾಕ್ ಸ್ಟುಡಿಯೋಸ್ ಮೂಲಕ ಯತೀಶ್ ವೆಂಕಟೇಶ್ ಹಾಗೂ ಗಣೇಶ್ ಪಾಪಣ್ಣ ಸೇರಿ ಈ ಸಿನಿಮಾ ನಿರ್ಮಿಸುತ್ತಿದ್ದು, ಶ್ರೀಮುರಳಿ ನಟನೆಯ 'ಬಘೀರ' ಸಿನಿಮಾದ ನಿರ್ದೇಶಕ ಡಾ.ಸೂರಿ ಕ್ರಿಯೇಟಿವ್ ಹೆಡ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಿನಿಮಾ ಕುರಿತು ಮಾತನಾಡಿದ ಮೋಹನ್ ಮಾಯಣ್ಣ, 'ನಾನು ಎ.ಹರ್ಷ ಅವರ ಜೊತೆಗೆ 'ಸೀತಾರಾಮ ಕಲ್ಯಾಣ', 'ಭಜರಂಗಿ–2' ಚಿತ್ರಗಳಲ್ಲಿ ಕೆಲಸ ಮಾಡಿದ್ದೆ, ನಾಲ್ಕೈದು ಕಿರುಚಿತ್ರಗಳನ್ನು ನಿರ್ದೇಶಿಸಿದ್ದೇನೆ. ಅದನ್ನು ನೋಡಿ ನಿರ್ಮಾಪಕರು ಇಂಥ ದೊಡ್ಡ ಅವಕಾಶ ನೀಡಿದ್ದಾರೆ. 1990ರ ಸಮಯದಲ್ಲಿ ನಡೆಯುವ ಕಥೆ ಇದಾಗಿದೆ' ಎಂದರು.

'ಇದು ನಮ್ಮ ಪರ್ಪಲ್ ರಾಕ್ ಸಂಸ್ಥೆಯ ಐದನೇ ಚಿತ್ರ. ಎಲ್ಲಾ ವರ್ಗದ ಪ್ರೇಕ್ಷಕರಿಗೂ ಅರ್ಥವಾಗುವಂಥ ವಿಭಿನ್ನ ಕಾಂಟೆಂಟ್ ಈ ಚಿತ್ರದಲ್ಲಿದೆ. ಮೂರು ಹಂತಗಳಲ್ಲಿ ಚಿತ್ರೀಕರಣ ನಡೆಸುವ ಯೋಜನೆಯಿದೆ. ಅರ್ಮೇನಿಯಾದಲ್ಲಿ ಸುಮಾರು 10 ದಿನಗಳ ಕಾಲ ಚಿತ್ರೀಕರಣ, ನಂತರ ಬೆಂಗಳೂರು, ಆನಂತರ ಮಲೆನಾಡಿನ ಗ್ರಾಮೀಣ ಭಾಗದಲ್ಲಿ ಚಿತ್ರೀಕರಣ ಸೇರಿ 40 ರಿಂದ 50 ದಿನಗಳ ಕಾಲ ಚಿತ್ರೀಕರಣ ನಡೆಸಲಿದ್ದೇವೆ. ಈ ಚಿತ್ರಕ್ಕೆ ಕಥೆಯೇ ನಾಯಕ. 20ಕ್ಕೂ ಹೆಚ್ಚು ಪ್ರಮುಖಪಾತ್ರಗಳಿದ್ದು, ಆ ಪಾತ್ರಗಳಲ್ಲಿ ಜನಪ್ರಿಯ ಕಲಾವಿದರು ಅಭಿನಯಿಸಲಿದ್ದಾರೆ. ಆಡಿಷನ್ ಮೂಲಕವೂ ಕಲಾವಿದರ ಆಯ್ಕೆ ನಡೆಯಲಿದೆ' ಎನ್ನುತ್ತಾರೆ ಗಣೇಶ್ ಪಾಪಣ್ಣ.



'ಮಹಾಲಯ' ಚಿತ್ರಕ್ಕೆ ಕ್ಲ್ಯಾಪ್ ಮಾಡಿದ ನಟ ಶ್ರೀಮುರಳಿ

'ನಮ್ಮ ಚಿತ್ರಕ್ಕಾಗಿ ಅರ್ಮೇನಿಯಾದಿಂದ ಕಲಾವಿದರನ್ನು ಕರೆತರುತ್ತಿದ್ದೇವೆ. ಮೂರು ಭಾಗಗಳಲ್ಲಿ ಸಿನಿಮಾದ ಕಥೆ ಸಾಗುತ್ತದೆ. ಅದರ ಒಂದು ಭಾಗದಲ್ಲಿ ಈ ಕಲಾವಿದರು ಇರುತ್ತಾರೆ' ಎಂದರು ಯತೀಶ್ ವೆಂಕಟೇಶ್. ಪವನ್ ಸಾಯಿಕುಮಾರ್ ಛಾಯಾಚಿತ್ರಗ್ರಹಣ, ಭುವನ್ ಚಂದ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

'ಸಂಬಂಧ ವೃದ್ಧಿಗೆ ರೂಪುರೇಷೆ'

ಕೆನಡಾ ವಿದೇಶಾಂಗ ಸಚಿವೆ ಅನಿತಾ ಜತೆಗೆ ಸಚಿವ ಜೈಶಂಕರ್ ಮಾತುಕತೆ

ನವದೆಹಲಿ (ಪಿಟಿಐ): 'ಭಾರತ ಮತ್ತು ಕೆನಡಾ ನಡುವಿನ ಸಂಬಂಧ, ಒಪ್ಪಂದ ಬಲಪಡಿಸಲು ಉಭಯ ರಾಷ್ಟ್ರಗಳು ಮಹತ್ವಾಕಾಂಕ್ಷೆಯ ರೂಪುರೇಷೆಗಳನ್ನು ಸಿದ್ಧಪಡಿಸಿವೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಸೋಮವಾರ ಹೇಳಿದ್ದಾರೆ.

ಭಾರತ ಪ್ರವಾಸ ಕೈಗೊಂಡಿರುವ ಕೆನಡಾ ವಿದೇಶಾಂಗ ಸಚಿವೆ ಅನಿತಾ ಆನಂದ್ ಅವರ ಜತೆಗೆ ವ್ಯಾಪಾರ, ಹೂಡಿಕೆ, ಗಣಿ, ಇಂಧನ ಸೇರಿ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಾತುಕತೆ ನಡೆಸಿದ ಬಳಿಕ ಆ ಬಗ್ಗೆ ಮಾಧ್ಯಮಗಳಿಗೆ ಜೈಶಂಕರ್ ಮಾಹಿತಿ ನೀಡಿದ್ದಾರೆ.

'ಕಳೆದ ಕೆಲವು ತಿಂಗಳಲ್ಲಿ ಭಾರತ ಮತ್ತು ಕೆನಡಾ ಸಂಬಂಧವು ವೃದ್ಧಿಸುತ್ತಿದ್ದು, ಇದನ್ನು ಮತ್ತಷ್ಟು ಬಲಗೊಳಿಸುವುದಕ್ಕೆ ಅಗತ್ಯ ಕಾರ್ಯವಿಧಾನಗಳನ್ನು ಮರು ರೂಪಿಸಲು ನಾವು ಕೆಲಸ ಮಾಡುತ್ತಿದ್ದೇವೆ' ಎಂದು ತಿಳಿಸಿದರು.

ಅಲ್ಲದೇ, ಕೃಷಿ, ವಿಜ್ಞಾನ, ಕೃತಕ ಬುದ್ಧಿಮತ್ತೆ ಕ್ಷೇತ್ರಗಳಲ್ಲೂ ಸಹಕಾರ ಹೆಚ್ಚಿಸುವ ನಿಟ್ಟಿನಲ್ಲಿ ಮಾತುಕತೆ ನಡೆದಿದೆ ಎಂದಿದ್ದಾರೆ.



ಭಾರತಕ್ಕೆ ಭೇಟಿ ನೀಡಿರುವ ಕೆನಡಾ ವಿದೇಶಾಂಗ ಸಚಿವೆ ಅನಿತಾ ಆನಂದ್ ಅವರೊಂದಿಗೆ ಸಚಿವ ಎಸ್.ಜೈಶಂಕರ್ ಸೋಮವಾರ ಸಂವಾದ ನಡೆಸಿದರು – ಪಿಟಿಐ ಚಿತ್ರ

ಮೋದಿ ಜತೆಗೆ ಮಾತುಕತೆ

ಮೂರು ದೇಶಗಳ ಪ್ರವಾಸದ ನಿಮಿತ್ತ ಭಾರತಕ್ಕೆ ಭೇಟಿ ನೀಡಿರುವ ಕೆನಡಾ ವಿದೇಶಾಂಗ ಸಚಿವೆ ಅನಿತಾ ಆನಂದ್ ಅವರು ಸೋಮವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿದ್ದಾರೆ.

ಉಭಯ ರಾಷ್ಟ್ರಗಳ ನಡುವಿನ ಸಂಬಂಧವನ್ನು ವೃದ್ಧಿಗೊಳಿಸಲು ಕೈಗೊಳ್ಳುತ್ತಿರುವ ಕ್ರಮಗಳ ಕುರಿತು ಪ್ರಧಾನಿ ಜತೆಗೆ ಅನಿತಾ ಚರ್ಚಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಲ್ಲದೇ, ವ್ಯಾಪಾರ, ತಂತ್ರಜ್ಞಾನ, ಕೃಷಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರ ಹೆಚ್ಚಿಸುವ ಅಗತ್ಯದ ಬಗ್ಗೆಯೂ ಪ್ರಧಾನಿ ಮಾತನಾಡಿದ್ದಾರೆ ಎನ್ನಲಾಗಿದೆ.

ಜಿ–7 ಶೃಂಗಸಭೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿ ಪ್ರಧಾನಿ ಮೋದಿ ಅವರು ಜೂನ್‌ನಲ್ಲಿ ಕೆನಡಾಗೆ ಭೇಟಿ ನೀಡಿದ್ದರು. ಆ ಸಂದರ್ಭವನ್ನೂ ಅನಿತಾ ಅವರ ಜತೆಗಿನ ಮಾತುಕತೆಯ ವೇಳೆ ಮೋದಿ ಸ್ಮರಿಸಿದ್ದಾರೆ ಎಂದೂ ತಿಳಿಸಲಾಗಿದೆ.

ತನಿಖೆ ಸಿಬಿಐಗೆ ವಹಿಸಿದ ಸುಪ್ರೀಂ ಕೋರ್ಟ್

ಒಂದನೇ ಪುಟದಿಂದ...

ಪ್ರಕರಣಕ್ಕೆ ಸಂಬಂಧಿಸಿದ ಅರ್ಜಿಗಳನ್ನು ವಿಚಾರಣೆಗೆ ಪರಿಗಣಿಸಿದ್ದಕ್ಕೆ ಮತ್ತು ಎಸ್‌ಐಟಿ ತನಿಖೆಗೆ ಆದೇಶಿಸಿದ್ದಕ್ಕಾಗಿ ಮದ್ರಾಸ್ ಹೈಕೋರ್ಟ್‌ನ ನ್ಯಾಯಮೂರ್ತಿ ಎನ್.ಸೆಂಥಿಲ್‌ಕುಮಾರ್ ಅವರನ್ನು ಪೀಠವು ತರಾಟೆಗೆ ತೆಗೆದುಕೊಂಡಿತು.

'ಪ್ರಕರಣದ ತನಿಖೆಗೆ ಕೋರಿ ಸಲ್ಲಿಸಿರುವ ಅರ್ಜಿಗಳು ಮದುರೈ ಪೀಠದ ಮುಂದೆ ಬಾಕಿ ಇರುವಾಗ ಹಾಗೂ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯವರ ಆದೇಶವಿಲ್ಲದೆಯೇ ಅರ್ಜಿಗಳನ್ನು ಪುರಸ್ಕರಿಸಲು ಸೆಂಥಿಲ್‌ಕುಮಾರ್ ಅವರಿಗೆ ಯಾವುದೇ ಅವಕಾಶವಿರಲಿಲ್ಲ' ಎಂದು ಹೇಳಿತು.

ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ಸ್ವತಂತ್ರ ತನಿಖೆ ನಡೆಸಬೇಕೆಂದು ಟಿವಿಕೆ ಆಗ್ರಹಿಸಿತ್ತು. 'ಎಸ್‌ಐಟಿಯಲ್ಲಿ ತಮಿಳುನಾಡಿನ ಪೊಲೀಸ್ ಅಧಿಕಾರಿಗಳು ಮಾತ್ರ ಇದ್ದಾರೆ. ಅವರಿಂದ ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲ' ಎಂದು ಹೇಳಿತ್ತು.

ಕೋಲ್ಡ್ರಿಫ್ ತಯಾರಕರ ಮನೆ ಮೇಲೆ ಇ.ಡಿ ದಾಳಿ

ಚೆನ್ನೈ (ಪಿಟಿಐ): ಮಧ್ಯಪ್ರದೇಶದಲ್ಲಿ ಮಕ್ಕಳ ಸಾವಿಗೆ ಕಾರಣವಾಗಿದೆ ಎಂದು ಆಪಾದಿಸಲಾದ ಕೋಲ್ಡ್ರಿಫ್ ಕೆಮ್ಮಿನ ಸಿರಪ್ ತಯಾರಕ ಸ್ರೇಸನ್ ಫಾರ್ಮಾಸ್ಯುಟಿಕಲ್ಸ್ ಹಾಗೂ ತಮಿಳುನಾಡು ಆಹಾರ ಮತ್ತು ಔಷಧ ಆಡಳಿತ ಇಲಾಖೆಯ (ಟಿಎನ್‌ಎಫ್‌ಡಿಎ) ಪ್ರಮುಖ ಅಧಿಕಾರಿಗಳಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಸೋಮವಾರ ಶೋಧ ನಡೆಸಿದೆ.



ಹಣ ಅಕ್ರಮ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿದ ತನಿಖೆಯ ಭಾಗವಾಗಿ ಈ ಶೋಧ ನಡೆಸಲಾಗಿದೆ. ಹಣ ಅಕ್ರಮ ವರ್ಗಾವಣೆ ತಡೆ (ಪಿಎಂಎಲ್) ಕಾಯ್ದೆ ಅಡಿಯಲ್ಲಿ ಚೆನ್ನೈನ ಕನಿಷ್ಠ ಏಳು ಸ್ಥಳಗಳಲ್ಲಿ ಶೋಧ ನಡೆದಿದೆ ಎಂದು ಇ.ಡಿ ಅಧಿಕಾರಿಗಳು ಹೇಳಿದ್ದಾರೆ. ಸ್ರೇಸನ್ ಫಾರ್ಮಾಸ್ಯುಟಿಕಲ್ಸ್‌ನ ಪ್ರಮುಖ ಉದ್ಯೋಗಿಗಳು ಮತ್ತು ಬಂಧನಕ್ಕೊಳಗಾಗಿರುವ ಟಿಎನ್‌ಎಫ್‌ಡಿಎಯ ನಿರ್ದೇಶಕ ಪಿ.ಯು. ಕಾರ್ತಿಕೇಯನ್ ಅವರ ಮನೆಗಳು ಇದರಲ್ಲಿ ಸೇರಿವೆ.

ತಮಿಳುನಾಡು ವಿಚಕ್ಷಣಾ ಮತ್ತು ಭ್ರಷ್ಟಾಚಾರ ನಿಗ್ರಹ ನಿರ್ದೇಶನಾಲಯವು (ಡಿವಿಎಸಿ) ಕಾರ್ತಿಕೇಯನ್ ಅವರನ್ನು ಜುಲೈಯಲ್ಲಿ ಲಂಚ ಪ್ರಕರಣದಲ್ಲಿ ಬಂಧಿಸಿತ್ತು.

ಕಲುಷಿತ ಕೆಮ್ಮಿನ ಸಿರಪ್ ಮಾರಾಟದಿಂದ ಬಂದ ಲಾಭವು ಪಿಎಂಎಲ್‌ಎ ಅಡಿಯಲ್ಲಿ ಅಪರಾಧದ ಆದಾಯವಾಗಿದ್ದು, ಇದನ್ನು ಸಾಬೀತುಪಡಿಸಲು ಇ.ಡಿ ಪುರಾವೆಗಳನ್ನು ಸಂಗ್ರಹಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಸ್ರೇಸನ್ ಫಾರ್ಮಾಸ್ಯುಟಿಕಲ್ಸ್ ವಿರುದ್ಧ ಮಧ್ಯಪ್ರದೇಶದಲ್ಲಿ ದಾಖಲಾಗಿರುವ ಪೊಲೀಸ್ ಎಫ್‌ಐಆರ್ ಮತ್ತು ತಮಿಳುನಾಡಿನ ಲಂಚ ಪ್ರಕರಣದಲ್ಲಿ ದಾಖಲಾಗಿರುವ ಎಫ್‌ಐಆರ್ ಆಧಾರದಲ್ಲಿ ಇ.ಡಿ ಅವರ ವಿರುದ್ಧ ಪಿಎಂಎಲ್‌ಎ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದು, ತನಿಖೆ ಕೈಗೊಂಡಿದೆ.

ಮಧ್ಯಪ್ರದೇಶದಲ್ಲಿ ಕೋಲ್ಡ್ರಿಫ್ ಸಿರಪ್ ಸೇವಿಸಿದ ಐದು ವರ್ಷದೊಳಗಿನ ಕನಿಷ್ಠ 22 ಮಕ್ಕಳು ಮೂತ್ರಪಿಂಡ ವೈಫಲ್ಯದಿಂದ ಮೃತಪಟ್ಟಿದ್ದಾರೆ ಎಂದು ಆರೋಪಿಸಲಾಗಿದೆ.

ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದು ವಿರೋಧಿಸಿ ರಾಜೀನಾಮೆ ನೀಡಿದ್ದ ಅಧಿಕಾರಿ

ಮಾಜಿ ಐಎಎಸ್ ಅಧಿಕಾರಿ ಕಣ್ಣನ್ ಕಾಂಗ್ರೆಸ್‌ಗೆ

ನವದೆಹಲಿ (ಪಿಟಿಐ): ಮಾಜಿ ಐಎಎಸ್ ಅಧಿಕಾರಿ ಕೇರಳದ ಕಣ್ಣನ್ ಗೋಪಿನಾಥನ್ ಅವರು ಸೋಮವಾರ ಕಾಂಗ್ರೆಸ್ ಸೇರಿದರು. 'ಕಾಂಗ್ರೆಸ್ ಪಕ್ಷ ಮಾತ್ರ ದೇಶವನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯಬಲ್ಲದು' ಎಂದು ಅವರು ಹೇಳಿದರು.

ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ್ದರಿಂದ ಅಲ್ಲಿನ ಜನರಿಗೆ 'ಅಭಿವ್ಯಕ್ತಿ ಸ್ವಾತಂತ್ರ್ಯ ನಿರಾಕರಿಸಲಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿ ಕಣ್ಣನ್ ಅವರು 2019ರಲ್ಲಿ ಐಎಎಸ್ ಹುದ್ದೆಗೆ ರಾಜೀನಾಮೆ ನೀಡಿದ್ದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಹಾಗೂ ಪಕ್ಷದ ಮುಖಂಡರಾದ ಕನ್ಹಯ್ಯಾ ಕುಮಾರ್, ಜಿಗ್ನೇಶ್ ಮೇವಾನಿ ಮತ್ತು ಮಾಜಿ ಐಎಎಸ್ ಅಧಿಕಾರಿಯೂ ಆಗಿರುವ ಕಾಂಗ್ರೆಸ್ ಸಂಸದ ಸಸಿಕಾಂತ್ ಸೆಂಥಿಲ್ ಅವರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆಗೊಂಡರು.



ಕಾಂಗ್ರೆಸ್ ಸೇರ್ಪಡೆಯಾದ ಕಣ್ಣನ್ ಗೋಪಿನಾಥನ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಪವನ್ ಖೇರಾ, ಕನ್ಹಯ್ಯಾ ಕುಮಾರ್ ಪಾಲ್ಗೊಂಡಿದ್ದರು – ಪಿಟಿಐ ಚಿತ್ರ

'ಗೋಪಿನಾಥನ್ ಅವರು ದೇಶದ ದೀನದಲಿತರ ಮತ್ತು ತಳ ಸಮುದಾಯದ ಜನರ ಬಗ್ಗೆ ಕಾಳಜಿ ಹೊಂದಿರುವ, ಯಾವಾಗಲೂ ನ್ಯಾಯ ಹಾಗೂ ಒಗ್ಗಟ್ಟಿಗಾಗಿ ಹೋರಾಡಿದ ಧೈರ್ಯಶಾಲಿ ಅಧಿಕಾರಿಗಳಲ್ಲಿ ಒಬ್ಬರಾಗಿದ್ದಾರೆ. ಕೇರಳದಲ್ಲಿ ಜನಿಸಿದ ಅವರು ಈಶಾನ್ಯ ರಾಜ್ಯಗಳು ಮತ್ತು ದೇಶದ ಇತರ ಭಾಗಗಳಲ್ಲಿ ಕೆಲಸ ಮಾಡಿದ್ದಾರೆ' ಎಂದು ವೇಣುಗೋಪಾಲ್ ಅವರು ಹೇಳಿದರು.

'ಅವರು ಐಎಎಸ್ ಹುದ್ದೆಗೆ 2019ರಲ್ಲಿ ರಾಜೀನಾಮೆ ನೀಡಿದರು. ಆದರೆ, ರಾಜೀನಾಮೆಯನ್ನು ಇನ್ನೂ ಅಂಗೀಕರಿಸಲಾಗಿಲ್ಲ. ನ್ಯಾಯಕ್ಕಾಗಿ ಹೋರಾಡುವ ಅಧಿಕಾರಿಗಳನ್ನು ಸರ್ಕಾರವು ಶಿಕ್ಷಿಸುತ್ತಿದೆ' ಎಂದು ಟೀಕಿಸಿದರು.

> **ಬಿಜೆಪಿ ಸರ್ಕಾರ ದೇಶವನ್ನು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸುತ್ತಿಲ್ಲ ಎಂಬುದು ಮನವರಿಕೆಯಾದಾಗ ಐಎಎಸ್ ಹುದ್ದೆ ತ್ಯಜಿಸಿದೆ. ಸರ್ಕಾರ ಮಾಡುತ್ತಿರುವ ತಪ್ಪಿನ ವಿರುದ್ಧ ನಾನು ಹೋರಾಡಬೇಕು**
> **ಕಣ್ಣನ್ ಗೋಪಿನಾಥನ್,** ಮಾಜಿ ಐಎಎಸ್ ಅಧಿಕಾರಿ

ಸಿ -ಸೆಕ್ಷನ್ ಯಾರಿಗೆ? ಯಾವಾಗ? ನಿರ್ಧಾರ ಕಷ್ಟ

• ಡಾ. ಶ್ರೀನಿವಾಸ ಹರಪನಹಳ್ಳಿ

ಹೆಣ್ಣುಮಕ್ಕಳ ಜೀವನದಲ್ಲಿ ಮದುವೆ, ಬಸಿರು, ಬಾಣಂತನ ಮುಂತಾದವುಗಳಿಗೆ ಇನ್ನಿಲ್ಲದ ಮಹತ್ವ. ಸೃಷ್ಟಿಕ್ರಿಯೆ ನಿರಂತರವಾಗಿ ಸಾಗಲು ನಮ್ಮ ಬದುಕಿನಲ್ಲಿ ಈ ಆಯಾಮ ಕೂಡ ಮುಖ್ಯ. ಭಾರತೀಯ ಕುಟುಂಬಗಳಲ್ಲಂತೂ ಮದುವೆ-ಹೆರಿಗೆ-ನವಜಾತ ಶಿಶುವಿನ ಆರೈಕೆಗಳು ಮೊದಲಿನಿಂದಲೂ ಸಂಭ್ರಮಾಚರಣೆಯ ಭಾಗಗಳೇ ಆಗಿವೆ.

ಹಿಂದಿನ ಕಾಲದಲ್ಲಿ ಬಹುತೇಕ ಹೆರಿಗೆಗಳು ಮನೆಯಲ್ಲಿಯೇ ಆಗುತ್ತಿದ್ದವು. ಆಗ ಈಗಿನಂತೆ ಗಲ್ಲಿಗೊಂದು ಆಸ್ಪತ್ರೆ, ತಜ್ಞವೈದ್ಯರ ಲಭ್ಯತೆ ಇರಲಿಲ್ಲ. ಹಾಗಾಗಿ ಹೆರಿಗೆಯು ಆರೋಗ್ಯಸಮಸ್ಯೆ ಎನಿಸದೆಯೇ ಮನೆಯ ಇನ್ನಿತರ ನಿತ್ಯಕರ್ಮಗಳಂತೆ ಅದು ಕೂಡ ಸಹಜವಾಗಿ ನಡೆದುಹೋಗುತ್ತಿತ್ತು. ಅನೇಕ ಬಾರಿ ಹೆರಿಗೆ ಸುಸೂತ್ರವಾಗಿ ಆದರೂ ಕೆಲವೊಂದು ಅವಘಡಗಳು ಕೆಲವೊಮ್ಮೆ ಸಂಭವಿಸುತ್ತಿದ್ದವು.

ತಾಯಿಗೋ ಅಥವಾ ನವಜಾತಶಿಶುವಿಗೋ ಸೋಂಕು ತಗುಲಿ ಆಸ್ಪತ್ರೆಯನ್ನು ಹುಡುಕಿಕೊಂಡು ಹೋಗುವ ಪ್ರಸಂಗ ಬರುತ್ತಿತ್ತು. ಕೆಲವೊಮ್ಮೆ ಸೋಂಕು ಮಾರಣಾಂತಿಕವೂ ಆಗುತ್ತಿತ್ತು. ಆದರೆ ಕ್ರಮೇಣ ಸಾಮಾಜಿಕ ಸ್ತರದಲ್ಲಿ ಏಳಿಗೆಯಾದಂತೆ ಆರೋಗ್ಯ ಸೌಲಭ್ಯಗಳೂ ಹೆಚ್ಚಿ ಬಹುತೇಕ ಹೆರಿಗೆಗಳು ಆಸ್ಪತ್ರೆಯಲ್ಲೇ ಜರುಗತೊಡಗಿದವು. ಈಗ ವೈದ್ಯರ ಜೊತೆ ದಾದಿಯರೂ ಸುರಕ್ಷಿತವಾಗಿ ಹೆರಿಗೆ ಮಾಡಿಸುವಲ್ಲಿ ಪರಿಣತರಾಗಿದ್ದಾರೆ. ಜೊತೆಗೆ ಆರೋಗ್ಯ ಕಾರ್ಯಕರ್ತೆಯರೂ ಮನೆ ಮನೆಗೆ ಭೇಟಿ ನೀಡಿ ಗರ್ಭಿಣಿಯರ ತಪಾಸಣೆಯನ್ನು ಮಾಡುವುದರಿಂದ, ವರ್ಧಕಮಾತ್ರೆಗಳನ್ನು ನೀಡುವುದರಿಂದ ಪ್ರಸೂತಿಸಂಬಂಧಿ ಸಾವು-ನೋವುಗಳು ಈಗ ಸಾಕಷ್ಟು ಕಡಿಮೆಯಾಗಿವೆ. ಆದಾಗ್ಯೂ ಕೆಲವು ಸಂದರ್ಭಗಳಲ್ಲಿ ಹೆರಿಗೆ ಸಹಜವಾಗಿ ಆಗದಿದ್ದಾಗ ಶಸ್ತ್ರಚಿಕಿತ್ಸೆಯ ಮೂಲಕ ಶಿಶುವನ್ನು ತಾಯಿಯ ಗರ್ಭದಿಂದ ಹೊರತೆಗೆಯಬೇಕಾಗಿ ಬರುತ್ತದೆ. ಇದನ್ನು ಸೂಕ್ತ ತರಬೇತಿ ಪಡೆದ ವೈದ್ಯ-ದಾದಿಯರ ತಂಡವೇ ಮಾಡಬೇಕು. ಈ ಶಸ್ತ್ರಚಿಕಿತ್ಸೆ 'ಸಿಸೇರಿಯನ್ ಸೆಕ್ಷನ್' ಎಂದೇ ಎಲ್ಲೆಡೆ ಪ್ರಸಿದ್ಧಿಯಾಗಿದೆ.

ಈಗ ಬಹುತೇಕ ಎಲ್ಲ ಆಸ್ಪತ್ರೆಗಳಲ್ಲೂ ಸಿಸೇರಿಯನ್ ಹೆರಿಗೆ ಮಾಡುವ ಸೌಲಭ್ಯವಿರುತ್ತದೆ. ಸಿಸೇರಿಯನ್ ಸೆಕ್ಷನ್ ಸಾವಿರಾರು ವರ್ಷಗಳ ಹಿಂದಿನಿಂದಲೇ ಆರಂಭವಾಗಿರಬಹುದೆಂದು ಇತಿಹಾಸ ಹೇಳುತ್ತದೆ. ಮೃತ ಗರ್ಭಿಣಿಯನ್ನು ಹಾಗೆಯೇ ಸಮಾಧಿ ಮಾಡಬಾರದು ಎಂದು ಆಕೆಯ ಗರ್ಭವನ್ನು ಸೀಳಿ ಮಗುವನ್ನು ಹೊರತೆಗೆಯುವ ಪದ್ಧತಿ ಪ್ರಾಚೀನ ಕಾಲದಲ್ಲಿತ್ತು. ಅದೇ ಕ್ರಮೇಣ ಸಿಸೇರಿಯನ್ ಶಸ್ತ್ರಚಿಕಿತ್ಸೆಗೆ ನಾಂದಿ ಹಾಡಿತು. ರೋಮಿನ ಅಧಿಪತಿ ಜ್ಯೂಲಿಯಸ್ ಸೀಸರ್ ಜನಿಸಿದ್ದು ಸಿಸೇರಿಯನ್ ಶಸ್ತ್ರಚಿಕಿತ್ಸೆಯಿಂದಲೇ ಎಂದೂ ಹೇಳುತ್ತಾರೆ. ಆದರೆ ಈ ಘಟನೆಗಳಿಗೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ. ಆದರೆ 19ನೇ ಶತಮಾನದ ವೇಳೆಗೆ ಸಿಸೇರಿಯನ್ ಶಸ್ತ್ರಚಿಕಿತ್ಸೆಯನ್ನು ನಿಯಮಿತವಾಗಿ ಮಾಡುತ್ತಿದ್ದರು ಎನ್ನುವುದಕ್ಕೆ ಅನೇಕ ಸಾಕ್ಷ್ಯಾಧಾರಗಳಿವೆ.



ಪ್ರಸೂತಿಶಾಸ್ತ್ರದಲ್ಲಿ ಸಿಸೇರಿಯನ್ ಸೆಕ್ಷನ್ ಒಂದು ಪ್ರಮುಖ ಶಸ್ತ್ರಚಿಕಿತ್ಸೆಯಾಗಿದೆ. ಸಾಮಾನ್ಯವಾಗಿ ಶಿಶುವು ಯೋನಿದ್ವಾರದಿಂದ ಹೊರಬರಲು ತೊಂದರೆ ಉಂಟಾದಾಗ ಈ ಶಸ್ತ್ರಚಿಕಿತ್ಸೆಯ ಮುಖಾಂತರ ಶಿಶುವನ್ನು ಹೊರತೆಗೆಯಬೇಕಾಗುತ್ತದೆ. ಇದಕ್ಕೆ ಹಲವಾರು ಕಾರಣಗಳಿರುತ್ತವೆ. ಮುಖ್ಯವಾಗಿ ಗರ್ಭದಲ್ಲಿರುವ ಶಿಶುವಿನ ಹೃದಯಬಡಿತದಲ್ಲಿ ಹಠಾತ್ತನೆ ಏರುಪೇರು ಉಂಟಾದಾಗ, ಪ್ರಸವಸಮಯದಲ್ಲಿ ಶಿಶುವಿನ ತಲೆ, ಹೊಕ್ಕುಳಬಳ್ಳಿ ಅಥವಾ ಅಂಗ ತೊಡಕು ಹಾಕಿಕೊಂಡಾಗ, ಗರ್ಭದ ಚೀಲ ಒಡೆದು ಮಲಮಿಶ್ರಿತ ನೀರು ಹೊರಬಂದಾಗ ತಕ್ಷಣವೇ ಸಿಸೇರಿಯನ್ ಶಸ್ತ್ರಚಿಕಿತ್ಸೆಯ ಮೂಲಕ ಶಿಶುವನ್ನು ಹೊರತೆಗೆಯಬೇಕಾಗುತ್ತದೆ.

ಗರ್ಭಿಣಿಯ ಎತ್ತರ ಕಡಿಮೆ ಇದ್ದು ಅಥವಾ ಶ್ರೋಣಿಯ ಮೂಳೆ ಅಥವಾ ಅವಯವಗಳಲ್ಲಿ ಏನಾದರೂ ಊನ ಇದ್ದರೆ ಶಿಶುವಿನ ತಲೆ ದ್ವಾರದ ಮೂಲಕ ಹೊರಬರಲು ಸಾಧ್ಯವಾಗುವುದಿಲ್ಲ. ಕೆಲವೊಮ್ಮೆ ಹಿಂದೆ ಆದ ಶಸ್ತ್ರಚಿಕಿತ್ಸೆಗಳು, ಜರಾಯುವಿನ (ಪ್ಲಾಸೆಂಟಾ) ತೊಂದರೆಗಳು ಕೂಡ ದ್ವಾರದ ಅಗಲವನ್ನು ಕಡಿಮೆ ಮಾಡುತ್ತವೆ. ಇಂಥ ಸಂದರ್ಭಗಳಲ್ಲಿ ಕೂಡ ಸಿಸೇರಿಯನ್ ಶಸ್ತ್ರಚಿಕಿತ್ಸೆಯೇ ಪರಿಹಾರ. ಒಮ್ಮೊಮ್ಮೆ ಪ್ರಸವದ ಸಮಯದಲ್ಲಿ ಗರ್ಭಕೋಶ ತಕ್ಕಮಟ್ಟಿಗೆ ಸಂಕೋಚನಗೊಂಡು ಶಿಶುವನ್ನು ಹೊರದೂಡುವುದಿಲ್ಲ. ಆಗ ಕೆಲವು ಇಂಜೆಕ್ಷನ್‌ಗಳನ್ನು ನೀಡಿ ಗರ್ಭಕೋಶದ ಸಂಕೋಚನವನ್ನು ಬಲಪಡಿಸಬಹುದು. ಆದರೂ ಶಿಶು ಹೊರಬರದಿದ್ದರೆ ಸಿಸೇರಿಯನ್ ಶಸ್ತ್ರಚಿಕಿತ್ಸೆ ಬೇಕಾಗುತ್ತದೆ.

ವಿರಳ ಸಂದರ್ಭಗಳಲ್ಲಿ ಗರ್ಭಿಣಿಗೆ ರಕ್ತದೊತ್ತಡ ಹೆಚ್ಚಾಗಿ ಅಪಸ್ಮಾರ, ರಕ್ತಸ್ರಾವ ಇನ್ನಿತರ ಪ್ರಾಣಾಂತಿಕ ಸಮಸ್ಯೆಗಳು ಉಂಟಾಗುತ್ತವೆ. ಆಗ ಸಿಸೇರಿಯನ್ ಶಸ್ತ್ರಚಿಕಿತ್ಸೆ ಮುಖಾಂತರ ಶಿಶುವನ್ನು ತಕ್ಷಣ ಹೊರತೆಗೆಯುವುದರಿಂದ ತಾಯಿ ಹಾಗೂ ಮಗುವಿನ ಪ್ರಾಣಗಳನ್ನು ಉಳಿಸಬಹುದು.

ಈ ಎಲ್ಲ ಸಮಸ್ಯೆಗಳನ್ನು ವೈದ್ಯಕೀಯ ಪರಿಭಾಷೆಯಲ್ಲಿ '3P', ಎಂದರೆ ಪವರ್ (ಗರ್ಭಕೋಶದ ಸಂಕೋಚನ), ಪ್ಯಾಸೇಜ್ (ಗರ್ಭದ್ವಾರ) ಮತ್ತು ಪ್ಯಾಸೆಂಜರ್ (ಶಿಶು) ಎಂದು ವಿಂಗಡಿಸುತ್ತಾರೆ. ಇವುಗಳಲ್ಲಿ ಕೆಲವೊಂದು ಸಮಸ್ಯೆಗಳನ್ನು ಮೊದಲೇ ಊಹಿಸಬಹುದು. ಇನ್ನು ಕೆಲವು ಪ್ರಸವದ ಸಮಯದಲ್ಲೇ ಕಾಣಿಸುತ್ತವೆ. ಹಾಗಾಗಿ ಯಾವ ಗರ್ಭಿಣಿಗೆ ಸಹಜ ಹೆರಿಗೆಯಾಗಬಹುದು, ಯಾರಿಗೆ ಸಿಸೇರಿಯನ್ ಹೆರಿಗೆ ಬೇಕಾಗಬಹುದು ಎಂದು ಮೊದಲೇ ಹೇಳುವುದು ಕಷ್ಟ. ಕೆಲವೊಮ್ಮೆ ಮೊದಲ ಹೆರಿಗೆ ಸಹಜವಾಗೇ ಆಗಿ ಎರಡನೇ ಹೆರಿಗೆಯಲ್ಲಿ ಮೇಲೆ ತಿಳಿಸಿದ ಕೆಲವು ತೊಂದರೆಗಳು ಕಾಣಿಸಿಕೊಂಡು ಅವರಿಗೆ ಸಿಸೇರಿಯನ್ ಬೇಕಾಗಬಹುದು.

ಸಿಸೇರಿಯನ್ ಶಸ್ತ್ರಚಿಕಿತ್ಸೆ ತುಂಬ ಕಷ್ಟಕರವೇನಲ್ಲ. ಆದರೆ ರೋಗಿಯು ಕೆಲವು ದಿನಗಳವರೆಗೆ ಆಸ್ಪತ್ರೆಯಲ್ಲಿರಬೇಕಾಗುತ್ತದೆ. ಸಿಸೇರಿಯನ್ ಶಸ್ತ್ರಚಿಕಿತ್ಸೆಗೆ ಸುಸಜ್ಜಿತ ಶಸ್ತ್ರಚಿಕಿತ್ಸಾ ಕೊಠಡಿ, ತಜ್ಞವೈದ್ಯರು ಹಾಗೂ ಅರಿವಳಿಕೆಯ ಅವಶ್ಯಕತೆ ಇರುತ್ತದೆ. ಉಳಿದ ಶಸ್ತ್ರಚಿಕಿತ್ಸೆಗಳ ಹಾಗೆ ನೋವು ಮತ್ತು ಸೋಂಕಿನ ಸಾಧ್ಯತೆಗಳಿರುತ್ತವೆ. ಆದರೆ ಸೂಕ್ತ ಔಷಧಗಳಿಂದ ಇವುಗಳನ್ನು ತಡೆಗಟ್ಟಬಹುದು.

ಇಂದಿನ ಆಧುನಿಕಯುಗದಲ್ಲಿ ಯುವಜನರಲ್ಲಿ ಫಲವತ್ತತೆ ಕಡಿಮೆಯಾಗಿ ಗರ್ಭಧರಿಸಲು ಅನೇಕ ಚಿಕಿತ್ಸೆಗಳ ಅವಶ್ಯಕತೆ ಉಂಟಾಗಿದೆ. ಅಲ್ಲದೆ ವಿದ್ಯಾಭ್ಯಾಸ, ದುಡಿಮೆ ಹಾಗೂ ಇನ್ನಿತರ ಜವಾಬ್ದಾರಿಗಳು ಮದುವೆ ಹಾಗೂ ಗರ್ಭಧಾರಣೆಯ ವಯಸ್ಸನ್ನು ಬಹಳಷ್ಟು ಮುಂದೂಡಿವೆ. ಇವೆಲ್ಲ ಮೇಲೆ ತಿಳಿಸಿದ 3Pಗಳ ಮೇಲೆ ದುಷ್ಪರಿಣಾಮವನ್ನು ಉಂಟುಮಾಡುತ್ತವೆ. ಹೀಗಾಗಿ ಸಿಸೇರಿಯನ್ ಹೆರಿಗೆಗಳ ಸಂಖ್ಯೆ ನಿಧಾನವಾಗಿ ಜಾಸ್ತಿಯಾಗುತ್ತಿದೆ.

❖



ಕೆಮ್ಮಿನ ಔಷಧ ಎಂಬ ಗುಮ್ಮ

• ಡಾ. ಕುಶ್ವಂತ್ ಕೋಳಿಬೈಲು

ಮಕ್ಕಳು ವೇಗವಾಗಿ ಬೆಳೆಯುವ ಕಾರಣಕ್ಕೆ ಅವರ ತೂಕವು ಬದಲಾಗುತ್ತಿರುತ್ತದೆ. ನವಜಾತಶಿಶುವಿನ ತೂಕವು ಹುಟ್ಟಿದ ಒಂದೇ ವರ್ಷದಲ್ಲಿ ನಾಲ್ಕು ಪಟ್ಟು ಹೆಚ್ಚಾಗುತ್ತದೆ. ಮಕ್ಕಳಿಗೆ ಔಷಧವನ್ನು ನೀಡಬೇಕಾದಲ್ಲಿ ಅವರ ದೇಹದ ತೂಕಕ್ಕೆ ಅನುಗುಣವಾಗಿ ನೀಡಬೇಕಾಗುತ್ತದೆ

ಚಿಕ್ಕಮಕ್ಕಳಲ್ಲಿ ರೋಗ ನಿರೋಧಕಶಕ್ತಿ ಕಡಿಮೆಯಿರುವುದರಿಂದ ಅವರಿಗೆ ಹೆಚ್ಚು ಸೋಂಕುಗಳು ಉಂಟಾಗುತ್ತವೆ. ಗಾಳಿಯ ಮೂಲಕ ಒಬ್ಬರಿಂದ ಒಬ್ಬರಿಗೆ ಹರಡುವ ಗಂಟಲು ಮತ್ತು ಶ್ವಾಸಕೋಶದ ಸೋಂಕುಗಳು ಮಕ್ಕಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಹಲವು ಬ್ಯಾಕ್ಟೀರಿಯಾ ಮತ್ತು ವೈರಾಣುಗಳು ಈ ಮಾದರಿಯ ಸೋಂಕುಗಳನ್ನು ಉಂಟುಮಾಡುತ್ತವೆ. ಮಕ್ಕಳಲ್ಲಿ ಮಾರಣಾಂತಿಕ ಶ್ವಾಸಕೋಶದ ನ್ಯುಮೋನಿಯಾವನ್ನು ಉಂಟುಮಾಡುವ ಕೆಲವೇ ಕೆಲವು ಬ್ಯಾಕ್ಟೀರಿಯಾದ ಸೋಂಕುಗಳನ್ನು ಹತೋಟಿಯಲ್ಲಿಡಲು ಮಕ್ಕಳಿಗೆ ಲಸಿಕೆಗಳನ್ನು ಹಾಕಲಾಗುತ್ತದೆ. ಆದರೆ ಸಾವಿರಾರು ವೈರಾಣುಗಳು ಮಕ್ಕಳಲ್ಲಿ ಉಂಟು ಮಾಡುವ ಶೀತ ಮತ್ತು ಕೆಮ್ಮಿನ ಕಾಯಿಲೆಗಳನ್ನು ತಡೆಗಟ್ಟಲು ಸಾಧ್ಯವಿಲ್ಲ. ಶಾಲೆಗೆ ಹೋಗುವ ವಯೋಮಾನದ ಮಕ್ಕಳಿಗೆ ಪ್ರತಿ ತಿಂಗಳು ಕೂಡ ಇಂತಹ ಸೋಂಕುಗಳು ಕಾಣಿಸಿಕೊಳ್ಳಬಹುದು. ಶಾಲೆಯಲ್ಲಿ ಒಂದು ಮಗುವಿಗೆ ಶೀತ ಮತ್ತು ಕೆಮ್ಮು ಬಂದರೆ ಅದು ಇತರ ಮಕ್ಕಳಿಗೂ ಹರಡುತ್ತದೆ.

ಮಕ್ಕಳಿಗೆ ಶೀತ ಮತ್ತು ಕೆಮ್ಮು ಬಂದಾಗ ಹೆತ್ತವರಲ್ಲಿ ಆತಂಕ ಉಂಟಾಗುವುದು ಸಹಜ. ಸರಿಯಾದ ಮಾಹಿತಿ ಇಲ್ಲದ ಪೋಷಕರು ವೈದ್ಯರ ಬಳಿಗೆ ಹೋಗದೆ ಕೆಮ್ಮು ಮತ್ತು ಶೀತಕ್ಕೆ ಮೆಡಿಕಲ್ ಅಂಗಡಿಯಿಂದ ಸಿರಪ್ ಅನ್ನು ಖರೀದಿಸಿ ಕುಡಿಸುವುದು ಹೆಚ್ಚಾಗಿ ಕಂಡುಬರುತ್ತದೆ. ಇದೇ ತಿಂಗಳು ಮಧ್ಯಪ್ರದೇಶದ ಛಿಂದ್ವಾಢದಲ್ಲಿ ಸುಮಾರು ಹತ್ತೊಂಬತ್ತು ಮಕ್ಕಳು ಕೆಮ್ಮಿನ ಸಿರಪ್ ಕುಡಿದ ಬಳಿಕ ಅಸ್ವಸ್ಥರಾಗಿ ಅಸು ನೀಗಿದ ಘಟನೆ ಜನಮಾನಸದಲ್ಲಿ ಇನ್ನು ಹಸಿರಾಗಿದೆ. ಔಷಧವನ್ನು ಬರೆದುಕೊಟ್ಟ ವೈದ್ಯರು ಮತ್ತು ಕೆಮ್ಮಿನ ಸಿರಪ್ ಅನ್ನು ತಯಾರಿಸಿದ ಕಂಪನಿಯ ವಿರುದ್ಧವೂ ಪ್ರಕರಣ ದಾಖಲಾಗಿದೆ. ಈ ಪ್ರಕರಣದ ಆಳಕ್ಕೆ ಇಳಿದು ತನಿಖೆ ನಡೆಸಿದಾಗ ಹಲವಾರು ವಿಚಾರಗಳು ಬೆಳಕಿಗೆ ಬಂದವು.

ಕೆಮ್ಮು ಮತ್ತು ಶೀತಕ್ಕೆ ನೀಡುವ ಔಷಧವನ್ನು ಕೆಮ್ಮಿನ ಸಿರಪ್ ಎಂದು ದ್ರಾವಣರೂಪದಲ್ಲಿ ನೀಡಲಾಗುತ್ತದೆ. ಇದರಲ್ಲಿ ಬಳಸುವ ಔಷಧೀಯ ಗುಣಗಳನ್ನು ಹೊಂದಿರುವ ರಾಸಾಯನಿಕವು ಯಾವುದೇ ದುಷ್ಪರಿಣಾಮವನ್ನು ಮಗುವಿನ ಅಂಗಾಂಗದ ಮೇಲೆ ಉಂಟು ಮಾಡುವುದಿಲ್ಲವೆಂಬುದು ಬಹಳಷ್ಟು ವರ್ಷಗಳಿಂದ ರುಜುವಾತಾಗಿದೆ. ಈ ಔಷಧೀಯ ರಾಸಾಯನಿಕವನ್ನು ದ್ರವರೂಪದಲ್ಲಿ ಕರಗಿಸಿಡಲು ಮತ್ತೊಂದು ರಾಸಾಯನಿಕ ದ್ರಾವಣವನ್ನು ಬಳಸಲಾಗುತ್ತದೆ. ಅದನ್ನು 'ಡೈ ಇಥೈಲೀನ್ ಗ್ಲೈಕಾಲ್' (Diethylene glycol) ಎಂದು ಕರೆಯಲಾಗುತ್ತದೆ. ಡೈ ಇಥೈಲೀನ್ ಗ್ಲೈಕಾಲ್ ಎಂಬ ದ್ರಾವಣವನ್ನು ಔಷಧದಲ್ಲಿ ಬಳಸಿದರೆ ಅದರ ಪರಿಶುದ್ಧತೆಯನ್ನು ದೃಢೀಕರಣ ಮಾಡಬೇಕು. ಔಷಧದ ಉತ್ಪಾದನೆಗೆ ಬಳಸುವ ಡೈ ಇಥೈಲೀನ್ ಗ್ಲೈಕಾಲ್ ದುಬಾರಿ; ಇದು ದೇಹದ ಯಾವುದೇ ಅಂಗಾಂಗದ ಹಾನಿಯನ್ನು ಉಂಟುಮಾಡುವುದಿಲ್ಲ. ಕೆಲವು ಔಷಧ ಉತ್ಪಾದನಾ ಕಂಪನಿಗಳು ತಮ್ಮ ಉತ್ಪಾದನಾ ಖರ್ಚನ್ನು ಕಡಿಮೆ ಮಾಡುವ ಕಾರಣದಿಂದ ಕೈಗಾರಿಕೆಗಳಲ್ಲಿ ಬಳಸುವ ಕಡಿಮೆ ಗುಣಮಟ್ಟದ ಡೈ ಇಥೈಲೀನ್ ಗ್ಲೈಕಾಲ್ ಬಳಸುತ್ತಾರೆ. ಅವುಗಳ ಪ್ರಮಾಣವು ಕೆಮ್ಮಿನ ಔಷಧದಲ್ಲಿ ಹೆಚ್ಚಾದಾಗ ಅವು ಕಿಡ್ನಿ ಹಾಗೂ ಮಿದುಳಿನ ವೈಫಲ್ಯವನ್ನು ಉಂಟುಮಾಡುತ್ತದೆ. ಮಧ್ಯಪ್ರದೇಶದಲ್ಲಿ ಕೆಮ್ಮಿನ ಸಿರಪ್ ಸೇವನೆಯಿಂದ ಉಂಟಾದ ಮಕ್ಕಳ ಮರಣದ ಪ್ರಕರಣದಲ್ಲಿ ಬಳಸಲಾದ ಕೆಮ್ಮಿನ ಔಷಧದಲ್ಲಿ ಸುಮಾರು ಶೇ 48ಕ್ಕಿಂತಲೂ ಹೆಚ್ಚಿನ ಪ್ರಮಾಣದ ಡೈ ಇಥೈಲೀನ್ ಗ್ಲೈಕಾಲ್ ಅಂಶವು ಕಂಡುಬಂದಿತ್ತು. ಇದು ಅತ್ಯಂತ ಕಳವಳಕಾರಿ ವಿಚಾರ.

ಕೆಮ್ಮಿನ ಸಿರಪ್‌ನ ಸೇವನೆಯಿಂದ ಮಕ್ಕಳು ಅಸುನೀಗಿರುವ ಘಟನೆಯು ನಮ್ಮಲ್ಲಿ ಮೊದಲ ಬಾರಿಗೆ ನಡೆದಿದ್ದಲ್ಲ. ಈ ಹಿಂದೆ ಇಂಥ ಪ್ರಕರಣಗಳು ರಾಜಸ್ಥಾನದಲ್ಲಿಯೂ ಕಂಡುಬಂದಿದ್ದವು. 2023ರಲ್ಲಿ ಭಾರತದಲ್ಲಿ ತಯಾರಿಸಿದ ಕೆಮ್ಮಿನ ಸಿರಪ್‌ಅನ್ನು ಸೇವಿಸಿದ ಕಾರಣಕ್ಕೆ ಗಾಂಬಿಯಾ ಮತ್ತು ಉಝುಬೇಕಿಸ್ಥಾನದಲ್ಲಿ ಹತ್ತಾರು ಮಕ್ಕಳು ಅಸುನೀಗಿದ್ದವು. ಆ ಪ್ರಕರಣದಲ್ಲಿಯೂ ಹಾನಿಕಾರಕ ಡೈ ಇಥೈಲೀನ್ ಗ್ಲೈಕಾಲ್ ಅಂಶವು ಪತ್ತೆಯಾಗಿತ್ತು.

ಮಕ್ಕಳು ವೇಗವಾಗಿ ಬೆಳೆಯುವ ಕಾರಣಕ್ಕೆ ಅವರ ತೂಕವು ಬದಲಾಗುತ್ತಿರುತ್ತದೆ. ನವಜಾತಶಿಶುವಿನ ತೂಕವು ಹುಟ್ಟಿದ ಒಂದೇ ವರ್ಷದಲ್ಲಿ ನಾಲ್ಕು ಪಟ್ಟು ಹೆಚ್ಚಾಗುತ್ತದೆ. ಮಕ್ಕಳಿಗೆ ಔಷಧವನ್ನು ನೀಡಬೇಕಾದಲ್ಲಿ ಅವರ ದೇಹದ ತೂಕಕ್ಕೆ ಅನುಗುಣವಾಗಿ ನೀಡಬೇಕಾಗುತ್ತದೆ. ಮಕ್ಕಳ ತಜ್ಞವೈದ್ಯರ ಸಲಹೆಯನ್ನು ಪಡೆಯದೆ ಅಂದಾಜಿನ ಮೇಲೆ ಔಷಧದ ಪ್ರಮಾಣವನ್ನು ನಿರ್ಧರಿಸುವುದು ಅಪಾಯಕಾರಿಯಾಗಬಹುದು.

ಮಾರುಕಟ್ಟೆಯಲ್ಲಿ ತಮ್ಮ ಔಷಧದ ಗುಣಮಟ್ಟದ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳದ ಕಂಪನಿಯ ಔಷಧವನ್ನು ಖರೀದಿಸುವುದು ಮಕ್ಕಳ ಆರೋಗ್ಯದ ದೃಷ್ಟಿಯಿಂದ ಸೂಕ್ತವಾದ ಕ್ರಮ. ಮಾರುಕಟ್ಟೆಯಲ್ಲಿರುವ ವಿವಿಧ ಔಷಧಗಳ ಗುಣಮಟ್ಟದ ಪರೀಕ್ಷೆಗಳನ್ನು ಸಂಬಂಧಪಟ್ಟ ಇಲಾಖೆಯವರು ನಿಯಮಿತವಾಗಿ ನಡೆಸುತ್ತಾ ಬಂದರೆ ದುರ್ಘಟನೆಗಳನ್ನು ತಪ್ಪಿಸಬಹುದಾಗಿದೆ.

ಕೆಮ್ಮುವ ಪ್ರಕ್ರಿಯೆಯೂ ಶ್ವಾಸಕೋಶದೊಳಗೆ ಅನ್ನ, ನೀರು ಮತ್ತು ಇತರ ಕಣಗಳು ಪ್ರವೇಶ ಮಾಡದಂತೆ ತಡೆಯುವ ರಕ್ಷಣಾತ್ಮಕ ಕ್ರಮವಾಗಿದೆ. ಕೆಮ್ಮುವುದನ್ನು ಸಂಪೂರ್ಣವಾಗಿ ಯಾವ ಔಷಧದಿಂದಲೂ ನಿಲ್ಲಿಸಲು ಪ್ರಯತ್ನಿಸಬಾರದು. ಕೆಮ್ಮಿನ ಔಷಧದಲ್ಲಿ ಶ್ವಾಸಕೋಶದೊಳಗಿರುವ ಕಫವನ್ನು ಕರಗಿಸಬಲ್ಲ ಔಷಧ ಮತ್ತು ಮೂಗು ಸೋರುವುದನ್ನು ಕಡಿಮೆ ಮಾಡುವ ಔಷಧೀಯ ಅಂಶಗಳು ಇರುತ್ತದೆ. ಮಕ್ಕಳಲ್ಲಿ ಕೆಮ್ಮು ಮತ್ತು ಶೀತದ ಔಷಧವನ್ನು ಅತ್ಯಂತ ಅಗತ್ಯದ ಸಂದರ್ಭದಲ್ಲಿ, ಅದೂ ತುಂಬ ಎಚ್ಚರಿಕೆಯಿಂದ ಬಳಸಬೇಕು.

ಒಂದು ವರ್ಷದ ಕಡಿಮೆ ವಯಸ್ಸಿನ ಮಕ್ಕಳಿಕೆ ಕೆಮ್ಮು ಮತ್ತು ಶೀತದ ಸಿರಪ್ ಅನ್ನು ನೀಡಿದರೆ ಅವರಿಗೆ ಲಾಭವಾಗುವ ಬಗ್ಗೆ ವೈಜ್ಞಾನಿಕ ವರದಿಗಳಿಲ್ಲ. ಅಲರ್ಜಿ ಮತ್ತು ಇತರ ಕಾರಣಗಳಿಂದ ಬರುವ ಶೀತ ಮತ್ತು ಕೆಮ್ಮಿನ ಕಾಯಿಲೆಗಳಲ್ಲಿ ಕೆಮ್ಮಿನ ಸಿರಪ್ ಹೆಚ್ಚಿನ ಪರಿಣಾಮ ಬೀರುವುದಿಲ್ಲ. ಕೆಮ್ಮು ಮತ್ತು ಶೀತಗಳು ಸೋಂಕಿನ ಸಂಕೇತವಾಗಿದೆಯೆ ಹೊರತು ಅವುಗಳೇ ಕಾಯಿಲೆಗಳಲ್ಲ. ದೇಹದೊಳಗಿನ ಸೋಂಕು ನಿವಾರಣೆಯಾದಾಗ ಶೀತ ಮತ್ತು ಕೆಮ್ಮು ತಾನಾಗಿಯೇ ಕಡಿಮೆಯಾಗುತ್ತದೆ. ತಜ್ಞವೈದ್ಯರ ಸಲಹೆಯಿಲ್ಲದೆ ತಮಗೆ ಇಷ್ಟ ಬಂದ ಹಾಗೆ ಮಕ್ಕಳಿಗೆ ಸಿರಪ್ ಕುಡಿಸುವುದು ಅಪಾಯಕ್ಕೆ ಅಹ್ವಾನವನ್ನು ನೀಡಿದಂತೆ.

❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ–5 ಸಮಾಂತರ ಶ್ರೇಢಿ

2) ಒಂದು ಸಮಾಂತರ ಶ್ರೇಢಿಯಲ್ಲಿ 16 ಪದಗಳಿವೆ, ಅದರ ಎಲ್ಲಾ ಪದಗಳ ಮೊತ್ತವು 768 ಆಗಿದೆ, ಶ್ರೇಢಿಯ ಕೊನೆಯ ಪದವು 93 ಆದರೆ, ಆ ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ. ಹಾಗೂ ಈ ಶ್ರೇಢಿಯ ಎಲ್ಲಾ ಪದಗಳ ಮೊತ್ತವು, ಮೊದಲ 16 ಬೆಸ ಸ್ವಭಾವಿಕ ಸಂಖ್ಯೆಗಳ ಮೊತ್ತದ ಮೂರರಷ್ಟಕ್ಕೆ ಸಮವಾಗಿರುತ್ತದೆ ಎಂದು ಸೂತ್ರ ಉಪಯೋಗಿಸಿ ತೋರಿಸಿ

ಪರಿಹಾರ

$n = 16$

$S_{16} = 768$

$a_n - l - 93$

$S_n = \frac{n}{2}[a + a_n]$

$768 = \frac{16^{8}}{2}[a + 93]$

$a + 93 = \frac{768}{8}$

$a + 93 = 96$

$a = 96 - 93$

$\boxed{a = 3}$

$a_n = a + (n-1)d$

$93 = 3 + (16 - 1)d$

$93 = 3 + 15d$

$15d = 90$

$d = \frac{90}{15}$

$\boxed{d = 6}$

ಸಮಾಂತರ ಶ್ರೇಢಿಯು 3, 9, 15, 21, 27 .... ಆಗಿದೆ.

$S_{16} = 3+9+15+21+\ldots\ldots$ 16 ಪದಗಳವರೆಗೆ

$= 3[1 + 3 + 5 + 7 + \ldots\ldots$ 16 ಪದಗಳವರೆಗೆ$]$

$= 3 \times 16^2$ $[S_n = n^2]$ ↓

$= 3 \times 216$ ಮೊದಲ n ಸ್ವಾಭಾವಿಕ ಬೆಸ ಸಂಖ್ಯೆಗಳ ಮೊತ್ತ

$\therefore$ $768 = 768$

ಮಾರ್ಚ್– 2024 ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ ಈ ಪಾಠದಿಂದ ನೀಡಲಾದ ಪ್ರಶ್ನೆಗಳನ್ನು ನೋಡೋಣ.

1) ಒಂದು ಸಮಾಂತರ ಶ್ರೇಢಿಯ ಮೊದಲ ಆರು ಪದಗಳ ಮೊತ್ತವು ಕ್ರಮವಾಗಿ 78 ಮತ್ತು 55 ಆಗಿವೆ, ಹಾಗಾದರೆ ಶ್ರೇಢಿಯ ಆರನೇ ಪದವನ್ನು ಕಂಡುಹಿಡಿಯಿರಿ

ಪರಿಹಾರ:–

$S_6 = 78$

$S_5 = 55$

$a_n = S_n - S_{n-1}$

$a_6 = s_6 - S_5 = 78 - 55$

$\therefore$ $a_6 = 23$

2) ಒಂದು ಸಮಾಂತರ ಶ್ರೇಢಿಯ ಮೊದಲ n ಪದಗಳವರೆಗಿನ ಮೊತ್ತ 210 ಮತ್ತು ಮೊದಲ (n-1) ಪದಗಳವರೆಗಿನ ಮೊತ್ತ 171 ಆಗಿವೆ, ಆ ಸಮಾಂತರ ಶ್ರೇಢಿಯ ಮೊದಲ ಪದ 3 ಆದರೆ, ಆ ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ ಮತ್ತು ಆ ಶ್ರೇಢಿಯ 20ನೇ ಪದವನ್ನು ಕಂಡುಹಿಡಿಯಿರಿ

ಪರಿಹಾರ:–

$S_n = 210$, $S_{n-1} = 171$ $a_n = ?$

$a_n = S_n - S_{n-1}$

$= 210 - 171$

$\boxed{a_n = 39}$

$S_n = 210$, $a = 3$, $a_n = 39$, $n = ?$

$S_n = \frac{n}{2}(a + a_n)$

$210 = \frac{n}{2}(3 + 39)$

$210 = \frac{n}{2} \times 42^{21}$

$21n = 210$

$n = \frac{210}{21}$

$\boxed{n = 10}$

$a = 3$, $n = 10$, $a_n = 39$, $d = ?$

$a_n = a + (n-1)d$

$39 = 3 + (10 - 1)d$

$39 - 3 = 9d$

$9d = 36$

$\boxed{d = 4}$

ಬೇಕಾದ ಸಮಾಂತರ ಶ್ರೇಢಿಯು a, $a + d$, $a + 2d$ ....

3, 3 + 4, 3 = 8.............

3, 7, 11, 15 ....

$a = 3$, $d = 4$, $n = 20$, $a_{20} = ?$

$a_n = a + (n-1)d$

$a_{20} = 3 + (20-1)4$

$= 3 + 19 \times 4 = 3 + 76$

$\boxed{a_{20} = 79}$

ಮಾರ್ಚ್– 2023 ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ ಈ ಪಾಠದಿಂದ ನೀಡಲಾದ ಪ್ರಶ್ನೆಗಳನ್ನು ನೋಡೋಣ.

1) 4, 7, 10 ...... ಸಮಾಂತರ ಶ್ರೇಢಿಯ 20ನೇ ಪದವನ್ನು ಕಂಡುಹಿಡಿಯಿರಿ

ಪರಿಹಾರ 4, 7, 10 ....

ಇಲ್ಲಿ $a = 4$, $d = 7 - 4 = 3$, $n = 20$

$t_n = a + (n-1)d$

$t_{20} = 4 + (20-1)3$

$= 4 + 19 \times 3$

$= 4 + 57 = 61$

2) ಒಂದು ಸಮಾಂತರ ಶ್ರೇಢಿಯ 2ನೇ ಮತ್ತು 4ನೇ ಪದಗಳ ಮೊತ್ತ 54 ಹಾಗೂ ಅದರ ಮೊದಲ 11 ಪದಗಳ ಮೊತ್ತ 693 ಆದರೆ, ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ ಮತ್ತು ಈ ಶ್ರೇಢಿಯ ಎಷ್ಟನೇ ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿರುತ್ತದೆ?

ಪರಿಹಾರ:– ಒಂದು ಸಮಾಂತರ ಶ್ರೇಢಿಯ 2ನೇ ಮತ್ತು 4ನೇ ಪದಗಳ ಮೊತ್ತ 54

$a_2 + a_4 = 54$

$a + d + a + 3d = 54$

$2a + 4d = 54$

$a + 2d = 27$ ..... (i)

ಮೊದಲ 11 ಪದಗಳ ಮೊತ್ತ 693 *(ಮುಂದುವರಿಯುವುದು)*

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ


PHYSICS

II PUC : PHYSICS

Chapter – 2

ELECTROSTATIC POTENTIAL AND CAPACITANCE

35. Four capacitors 2μ F, 3μ F, 4μ F and 5μ F are connected in the form of a rectangle ABCD as in the figure.



Calculate the capacitance between the diagonals. Across which diagonal is the effective capacitance more.

Soln:- (........Contd)

Capacitances C_1 and C_2 are in parallel.

whose, effective capacity is

$$C_{AC} = C_1 + C_2 = \left(\frac{6}{5} + \frac{20}{9}\right)\mu F$$

$$= 3.42\,\mu F$$

Across BD, the capacitors 2μ F and 5μ F are in series. The effective capacitance,

$$C_3 = \frac{2 \times 5}{2+5} = \frac{10}{7}\ \mu F$$

and the capacitors 4μ F and 5μ Fare in series. The effective capacitance,

$$C_4 = \frac{4 \times 3}{4+3} = \frac{12}{7}\ \mu F$$

Capacitances C_3 and C_4 are in parallel. Its effective capacity =

$$C_{BD} = C_3 + C_4 = \left(\frac{10}{7} + \frac{12}{7}\right)\mu F$$

$$= 3.14\,\mu F$$

Therefore, Equivalent capacitance across AC is more.

36. Two capacitors of capacitances 3 μF and 5μF are connected in series. Calculate the equivalent capacitance. If the battery of e.m.f 10 V is connected across them. Calculate the charge on each capacitor and also the p.d across each capacitor.

Soln :– Given, 2 capacitors $C_1 = 3\,\mu F$ and $C_2 = 5\,\mu F$ are connected in series. the capacitance of the resultant capacitor is given by,

$$\frac{1}{C_s} = \frac{1}{C_1} + \frac{1}{C_2}$$

$$= \frac{1}{3} + \frac{1}{5} = \frac{5+3}{3 \times 5} = \frac{8}{15}$$

$$\therefore C_s = \frac{15}{8}\,\mu F = 1.875 \times 10^{-6}\ F$$

$$q = C_s V = 1.875 \times 10^{-6} \times 10$$

Charge on the capacitor,

$$= 18.75 \times 10^{-6}\ C$$


The p.d across first capacitor

$$V_1 = \frac{q}{C_1} = \frac{18.75 \times 10^{-6}}{3 \times 10^{-6}} = 6.25\ V$$


The p.d across second capacitor

$$V_2 = V - V_1 = 10 - 6.25 = 3.75\ V$$

37. The graph given shows the variation of the voltage 'V' across the plates of two capacitors A and B versus increase of charge Q stored on them. Which of the two capacitors has higher capacitance?



Ans:- Let Q be the charge on each capacitor at any instant. Corresponding to the charge Q, the p.d across the plates of the capacitors A and B will be V_A and V_B respectively as in the fig.




Now, $C_A = \frac{Q}{V_A}$ and $C_B = \frac{Q}{V_B}$

Since $V_A < V_B$, it follows that $C_A > C_B$


i.e., capacitor A is of higher capacitance

38. Find the equivalent capacitance of the combination shown in the figure between the points X and Y.

Soln:-



Ans:- The given arrangement of the three capacitors is equivalent to their parallel combination as in following fig.



$\therefore$ **equivalent capacitance =**

$$C = C_1 + C_2 + C_3$$

(Contd.....)

‘ನಮ್ಮ ಮಗಳ ಜೀವಕ್ಕೆ ಅಪಾಯವಿದೆ’

ಪಶ್ಚಿಮ ಬಂಗಾಳದ ಸಾಮೂಹಿಕ ಅತ್ಯಾಚಾರ ಪ್ರಕರಣ: ಮತ್ತಿಬ್ಬರ ಬಂಧನ



ಸಾಮೂಹಿಕ ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿ ಎಬಿವಿಪಿ ಸದಸ್ಯರು ಕೋಲ್ಕತ್ತದಲ್ಲಿ ಸೋಮವಾರ ಪ್ರತಿಕೃತಿ ದಹಿಸಿ, ಪ್ರತಿಭಟಿಸಿದರು – ಪಿಟಿಐ ಚಿತ್ರ

ಭುವನೇಶ್ವರ/ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಳಾದ ದುರ್ಗಾಪುರದಲ್ಲಿ ದಲಿತ ಸಮುದಾಯಕ್ಕೆ ಸೇರಿದ ಎರಡನೇ ವರ್ಷದ ವೈದ್ಯ ವಿದ್ಯಾರ್ಥಿನಿ ಮೇಲೆ ನಡೆದಿದೆ ಎನ್ನಲಾದ ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿ, ‘ನನ್ನ ಮಗಳ ಜೀವಕ್ಕೆ ಅಪಾಯವಿದೆ’ ಎಂದು ಸಂತ್ರಸ್ತೆಯ ತಂದೆ ಸೋಮವಾರ ಆರೋಪಿಸಿದ್ದಾರೆ.

‘ಪಶ್ಚಿಮ ಬಂಗಾಳದಲ್ಲಿ ನನ್ನ ಮಗಳು ಸುರಕ್ಷಿತವಾಗಿ ಇರುತ್ತಾಳೆ ಎನ್ನುವ ಬಗ್ಗೆ ನಮಗೆ ನಂಬಿಕೆ ಇಲ್ಲ. ಯಾರನ್ನೂ ನಂಬುವ ಸ್ಥಿತಿಯಲ್ಲಿ ನಾವಿಲ್ಲ. ಆದ್ದರಿಂದ ಮಗಳನ್ನು ಭುವನೇಶ್ವರಕ್ಕೆ ಕರೆತರಲು ಸಹಕರಿಸಿ’ ಎಂದು ಮುಖ್ಯಮಂತ್ರಿ ಮೋಹನ್ ಚರಣ್ ಮಾಂಝಿ ಅವರಲ್ಲಿ ಸಂತ್ರಸ್ತೆ ತಂದೆ ಮನವಿ ಮಾಡಿದ್ದಾರೆ.

‘ಅವರು (ಯಾರ ಹೆಸರನ್ನೂ ಹೇಳಲಿಲ್ಲ) ನನ್ನ ಮಗಳನ್ನು ಕೊಂದು ಬಿಡುತ್ತಾರೆ. ಆಕೆಯ ಆರೋಗ್ಯ ಈಗ ತುಸು ಸುಧಾರಿಸುತ್ತಿದೆ. ನಾನು ದುರ್ಗಾಪುರದಲ್ಲಿ ಅಡಗಿ ಕುಳಿತಿದ್ದೇನೆ. ಮಧುಮೇಹ ಇರುವ ನನ್ನ ಪತ್ನಿಯು ಆಸ್ಪತ್ರೆಯಲ್ಲಿ ಮಗಳ ಹಾಸಿಗೆ ಪಕ್ಕದಲ್ಲಿಯೇ ಕುಳಿತಿದ್ದಾಳೆ’ ಎಂದು ಹೇಳಿದರು.

‘ಘಟನೆ ನಡೆದ 36 ಗಂಟೆಗಳ ಒಳಗೆ ಇಲ್ಲಿನ ಪೊಲೀಸರು ಮೂವರನ್ನು ಬಂಧಿಸಿದ್ದಾರೆ. ತನಿಖೆಯಿಂದ ನಾವು ತೃಪ್ತರಾಗಿದ್ದೇವೆ. ಸಂತ್ರಸ್ತೆಗೆ ನ್ಯಾಯ ದೊರಕಲಿದೆ ಎಂಬ ನಂಬಿಕೆ ಇದೆ’ ಎಂದು ಒಡಿಶಾದ ಬಾಲೇಶ್ವರದ ಹೆಚ್ಚುವರಿ ಜಿಲ್ಲಾಧಿಕಾರಿ ಹೇಮಂತ್ ಸಿಂಗ್ ಹೇಳಿದರು. ಬಾಲೇಶ್ವರ ಜಿಲ್ಲಾಡಳಿತದಿಂದ ನಾಲ್ವರ ತಂಡವು ಸಂತ್ರಸ್ತೆಯನ್ನು, ಆಕೆಯ ಕುಟುಂಬವನ್ನು ಭೇಟಿ ಮಾಡಿತ್ತು.

ಮಮತಾ ಬ್ಯಾನರ್ಜಿ ಹೇಳಿಕೆಗೆ ವ್ಯಾಪಕ ಆಕ್ರೋಶ

‘ರಾತ್ರಿ ವೇಳೆ ಹೇಗೆ ಹೊರಹೋದಳು?’

ರಾತ್ರಿ 12.30ಕ್ಕೆ ಆಕೆ ಹೇಗೆ ಹೊರ ಹೋದಳು? ಹಾಸ್ಟೆಲ್‌ಗಳಲ್ಲಿ ಉಳಿದುಕೊಂಡಿರುವ ವಿದ್ಯಾರ್ಥಿಗಳು, ಅದರಲ್ಲಿಯೂ ಇತರೆ ರಾಜ್ಯಗಳಿಂದ ಪಶ್ಚಿಮ ಬಂಗಾಳಕ್ಕೆ ವ್ಯಾಸಂಗಕ್ಕಾಗಿ ಬರುವವರು ಹಾಸ್ಟೆಲ್‌ಗಳ ನಿಯಮಗಳನ್ನು ಪಾಲಿಸಬೇಕು. ಎಲ್ಲಿಗೆ ಬೇಕಾದರೂ ಹೋಗುವ ಮೂಲಭೂತ ಹಕ್ಕು ಇದ್ದರೂ, ಯಾರೂ ರಾತ್ರಿ ವೇಳೆ ಹೊರಗೆ ಹೋಗಬಾರದು

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

‘ಪ್ರಕರಣವನ್ನು ಮುಚ್ಚಿ ಹಾಕುವ ಹೇಳಿಕೆ’

ನನ್ನ ಮಗಳು ಮಧ್ಯ ರಾತ್ರಿ ಹೊರಗೆ ಹೋಗಿರಲಿಲ್ಲ. ಮಮತಾ ಅವರ ಈ ಹೇಳಿಕೆಯು ಸಂಪೂರ್ಣ ಸುಳ್ಳು. ಆಕೆ ಹೊರ ಹೋಗುವಾಗ ರಾತ್ರಿ 8 ಗಂಟೆ ಆಗಿತ್ತಷ್ಟೆ. ಅವರ ಹೇಳಿಕೆಯು ಪ್ರಕರಣವನ್ನು ಮುಚ್ಚಿ ಹಾಕುವ ಯತ್ನದಂತೆ ಕಾಣುತ್ತಿದೆ. ನನ್ನ ಮಗಳು ಸ್ನೇಹಿತನೊಂದಿಗೆ ಹೊರಹೋಗಿದ್ದಳು. ದಾಳಿಕೋರರು ಬಂದ ಕೂಡಲೇ ಆತ ಓಡಿ ಹೋಗಿದ್ದಾನೆ. ಮಗಳ ಮೇಲೆ ರಾತ್ರಿ 8ರಿಂದ 9ರ ಮಧ್ಯೆ ದಾಳಿ ನಡೆದಿದೆ

ಸಂತ್ರಸ್ತೆಯ ತಂದೆ

‘ಲಿಂಗ ತಾರತಮ್ಯದ ಮಾತು’

ದೀದೀ ಎಂದೇ ಕರೆಸಿಕೊಳ್ಳುವ ಮಮತಾ ಅವರಂಥ ನಾಯಕಿಯು ನೀಡಿದ ಹೇಳಿಕೆ ಆಶ್ಚರ್ಯ ತರಿಸಿದೆ ಮತ್ತು ಇದು ಮಹಿಳೆಯರನ್ನು ಅವಮಾನಿಸಿದೆ. ಸಂತ್ರಸ್ತೆಗೆ ನ್ಯಾಯ ದೊರಕಿಸಿಕೊಡುವ ಬದಲು ಅವರು ಲಿಂಗ ತಾರತಮ್ಯದ ಮಾತುಗಳನ್ನಾಡಿದ್ದಾರೆ. ನಿಮಗೆ ಒಡಿಶಾದ ಹುಡುಗಿಯ ಬಗ್ಗೆ ಕರುಣೆ ಇಲ್ಲವಾದರೆ, ನಮಗೆ ಪತ್ರ ಬರೆಯಿರಿ. ನಿಮ್ಮ ರಾಜ್ಯದಲ್ಲಿದ್ದರೂ ನಮಗೆ ನಮ್ಮ ಹುಡುಗಿಯ ಕಷ್ಟ ಅರ್ಥವಾಗುತ್ತದೆ

ಪ್ರವತಿ ಪರಿದಾ, ಒಡಿಶಾ ಉಪ ಮುಖ್ಯಮಂತ್ರಿ

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಅವರ ಹೇಳಿಕೆಗೆ ದೇಶದಾದ್ಯಂತ ಭಾರಿ ಆಕ್ರೋಶ ವ್ಯಕ್ತವಾಗಿದೆ. ಬಿಜೆಪಿ ಹಾಗೂ ಟಿಎಂಸಿ ನಾಯಕರ ಮಧ್ಯೆ ಆರೋಪ ಪ್ರತ್ಯಾರೋಪಗಳೂ ನಡೆದಿವೆ. ‘ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ’ ಎಂದು ಮಮತಾ ಅವರು ಪ್ರತಿಕ್ರಿಯಿಸಿದ್ದಾರೆ.

ಆರೋಪ–ಪ್ರತ್ಯಾರೋಪ

‘ಮಹಿಳೆಯರ ಸುರಕ್ಷತೆ ವಿಚಾರದಲ್ಲಿ ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ’ ಎಂದು ಬಿಜೆಪಿ ದೂರಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಟಿಎಂಸಿ, ‘ನಮ್ಮ ‘ಅಪರಾಜಿತ ಮಸೂದೆ’ಯು ಜಾರಿಯಾಗದಂತೆ ನರೇಂದ್ರ ಮೋದಿ ಸರ್ಕಾರ ತಡೆದು ಹಿಡಿದಿದೆ’ ಎಂದಿದೆ.

ದಿನದ ಬೆಳವಣಿಗೆ

- ಪ್ರಕರಣಕ್ಕೆ ಸಂಬಂಧಿಸಿ ಸೋಮವಾರ ಮತ್ತಿಬ್ಬರನ್ನು ಪೊಲೀಸರು ಬಂಧಿಸಿದ್ದಾರೆ. ಇವರನ್ನು 9 ದಿನಗಳವರೆಗೆ ಪೊಲೀಸ್ ವಶಕ್ಕೆ ನ್ಯಾಯಾಲಯ ನೀಡಿದೆ. ಅಲ್ಲಿಗೆ ಬಂಧಿತರ ಒಟ್ಟು ಸಂಖ್ಯೆ ಐದಕ್ಕೆ ಏರಿದೆ. ಉಳಿದ ಮೂವರನ್ನು 10 ದಿನಗಳವರೆಗೆ ಪೊಲೀಸ್ ವಶಕ್ಕೆ ನೀಡಲಾಗಿತ್ತು
- ಪ್ರಕರಣಕ್ಕೆ ಸಂಬಂಧಿಸಿ ‘ಸಾಕ್ಷ್ಯ ನಾಶ’ ನಡೆಯುತ್ತಿದೆ. ಐವರನ್ನು ಬಂಧಿಸಿರುವುದು ಕಣ್ಣೊರೆಸುವ ತಂತ್ರ ಎಂದು ಪಶ್ಚಿಮ ಬಂಗಾಳದ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ದೂರಿದ್ದಾರೆ
- ಒಡಿಶಾ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಶೋಬನಾ ಮೊಹಾಂತಿ ಅವರು ಸಂತ್ರಸ್ತೆಯನ್ನು ಭೇಟಿ ಮಾಡಲು ದುರ್ಗಾಪುರಕ್ಕೆ ತೆರಳಿದರು
- ‘ಇದೊಂದು ಅತ್ಯಂತ ಆಘಾತಕಾರಿ ಘಟನೆ. ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಇಂಥ ಘಟನೆ ನಡೆಯುತ್ತಿಲ್ಲ. ಭವಿಷ್ಯದಲ್ಲಿ ಇಂಥದ್ದು ನಡೆಯದಂತೆ ಕ್ರಮ ಕೈಗೊಳ್ಳಬೇಕು. ಸಂತ್ರಸ್ತೆಯನ್ನು ಭೇಟಿಯಾದ ಬಳಿಕ ರಾಜ್ಯದ ಕಾನೂನು ಸುವ್ಯವಸ್ಥೆ ಕುರಿತು ಮಾತನಾಡುತ್ತೇನೆ’ ಎಂದು ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ. ಆನಂದ್ ಬೋಸ್ ಹೇಳಿದರು

‘ಮಹಿಳೆಯೇ ಎಚ್ಚರದಿಂದ ಇರಬೇಕು’

ಪೊಲೀಸರು ಎಲ್ಲ ರಸ್ತೆಗಳಲ್ಲಿಯೂ ಇರಲು ಸಾಧ್ಯವಿಲ್ಲ. ಘಟನೆ ನಡೆದ ಬಳಿಕವಷ್ಟೇ ಪೊಲೀಸರು ಕ್ರಮ ಕೈಗೊಳ್ಳಲು ಸಾಧ್ಯ. ಆದ್ದರಿಂದ ಮಹಿಳೆಯರು ರಾತ್ರಿ ಹೊತ್ತಿನಲ್ಲಿ ಕಾಲೇಜುಗಳಿಂದ ಹೊರಬರಬಾರದು ಮತ್ತು ಮಹಿಳೆಯರೇ ಎಚ್ಚರದಿಂದ ಇರಬೇಕು

ಸೌಗತ್ ರಾಯ್, ಟಿಎಂಸಿ ಸಂಸದ

ಗರ್ಗ್ ಮರಣೋತ್ತರ ಪರೀಕ್ಷೆ ವರದಿ ಪ್ರಮುಖರೊಂದಿಗೆ ಇಂದು ಚರ್ಚೆ



ಜುಬಿನ್ ಗರ್ಗ್

ಗುವಾಹಟಿ (ಪಿಟಿಐ): ಗಾಯಕ ಜುಬಿನ್ ಗರ್ಗ್ ಅವರ ಮರಣೋತ್ತರ ಪರೀಕ್ಷೆಯ ವರದಿಯ ಕುರಿತು ಚರ್ಚಿಸಲು ನಾಗರಿಕ ಸಮಾಜದ ಪ್ರಮುಖರನ್ನು ಆಹ್ವಾನಿಸಲಾಗಿದೆ ಎಂದು ಅಸ್ಸಾಂ ಪೊಲೀಸರು ಸೋಮವಾರ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಸಿಐಡಿಯ ವಿಶೇಷ ಡಿಜಿಪಿ ಮುನ್ನಾ ಪ್ರಸಾದ್ ಗುಪ್ತಾ ಅವರು, ‘ವರದಿಯನ್ನು ಸಾರ್ವಜನಿಕರಿಗೆ ಬಹಿರಂಗ ಮಾಡುವುದಿಲ್ಲ. ಆದರೆ ಅಕ್ಟೋಬರ್ 14ರಂದು ಸಂಜೆ 4 ಗಂಟೆಗೆ ಪ್ರಮುಖರೊಂದಿಗೆ ಸಭೆ ನಡೆಸಿ ಚರ್ಚಿಸಲಾಗುವುದು’ ಎಂದು ತಿಳಿಸಿದರು. ಆಹ್ವಾನಿತರು ಯಾರು ಎಂಬ ಬಗ್ಗೆ ಅವರು ಯಾವುದೇ ಮಾಹಿತಿ ನೀಡಿಲ್ಲ.

ಸಿಂಗಪುರದಲ್ಲಿ ಆಯೋಜಿಸಲಾಗಿದ್ದ ಈಶಾನ್ಯ ಭಾರತ ಉತ್ಸವದಲ್ಲಿ ಪಾಲ್ಗೊಳ್ಳಲು ಜುಬಿನ್ ತೆರಳಿದ್ದರು. ಅಲ್ಲಿ ಸಮುದ್ರದಲ್ಲಿ ಈಜುತ್ತಿದ್ದ ವೇಳೆ ಸೆಪ್ಟೆಂಬರ್ 19ರಂದು ಮೃತಪಟ್ಟಿದ್ದರು. ಸಿಐಡಿಯ ವಿಶೇಷ ತನಿಖಾ ತಂಡವು ಪ್ರಕರಣದ ತನಿಖೆ ನಡೆಸುತ್ತಿದೆ.

ವಿಚಾರಣೆಗೆ ಎನ್‌ಆರ್‌ಐಗಳು ಹಾಜರು

ಜುಬಿನ್ ಗರ್ಗ್ ಅವರ ನಿಧನಕ್ಕೆ ಸಾಕ್ಷಿಯಾಗಿದ್ದ ಸಿಂಗಪುರದಲ್ಲಿ ನೆಲಸಿದ್ದ ಅಸ್ಸಾಂ ಮೂಲದ ಮೂವರು ಸೋಮವಾರ ಗುವಾಹಟಿಗೆ ಬಂದು ಪೊಲೀಸರ ಎದುರು ಹಾಜರಾಗಿ ವಿಚಾರಣೆ ಎದುರಿಸಿದರು ಎಂದು ಉನ್ನತ ಅಧಿಕಾರಿಯೊಬ್ಬರು ತಿಳಿಸಿದರು.

ಮುಂದಿನ ಎರಡು ದಿನಗಳಲ್ಲಿ ಮತ್ತಷ್ಟು ಅನಿವಾಸಿ ಭಾರತೀಯರು (ಎನ್‌ಆರ್‌ಐ) ಇಲ್ಲಿಗೆ ಬಂದು ಪೊಲೀಸರ ಎದುರು ಹೇಳಿಕೆ ದಾಖಲಿಸಲಿದ್ದಾರೆ ಎಂದು ತಿಳಿಸಿದರು. ಜಿಯೊಲಾಂಗ್‌ಸತ್ ನರ್ಜರಿ, ಪರೀಕ್ಷಿತ್ ಶರ್ಮಾ ಮತ್ತು ಸಿದ್ಧಾರ್ಥ ಬೋರಾ ಅವರು ಸೋಮವಾರ ಬೆಳಿಗ್ಗೆ ಸಿಐಡಿ ಮುಖ್ಯ ಕಚೇರಿಗೆ ಬಂದು ವಿಚಾರಣೆ ಎದುರಿಸಿದರು ಎಂದು ಸಿಐಡಿ ವಿಶೇಷ ಡಿಜಿಪಿ ಮುನ್ನಾ ಪ್ರಸಾದ್ ಗುಪ್ತಾ ತಿಳಿಸಿದರು.

ಗುಣಮಟ್ಟದಲ್ಲಿ ರಾಜಿಯಿಲ್ಲ: ಗಡ್ಕರಿ

ಪುದುಚೇರಿ (ಪಿಟಿಐ): ಮೂಲಸೌಕರ್ಯಗಳ ಗುಣಮಟ್ಟ ಮತ್ತು ಸರಿಯಾದ ವಿನ್ಯಾಸದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಸೋಮವಾರ ಹೇಳಿದ್ದಾರೆ.

ಯೋಜನೆಗಳು ಪಾರದರ್ಶಕವಾಗಿ, ಕಾಲಮಿತಿಯೊಳಗೆ, ಭ್ರಷ್ಟಾಚಾರರಹಿತವಾಗಿ ಮತ್ತು ಫಲಿತಾಂಶ ಆಧಾರಿತವಾಗಿ ಕಾರ್ಯಗತಗೊಳ್ಳಬೇಕು ಎಂದು ಸರ್ಕಾರ ಬಯಸುತ್ತಿದೆ ಎಂದಿದ್ದಾರೆ.

₹436 ಕೋಟಿ ವೆಚ್ಚದ ಎಲಿವೇಟೆಡ್ ಕಾರಿಡಾರ್ ಹಾಗೂ ಗ್ರೇಡ್ ಸೆಪರೇಟರ್‌ಗೆ ಶಂಕುಸ್ಥಾಪನೆ ಸಮಾರಂಭದಲ್ಲಿ ಮಾತನಾಡಿದ ಗಡ್ಕರಿ, ‘ಈ ಯೋಜನೆಯು ಪುದುಚೇರಿಯ ಅಭಿವೃದ್ಧಿಗೆ ಗಮನಾರ್ಹ ಉತ್ತೇಜನ ನೀಡುತ್ತದೆ’ ಎಂದು ಹೇಳಿದ್ದಾರೆ.

ಬಿಹಾರ: ಎನ್‌ಡಿಎ ಮಿತ್ರಪಕ್ಷಗಳ ಅಪಸ್ವರ



ಜಿತನ್ ರಾಮ್

ಪಟ್ನಾ (ಪಿಟಿಐ): ಬಿಹಾರ ವಿಧಾನಸಭಾ ಚುನಾವಣೆಗೆ ಆಡಳಿತಾರೂಢ ಎನ್‌ಡಿಎ ಸೀಟು ಹಂಚಿಕೆ ಪ್ರಕಟಿಸಿದ್ದು, ಮೈತ್ರಿಕೂಟದಲ್ಲಿನ ಸಣ್ಣ ಮಿತ್ರಪಕ್ಷಗಳು ಅಪಸ್ವರ ತೆಗೆದಿವೆ.

‘ಮೈತ್ರಿಕೂಟದ ನಿರ್ಧಾರವನ್ನು ಒಪ್ಪಿಕೊಂಡಿದ್ದೇವೆ. ಆದರೆ ನಮಗೆ ಕೇವಲ ಆರು ಸ್ಥಾನ ನೀಡುವ ಮೂಲಕ ನಮ್ಮ ಸಾಮರ್ಥ್ಯವನ್ನು ಪರಿಗಣಿಸಿಲ್ಲ. ಇದು ಚುನಾವಣೆಯಲ್ಲಿ ಮುಳುವಾಗಬಹುದು’ ಎಂದು ಹಿಂದೂಸ್ತಾನಿ ಅವಾಮ್ ಮೋರ್ಚಾ ಅಧ್ಯಕ್ಷ, ಕೇಂದ್ರ ಸಚಿವ ಜಿತನ್ ರಾಮ್ ಮಾಂಝಿ ಹೇಳಿದ್ದಾರೆ.

‘ನಾನು ನಿಮ್ಮ ಕ್ಷಮೆ ಕೋರುವೆ. ನಮಗೆ ಸಿಕ್ಕಿರುವ ಕ್ಷೇತ್ರಗಳ ಸಂಖ್ಯೆ ನಿರೀಕ್ಷೆಯಂತಿಲ್ಲ. ಈ ನಿರ್ಧಾರವು ನಮ್ಮ ಪಕ್ಷದಿಂದ ಅಭ್ಯರ್ಥಿಗಳಾಗಲು ಬಯಸಿದ್ದವರಿಗೆ ನೋವುಂಟು ಮಾಡಿದೆ ಎಂಬುದನ್ನು ನಾನು ಅರ್ಥಮಾಡಿಕೊಂಡಿರುವೆ’ ಎಂದು ರಾಷ್ಟ್ರೀಯ ಲೋಕ ಮೋರ್ಚಾ ಪಕ್ಷದ ವರಿಷ್ಠ ಉಪೇಂದ್ರ ಕುಶ್ವಾಹ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ‘ಎಕ್ಸ್’ನಲ್ಲಿ ಉಲ್ಲೇಖಿಸಿದ್ದಾರೆ.

‘ಪಕ್ಷದ ಮಿತಿಯನ್ನು ನೀವೆಲ್ಲರೂ ಅರ್ಥಮಾಡಿಕೊಂಡಿದ್ದೀರಿ ಎಂದು ಭಾವಿಸಿರುವೆ. ಈ ನಿರ್ಧಾರ ಎಷ್ಟು ಸೂಕ್ತ ಅಥವಾ ಸೂಕ್ತವಲ್ಲ ಎಂಬುದನ್ನು ನೀವೇ ಅರಿತುಕೊಳ್ಳುತ್ತೀರಿ. ಉಳಿದದ್ದನ್ನು ಸಮಯವೇ ನಿರ್ಧರಿಸಲಿದೆ’ ಎಂದಿದ್ದಾರೆ.



ಜೆಡಿಯು ಬೆಂಬಲಿಗರು ಇವಿಎಂನ ಪ್ರತಿಕೃತಿ, ಸಿ.ಎಂ ನಿತೀಶ್ ಮಾಸ್ಕ್ ಧರಿಸಿ ಪಟ್ನಾದಲ್ಲಿ ಬೆಂಬಲ ವ್ಯಕ್ತಪಡಿಸಿದರು

ಎರಡನೇ ಹಂತ: ನಾಮಪತ್ರ ಸಲ್ಲಿಕೆ ಆರಂಭ

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ — ವಿಧಾನಸಭಾ ಚುನಾವಣೆ - 2025

ಪಟ್ನಾ (ಪಿಟಿಐ): ಬಿಹಾರ ವಿಧಾನಸಭೆಗೆ ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ 122 ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಕೆ ಸೋಮವಾರದಿಂದ ಆರಂಭಗೊಂಡಿದೆ.

ನವೆಂಬರ್ 11ರಂದು ನಡೆಯುವ ಮತದಾನಕ್ಕೆ ಕೇಂದ್ರ ಚುನಾವಣಾ ಆಯೋಗವು ಅಧಿಸೂಚನೆ ಪ್ರಕಟಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಕ್ಷೇತ್ರಗಳಿಗೆ ಅಕ್ಟೋಬರ್ 20ರವರೆಗೆ ನಾಮಪತ್ರ ಸಲ್ಲಿಕೆ ಮಾಡಬಹುದು. ನಾಮಪತ್ರ ಹಿಂದಕ್ಕೆ ಪಡೆಯಲು ಅಕ್ಟೋಬರ್ 23 ಕೊನೆಯ ದಿನವಾಗಿದೆ.

ಎರಡನೇ ಹಂತದ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಕೇಂದ್ರ ಸಚಿವ ಜಿತನ್ ರಾಮ್ ಮಾಂಝಿ ಅವರ ಸೊಸೆ ದೀಪಾ ಮಾಂಝಿ (ಇಮಾಮ್‌ಗಂಜ್), ಕುಮಾರ್ ಸರ್ವಜಿತ್ (ಬೋಧ್‌ಗಯಾ) ಭೋಜ್‌ಪುರಿ ಗಾಯಕ ವಿನಯ್ ಬಿಹಾರಿ (ಲೌರಿಯಾ) ಹಾಗೂ ಬಿಜೆಪಿ ಮಾಜಿ ಸಚಿವ ನಾರಾಯಣ್ ಪ್ರಸಾದ್ (ನೌತನ್) ಸ್ಪರ್ಧಿಸಿರುವ ಕ್ಷೇತ್ರಗಳು ಪ್ರಮುಖವಾದುವು.

ಮೊದಲ ಹಂತದಲ್ಲಿ ಮತದಾನ ನಡೆಯುವ 121 ಕ್ಷೇತ್ರಗಳ ನಾಮಪತ್ರ ಸಲ್ಲಿಕೆಯು ಶುಕ್ರವಾರದಿಂದ ಆರಂಭಗೊಂಡಿದ್ದು, ಅಕ್ಟೋಬರ್ 17ರವರೆಗೆ ನಾಮಪತ್ರ ಸಲ್ಲಿಸಬಹುದು. ಈ ಕ್ಷೇತ್ರಗಳಿಗೆ ನವೆಂಬರ್ 6ರಂದು ಮತದಾನ ನಡೆಯಲಿದೆ. ನವೆಂಬರ್ 14ರಂದು ಮತಎಣಿಕೆ ನಡೆಯಲಿದೆ.

ಹಗರಣಗಳೇ ಆರ್‌ಜೆಡಿ ಸರ್ಕಾರದ ಮಾದರಿ: ಬಿಜೆಪಿ ಕಿಡಿ



ರವಿಶಂಕರ್ ಪ್ರಸಾದ್

ನವದೆಹಲಿ (ಪಿಟಿಐ): ಹಗರಣಗಳನ್ನು ಮಾಡುವುದು, ಸರ್ಕಾರದ ಕಾಮಗಾರಿಗಳ ಗುತ್ತಿಗೆ ನೀಡುವಲ್ಲಿ ಅಕ್ರಮ ಎಸಗುವುದು ಹಾಗೂ ಜನರಿಗೆ ಉದ್ಯೋಗದ ಭರವಸೆ ನೀಡಿ ಅವರ ಜಮೀನನ್ನು ಕಬಳಿಸುವುದು ಆರ್‌ಜೆಡಿ ಆಡಳಿತದ ಮಾದರಿಯಾಗಿದೆ ಎಂದು ಬಿಜೆಪಿ ಸೋಮವಾರ ಕಿಡಿಕಾರಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ನಾಯಕ ರವಿಶಂಕರ್ ಪ್ರಸಾದ್, ‘ಮೇವು ತಿನ್ನುವುದು (ಮೇವು ಹಗರಣ), ಡಾಂಬರು ಕುಡಿಯುವುದು ಮತ್ತು ಬಡವರ ಭೂಮಿಯನ್ನು ಕಬಳಿಸುವುದು ಆರ್‌ಜೆಡಿ ಸರ್ಕಾರದ ಮಾದರಿಯಾಗಿದೆ’ ಎಂದು ಆರೋಪಿಸಿದರು.

‘ತೇಜಸ್ವಿಯ ಉದ್ಯೋಗ ಭರವಸೆಯನ್ನು ನಂಬಬೇಡಿ, ನಂಬಿದರೆ ನಿಮ್ಮ ಭೂಮಿ ಕಳೆದುಕೊಳ್ಳುತ್ತೀರಿ’ ಎಂದು ಜನರಿಗೆ ಮನವಿ ಮಾಡಿದರು.

ಕಾಂಗ್ರೆಸ್, ಆರ್‌ಜೆಡಿ ಶಾಸಕ ಬಿಜೆಪಿ ಸೇರ್ಪಡೆ

ಪಾಟ್ನಾ (ಪಿಟಿಐ): ‘ಇಂಡಿಯಾ’ ಕೂಟದ ಇಬ್ಬರು ಬಂಡಾಯ ಶಾಸಕರು ಸೋಮವಾರ ಬಿಜೆಪಿ ಸೇರ್ಪಡೆಯಾದರು.

ಮೊಹಾನಿಯಾ ಕ್ಷೇತ್ರದ ಆರ್‌ಜೆಡಿ ಶಾಸಕಿ ಸಂಗೀತಾ ಕುಮಾರಿ ಹಾಗೂ ಬಿಕ್ರಾಮ್ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಗೆದ್ದಿದ್ದ ಸಿದ್ಧಾರ್ಥ್ ಸೌರವ್ ಅವರನ್ನು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ದಿಲೀಪ್ ಜೈಸ್ವಾಲ್ ಪಕ್ಷಕ್ಕೆ ಬರ ಮಾಡಿಕೊಂಡರು.

‘ಇಂಡಿಯಾ ಕೂಟದ ಅರ್ಧ ಡಜನ್‌ಗೂ ಅಧಿಕ ಶಾಸಕರು ಅಲ್ಲಿಂದ ಜಿಗಿದು, ಎನ್‌ಡಿಎ ಒಕ್ಕೂಟಕ್ಕೆ ಸೇರಲಿದ್ದಾರೆ ಎಂದು ನಾನು ಇತ್ತೀಚೆಗೆ ಹೇಳಿದ್ದೆನು. ಇದು ಮೊದಲ ಕಂತು’ ಎಂದು ದಿಲೀಪ್ ಜೈಸ್ವಾಲ್ ತಿಳಿಸಿದ್ದಾರೆ. ಇಬ್ಬರನ್ನು ಪಕ್ಷದಿಂದ ಅನರ್ಹಗೊಳಿಸುವಂತೆ ಕೋರಿ ಸ್ಪೀಕರ್ ನಂದ್ ಕಿಶೋರ್ ಯಾದವ್ ಅವರಿಗೆ ಎರಡು ಪಕ್ಷಗಳು ಸಲ್ಲಿಸಿದ ಅರ್ಜಿಯೂ ಇನ್ನಷ್ಟೇ ಇತ್ಯರ್ಥವಾಗಬೇಕಿದೆ.

ನ್ಯಾಯದಾನದಲ್ಲಿ ಪಾರದರ್ಶಕತೆ: ಶಾ

ಜೈಪುರ (ಪಿಟಿಐ): ‘ದೇಶದಲ್ಲಿ ಜಾರಿಯಾದ ಮೂರು ಹೊಸ ಅಪರಾಧ ಕಾನೂನುಗಳು ತ್ವರಿತವಾಗಿ, ಜನಕೇಂದ್ರೀತ ಹಾಗೂ ನ್ಯಾಯದಾನ ವ್ಯವಸ್ಥೆಯನ್ನು ಪಾರದರ್ಶಕವಾಗಿಸುವ ಗುರಿ ಹೊಂದಿವೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಮವಾರ ಇಲ್ಲಿ ಹೇಳಿದರು.

ಜೈಪುರ ಎಕ್ಸಿಬಿಷನ್ ಆ್ಯಂಡ್ ಕನ್ವೆನ್ಷನ್ ಸೆಂಟರ್ (ಜೆಇಸಿಸಿ)ನಲ್ಲಿ ನಡೆದ ಹೊಸ ಕಾನೂನುಗಳಡಿ ಕ್ರಿಮಿನಲ್ ತನಿಖೆ ಮತ್ತು ಕಾನೂನು ಕ್ರಮದ ಪ್ರಾತ್ಯಕ್ಷಿಕೆಯಲ್ಲಿ ಮಾತನಾಡಿದ ಅವರು, ‘ಎಲ್ಲರಿಗೂ ನ್ಯಾಯವು ಸುಲಭವಾಗಿ ಮತ್ತು ಸಮಯೋಚಿತವಾಗಿ ಸಿಗುತ್ತದೆ ಎಂಬುದನ್ನು ಖಚಿತಪಡಿಸಲಾಗುತ್ತಿದೆ’ ಎಂದರು.

‘ಹಿಮಾಚಲದ ವಿಪತ್ತಿಗಿಲ್ಲ ನೆರವು’

ಶಿಮ್ಲಾ (ಪಿಟಿಐ): ‘ವಿಪತ್ತು ಪೀಡಿತ ಹಿಮಾಚಲ ಪ್ರದೇಶಕ್ಕೆ ಕೇಂದ್ರ ಸರ್ಕಾರವು ಅಗತ್ಯವಿರುವಷ್ಟು ನೆರವು ನೀಡುತ್ತಿಲ್ಲ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಸೋಮವಾರ ಆರೋಪಿಸಿದರು.

ಶಿಮ್ಲಾದ ಐತಿಹಾಸಿಕ ರಿಡ್ಜ್ ಮೈದಾನದಲ್ಲಿನ ದೌಲತ್ ಸಿಂಗ್ ಪಾರ್ಕ್‌ನಲ್ಲಿ, ಆರು ಬಾರಿ ಹಿಮಾಚಲ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ದಿ.ವೀರಭದ್ರ ಸಿಂಗ್ ಅವರ ಪ್ರತಿಮೆಯನ್ನು ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅನಾವರಣಗೊಳಿಸಿದ ನಂತರ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ಪ್ರಿಯಾಂಕಾ, ‘ಕೇಂದ್ರ ಸರ್ಕಾರವು ಕಾಂಗ್ರೆಸ್ ನೇತೃತ್ವದ ಸರ್ಕಾರಗಳ ಆಡಳಿತವಿರುವ ರಾಜ್ಯಗಳನ್ನು ನಿರ್ಲಕ್ಷಿಸುತ್ತಿದೆ’ ಎಂದು ದೂರಿದರು.



ಹಿಮಾಚಲ ಪ್ರದೇಶದ ಮಾಜಿ ಮುಖ್ಯಮಂತ್ರಿ ದಿ.ವೀರಭದ್ರ ಸಿಂಗ್ ಅವರ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್, ಕಾಂಗ್ರೆಸ್ ವರಿಷ್ಠೆ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಪಾಲ್ಗೊಂಡಿದ್ದರು ಪಿಟಿಐ ಚಿತ್ರ

‘ಸುಖ್ವಿಂದರ್ ಸುಖು ಮುಖ್ಯಮಂತ್ರಿಯಾದ ಬಳಿಕ ಹಿಮಾಚಲದಲ್ಲಿ ಭಾರಿ ಮಳೆ ಸುರಿಯಿತು. ನೆರವಿಗೆ ಧಾವಿಸುವಂತೆ ಕೇಂದ್ರ ಸರ್ಕಾರಕ್ಕೆ ಹಲವು ಬಾರಿ ವಿನಂತಿಸಿದರೂ ಸ್ಪಂದಿಸಲಿಲ್ಲ’ ಎಂದು ಹೇಳಿದರು.

ಲಾಲೂ ಕುಟುಂಬ ವಿರುದ್ಧ ದೋಷಾರೋಪ

ಒಂದನೇ ಪುಟದಿಂದ...

ಲಾಲೂ ಪ್ರಸಾದ್ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿಯಲ್ಲಿ ಆರೋಪ ಹೊರಿಸಲಾಗಿದೆ. ಮೂವರ ವಿರುದ್ಧ ಆರೋಪಪಟ್ಟಿ ಹೊರಿಸಲಿರುವ ಕಾರಣ ಅಕ್ಟೋಬರ್ 13ರಂದು ಖುದ್ದು ಹಾಜರಿರಬೇಕು ಎಂದು ಸೆ.24ರಂದು ನ್ಯಾಯಾಲಯವು ಸೂಚನೆ ನೀಡಿತ್ತು.

ಸಿಬಿಐ ಸಲ್ಲಿಸಿದ ಆರೋಪಪಟ್ಟಿ ಪ್ರಕಾರ, ‘2004ರಿಂದ 2014ರವರೆಗಿನ ಅವಧಿಯಲ್ಲಿ ಒಡಿಶಾದ ಪುರಿ ಹಾಗೂ ಜಾರ್ಖಂಡ್‌ನ ರಾಂಚಿಯಲ್ಲಿರುವ ಭಾರತೀಯ ರೈಲ್ವೆ ಒಡೆತನದಲ್ಲಿದ್ದ ಬಿಎನ್‌ಆರ್ ಹೋಟೆಲ್‌ಗಳನ್ನು ಮೊದಲಿಗೆ ಐಆರ್‌ಸಿಟಿಸಿಗೆ ವರ್ಗಾಯಿಸಲಾಗಿತ್ತು. ನಂತರ ಈ ಹೋಟೆಲ್‌ಗಳ ಕಾರ್ಯಾಚರಣೆ, ನಿರ್ವಹಣೆಗಾಗಿ ಬಿಹಾರದ ಪಾಟ್ನಾದ ಸುಜಾತಾ ಹೋಟೆಲ್ಸ್ ಪ್ರೈವೆಟ್ ಲಿಮಿಟೆಡ್‌ಗೆ ಗುತ್ತಿಗೆಗೆ ನೀಡಲಾಗಿತ್ತು. ಸುಜಾತಾ ಸಂಸ್ಥೆಗೆ ಹೋಟೆಲ್‌ಗಳನ್ನು ಗುತ್ತಿಗೆಗೆ ನೀಡಲು ಅತ್ಯಂತ ವ್ಯವಸ್ಥಿತವಾಗಿ ನಿಯಮಗಳನ್ನು ಉಲ್ಲಂಘಿಸಲಾಗಿತ್ತು’ ಎಂದು ಆರೋಪಿಸಿದೆ.

ಇದಲ್ಲದೇ, ಐಆರ್‌ಸಿಟಿಸಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ವಿ.ಕೆ.ಅಸ್ಥಾನಾ, ಆರ್.ಕೆ.ಗೋಯಲ್, ಸುಜಾತಾ ಹೋಟೆಲ್ಸ್ ಹಾಗೂ ಚಾಣಕ್ಯ ಹೋಟೆಲ್‌ನ ನಿರ್ದೇಶಕ ಹಾಗೂ ಮಾಲೀಕರಾದ ವಿಜಯ್ ಕೊಚ್ಚಾರ್, ವಿನಯ್ ಕೊಚ್ಚಾರ್ ಅವರ ಹೆಸರನ್ನು ಉಲ್ಲೇಖಿಸಿದೆ.

ಇದಲ್ಲದೇ, ಡಿಲೈಟ್ ಮಾರ್ಕೆಟಿಂಗ್ ಕಂಪನಿ (ಈಗ ಲಾರಾ ಪ್ರಾಜೆಕ್ಟ್ಸ್) ಹಾಗೂ ಸುಜಾತಾ ಹೋಟೆಲ್ಸ್ ಪ್ರೈವೆಟ್ ಲಿಮಿಟೆಡ್ ವಿರುದ್ಧವೂ ದೋಷಾರೋಪ ಪಟ್ಟಿಯಲ್ಲಿ ಆರೋಪ ಹೊರಿಸಲಾಗಿದೆ.



ನವದೆಹಲಿಯ ರೌಸ್ ಅವೆನ್ಯೂ ನ್ಯಾಯಾಲಯಕ್ಕೆ ಹಾಜರಾದ ಆರ್‌ಜೆಡಿ ವರಿಷ್ಠ ಲಾಲೂ ಪ್ರಸಾದ್, ಪತ್ನಿ ರಾಬ್ಡಿ ದೇವಿ, ಪುತ್ರ ತೇಜಸ್ವಿ ಯಾದವ್–ಪಿಟಿಐ ಚಿತ್ರ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ಕಷ್ಟಗಳು ಒಂಟಿಯಾಗಿ ಬರುವುದಿಲ್ಲ; ಸಾಲುಗಟ್ಟಿ ಬರುತ್ತವೆ.

–ವಿಲಿಯಂ ಷೇಕ್ಸ್‌ಪಿಯರ್

ಸಂಪಾದಕೀಯ

ಅತ್ಯಾಚಾರ ಹೇಯಕೃತ್ಯ: ರಾಜಕೀಯ ಬೇಡ, ಅಪರಾಧಿಗಳನ್ನು ಮಟ್ಟ ಹಾಕಿ

ರಾಜ್ಯ ಸರ್ಕಾರದ ಮಹಿಳಾ ಸಬಲೀಕರಣದ ಕಾರ್ಯಕ್ರಮಗಳು ದೇಶದ ಗಮನಸೆಳೆದಿರುವ ಸಂದರ್ಭದಲ್ಲೇ, ಮಹಿಳೆಯರ ಸುರಕ್ಷತೆಯ ಬಗ್ಗೆ ಅನುಮಾನ ಮೂಡಿಸುವ ಘಟನೆಗಳು ಕರ್ನಾಟಕದಲ್ಲಿ ನಡೆದಿವೆ. ಮೈಸೂರು ಮತ್ತು ಕುಷ್ಟಗಿ ತಾಲ್ಲೂಕಿನ ಗ್ರಾಮವೊಂದರಲ್ಲಿ ನಡೆದಿರುವ ಅತ್ಯಾಚಾರ ಪ್ರಕರಣಗಳು ನಾಗರಿಕ ಸಮಾಜವನ್ನು ಬೆಚ್ಚಿಬೀಳಿಸುವ ಘಟನೆಗಳಾಗಿವೆ. ಮೈಸೂರಿನಲ್ಲಿ ನಡೆದಿರುವ ಅಪರಾಧ ಕೃತ್ಯದಲ್ಲಿ ಬಲೂನು ಮಾರಲು ಬಂದಿದ್ದ ಕಲಬುರಗಿಯ ಕುಟುಂಬದ ಹತ್ತು ವರ್ಷದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವುದರ ಜೊತೆಗೆ, ಬರ್ಬರವಾಗಿ ಕೊಂದು, ಚರಂಡಿಯ ಮೇಲೆ ಮೃತದೇಹವನ್ನು ಎಸೆಯಲಾಗಿದೆ. ನತದೃಷ್ಟ ಬಾಲಕಿ, ರಾತ್ರಿ 12ಕ್ಕೆ ವ್ಯಾಪಾರ ಮುಗಿಸಿ ಗುಡಾರಕ್ಕೆ ಬಂದು ತಂದೆಯೊಂದಿಗೆ ಮಲಗಿದ್ದಾಳೆ. ಮುಂಜಾನೆ ನಾಲ್ಕರ ಸುಮಾರಿಗೆ ಮಳೆ ಬಂದಾಗ, ಸುರಕ್ಷಿತ ಸ್ಥಳಕ್ಕೆ ತೆರಳಲು ಕುಟುಂಬ ಎಚ್ಚರಗೊಂಡಾಗ ಬಾಲಕಿ ನಾಪತ್ತೆಯಾಗಿರುವುದು ಬೆಳಕಿಗೆ ಬಂದಿದೆ. ಗುಡಾರದಿಂದ ಸುಮಾರು 50 ಮೀಟರ್ ದೂರದಲ್ಲಿ ಬಾಲಕಿಯ ದೇಹ ಪತ್ತೆಯಾಗಿದೆ. ಕಿವಿ, ಕೆನ್ನೆ ಹಾಗೂ ಗಲ್ಲವನ್ನು ಕತ್ತರಿಸಿರುವುದು ಹಾಗೂ ಬಾಲಕಿಯ ದೇಹದ ಮೇಲಿರುವ ಇರಿತದ ಗಾಯಗಳು ಹಿಂಸಾತ್ಮಕ ಘಟನೆಯ ಭೀಕರತೆಗೆ ನಿದರ್ಶನದಂತಿವೆ. ಬೆಳಗ್ಗೆ ಮಗಳೊಂದಿಗೆ ಊರಿಗೆ ಮರಳಬೇಕಾಗಿದ್ದ ಕುಟುಂಬ, ಮೃತದೇಹದೊಂದಿಗೆ ತೆರಳಬೇಕಾದ ಸಂಕಟವನ್ನು ಅನುಭವಿಸಿದೆ. ಕುಷ್ಟಗಿ ತಾಲ್ಲೂಕಿನ ಗ್ರಾಮವೊಂದರಲ್ಲಿ ಹದಿನೇಳು ವರ್ಷದ ಬಾಲಕಿಯ ಮೇಲೆ ಗ್ರಾಮ ಪಂಚಾಯಿತಿಯ ಕರವಸೂಲಿಗಾರ ಅತ್ಯಾಚಾರ ಎಸಗಿದ್ದಾನೆ. ಎರಡೂ ಪ್ರಕರಣಗಳಲ್ಲಿ ಲೈಂಗಿಕ ದೌರ್ಜನ್ಯಕ್ಕೊಳಗಾಗಿರುವುದು ಹದಿನೆಂಟು ವರ್ಷದೊಳಗಿನ ಬಾಲಕಿಯರಾಗಿದ್ದು, ಪೋಕ್ಸೊ ಕಾಯ್ದೆಯನ್ವಯ ಪ್ರಕರಣಗಳು ದಾಖಲಾಗಿವೆ.



ಅತ್ಯಾಚಾರ ಪ್ರಕರಣಗಳು ಸಮಾಜ ಅಸೂಕ್ಷ್ಮಗೊಳ್ಳುತ್ತಿರುವ ಹಾಗೂ ಕ್ರೌರ್ಯ ಹೆಚ್ಚುತ್ತಿರುವುದರ ಸಂಕೇತ. ಮಹಿಳಾ ಸಬಲೀಕರಣದಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕ, ಅತ್ಯಾಚಾರ ಪ್ರಕರಣಗಳಿಂದಲೂ ಸುದ್ದಿಯಲ್ಲಿದೆ.

ಕಳೆದ ಕೆಲವು ವರ್ಷಗಳಿಂದ ದೇಶದ ವಿವಿಧ ಭಾಗಗಳಲ್ಲಿ ವರದಿಯಾಗುತ್ತಿರುವ ಅತ್ಯಾಚಾರ ಪ್ರಕರಣಗಳು ಕ್ರೌರ್ಯದ ಮನಃಸ್ಥಿತಿಯ ತಲೆಮಾರೊಂದು ಸಕ್ರಿಯವಾಗಿರುವುದರ ಸಂಕೇತವಾಗಿವೆ. ಅತ್ಯಾಚಾರ ಎಸಗುವುದರ ಜೊತೆಗೆ ಸಂತ್ರಸ್ತರನ್ನು ಬರ್ಬರವಾಗಿ ಕೊಲ್ಲುವ ವಿಕೃತ ಮನೋಭಾವ ಹೆಚ್ಚಾಗುತ್ತಿದೆ. 2012ರಲ್ಲಿ ದೆಹಲಿಯಲ್ಲಿ ಯುವತಿಯೊಬ್ಬಳ ಮೇಲೆ ಚಲಿಸುವ ಬಸ್‌ನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಹಾಗೂ ಕೊಲೆ, 'ನಿರ್ಭಯಾ ಪ್ರಕರಣ' ಹೆಸರಿನಲ್ಲಿ ವಿಶ್ವದ ಗಮನಸೆಳೆದಿತ್ತು. ಆ ಪ್ರಕರಣ ನಡೆದ ನಂತರ ಅತ್ಯಾಚಾರಿಗಳ ವಿರುದ್ಧದ ಹೋರಾಟವೊಂದು ಸಣ್ಣ ಪ್ರಮಾಣದಲ್ಲಿ ರೂಪುಗೊಂಡಿದೆಯಾದರೂ, ಹಿಂಸ್ರಪಶುಗಳ ಅಟ್ಟಹಾಸ ಕೊನೆಯಾಗದಿರುವುದು ಕಳವಳ ಹುಟ್ಟಿಸುವಂತಿದೆ. ಕೋಲ್ಕತ್ತದಲ್ಲಿ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆ, ಮಹಾರಾಷ್ಟ್ರದಲ್ಲಿ ಇಬ್ಬರು ಪುಟ್ಟ ಬಾಲಕಿಯರ ಮೇಲೆ ನಡೆದ ಲೈಂಗಿಕ ಪೀಡನೆ, ಉತ್ತರ ಪ್ರದೇಶದಲ್ಲಿ ದಾದಿಯ ಮೇಲೆ ವೈದ್ಯನಿಂದಲೇ ನಡೆದ ಅತ್ಯಾಚಾರದಂಥ ಪ್ರಕರಣಗಳು ನಾಗರಿಕ ಸಮಾಜಕ್ಕೆ ಕಳಂಕಪ್ರಾಯ. ಈ ದಾರುಣ ಘಟನೆಗಳ ಸಾಲಿಗೆ, ಮೈಸೂರಿನಲ್ಲಿ ನಡೆದ ಬಾಲಕಿಯ ಅತ್ಯಾಚಾರ–ಕೊಲೆ ಪ್ರಕರಣವೂ ಸೇರುವಂತಹದ್ದು.

ಅತ್ಯಾಚಾರ ಪ್ರಕರಣಗಳನ್ನು ನಿಯಂತ್ರಿಸಿ ಸಮಾಜವನ್ನು ಮಾನವೀಯಗೊಳಿಸುವಲ್ಲಿ ರಾಜಕಾರಣದ ಪಾತ್ರ ಮಹತ್ವದ್ದು. ದುರದೃಷ್ಟವಶಾತ್, ರಾಜಕೀಯ ನಾಯಕರು ಸಂವೇದನಾಶೂನ್ಯರಾಗಿ ನಡೆದುಕೊಳ್ಳುತ್ತಿದ್ದಾರೆ. ಪಶ್ಚಿಮ ಬಂಗಾಳದ ದುರ್ಗಾಪುರದಲ್ಲಿ ವೈದ್ಯಕೀಯ ವಿದ್ಯಾರ್ಥಿನಿಯನ್ನು ಅರಣ್ಯಪ್ರದೇಶಕ್ಕೆ ಹೊತ್ತುಕೊಂಡು ಹೋಗಿ ಸಾಮೂಹಿಕ ಅತ್ಯಾಚಾರ ಎಸಗಿದ ಘಟನೆ ಕಳೆದ ವಾರ ನಡೆದಿದೆ. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾತನಾಡುವ ಸಂದರ್ಭದಲ್ಲಿ, ರಾತ್ರಿ ವೇಳೆ ಹೆಣ್ಣುಮಕ್ಕಳು ವಾಸಸ್ಥಳದಿಂದ ಹೊರಗೆ ಬಾರದೆ ಇರುವ ಮೂಲಕ ತಮ್ಮನ್ನು ರಕ್ಷಿಸಿಕೊಳ್ಳಬೇಕು ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಹೆಣ್ಣುಮಕ್ಕಳಿಗೆ ಸುರಕ್ಷತೆಯ ಭರವಸೆ ನೀಡಬೇಕಾದ ಮುಖ್ಯಮಂತ್ರಿಯೇ, ಸುರಕ್ಷತೆಗಾಗಿ ಮನೆಯೊಳಗೆ ಇರಿ ಎಂದು ಹೇಳಿರುವುದು ದುರದೃಷ್ಟಕರ. ಅವರ ಮಾತು, ಕಾನೂನು ಮತ್ತು ಸುವ್ಯವಸ್ಥೆಯ ವೈಫಲ್ಯವನ್ನೂ ಸೂಚಿಸುವಂತಿದೆ. ಕಳೆದ ವರ್ಷ ಕೋಲ್ಕತ್ತದ ಆರ್‌.ಜಿ. ಕರ್ ಆಸ್ಪತ್ರೆಯಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಪ್ರಕರಣದಲ್ಲೂ ಮಮತಾ ಬ್ಯಾನರ್ಜಿ ಅವರ ನಡವಳಿಕೆ ಟೀಕೆಗೊಳಗಾಗಿತ್ತು. ಮೈಸೂರು ಮತ್ತು ಕುಷ್ಟಗಿಯಲ್ಲಿ ನಡೆದ ಅತ್ಯಾಚಾರ ಪ್ರಕರಣಗಳ ಬಗ್ಗೆ ಕರ್ನಾಟಕದ ರಾಜಕಾರಣಿಗಳ ಸ್ಪಂದನವೂ ನಿರಾಶಾದಾಯಕವಾಗಿದೆ. ಸಂತ್ರಸ್ತರ ಕುಟುಂಬದ ಬೆಂಬಲಕ್ಕೆ ನಿಲ್ಲಬೇಕಾದವರು ಹಾಗೂ ಅಪರಾಧಿಗಳನ್ನು ಕಠಿಣ ಕಾನೂನು ಕ್ರಮಕ್ಕೆ ಗುರಿಯಾಗಿಸುವ ನಿಟ್ಟಿನಲ್ಲಿ ಸರ್ಕಾರದ ಮೇಲೆ ಒತ್ತಡ ತರಬೇಕಾದವರು, ಕ್ಷುಲ್ಲಕ ರಾಜಕಾರಣದ ಬೀದಿ ಪ್ರದರ್ಶನದಲ್ಲಿ ನಿರತರಾಗಿದ್ದಾರೆ. ಅತ್ಯಾಚಾರಿಗಳ ವಿಕೃತಿಯಂತೆಯೇ, ರಾಜಕೀಯ ನಾಯಕರ ಸಂವೇದನಾರಾಹಿತ್ಯ ಮನಃಸ್ಥಿತಿಯೂ ಅಪಾಯಕಾರಿ.

ಚಾವಡಿ

ಕೈಕುಲುಕುವ ಆಟ



ತಾಲಿಬಾನಿಗಳು–ಹಿಂದುತ್ವದವರು ಕೈಕುಲುಕಿದ್ದು ಚೆಂದವಾಯಿತು. ಇಬ್ಬರೂ ತನುಮನ ಒಂದಾಗಿ ದುಡಿದರೆ, ಜಗತ್ತನ್ನು ಕನಿಷ್ಠ ಎರಡು ಶತಮಾನ ಹಿಂದಕ್ಕೆ ಕೊಂಡೊಯ್ಯಬಲ್ಲರು.

ಸವಿರಾಜ್ ಆನಂದೂರು, ಕಥೆಗಾರ, ಫೇಸ್‌ಬುಕ್‌ನಿಂದ

ಕಿಡಿನುಡಿ



ಕೇಡುಗಾಲಕ್ಕೆ ನರಿ ಮೊಟ್ಟೆ ಇಟ್ಟಂತೆ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ರಾಜ್ಯದಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ನಿಷೇಧ ಹೇರಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. ಇದು ಸರ್ಕಾರಕ್ಕೆ ಕೇಡುಗಾಲ ಬಂದಿರುವುದರ ಸಂಕೇತ.

ಅರವಿಂದ ಬೆಲ್ಲದ, ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ

25 ವರ್ಷಗಳ ಹಿಂದೆ

ಶನಿವಾರ, 14-10-2000

• ಕೋಲಾರ ಬಳಿ ಅಪಘಾತ: ಏಳು ಮಂದಿ ಸಾವು

ಕೋಲಾರ, ಅ. 13– ಇಲ್ಲಿಗೆ 30 ಕಿ.ಮೀ. ದೂರದ ಮುಳಬಾಗಲು ಪಟ್ಟಣ ಹೊರವಲಯದ ಬೈಪಾಸ್ ರಸ್ತೆಯಲ್ಲಿನ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಗುರುವಾರ ಮಧ್ಯರಾತ್ರಿಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಏಳು ಮಂದಿ ಮೃತಪಟ್ಟಿದ್ದು, 20ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಚೆನ್ನೈನ ಜಯರಾಂ (23), ಕೋಲಾರದ ನಿವಾಸಿಗಳಾದ ಅಮ್ಜದ್ ಪಾಷಾ (16), ಫಯಾಜ್ ಪಾಷಾ (24), ಸಲೀಂ ಪಾಷಾ (25), ರಹಮತ್ ಉಲ್ಲಾ (28), ಫೈರೋಜ್ (25) ಮೃತಪಟ್ಟಿದ್ದಾರೆ. ಮೃತಪಟ್ಟಿರುವ ಮತ್ತೊಬ್ಬ 15 ವರ್ಷದ ಬಾಲಕನ ಗುರುತು ಪತ್ತೆಯಾಗಿಲ್ಲ.

ತೀವ್ರವಾಗಿ ಗಾಯಗೊಂಡು ಚಿಂತಾಜನಕ ಸ್ಥಿತಿಯಲ್ಲಿದ್ದ ಮೂವರನ್ನು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಕಳುಹಿಸಲಾಗಿದೆ.

75 ವರ್ಷಗಳ ಹಿಂದೆ

ಶನಿವಾರ, 14-10-1950

• ಹುಬ್ಬಳ್ಳಿಗೆ ಜೋಗ್ ವಿದ್ಯುಚ್ಛಕ್ತಿ

ಬಳ್ಳಾರಿ, ಅ. 13– ಮೈಸೂರು ಸಂಸ್ಥಾನದ ಜೋಗ್ ವಿದ್ಯುತ್ ಕೇಂದ್ರದಿಂದ ಹುಬ್ಬಳ್ಳಿಗೆ ವಿದ್ಯುಚ್ಛಕ್ತಿ ಸರಬರಾಜು ಲೈನನ್ನು ಹಾಕುವ ಬಗ್ಗೆ ಬೊಂಬಾಯಿ ಸರ್ಕಾರದಿಂದ ಔಪಚಾರಿಕ ಮನವಿ ಬಂದಲ್ಲಿ ಆ ವಿಚಾರವನ್ನು ಮೈಸೂರು ಸರ್ಕಾರ ಪರಿಶೀಲಿಸುವುದೆಂಬುದಾಗಿ ಮೈಸೂರಿನ ವಿದ್ಯುತ್ ಶಾಖಾ ಸಚಿವರಾದ ಕೆ.ಟಿ. ಭಾಷ್ಯಂರವರು ಕರ್ನಾಟಕದ ವರ್ತಕರ ಸಂಘದ ನಿಯೋಗವೊಂದಕ್ಕೆ ತಿಳಿಸಿದ್ದರೆಂದು ವರದಿಯಾಗಿದೆ.

• ಅರಮನೆಯಲ್ಲಿ ಪತ್ರಗಳ ಕಳವು

ಲಂಡನ್, ಅ. 13– ಬ್ರಿಟನ್ನಿನ ದೊರೆ ವಾಸಿಸುವ ಬಕಿಂಗ್‌ಹ್ಯಾಂ ಅರಮನೆಯಲ್ಲಿ ರಾಯಭಾರ ವ್ಯವಹಾರಕ್ಕೆ ಸಂಬಂಧಿಸಿದ ಕಾಗದ ಪತ್ರಗಳು ನಿನ್ನೆ ರಾತ್ರಿ ಕಳುವಾಗಿವೆ.

ಬೀದಿಯ ಪಕ್ಕದಲ್ಲಿದ್ದ ಕಸದ ಡಬ್ಬಿಯೊಂದರಲ್ಲಿ ರಾಯಭಾರ ಪತ್ರಗಳ ರವಾನೆ ಮಾಡುವ ಪೆಟ್ಟಿಗೆ ಸಿಕ್ಕಿದೆ. ಈ ಕಾಗದ ಪತ್ರಗಳು ಅರಮನೆಯ ಮಾರ್ಷಲ್ಲರ ಕೋಣೆಯಿಂದ ಕಳುವಾದುವೆಂದು ಹೇಳಲಾಗಿದೆ.

ಆಟಕ್ಕೇಕೆ ಬೇಕು ರಾಜಕೀಯ?



ವಿಶ್ಲೇಷಣೆ

ಗಿರೀಶ ದೊಡ್ಡಮನಿ

> ರಾಜಕಾರಣದ ಪ್ರವೇಶದಿಂದ ಕ್ರೀಡೆಗೆ ಏನಾಗುತ್ತದೆ ಎನ್ನುವುದಕ್ಕೆ ವೆಸ್ಟ್ ಇಂಡೀಸ್, ಪಾಕಿಸ್ತಾನ, ಬಾಂಗ್ಲಾ ಹಾಗೂ ಶ್ರೀಲಂಕಾ ಕ್ರಿಕೆಟ್ ತಂಡಗಳ ಸದ್ಯದ ಸ್ಥಿತಿ ನಿದರ್ಶನದಂತಿದೆ. ಭಾರತದ ಕ್ರಿಕೆಟ್ ಕೂಡ ರಾಜಕಾರಣಿಗಳ ಕಣ್ಗಾವಲಿನಲ್ಲಿದೆ. ಅದರ ಪರಿಣಾಮ, ಯುವ ಕ್ರಿಕೆಟಿಗರು ಕ್ರೀಡಾಸ್ಫೂರ್ತಿ ಮರೆತಂತೆ ವರ್ತಿಸುತ್ತಿದ್ದಾರೆ. ಇವರ ಕಿವಿ ಹಿಂಡುವವರು ಯಾರು?

'ಅತಿಯಾದ ರಾಜಕೀಯ ಹಸ್ತಕ್ಷೇಪ ವೆಸ್ಟ್ ಇಂಡೀಸ್ ಕ್ರಿಕೆಟ್‌ಗೆ ಮಾರಕವಾಗುತ್ತಿದೆ'.

ದಶಕದ ಹಿಂದೆ ವೆಸ್ಟ್ ಇಂಡೀಸ್ ಆಟಗಾರ ಡ್ವೇನ್ ಬ್ರಾವೊ ಹೇಳಿದ್ದ ಮಾತುಗಳನ್ನು ಗಂಭೀರವಾಗಿ ಪರಿಗಣಿಸಿ ಸುಧಾರಣೆಯತ್ತ ಹೆಜ್ಜೆಯಿಟ್ಟಿದ್ದರೆ, ಕೆರಿಬಿಯನ್ ಕ್ರಿಕೆಟ್ ಗತವೈಭವಕ್ಕೆ ಮರಳುತ್ತಿತ್ತೋ ಏನೋ? ಹಾಗಾಗಲಿಲ್ಲ. ದ್ವೀಪರಾಷ್ಟ್ರದ ಕ್ರಿಕೆಟ್ ಇವತ್ತು ತಾರೆಗಳಿಲ್ಲದ ಆಗಸದಂತಾಗಿದೆ. ಕ್ರಿಕೆಟ್ 'ದೈತ್ಯ' ಎಂದೇ ಕರೆಸಿಕೊಳ್ಳುತ್ತಿದ್ದ ತಂಡ ಈಗ ಸೊರಗಿ ಸುಣ್ಣವಾಗಿದೆ.

ದಶಕಗಳ ಹಿಂದಿನ ವೆಸ್ಟ್ ಇಂಡೀಸ್ ತಂಡದಲ್ಲಿದ್ದ ವೇಗದ ಬೌಲರ್‌ಗಳಾದ ಆ್ಯಂಡಿ ರಾಬರ್ಟ್ಸ್, ಜೊಯಲ್ ಗಾರ್ನರ್, ಮೈಕೆಲ್ ಹೋಲ್ಡಿಂಗ್, ಪ್ಯಾಟ್ರಿಕ್ ಪ್ಯಾಟರ್ಸನ್, ಮಾಲ್ಕಂ ಮಾರ್ಷಲ್, ಕೋರ್ಟ್ನಿ ವಾಲ್ಶ್, ಕರ್ಟ್ಲಿ ಆ್ಯಂಬ್ರೋಸ್, ಇಯಾನ್ ಬಿಷಪ್ ಅವರು ಬ್ಯಾಟರ್‌ಗಳ ಎದೆಯಲ್ಲಿ ನಡುಕ ಹುಟ್ಟಿಸುತ್ತಿದ್ದರು. ವಿವಿಯನ್ ರಿಚರ್ಡ್ಸ್, ಕ್ಲೈವ್ ಲಾಯ್ಡ್, ಗ್ಯಾರಿ ಸೋಬರ್ಸ್, ಬ್ರಯನ್ ಲಾರಾ, ಗಾರ್ಡನ್ ಗ್ರಿನೀಜ್, ಡೆಸ್ಮಂಡ್ ಹೇಯ್ನ್ಸ್, ಕ್ರಿಸ್ ಗೇಲ್ ಅವರ ಬ್ಯಾಟಿಂಗ್ ಮುಂದೆ ಬಸವಳಿದ ಬೌಲರ್‌ಗಳಿಗೆ ಲೆಕ್ಕವಿಲ್ಲ. ಆದರೆ, ಸದ್ಯ ಭಾರತದಲ್ಲಿ ಟೆಸ್ಟ್ ಸರಣಿ ಆಡುತ್ತಿರುವ ವಿಂಡೀಸ್ ತಂಡದಲ್ಲಿ ಭರವಸೆದಾಯಕ ಆಟಗಾರರು ಕಾಣುತ್ತಿಲ್ಲ. ಏಕದಿನ ಕ್ರಿಕೆಟ್‌ನಲ್ಲಿಯೂ ಬಹುತೇಕ ಆ ದೇಶದ 'ಯುಗಾಂತ್ಯ'ವಾಗಿದೆ.

ಏಕದಿನ ಮಾದರಿಯ ಮೊದಲೆರಡೂ ವಿಶ್ವಕಪ್ ಜಯಿಸಿದ್ದ ತಂಡ ವಿಂಡೀಸ್. ಅಷ್ಟೇ ಅಲ್ಲ; ಇತ್ತೀಚೆಗೆ ಕ್ರಿಕೆಟ್ ಅಂಗಳದಲ್ಲಿ ಅಂಬೆಗಾಲಿಡುತ್ತಿರುವ ನೇಪಾಳ ತಂಡವೂ ಟಿ20 ಸರಣಿಯಲ್ಲಿ 2–1ರಿಂದ ವಿಂಡೀಸ್ ಬಳಗವನ್ನು ಹಣಿದಿತ್ತು. ಕೆರಿಬಿಯನ್ ನಾಡಿನಲ್ಲಿ ಪ್ರತಿಭಾನ್ವಿತರಿಗೆ ಕೊರತೆಯೇನಿಲ್ಲ. ಆದರೆ, ಅಲ್ಲಿಯ ಕ್ರಿಕೆಟ್ ಮಂಡಳಿಯ ಧೋರಣೆ, ಆಡಳಿತದಲ್ಲಿ ರಾಜಕೀಯ ಹಸ್ತಕ್ಷೇಪ ಮತ್ತು ದುಂದುವೆಚ್ಚಗಳಿಂದಾಗಿ ಈ ಗತಿ ಬಂದೊದಗಿದೆ. ಯಾವುದಕ್ಕೂ ಉತ್ತರದಾಯಿತ್ವ ಇಲ್ಲದ ಆಡಳಿತ ನಡೆಯುತ್ತಿದೆ ಎಂದು ಈಚೆಗೆ ವಿಂಡೀಸ್ ಮಾಜಿ ಕ್ರಿಕೆಟಿಗ ದೀನಾನಾಥ್ ರಾಮನಾರಾಯಣ್ ಅವರು ವೆಬ್‌ಸೈಟ್‌ನಲ್ಲಿ ಬರೆದಿದ್ದರು. ವಿಂಡೀಸ್ ತಂಡದ ಮುಖ್ಯ ಕೋಚ್ ಆಗಿರುವ ಡ್ಯಾರೆನ್ ಸ್ಯಾಮಿ ಅವರೂ ತಮ್ಮ ದೇಶದ (ಅ)ವ್ಯವಸ್ಥೆ ಕುರಿತು ಮಾಧ್ಯಮ ಗೋಷ್ಠಿಯಲ್ಲಿ ಮನಬಿಚ್ಚಿ ಮಾತನಾಡಿದ್ದರು.

ಪ್ರಸ್ತುತ ಕಾಲಘಟ್ಟದಲ್ಲಿ ವಿಂಡೀಸ್ ಮಾತ್ರವಲ್ಲ, ಹಲವು ಪ್ರಮುಖ ಕ್ರಿಕೆಟ್ ತಂಡಗಳು ರಾಜಕೀಯ ಹಸ್ತಕ್ಷೇಪ ಮತ್ತು ದುರಾಡಳಿತದಿಂದ ಅವನತಿಯತ್ತ ಸಾಗುತ್ತಿವೆ. ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ಶ್ರೀಲಂಕಾ ಮತ್ತು ಬಾಂಗ್ಲಾದೇಶ ಈ ಪಟ್ಟಿಯಲ್ಲಿವೆ. ಜಿಂಬಾಬ್ವೆ, ಕೆನ್ಯಾ ದೇಶಗಳ ಕಥೆಯೂ ಭಿನ್ನವಲ್ಲ.

ಪಾಕಿಸ್ತಾನ ತಂಡದ ಪರಿಸ್ಥಿತಿಯಂತೂ ಅತ್ಯಂತ ಶೋಚನೀಯವಾಗಿದೆ. ಅಲ್ಲಿಯ ಸಚಿವ ಮೊಹಸಿನ್ ನಕ್ವಿ ಪಾಕಿಸ್ತಾನ ಕ್ರಿಕೆಟ್ ಮಂಡಳಿಯ (ಪಿಸಿಬಿ) ಅಧ್ಯಕ್ಷರೂ ಹೌದು. ಅವರೇ ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಮುಖ್ಯಸ್ಥರೂ ಆಗಿದ್ದಾರೆ. ಪಾಕ್ ತಂಡದ ಆಯ್ಕೆ ಪ್ರಕ್ರಿಯೆ, ಮೂಲಸೌಲಭ್ಯಗಳ ಅಭಿವೃದ್ಧಿಯಲ್ಲಿ ಮತ್ತು ಕ್ರಿಕೆಟ್ ಆಡಳಿತದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುತ್ತದೆ. ಅದಕ್ಕಾಗಿಯೇ ಅರ್ಹರಿಗೆ ಅವಕಾಶ ಸಿಗುತ್ತಿಲ್ಲ ಎಂದು ಅಲ್ಲಿಯ ಮಾಜಿ ಕ್ರಿಕೆಟಿಗರೇ ಆರೋಪಿಸುತ್ತಿದ್ದಾರೆ.

ಭಾರತ ವಿರೋಧಿ ನಿಲುವಿನ ಮನೋಭಾವವನ್ನೂ ಪಾಕ್ ಸರ್ಕಾರ ತಮ್ಮ ಆಟಗಾರರಲ್ಲಿ ಬಿತ್ತುತ್ತಿರುವುದು ಗೋಪ್ಯವೇನಲ್ಲ. ಅದಕ್ಕೆ ಪ್ರತ್ಯುತ್ತರ ನೀಡುವ ಭರದಲ್ಲಿ ಇತ್ತೀಚೆಗೆ ಭಾರತ ತಂಡದ 'ನವಪೀಳಿಗೆ'ಯ ಆಟಗಾರರೂ ಕ್ರೀಡಾ ಮನೋಭಾವ ಮರೆತಿದ್ದು ವ್ಯಾಪಕ ಟೀಕೆಗಳಿಗೆ ಕಾರಣವಾಯಿತು. ಏಷ್ಯಾ ಕಪ್ ಟೂರ್ನಿಯಲ್ಲಿ ಪಾಕ್ ಆಟಗಾರರೊಂದಿಗೆ ಹಸ್ತಲಾಘವ ನೀಡದ ಭಾರತದ ಆಟಗಾರರು, ಫೈನಲ್ ಗೆದ್ದ ನಂತರ ಮೊಹಸಿನ್ ನಕ್ವಿ ಅವರಿಂದ ಟ್ರೋಫಿ ಸ್ವೀಕರಿಸಲಿಲ್ಲ. ಇದು ಬಹಳ ದೊಡ್ಡ ವಿವಾದಕ್ಕೆ ಕಾರಣವಾಯಿತು. ಪಹಲ್ಗಾಮ್ ಭಯೋತ್ಪಾದನಾ ದಾಳಿ ಖಂಡಿಸಿ ಪಾಕ್ ವಿರುದ್ಧ ಪಂದ್ಯಗಳನ್ನು ಬಹಿಷ್ಕರಿಸಬೇಕು ಎಂದು ಟೂರ್ನಿಗೂ ಮುನ್ನವೇ ಲಕ್ಷಾಂತರ ಭಾರತೀಯರು ಒತ್ತಾಯಿಸಿದ್ದರು. ಆದರೂ, ತಂಡವು ಬಿಸಿಸಿಐ ಆಣತಿಯಂತೆ ಕಣಕ್ಕಿಳಿಯಿತು. ಕ್ರಿಕೆಟ್ ಮಂಡಳಿಯು ಕೇಂದ್ರ ಸರ್ಕಾರದ ಸೂಚನೆಗಳನ್ನು ಪಾಲಿಸಿತ್ತಷ್ಟೇ. ಫೈನಲ್ ನಂತರ ಪ್ರಧಾನ ಮಂತ್ರಿಗಳೇ ಟ್ವೀಟ್ ಮಾಡಿ ಭಾರತದ ಗೆಲುವನ್ನು 'ಆಪರೇಷನ್ ಸಿಂಧೂರ' ಜಯಕ್ಕೆ ಹೋಲಿಕೆ ಮಾಡಿದ್ದರು.

'ಆಟಗಾರರು ತಮ್ಮ ಕರ್ತವ್ಯವನ್ನು ನಿಭಾಯಿಸಿದರೆ ಸಾಕು. ಉಳಿದವರು ತಮ್ಮ ತಮ್ಮ ಕೆಲಸ ಮಾಡಲಿ' ಎಂದು ದಿಗ್ಗಜ ಕಪಿಲ್ ದೇವ್ ಮತ್ತು ದಕ್ಷಿಣ ಆಫ್ರಿಕಾದ ಎಬಿ ಡಿವಿಲಿಯರ್ಸ್ ಅವರು ಹೇಳಿದ ಮಾತುಗಳು ಬಹುಶಃ ಬಿಸಿಸಿಐಗೆ ನಾಟಿಲ್ಲ. ಅದಕ್ಕಾಗಿಯೇ ಮಹಿಳೆಯರ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತದ ವನಿತೆಯರಿಗೂ ಪಾಕ್ ಎದುರಿನ ಪಂದ್ಯದಲ್ಲಿ ಆಟಗಾರ್ತಿಯರಿಗೆ ಹಸ್ತಲಾಘವ ಮಾಡದಂತೆ ಸೂಚನೆ ನೀಡಿತ್ತು.

ಪ್ರತಿಭಟಿಸಲು ಹಲವು ದಾರಿಗಳಿವೆ. ದಶಕಗಳ ಹಿಂದೆ ವರ್ಣ ತಾರತಮ್ಯವನ್ನು ವಿರೋಧಿಸಿ ತಾವು ಒಲಿಂಪಿಕ್ಸ್‌ನಲ್ಲಿ ಗೆದ್ದ ಪದಕವನ್ನೇ ನದಿಗೆ ಎಸೆದಿದ್ದ ಮೊಹಮ್ಮದ್ ಅಲಿಯ ಎದೆಗಾರಿಕೆಯೂ ಐತಿಹಾಸಿಕ ಪ್ರತಿಭಟನೆಯೇ ಆಗಿತ್ತು. ಅವರ ನಡೆ ಕ್ರೀಡೆಯ ಧ್ಯೇಯೋದ್ದೇಶವನ್ನು ಮತ್ತಷ್ಟು ಸಬಲಗೊಳಿಸಿದ್ದು ಸುಳ್ಳಲ್ಲ. ಕ್ರಿಕೆಟ್ ಕೂಡ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುತ್ತಿರುವ ಈ ಹೊತ್ತಿನಲ್ಲಿ ಕ್ರಿಕೆಟಿಗರೂ ಇತಿಹಾಸದ ಪಾಠಗಳನ್ನು ಓದಿಕೊಂಡರೆ ಒಳಿತು.

ಭಾರತದ ಕ್ರಿಕೆಟ್‌ಗೆ ರಾಜಕೀಯ ಮತ್ತು ರಾಜಕಾರಣಿಗಳ ಪ್ರಭಾವ ಹೊಸದೇನಲ್ಲ. ಆದರೆ, ಎರಡರ ನಡುವೆ ಅಂತರ ಕಾಪಾಡಿಕೊಂಡು ಬರಲಾಗಿತ್ತು. 'ಗುಲಾಬಿ ಹೂವಿಗೆ ರಕ್ಷಣೆ ನೀಡುವ ಮುಳ್ಳುಗಳ' ನಡುವೆ ಇರುವಷ್ಟೇ ಅಂತರ ಅದು. ಆದರೆ, ಈಗ ಮುಳ್ಳುಗಳು ಹೂವಿಗಿಂತ ಹೆಚ್ಚು ಉದ್ದ ಬೆಳೆಯುತ್ತಿರುವಂತೆ ಕಾಣುತ್ತಿವೆ. ಇದು ಗುಲಾಬಿಯ ಅಸ್ತಿತ್ವಕ್ಕೇ ಮಾರಕ.

1983ರಲ್ಲಿ ಕಪಿಲ್ ದೇವ್ ನಾಯಕತ್ವದ ತಂಡವು ವಿಶ್ವಕಪ್ ಜಯಿಸಿದ ನಂತರ ಭಾರತದ ಕ್ರಿಕೆಟ್ ಮಗ್ಗಲು ಬದಲಾಯಿಸಿತು. ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್, ಸೌರವ್ ಗಂಗೂಲಿ, ವಿವಿಎಸ್ ಲಕ್ಷ್ಮಣ್, ಯುವರಾಜ್ ಸಿಂಗ್, ಮಹೇಂದ್ರಸಿಂಗ್ ಧೋನಿ, ಜಹೀರ್ ಖಾನ್, ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಅವರಂತಹ ಆಟಗಾರರು ಭಾರತದ ಕ್ರಿಕೆಟ್ ಶ್ರೇಷ್ಠತೆಯನ್ನು ಎತ್ತರಕ್ಕೇರಿಸಿದರು. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಜನಿಸಿದ ನಂತರ ಬಿಸಿಸಿಐ ಬೊಕ್ಕಸ ತುಂಬಿ ತುಳುಕುತ್ತಿದೆ.

ಕ್ರಿಕೆಟ್ ಸಿರಿವಂತಿಕೆ ಹಾಗೂ ಜನಪ್ರಿಯತೆಯು ರಾಜಕಾರಣಿಗಳನ್ನು ಆಕರ್ಷಿಸುತ್ತಿದೆ. ಆದರೆ ನಿಯಮದ ಪ್ರಕಾರ, ರಾಜಕಾರಣಿಗಳು ಬಿಸಿಸಿಐ ಆಡಳಿತದಲ್ಲಿ ನೇರವಾಗಿ ಅಧಿಕಾರ ನಡೆಸುವಂತಿಲ್ಲ. ಆದರೂ, ರಾಜಕಾರಣಿಗಳು 'ರಂಗೋಲಿ ಕೆಳಗೆ ನುಸುಳುವುದನ್ನು' ಬಿಟ್ಟಿಲ್ಲ. ಪರೋಕ್ಷವಾಗಿ ತಮ್ಮ ಆಪ್ತರನ್ನು ಅಥವಾ ಕುಟುಂಬಸ್ಥರನ್ನು ಪದಾಧಿಕಾರಿಗಳನ್ನಾಗಿ ಮಾಡುತ್ತಿದ್ದಾರೆ. ಬಿಸಿಸಿಐಗೆ ಈ ಹಿಂದೆ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದ, ಈಗ ಐಸಿಸಿ ಅಧ್ಯಕ್ಷರಾಗಿರುವ ಜಯ್ ಶಾ (ಕೇಂದ್ರ ಗೃಹ ಸಚಿವರ ಮಗ) ಅವರೇ ಇದಕ್ಕೆ ಉದಾಹರಣೆ. ಉಪಾಧ್ಯಕ್ಷರಾಗಿರುವ ರಾಜೀವ್ ಶುಕ್ಲಾ ಕಾಂಗ್ರೆಸ್ ಪಕ್ಷದ ಧುರೀಣ. ಕ್ರಿಕೆಟ್ ಎಂದರೆ ಎಲ್ಲ ಪಕ್ಷದವರಿಗೂ ಇಷ್ಟ!

ಇನ್ನೊಂದೆಡೆ ವಿರಾಟ್, ರೋಹಿತ್ ಅವರಂತಹ ಖ್ಯಾತನಾಮರ ನಿವೃತ್ತಿಯೊಂದಿಗೆ (ಟೆಸ್ಟ್, ಟಿ20 ಕ್ರಿಕೆಟ್) ಭಾರತ ತಂಡದಲ್ಲಿ ತಾರಾ ಆಟಗಾರರ ಕೊರತೆ ಎದ್ದು ಕಾಣುತ್ತಿದೆ. ದಶಕಗಳಿಂದ ಭಾರತ ತಂಡದಲ್ಲಿ ನಾಯಕನಷ್ಟೇ ಅಲ್ಲ. ತಾರಾ ವರ್ಚಸ್ಸಿನ ಏಳೆಂಟು ಆಟಗಾರರು ಇರುವುದು ವಾಡಿಕೆಯಾಗಿತ್ತು. ತೀರಾ ಇತ್ತೀಚೆಗಿನ ಕಾಲಘಟ್ಟದಲ್ಲಿ; ಧೋನಿ ನಾಯಕತ್ವದಲ್ಲಿ ಸಚಿನ್ ತೆಂಡೂಲ್ಕರ್ ಮತ್ತಿತರರು ಇದ್ದರು. ಅದರ ನಂತರ ವಿರಾಟ್, ರೋಹಿತ್, ಅಜಿಂಕ್ಯ ರಹಾನೆ, ಚೇತೇಶ್ವರ್ ಪೂಜಾರ ಇದ್ದರು. ಆಗವರು ತಂಡದೊಳಗೆ ಬರುತ್ತಿದ್ದ ಹೊಸಬರಿಗೆ ಆಟದ ಜೊತೆಗೆ ನಡವಳಿಕೆಗಳನ್ನು ಕಲಿಸುತ್ತಿದ್ದರು.

ವಿರಾಟ್ ತಮ್ಮ ಆರಂಭಿಕ ದಿನಗಳಲ್ಲಿ ಅಭಿಮಾನಿಗಳೊಂದಿಗೆ ತುಸು ಒರಟಾಗಿ ನಡೆದುಕೊಂಡಾಗ ಸೆಹ್ವಾಗ್, ಧೋನಿ, ಸಚಿನ್ ಅಂತಹವರು ಕಿವಿ ಹಿಂಡಿದ್ದರು. ರಹಾನೆ ಅವರು ಮುಂಬೈ ತಂಡದ ನಾಯಕರಾಗಿದ್ದಾಗ ರಣಜಿ ಟ್ರೋಫಿ ಟೂರ್ನಿಯಲ್ಲಿ ಪೃಥ್ವಿ ಶಾ ಮತ್ತು ಯಶಸ್ವಿ ಜೈಸ್ವಾಲ್ ಅವರ ಅಶಿಸ್ತಿನ ನಡವಳಿಕೆಗೆ ಬುದ್ಧಿ ಕಲಿಸಿದ್ದು ಅಚ್ಚಳಿಯದೇ ಉಳಿದಿದೆ. 'ಸೂಪರ್‌ಸ್ಟಾರ್' ಆಟಗಾರರಿಗೆ 'ಹೀಗೆ ಮಾಡಿ...' ಎಂದು ಸೂಚಿಸುವ ಧೈರ್ಯ ಅಧಿಕಾರಸ್ಥರಿಗೂ ಇರಲಿಲ್ಲ. ಆದ್ದರಿಂದ ಈಗ ಝೆನ್ ಜೀ ಹುಡುಗರೇ ಹೆಚ್ಚಿರುವ ಭಾರತ ಕ್ರಿಕೆಟ್ ತಂಡವು ಪಟ್ಟಭದ್ರರ 'ಸುಲಭದ ಗುರಿ'ಯಾಗುವ ಸಾಧ್ಯತೆಗಳು ಹೆಚ್ಚಿವೆ. ಈ ಹೊತ್ತಿನಲ್ಲಿ ತಂಡದಲ್ಲಿ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರ ಮೇಲೆ ದೊಡ್ಡ ಹೊಣೆ ಇದೆ.

ತಂಡದಲ್ಲಿ ಸದ್ಯ ಗಂಭೀರ್ ಅವರೊಬ್ಬರೇ ಹೆಚ್ಚು ಅನುಭವಿ ಹಾಗೂ ತಾರಾವರ್ಚಸ್ಸಿನವರು. ಅವರು ಕೂಡ ಭಾರತ ಕ್ರಿಕೆಟ್ ಭವ್ಯ ಪರಂಪರೆಯ ಪ್ರಮುಖ ಆಟಗಾರನಾಗಿದ್ದವರು. ನಿವೃತ್ತಿ ನಂತರ ಒಂದು ಅವಧಿಗೆ ಬಿಜೆಪಿಯ ಸಂಸದರಾಗಿದ್ದವರು. ಕ್ರಿಕೆಟ್ ಆಟವನ್ನು ಧರ್ಮದಂತೆ ಆರಾಧಿಸುವ ದೊಡ್ಡ ವರ್ಗವೊಂದು ದೇಶದಲ್ಲಿದೆ. ಆದ್ದರಿಂದ ರಾಜಕೀಯ ಮತ್ತು ಕ್ರಿಕೆಟ್ ನಡುವಿನ ಅಂತರವನ್ನು ಕಾಯುವ ಮುತ್ಸದ್ಧಿತನ ಅವರಿಂದ ನಿರೀಕ್ಷಿತವೇ ಆಗಿದೆ.



ವಾಚಕರ ವಾಣಿ

'ನೀರಿದ್ದರೆ ನಾಳೆ' ಅಭಿಯಾನ ಸ್ವಾಗತಾರ್ಹ

ಸಣ್ಣ ನೀರಾವರಿ ಇಲಾಖೆಯು ಕೈಗೊಂಡಿರುವ 'ನೀರಿದ್ದರೆ ನಾಳೆ' ಅಭಿಯಾನ ಸ್ವಾಗತಾರ್ಹ. ಆದರೆ, ರಾಜ್ಯದಲ್ಲಿ ಈ ಆಂದೋಲನದ ಆಶಯಕ್ಕೆ ವ್ಯತಿರಿಕ್ತ ವಿದ್ಯಮಾನಗಳು ನಡೆಯುತ್ತಿವೆ. ವಾಣಿಜ್ಯ ಉದ್ದೇಶಕ್ಕಾಗಿ ಎಲ್ಲೆಂದರಲ್ಲಿ ಕೊಳವೆಬಾವಿ ಕೊರೆದು ಮಿತಿ ಮೀರಿ ನೀರು ಬಳಸಲಾಗುತ್ತಿದೆ. ಪಶ್ಚಿಮಘಟ್ಟವನ್ನು ಧ್ವಂಸ ಮಾಡುವ ನದಿಕಣಿವೆ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ವ್ಯಾಪಕ ಜನವಿರೋಧದ ನಡುವೆಯೂ ಶರಾವತಿ ಭೂಗತ ವಿದ್ಯುತ್ ಯೋಜನೆ ಜಾರಿ ಪ್ರಕ್ರಿಯೆ ಸಾಗಿದೆ. ಬೇಡ್ತಿ–ವರದಾ ನದಿ ತಿರುವು ಹಾಗೂ ಅಘನಾಶಿನಿ–ವೇದಾವತಿ ನದಿ ತಿರುವು ಯೋಜನೆಗಳ ಪ್ರಸ್ತಾವ ಮುನ್ನೆಲೆಗೆ ಬಂದಿದೆ. ನಾಡಿನ ಯಾವ ಭಾಗಕ್ಕೂ ನಿಜವಾಗಿ ನೀರು ಪೂರೈಸಲಾಗದ ಈ ಅವೈಜ್ಞಾನಿಕ ಯೋಜನೆಗಳಿಗೆ ತೊಡಗಿಸುವ ಸಂಪನ್ಮೂಲವನ್ನು ಜಲಾನಯನ ಅಭಿವೃದ್ಧಿಗೆ ತೊಡಗಿಸಿದರೆ, ಒಳನಾಡಿನಾದ್ಯಂತ ನೀರಿನ ಲಭ್ಯತೆಯನ್ನು ಹೆಚ್ಚಿಸಬಹುದು.

ಕೇಶವ ಎಚ್. ಕೊರ್ಸೆ, ಶಿರಸಿ

ನಾಗರಿಕ ಜವಾಬ್ದಾರಿ: ನುಣುಚಿಕೊಳ್ಳಬೇಡಿ

'ಸಮೀಕ್ಷೆ–ಮಾಹಿತಿ ನೀಡದವರೇ ಹೆಚ್ಚು' (ಪ್ರ.ವಾ., ಅ. 13) ಸುದ್ದಿ ಓದಿ ಆತಂಕವಾಯಿತು. ಯಾವುದೇ ಸರ್ಕಾರಕ್ಕಾಗಲಿ, ಉದ್ದಿಮೆಗಾಗಲಿ ಅಥವಾ ಖಾಸಗಿ ಅಥವಾ ಸಾರ್ವಜನಿಕ ಸಂಸ್ಥೆಗಳಿಗಾಗಲಿ, ಯೋಜನೆಗಳ ತಯಾರಿಕೆಗೆ ದತ್ತಾಂಶ ಅತ್ಯವಶ್ಯಕ. ಈ ದತ್ತಾಂಶವು ವಾಸ್ತವಾಂಶ ತಿಳಿಸಿದರೆ, ಅದು ಮುಂದಿನ ಯೋಜನೆಗಳಿಗೆ ಬುನಾದಿಯಾಗುತ್ತದೆ. ದತ್ತಾಂಶವೇ ಇಲ್ಲದಿದ್ದರೆ ಅಥವಾ ತಪ್ಪಾದ ದತ್ತಾಂಶವಿದ್ದರೆ ಅದರ ಆಧಾರದಲ್ಲೇ ಮಾಡುವ ಯೋಜನೆಗಳು ತಪ್ಪಾಗಿ, ಉದ್ದೇಶ ಈಡೇರುವುದಿಲ್ಲ. ಒಂದು ಸಾರಿ ದತ್ತಾಂಶ ತಯಾರಾದರೆ ಅದನ್ನು ಅನೇಕ ಉದ್ದೇಶಗಳಿಗೆ ಹಲವು ವರ್ಷದವರೆಗೆ ಬಳಸಬಹುದು. ಇಂತಹ ಕಾರ್ಯಕ್ಕೆ ಸಾರ್ವಜನಿಕರ ಸಹಕಾರ, ಬೆಂಬಲ ಅಗತ್ಯ. ನೈಜ ಮಾಹಿತಿ ಕೊಡದಿರುವುದು ನಾಗರಿಕರ ಜವಾಬ್ದಾರಿಯುತ ನಡವಳಿಕೆ ಅಲ್ಲ.

ಟಿ.ವಿ.ಬಿ. ರಾಜನ್, ಬೆಂಗಳೂರು

ಪಾಲಿಕೆ ನಿರ್ಲಕ್ಷ್ಯಕ್ಕೆ ಇನ್ನೆಷ್ಟು ಬಲಿ?

ದಸರಾದ ಸಿಹಿ ನೆನಪುಗಳು ಮಾಸುವ ಮುನ್ನವೇ ಹೃದಯವಿದ್ರಾವಕ ಘಟನೆಗಳಿಗೆ ಮೈಸೂರು ಸಾಕ್ಷಿಯಾಗುತ್ತಿದೆ. ಅ. 2ರಂದು ಎನ್‌.ಆರ್‌. ಮೊಹಲ್ಲಾದ ಫಾಸ್ಟ್‌ಫುಡ್ ಅಂಗಡಿಯೊಂದರಲ್ಲಿ ನಾಲ್ಕು ವರ್ಷದ ಮಗುವಿನ ಮೇಲೆ ಕುದಿಯುವ ಎಣ್ಣೆ ಬಿದ್ದು ಸಾವನ್ನಪ್ಪಿದೆ. ಪಾದಚಾರಿ ಮಾರ್ಗಗಳ ಅತಿಕ್ರಮಣದಿಂದ ಜನರ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಪರವಾನಗಿ ಪಡೆದ ಕೆಲವು ಫಾಸ್ಟ್‌ಫುಡ್ ಅಂಗಡಿ ಮಾಲೀಕರು ಸುರಕ್ಷತಾ ಕ್ರಮ ಕೈಗೊಳ್ಳದೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಬಗ್ಗೆ ಮಹಾನಗರ ಪಾಲಿಕೆ ಅಧಿಕಾರಿಗಳು ಕಂಡೂ ಕಾಣದಂತೆ ಕುಳಿತಿದ್ದಾರೆ. ದುರ್ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕಿದೆ.

ರವಿಕುಮಾರ್ ಮುದಿಗುಂಡ, ಮೈಸೂರು

ರಾಜ್ಯೋತ್ಸವ ಪ್ರಶಸ್ತಿ ಅರ್ಹರಿಗೆ ಸಿಗಲಿ

ನವೆಂಬರ್ 1 ಸಮೀಪಿಸುತ್ತಿದ್ದಂತೆಯೇ 'ರಾಜ್ಯೋತ್ಸವ ಪ್ರಶಸ್ತಿ' ಆಕಾಂಕ್ಷಿಗಳ ಆಸೆ ಮತ್ತು ಉತ್ಸಾಹ ಗರಿಗೆದರುತ್ತದೆ. ರಾಜ್ಯದಲ್ಲಿ ಕನ್ನಡಿಗರ ಮನಸ್ಸು ಗೆದ್ದು ಸಾಮಾಜಿಕವಾಗಿ ಸ್ಪಂದಿಸಿ, ಗುರುತರವಾದ ಕಾರ್ಯ ಮಾಡಿದವರಿಗೆ ಪ್ರಶಸ್ತಿ ಕೊಡಬೇಕಿದೆ. ಈ ಬಾರಿ ರಾಜ್ಯೋತ್ಸವ ಪ್ರಶಸ್ತಿಗೆ ವಿವಿಧ ಕ್ಷೇತ್ರಗಳ ಸಾಧಕರ ಆಯ್ಕೆಗೆ ಸಂಬಂಧಿಸಿದಂತೆ ಕನ್ನಡ ಮತ್ತು ಸಂಸ್ಕೃತಿ ಸಚಿವರ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿ ರಚಿಸಿರುವುದು ಸ್ವಾಗತಾರ್ಹ. ಪ್ರಶಸ್ತಿಗೆ ಸಾಧಕರ ಆಯ್ಕೆ ಪಾರದರ್ಶಕವಾಗಿರಬೇಕು. ಸಲಹಾ ಸಮಿತಿಯು ಸಾಧಕರ ಸಾಧನೆ ಪರಿಗಣಿಸಿ, ಹಲವಾರು ಬಾರಿ ಪರಾಮರ್ಶಿಸಿ ಪ್ರಶಸ್ತಿಗೆ ಶಿಫಾರಸು ಮಾಡಬೇಕಿದೆ. ಪ್ರಭಾವ ಬಳಸಿ ಪ್ರಶಸ್ತಿ ಗಿಟ್ಟಿಸಿಕೊಳ್ಳುವವರ ಬಗ್ಗೆಯೂ ಎಚ್ಚರಿಕೆ ಇರಲಿ.

ಮಹಾಂತೇಶ ರಾಜಗೋಳಿ, ಬೈಲಹೊಂಗಲ

ದೇಶ ವಿಭಜನೆ: ವಾಸ್ತವಾಂಶ ಅರಿಯಿರಿ

ದೇಶ ವಿಭಜನೆ ಎಂದಾಕ್ಷಣ ಬಹುತೇಕರಿಗೆ ನೆನಪಿಗೆ ಬರುವುದು ಗಾಂಧಿ ಮತ್ತು ನೆಹರೂ. ಈ ಇಬ್ಬರು ನಾಯಕರಿಂದಲೇ ಭಾರತ, ಪಾಕಿಸ್ತಾನ ಇಬ್ಭಾಗವಾಯಿತು ಎಂದು ಪ್ರಚಾರ ಮಾಡಿದ್ದಾರೆ; ಮಾಡುತ್ತಲೂ ಇದ್ದಾರೆ. ವಿಭಜನೆಗೂ ಮುನ್ನ ವೈಸರಾಯ್ ವವೆಲ್ ಇರಿಸಿದ ಪ್ರಸ್ತಾಪ, ಚರ್ಚಿಲ್ ಮತ್ತು ಜಿನ್ನಾ ನಡುವೆ ಇದ್ದ ಸಂಬಂಧ; ಬ್ರಿಟಿಷರು ಮತ್ತು ಜಿನ್ನಾ ನಡುವೆ ನಡೆದ ಗೋಪ್ಯ ಸಭೆ ಬಗ್ಗೆ ಯಾವ ಪಠ್ಯಪುಸ್ತಕದಲ್ಲಿಯೂ ಬೆಳಕು ಚೆಲ್ಲದಿರುವುದು ದುರದೃಷ್ಟಕರ. ಇಂತಹ ಎಷ್ಟೋ ನಿಜ ಸಂಗತಿಗಳು ಹೊರಗೆ ಬಂದು ಆಗಿನ ವಾಸ್ತವವನ್ನು ಯುವಜನರಿಗೆ ತಿಳಿಸುವ ಅಗತ್ಯವಿದೆ. ವಿಭಜನೆಯ ವಾಸ್ತವ ಸ್ಥಿತಿಯನ್ನು 'ದೇಶ ವಿಭಜನೆ: ವಾಸ್ತವವೇನು?' ಲೇಖನವು (ಲೇ: ಅರವಿಂದ ಚೊಕ್ಕಾಡಿ, ಪ್ರ.ವಾ., ಅ. 11) ಚೆನ್ನಾಗಿ ಕಟ್ಟಿಕೊಟ್ಟಿದೆ.

ಸುರೇಶ ಹಾದಿಮನಿ, ಗದಗ

ಹೊರರಾಜ್ಯದವರಿಗೆ ಕನ್ನಡ ಕಲಿಸಿ

ಜಾಗತಿಕ ಭಾಷೆಗಳಲ್ಲಿ ಹಿಂದಿ ಕೂಡ ಪ್ರಮುಖ ಭಾಷೆ. ಬೇರೆ ಭಾಷೆಗಳನ್ನು ಕಲಿಯುವ ಆಸೆ ಒಳ್ಳೆಯದೇ. ಆದರೆ, ನನ್ನ ಭಾಷೆ; ನನ್ನ ರಾಜ್ಯ ಅಂತ ಬಂದಾಗ ಕನ್ನಡಿಗರಿಗೆ ಕನ್ನಡವೇ ಮೊದಲು. ಕರ್ನಾಟಕದಲ್ಲಿ ನೆಲಸಿರುವ ಬೇರೆ ರಾಜ್ಯದವರೊಂದಿಗೆ ನಾವು ಕನ್ನಡದಲ್ಲಿ ಮಾತನಾಡುವುದರಿಂದ ಅವರಿಗೆ ಕನ್ನಡದ ಪದಗಳ ಪರಿಚಯವಾಗುತ್ತದೆ. ಸಣ್ಣ ಸಣ್ಣ ಪದಗಳ ಪರಿಚಯ ಮತ್ತು ಅವುಗಳ ಜೋಡಣೆಯಿಂದಾಗಿ ಅವರಿಗೆ ಕನ್ನಡ ಕಲಿಯಲು ಸುಲಭವಾಗಲಿದೆ.

ಶ್ರೀನಿವಾಸ್ ಚಕ್ರವರ್ತಿ, ಹೊಳಲು

ಚುರುಮುರಿ



ಗಾಳಿಸುದ್ದಿ

• ಲಿಂಗರಾಜು ಡಿ.ಎಸ್.

ನಾನು, ತುರೇಮಣೆ ಡಿಸಿಎಂ ಮನೆಗಂಟಾ ಬಂದಿದ್ವೋ. ಅಲ್ಲೊಂದಷ್ಟು ಜನ ಡಿಕಾವಾಗಿ ಬಟ್ಟೆ ಇಕ್ಯಂದೋರು ನಿಂತು ಚರ್ಚೆ ಮಾಡತಿದ್ರು. 'ನಮ್ಮ ಜಿಲ್ಲೆಗೆ ಇನ್ನಷ್ಟು ಕ್ಯಾಬಿನೆಟ್ ಪೋಸ್ಟ್ ಕೇಳಮು' ಅಂತ ಒಂದು ಗುಂಪು ಮಾತಾಡಿಕ್ಯತಿದ್ರೆ ಇನ್ನೊಂದು, 'ನಮ್ಮ ಜಾತಿಗೆ ಸರಿಯಾದ ಪ್ರಾತಿನಿಧ್ಯ ಕೊಡದೆ ಅನ್ನೇಯ ಮಾಡ್ಯವುರೆ' ಅಂದ್ಕತಿದ್ರು.

'ಸಾ ಎಲ್ಲಾ ಜಿಲ್ಲೆಗಳಲ್ಲೂ ಏಡೇಡು ಗುಂಪವೆ. ಅವರವರ ಕಾಲು ಅವರೇ ಎಳಿದು ಬೀಳಿಸ್ಕತಾವ್ರೆ. ಇವರೆಲ್ಲಾ ಜನಗಳ ಕೆಲಸ ಮಾಡದು ಯಾವಾಗ?' ಅಂತಂದೆ.

'ಮಗಾ, ವಯಸ್ಸಲ್ಲಿ ಚಿಕ್ಕೋನಾದ್ರೂ ಪರಿಶ್ರಮ ಬಿದ್ದು ಜನದ ಬಡ್ಡೆಗೇ ಆಡಳಿತ ತಕ್ಕೋಗಿದ್ದೆ. ನನ್ನ ಮಂತ್ರಿ ಮಾಡಬಕು' ಅಂತ ಗಬರಾಡ್ತಾ ಒಬ್ಬರು ಬಂದರು. ಕೂತ್ಕನಾರದೆ ಮನಗಿದ್ದ ಎಂಬತ್ತೈದು ವರ್ಸಾದೋರೆಲ್ಲಾ 'ನಮಗಿನ್ನೂ ಚಿಕ್ಕ ವಯಸ್ಸು ಕನ್ರೀ' ಅಂದ್ಕಂದು ನಾಕು–ನಾಕು ಜನದ ಹೆಗಲ ಮೇಲೆ ಕೂಕಂದು ಒಳಿಕೋದ್ರು.

ಇನ್ನೊಬ್ಬರು ಲಾರಿಯಲ್ಲಿ ಎರಡು ದೊಡ್ಡ ಗಾತ್ರದ ರೋಣುಗಲ್ಲು ತಕ್ಕಬಂದು 'ಸಿಎಂ–ಡಿಸಿಎಂ ಮ್ಯಾಲೆ ಚೆನ್ನಾಗಿ ಭಾರ ಹಾಕಬೇಕು ಅಂತ ಈ ರೋಣುಗಲ್ಲು ತಂದಿವ್ನಿ. ಕೆಲಸಾಗಗಂಟಾ ಮನೆ ಬಾಗಿಲು ಬುಟ್ಟು ಕದಲಕುಲ್ಲ' ಅಂದರು.

'ಸಿಎಂ ಬಾಡು–ಹಿಟ್ಟು ಡಿನ್ನರ್ ಮೀಟಿಂಗಿಗೆ ಹೋಗ್ಯವರೆ. ಬರದು ಲೇಟಾತದೆ, ಹೋಗ್ರಿ' ಅಂದರು ಸಿಎಂ ಮನೆ ಜನ.

ಅಷ್ಟರಲ್ಲಿ ಡಿಸಿಎಂ ಬಂದ್ರು ಅಂತ ಗುಲ್ಲೆದ್ದು ಗುಂಪು ಆಕಡೆಗೆ ಓಡಿತು. ಇವರನ್ನ ನೋಡಿದ ಡಿಸಿಎಂ, 'ಲೇ ಯಾವನ್ನಾ ಕ್ಯಾಬಿನೆಟ್ ವಿಸ್ತರಣೆ ಅಂದುದ್ದು. ನನಗೇ ಪ್ರಾತಿನಿಧ್ಯ ಸಿಕ್ಕಿಲ್ಲಾ. ಎಲ್ಲಾ ಗಾಳಿಸುದ್ದಿ. ಸುಮ್ಮನೆ ಅಮೀಕಂದು ಕೆಲಸ ಮಾಡೋಗಿ. ನಾನು ಪ್ರಾರ್ಥನೆ ಮಾಡಕ್ಕೋಯ್ತಿದ್ದೀನಿ' ಅಂತ ಮಕ್ಕುಗಿದು ಒಳಿಕ್ಕೋದರು. ಎದುರಾದ ಪಿಎಗೆ 'ಲೇ ಪೀಯೆ, ಸಿಎಂ ಡಿನ್ನರ್ ಮೀಟಿಂಗಿಂದು ಏನಾದ್ರೂ ಸೀಕ್ರೇಟ್ ಗೊತ್ತಾತೇನ್ಲಾ? ಯಾರ್‍ಯಾರು ಬಂದು ಏನೇನಂದರಂತೋ?' ಅಂದಿದ್ರಿಂದ ಗಾಳಿಸುದ್ದಿ ಬಿಸಿಯಾಗ್ಯದೆ ಅಂತ ಗೊತ್ತಾತು.

ಸಂಗತ

ಅರಣ್ಯವಾಸಿಗಳ ಅಳಲು: ಸರ್ಕಾರ ಸ್ಪಂದಿಸಲಿ

ಬಲಿಷ್ಠರೊಡನೆ ಸ್ಪರ್ಧಿಸಲಾಗದೆ ಬುಡಕಟ್ಟು ಸಮುದಾಯಗಳು ಅಸ್ತಿತ್ವನಾಶದ ಆತಂಕ ಎದುರಿಸುತ್ತವೆ. ಎಸ್‌.ಟಿ ಒಳಮೀಸಲಾತಿ ಕೂಗಿಗೆ ಸರ್ಕಾರ ಕಿವಿಗೊಡಲಿ.


• ಸಿ.ಎಸ್. ದ್ವಾರಕಾನಾಥ್

ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ನೀಡಲು ಅಲ್ಲಿರುವ ಪ್ರಬಲ ಸಮುದಾಯಗಳ ಒತ್ತಡಕ್ಕೆ ರಾಜ್ಯ ಸರ್ಕಾರ ಮಣಿಯಿತು. ಆದರೆ, ಪರಿಶಿಷ್ಟ ಪಂಗಡದಲ್ಲೂ (ಎಸ್‌.ಟಿ) ಒಳಮೀಸಲಾತಿ ಬೇಕೆಂದು ಮನವಿ ಮಾಡುತ್ತಿರುವ ಅರಣ್ಯವಾಸಿ ಬುಡಕಟ್ಟುಗಳ ಧ್ವನಿಯನ್ನು ಕೇಳಿಸಿಕೊಳ್ಳಲು ಸರ್ಕಾರ ಮನಸ್ಸು ಮಾಡುತ್ತಿಲ್ಲ!

ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡದಲ್ಲಿ 50 ಬುಡಕಟ್ಟುಗಳಿವೆ. ಆದರೆ, 49 ಬುಡಕಟ್ಟುಗಳ ಮೀಸಲಾತಿ, ಅನುದಾನ, ಪ್ರಾತಿನಿಧ್ಯವನ್ನು ಒಂದೇ ಸಮುದಾಯ ಬಳಸಿಕೊಳ್ಳುತ್ತಿದೆ. ಈ ಬಲಿಷ್ಠ ಸಮುದಾಯದಿಂದ ಉಳಿದ 49 ಸಮುದಾಯಗಳನ್ನು ಬೇರ್ಪಡಿಸಿ ಒಳಮೀಸಲಾತಿ ನೀಡದಿದ್ದರೆ, ಕೆಲವೇ ವರ್ಷಗಳಲ್ಲಿ ಈ ಸಮುದಾಯಗಳು ನಶಿಸಿಹೋಗುವ ಸಾಧ್ಯತೆಯಿದೆ.

ರಾಜ್ಯದ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ 50 ಬುಡಕಟ್ಟುಗಳಿವೆ. ಇದರಲ್ಲಿನ ಅರಣ್ಯಾಧಾರಿತ 12 ಮೂಲ ಬುಡಕಟ್ಟುಗಳಿಗೆ ಮೀಸಲಾತಿ, ಸರ್ಕಾರದ ಸವಲತ್ತುಗಳ ಪರಿವೆಯೇ ಇಲ್ಲ. ಇದಕ್ಕೆ ನಿದರ್ಶನವೆಂಬಂತೆ, ಚಾಮರಾಜನಗರ ಜಿಲ್ಲೆಯಲ್ಲಿ 1,854 ಕುಟುಂಬಗಳಿಗೆ ಇತ್ತೀಚೆಗಷ್ಟೇ ವಿದ್ಯುತ್ ಸೌಲಭ್ಯ ಕೊಡಲಾಗಿರುವ ಸುದ್ದಿ ಗಮನಿಸಬಹುದು. 1902ರಲ್ಲೇ ವಿದ್ಯುತ್ ಪಡೆದ ಕರ್ನಾಟಕ ರಾಜ್ಯದಲ್ಲಿ 2024ರಲ್ಲಿ ಇಪ್ಪತ್ತೆರಡು ಹಾಡಿಗಳು ಬೆಳಕು ಕಂಡವು ಎಂದರೆ, ಈ ಅರಣ್ಯವಾಸಿಗಳಿಗೆ ಬೆಳಕು ನೀಡಲು ಸರ್ಕಾರ ತೆಗೆದುಕೊಂಡ ಕಾಲ ಒಂದೂಕಾಲು ಶತಮಾನ! ಇನ್ನೂ ನೂರಾರು ಆದಿವಾಸಿ ಹಾಡಿಗಳು ಬೆಳಕಿನ ಕನಸು ಕಾಣುತ್ತ, ಅಂಧಕಾರದಲ್ಲಿಯೇ ಜೀವಿಸುತ್ತಿವೆ.

ಡಿಜಿಟಲ್ ಭಾರತದ ಭಾಗವೇ ಆಗಿರುವ ಆದಿವಾಸಿಗಳು ಹಳ್ಳಕೊಳ್ಳದ ಬಗ್ಗಡದ ನೀರು ಕುಡಿದು ಜೋಪಡಿಗಳಲ್ಲಿ ಬದುಕುತ್ತಿದ್ದಾರೆ. ಇವರ ಹಾಡಿ, ಗದ್ದೆ, ಪೋಡು, ಕಾಲೊನಿ, ದೊಡ್ಡಿಗಳಿಗೆ ಆಧಾರ್ ಕಾರ್ಡ್, ರೇಷನ್ ಕಾರ್ಡ್, ಜಾತಿ ಪ್ರಮಾಣಪತ್ರ, ಆದಾಯ ಪ್ರಮಾಣಪತ್ರಗಳು ಇಂದಿಗೂ ಸಮರ್ಪಕವಾಗಿ ತಲುಪಿಲ್ಲ. ಮೀಸಲಾತಿಯಲ್ಲಿ ನಗರದ ಬಹುಸಂಖ್ಯಾತ ಬಲಾಢ್ಯ ಬುಡಕಟ್ಟುಗಳ ಜೊತೆಗೆ ಸ್ಪರ್ಧಿಸಲಾರದೆ, ಉದ್ಯೋಗವೂ ಸಿಗದೆ, ನಗರಗಳಲ್ಲೂ ಇರಲಾಗದೆ, ಹಾಡಿಗಳಿಗೂ ಹೋಗಲಾಗದೆ ಅತಂತ್ರ ಸ್ಥಿತಿಯಲ್ಲಿ ಮೊದಲ ತಲೆಮಾರಿನ ಆದಿವಾಸಿ ವಿದ್ಯಾವಂತರು ತೊಳಲಾಡುತ್ತಿದ್ದಾರೆ.



ಸುಪ್ರೀಂ ಕೋರ್ಟ್ ಒಳಮೀಸಲಾತಿಗೆ ಸಂಬಂಧಿಸಿದ ತನ್ನ ತೀರ್ಪಿನಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ಒಳಮೀಸಲಾತಿ ಜಾರಿ ಮಾಡಬೇಕೆಂದು ಸ್ಪಷ್ಟವಾಗಿ ಹೇಳಿದ್ದರೂ, ಕರ್ನಾಟಕ ಸರ್ಕಾರ ಪರಿಶಿಷ್ಟ ಜಾತಿಗಳಿಗೆ ಮಾತ್ರ ಒಳಮೀಸಲಾತಿ ನೀಡಲು ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗವನ್ನು ರಚಿಸಿ, ಪರಿಶಿಷ್ಟ ಪಂಗಡಗಳ ಒಳಮೀಸಲಾತಿ ಕುರಿತು ಮೌನವಹಿಸಿತು.

2011ರ ಜನಗಣತಿ ಪ್ರಕಾರ ಎಸ್‌.ಟಿ ಸಮುದಾಯದ ಒಟ್ಟಾರೆ ಜನಸಂಖ್ಯೆ 42,48,987 ಇದೆ. ಇದರಲ್ಲಿ ಪ್ರಮುಖ ಸಂಘಟಿತ ಒಂದೇ ಸಮುದಾಯದ ಜನಸಂಖ್ಯೆ 32,96,354ರಷ್ಟಿದೆ. ಉಳಿದ ನಲವತ್ತೊಂಬತ್ತು ಬುಡಕಟ್ಟುಗಳ ಒಟ್ಟಾರೆ ಜನಸಂಖ್ಯೆ 9,52,633ರಷ್ಟಿದೆ. ಕುಕ್ನ (32), ಮಲಸಾರ್ (82), ಪಟೇಲಿಯಾ (57), ರಥಾವ (45), ಶೋಲಗ (52), ವರ್ಲಿ (58), ಬರೋಡಿಯ (23), ಬರ್ದಾ (266), ಚೋಧರ (117), ಧೋರ (274), ಕೋಟ (121), ಕಾಟ್ಟುನಾಯಕನ್ (168) ಈ ಜಾತಿಗಳ ಜನಸಂಖ್ಯೆ (ಆವರಣದಲ್ಲಿರುವುದು) ಗಾಬರಿ ಹುಟ್ಟಿಸುವಷ್ಟು ಕನಿಷ್ಠ ಪ್ರಮಾಣದಲ್ಲಿದೆ. ಇವರೆಲ್ಲ ಎಲ್ಲಿದ್ದಾರೆ, ಹೇಗಿದ್ದಾರೆ ಎನ್ನುವ ಕನಿಷ್ಠ ಮಾಹಿತಿಯೂ ಇಲ್ಲ! 1,000ಕ್ಕಿಂತಲೂ ಕಡಿಮೆ ಜನಸಂಖ್ಯೆ ಇರುವ 28 ಬುಡಕಟ್ಟುಗಳಿವೆ. 5,000ಕ್ಕಿಂತಲೂ ಕಡಿಮೆ ಇರುವ ಮೂರು ಬುಡಕಟ್ಟುಗಳಿವೆ. ಗೊಂಡ, ರಾಜಗೊಂಡ (1,58,243), ಕೋಳಿ, ದೋರ್, ಟೋಕರ್ ಕೋಳಿ (1,12,190), ಮರಾಠಿ (82,447), ಜೇನುಕುರುಬ (36,975) ಹಾಗೂ ಸೋಲಿಗ (33,819) ಬುಡಕಟ್ಟುಗಳು ಹೆಚ್ಚಿನ ಜನಸಂಖ್ಯೆ ಹೊಂದಿವೆ.

ಬೆಟ್ಟಕುರುಬ, ಇರುಳಿಗ, ಯರವ, ಪಣಿಯ, ಹಸಲರು, ಗೌಡ್ಲು, ಸಿದ್ದಿ, ಕೊರಗ, ಕಾಡುಕುರುಬ, ಕುಡಿಯ, ತೋಡ, ಕಣಿಯನ್, ಮಲೆಕುಡಿಯರೇ ಮುಂತಾದ ಅತ್ಯಲ್ಪ ಪ್ರಮಾಣದಲ್ಲಿರುವ ಮೂಲ ಆದಿವಾಸಿಗಳ ಜನಸಂಖ್ಯೆ 2,01,620ದಷ್ಟಿದೆ. ಇವರು ಕನಿಷ್ಠ ರಾಜಕೀಯ ಪ್ರಾತಿನಿಧ್ಯವನ್ನೂ ಹೊಂದಿಲ್ಲ. ವಿಧಾನಸಭೆಗೆ ಎಸ್‌.ಟಿ ಸಮುದಾಯಕ್ಕೆ 15 ಸ್ಥಾನ ಮತ್ತು ಲೋಕಸಭೆಗೆ 2 ಸ್ಥಾನ ಮೀಸಲಿವೆ. ಆದರೆ, ಈವರೆಗೂ 49 ಸಮುದಾಯಗಳು ಒಂದು ಸ್ಥಾನವನ್ನೂ ಪಡೆದಿಲ್ಲ. ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗದಲ್ಲೂ ಈ ನತದೃಷ್ಟರ ಪಾಲು ಶೂನ್ಯ. ಇರುಳಿಗ, ಕುಡಿಯ, ಪಣಿಯನ್, ಜೇನುಕುರುಬರಲ್ಲಿ ಕನಿಷ್ಠ 'ಡಿ' ಮತ್ತು 'ಸಿ' ಗ್ರೂಪ್ ನೌಕರಿಯನ್ನೂ ಪಡೆದವರಿಲ್ಲ.

ಅರಣ್ಯವಾಸಿಗಳು ಕಠಿಣ ಕಾನೂನುಗಳಿಂದಾಗಿ ತಮ್ಮ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಪಾರಂಪರಿಕ ವೃತ್ತಿಯಿಂದಲೂ ದೂರವಾಗಿದ್ದಾರೆ. ಕಾಫಿ ಎಸ್ಟೇಟ್‌ಗಳಲ್ಲಿ, ಲೈನ್ ಮನೆಗಳಲ್ಲಿ, ಇಟ್ಟಿಗೆ ಗೂಡುಗಳಲ್ಲಿ ದುಡಿಯುತ್ತಾ ಕೆಲವರಿದ್ದರೆ, ಮತ್ತೆ ಕೆಲವರು ಕಾಡುಮೇಡುಗಳಲ್ಲಿ ಅಲೆಯುತ್ತಾ ಗುಡಾರಗಳಲ್ಲಿ ಜೀವನ ಮಾಡುತ್ತಿದ್ದಾರೆ. ಆದರೂ, ತಮ್ಮದೇ ಆದ ನಂಬಿಕೆ, ಆಚಾರ, ವಿಚಾರ, ಭಾಷೆ, ಸಂಸ್ಕೃತಿಯನ್ನು ಉಳಿಸಿಕೊಂಡು ಬರುತ್ತಿದ್ದಾರೆ.

ಬಹುತೇಕ ಅರಣ್ಯವಾಸಿಗಳು ಕುಡುಗೋಲು ಕಣ ರಕ್ತಹೀನತೆ (ಸಿಕಲ್ ಸೆಲ್ ಅನೀಮಿಯಾ), ಥಲಸ್ಸೇಮಿಯಾ, ಅಸ್ತಮಾದಿಂದ ಬಳಲಿ ಅಕಾಲಿಕ ಸಾವಿಗೆ ತುತ್ತಾಗುತ್ತಿದ್ದಾರೆ.

ನತದೃಷ್ಟ ಅರಣ್ಯವಾಸಿಗಳನ್ನು ಒಳಮೀಸಲಾತಿಯ ಮೂಲಕ ಗುರ್ತಿಸಿ, ಅವರಿಗೆ ಮೀಸಲಾತಿ, ಅನುದಾನ, ಪ್ರಾತಿನಿಧ್ಯ ನೀಡಬೇಕಾಗಿದೆ. ಆ ಮೂಲಕ, ಮೂಲನಿವಾಸಿ, ಆದಿವಾಸಿ, ಅರಣ್ಯವಾಸಿಗಳೆಂಬ ಬುಡಕಟ್ಟುಗಳನ್ನು ಉಳಿಸಿಕೊಳ್ಳಬೇಕಾದ ತುರ್ತಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮುಟ್ಟಿನ ರಜೆ ಮಹಿಳೆಯರ ಹಕ್ಕು

ಕರ್ನಾಟಕ ಸರ್ಕಾರವು 'ಮುಟ್ಟಿನ ರಜೆ' ನೀಡುವ ನಿರ್ಧಾರ ಕೈಗೊಳ್ಳುವ ಮೂಲಕ ಮಹಿಳೆಯರ ಬಹುಕಾಲದ ಬೇಡಿಕೆಗೆ ಸ್ಪಂದಿಸಿದೆ. ಉದ್ಯೋಗನಿರತ ಮಹಿಳೆಯರಿಗೆ ಮುಟ್ಟಿನ ರಜೆ ನೀಡಿದ ಮೊದಲ ರಾಜ್ಯ ಕರ್ನಾಟಕ ಅಲ್ಲ. ಬಿಹಾರ, ಕೇರಳ, ಒಡಿಶಾ, ಸಿಕ್ಕಿಂ ರಾಜ್ಯಗಳಲ್ಲಿ ವಿವಿಧ ರೂಪಗಳಲ್ಲಿ ಮುಟ್ಟಿನ ರಜೆ ಸೌಲಭ್ಯ ಇದೆ. ಆದಾಗ್ಯೂ, ದೇಶದ ವ್ಯಾಪ್ತಿಯಲ್ಲಿ ಈ ಕುರಿತು ಆಗಿರುವ ಸಾಧನೆ ಕಡಿಮೆ ಎಂದೇ ಹೇಳಬೇಕು. ಯಾವ ರಾಜ್ಯದಲ್ಲಿ ಯಾವ ವಲಯದಲ್ಲಿ ಮುಟ್ಟಿನ ರಜೆಯ ಸೌಲಭ್ಯ ಕಲ್ಪಿಸಲಾಗಿದೆ; ರಾಜ್ಯದಲ್ಲಿ ಮುಟ್ಟಿನ ರಜೆ ನೀತಿ ಜಾರಿಯ ವಿಚಾರದಲ್ಲಿ ಇರುವ ತೊಡಕುಗಳೇನು ಎನ್ನುವ ವಿವರಗಳು ಇಲ್ಲಿವೆ

ಪ್ರಜಾವಾಣಿ ವಾರ್ತೆ



ಮಹಿಳಾ ಉದ್ಯೋಗಿಗಳಿಗೆ ತಿಂಗಳಿಗೊಂದು ವೇತನಸಹಿತ ಮುಟ್ಟಿನ ರಜೆ ನೀಡುವ 'ಮುಟ್ಟಿನ ರಜೆ ನೀತಿ–2025' ಅನ್ನು ರಾಜ್ಯ ಸಚಿವ ಸಂಪುಟ ಅಂಗೀಕರಿಸಿದೆ. ಈ ಬಗ್ಗೆ ದೇಶವ್ಯಾಪಿ ಮೆಚ್ಚುಗೆ ವ್ಯಕ್ತವಾಗಿದ್ದು, ಮಹಿಳಾ ಕಾರ್ಯಪಡೆಯನ್ನು ಒಳಗೊಳ್ಳುವ ಮತ್ತು ಲಿಂಗಸೂಕ್ಷ್ಮತೆಯನ್ನು ಬೆಳೆಸುವ ದಿಸೆಯಲ್ಲಿ ಅತ್ಯುತ್ತಮ ಕ್ರಮ ಎನ್ನಲಾಗುತ್ತಿದೆ. ಸರ್ಕಾರಿ, ಖಾಸಗಿ ವಲಯಗಳಿಗೂ ಅನ್ವಯವಾಗುವಂತೆ ಈ ನಿರ್ಧಾರ ಕೈಗೊಂಡ ಮೊದಲ ರಾಜ್ಯ ಕರ್ನಾಟಕ.

ನೀತಿ ಜಾರಿಯಾದ ನಂತರ ರಾಜ್ಯದ ಸರ್ಕಾರಿ, ಗಾರ್ಮೆಂಟ್, ಐಟಿ, ಬಹುರಾಷ್ಟ್ರೀಯ ಕಂಪನಿಗಳು ಮತ್ತು ಖಾಸಗಿ ವಲಯದ ಉದ್ಯೋಗಿಗಳಿಗೆ ತಿಂಗಳಲ್ಲಿ ಒಂದು ದಿನ ಮುಟ್ಟಿನ ರಜೆಯ ಸೌಲಭ್ಯ ದೊರೆಯಲಿದೆ. ಕರ್ನಾಟಕದಲ್ಲಿ ವರ್ಷಕ್ಕೆ ಆರು ದಿನ ವೇತನಸಹಿತ ಮುಟ್ಟಿನ ರಜೆ ನೀಡಬೇಕು ಎಂದು 2024ರಲ್ಲಿ ಮುಟ್ಟಿನ ರಜೆ ನೀತಿ ಸಮಿತಿ ಶಿಫಾರಸು ಮಾಡಿತ್ತು, ನಂತರ ರಜೆಯ ದಿನಗಳನ್ನು ತಿಂಗಳಿಗೆ ಒಂದರಂತೆ 12ಕ್ಕೆ ಏರಿಸಿ, ಆ ನಿಯಮವನ್ನು ಸಚಿವ ಸಂಪುಟದಲ್ಲಿ ಅಂಗೀಕರಿಸಲಾಗಿದೆ.

ಮಹಿಳೆಯರಿಗೆ ಮುಟ್ಟಿನ ರಜೆಯನ್ನು ಕಾನೂನುಬದ್ಧಗೊಳಿಸಲು ನೀತಿ ರೂಪಿಸುವಂತೆ ಸುಪ್ರೀಂ ಕೋರ್ಟ್, ರಾಜ್ಯಗಳಿಗೆ ಹಿಂದೆಯೇ ಸೂಚಿಸಿತ್ತು. ಆದಾಗ್ಯೂ, ಬೆರಳೆಣಿಕೆಯ ರಾಜ್ಯಗಳಲ್ಲಿ ಮಾತ್ರ ಕೆಲವು ವಲಯಗಳಿಗೆ ಸೀಮಿತಗೊಳಿಸಿ ಮುಟ್ಟಿನ ರಜೆಯ ಸೌಲಭ್ಯ ಕಲ್ಪಿಸಲಾಗಿದೆ.

ಬಿಹಾರ: ಉದ್ಯೋಗಿಗಳಿಗೆ ಮುಟ್ಟಿನ ರಜೆ ಸೌಲಭ್ಯ ನೀಡಿದ ಮೊದಲ ರಾಜ್ಯ ಬಿಹಾರ. ಅಲ್ಲಿ, ಮುಟ್ಟಿನ ಸಂದರ್ಭದಲ್ಲಿ ಸತತ ಎರಡು ದಿನ ರಜೆ ನೀಡಲಾಗುತ್ತಿದೆ. ಆದರೆ, ಈ ಸೌಲಭ್ಯವು ಸರ್ಕಾರಿ ನೌಕರರಿಗೆ ಸೀಮಿತವಾಗಿದೆ. 1992ರ ಜ.2ರಂದು ಅಂದಿನ ಮುಖ್ಯಮಂತ್ರಿ ಲಾಲೂಪ್ರಸಾದ್ ಈ ನಿರ್ಧಾರ ಕೈಗೊಂಡಿದ್ದರು.

ಕೇರಳ: ಕೊಚ್ಚಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪ್ರಯತ್ನದ ಫಲವಾಗಿ ಕೇರಳದ ವಿಶ್ವವಿದ್ಯಾಲಯಗಳಲ್ಲಿ ಮುಟ್ಟಿನ ಸಂದರ್ಭದಲ್ಲಿ ವಿದ್ಯಾರ್ಥಿನಿಯರಿಗೆ ರಜೆ ನೀಡುವ ಪರಿಪಾಟ ಆರಂಭವಾಯಿತು. ಮುಟ್ಟಿನ ಕಾಲದಲ್ಲಿ ಆರೋಗ್ಯ ಕಾಪಾಡಿಕೊಳ್ಳಲು ಅನುವಾಗುವಂತೆ, 2023ರ ಜನವರಿಯಲ್ಲಿ ಉನ್ನತ ಶಿಕ್ಷಣ ಸಚಿವೆ ಆರ್.ಬಿಂದು ಅವರು ವಿದ್ಯಾರ್ಥಿನಿಯರಿಗೆ ಹಾಜರಾತಿಯಲ್ಲಿ ಶೇ 2ರಷ್ಟು ವಿನಾಯಿತಿ ಘೋಷಿಸಿದರು.

ಒಡಿಶಾ: ಸರ್ಕಾರಿ ಮತ್ತು ಖಾಸಗಿ ವಲಯದ ಉದ್ಯೋಗಿಗಳಿಗೆ ಒಂದು ದಿನ ವೇತನಸಹಿತ ಮುಟ್ಟಿನ ರಜೆ ನೀಡುವುದಾಗಿ 2024ರ ಸ್ವಾತಂತ್ರ್ಯೋತ್ಸವದಂದು ಆಗಿನ ಉಪಮುಖ್ಯಮಂತ್ರಿ ಪ್ರವತಿ ಪರಿದಾ ಘೋಷಿಸಿದ್ದರು.

ಸಿಕ್ಕಿಂ: ರಾಜ್ಯದ ಹೈಕೋರ್ಟ್‌ನಲ್ಲಿ ಮಹಿಳಾ ಉದ್ಯೋಗಿಗಳಿಗೆ, ವೈದ್ಯರ ಶಿಫಾರಸಿನ ಆಧಾರದಲ್ಲಿ 2–3 ದಿನ ಮುಟ್ಟಿನ ರಜೆ ಪಡೆಯಬಹುದಾದ ಸೌಲಭ್ಯ ನೀಡಲಾಗಿದೆ. ಸಿಕ್ಕಿಂ ವಿಶ್ವವಿದ್ಯಾಲಯದಲ್ಲಿಯೂ ವಿದ್ಯಾರ್ಥಿನಿಯರಿಗೆ ಮತ್ತು ಸಿಬ್ಬಂದಿಗೆ ಒಂದು ದಿನದ ಮುಟ್ಟಿನ ರಜೆ ನೀಡಲಾಗುತ್ತಿದೆ. ಆದರೆ, ಇತರೆ ರಾಜ್ಯಗಳಂತೆ ರಾಜ್ಯವ್ಯಾಪಿ ಮುಟ್ಟಿನ ರಜೆ ನೀಡುವ ವ್ಯವಸ್ಥೆ ಸಿಕ್ಕಿಂನಲ್ಲಿ ಇಲ್ಲ; ಈ ಸೌಲಭ್ಯವು ಕೆಲವು ವಲಯ/ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿದೆ.

ಆಧಾರ: ಡೇಫಾರ್‌ಗರ್ಲ್ಸ್.ಒಆರ್‌ಜಿ, ಫ್ರೀ ಪೀರಿಯಡ್ಸ್ ಕೆನಡಾ, ಮಾಧ್ಯಮ ವರದಿಗಳು

ಸ್ವಾಗತಿಸುವೆ, ಆದರೆ ಆತಂಕವೂ ಇದೆ...



ಸರ್ಕಾರದ ನಿರ್ಧಾರವನ್ನು ಹೆಣ್ಣಾಗಿ ನಾನು ಸ್ವಾಗತಿಸುತ್ತೇನೆ. ಇದು ಬಹಳ ಒಳ್ಳೆಯ ಕ್ರಮ. ಆದರೆ, ಇದರ ಅನುಷ್ಠಾನದಲ್ಲಿ ಕೆಲವು ಸಮಸ್ಯೆಗಳು ಇವೆ. ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳ ಮೇಲೆ ಈ ಮುಟ್ಟಿನ ರಜೆಯು ಹೆಚ್ಚುವರಿ ಹೊರೆಯಾಗುತ್ತದೆ. ಈ ಉದ್ದಿಮೆಗಳು ಈಗಾಗಲೇ ಹಲವು ಸಮಸ್ಯೆಗಳನ್ನು ಎದುರಿಸುತ್ತಿವೆ. ಮುಟ್ಟಿನ ರಜೆಯ ಕಾರಣದಿಂದಾಗಿ ಉಂಟಾಗುವ ಹೆಚ್ಚುವರಿ ಹೊರೆಯು ಯಾರ ಹೆಗಲಿಗೆ ವರ್ಗಾವಣೆ ಆಗುತ್ತದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಹೊರೆಯನ್ನು ಸರ್ಕಾರ ಅಥವಾ ಸರ್ಕಾರದ ಯಾವುದೇ ಸಂಸ್ಥೆ ಹೊರುತ್ತದೆ ಎಂದಾದರೆ ಸ್ವಾಗತಾರ್ಹ. ಮುಟ್ಟಿನ ರಜೆ ಎಂಬುದು ಅನಿರೀಕ್ಷಿತವಾಗಿ ಎದುರಾಗುವ ರಜೆ ಆಗುತ್ತದೆ. ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಲ್ಲಿ ಹೆಚ್ಚಿನ ಸಂಖ್ಯೆಯ ಸಿಬ್ಬಂದಿ ಇರುವುದಿಲ್ಲ. ಕೆಲಸದ ಸ್ಥಳದಲ್ಲಿ ಬಹಳ ಮಹತ್ವದ ಪಾತ್ರ ವಹಿಸುವ ಮಹಿಳಾ ಸಿಬ್ಬಂದಿ ಇದ್ದಕ್ಕಿದ್ದಂತೆ ಈ ರಜೆಯನ್ನು ಪಡೆದಲ್ಲಿ, ಅವರ ಪಾಲಿನ ಕೆಲಸವನ್ನು ಯಾರು ನಿರ್ವಹಿಸುತ್ತಾರೆ ಎಂಬ ಪ್ರಶ್ನೆ ಎದುರಾಗುತ್ತದೆ. ಹೀಗಾಗಿ ಈ ರಜೆಯು ಮಹಿಳೆಯರಿಗೆ ಉದ್ಯೋಗಾವಕಾಶಗಳು ಕ್ಷೀಣಿಸುವುದಕ್ಕೆ ಕಾರಣ ಆಗಬಹುದೇ ಎಂಬ ಆತಂಕವೂ ಇದೆ.

ಉಮಾ ರೆಡ್ಡಿ, ಎಫ್‌ಕೆಸಿಸಿಐ ಅಧ್ಯಕ್ಷೆ

ಮಹಿಳೆಯ ಸ್ವಾಭಿಮಾನಕ್ಕೆ ಧಕ್ಕೆಯಾಗದಿರಲಿ



ಹೆಣ್ಣುಮಕ್ಕಳಿಗೆ ಋತುಚಕ್ರದ ಸಮಯದಲ್ಲಿ ಆರೋಗ್ಯದಲ್ಲಿ ಅನೇಕ ರೀತಿಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ದೈಹಿಕವಾಗಿ ಮಾತ್ರವಲ್ಲದೆ, ಭಾವನಾತ್ಮಕವಾಗಿಯೂ ಸಮಸ್ಯೆ ಅನುಭವಿಸುತ್ತಾರೆ. ಅದರಲ್ಲೂ ಮೊದಲ ದಿನದ ನೋವು, ಹೇಳಲಾಗದ ಯಾತನೆ. ಅದನ್ನು ಅನುಭವಿಸಿದವರಿಗಷ್ಟೇ ಗೊತ್ತು. ಹಾಗಾಗಿ, ಹೆಣ್ಣುಮಕ್ಕಳ ಕಷ್ಟಗಳ ಬಗ್ಗೆ ಕಾಳಜಿ ವಹಿಸಿ, ಯಾವುದೇ ರೀತಿಯ ಪ್ರಮಾಣಪತ್ರ ಕೇಳದೇ ಉದ್ಯೋಗಸ್ಥ ಮಹಿಳೆಯರಿಗೆ ತಿಂಗಳಲ್ಲಿ ಒಂದು ದಿನದ ರಜೆ ನೀಡಬೇಕೆಂಬ ರಾಜ್ಯ ಸರ್ಕಾರಿ ನೌಕರರ ಸಂಘದ ಬೇಡಿಕೆ ಈಡೇರಿಸಿರುವುದು ತುಂಬಾ ಮಹತ್ವದ್ದು. ಈ ನಿರ್ಧಾರವು ಒಂದು ದಿಟ್ಟ ಹೆಜ್ಜೆ. ಈ ಕುರಿತು ಯಾವುದೇ ಗೊಂದಲಗಳಿಗೆ ಅವಕಾಶ ಇಲ್ಲದಂತೆ ಸೂಕ್ತ ಕಾನೂನು ರೂಪಿಸಬೇಕು. ರಜೆ ನೀಡುವಾಗ ಮಹಿಳೆಯರ ಸ್ವಾಭಿಮಾನಕ್ಕೆ ಧಕ್ಕೆಯಾಗದಂತೆ ಪುರುಷ ಮೇಲಧಿಕಾರಿಗಳು ನಡೆದುಕೊಳ್ಳುವಂತಹ ವಾತಾವರಣ ನಿರ್ಮಾಣವಾಗಬೇಕು

ಯಶೋಧ, ಉಪಾಧ್ಯಕ್ಷೆ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ

'ಅಸಂಘಟಿತ ವಲಯಕ್ಕೂ ಅನ್ವಯವಾಗಲಿ'

ರಾಜ್ಯ ಸರ್ಕಾರ ರೂಪಿಸಲು ಹೊರಟಿರುವ ನೀತಿ ಸರ್ಕಾರಿ ಮತ್ತು ಖಾಸಗಿ ವಲಯದ ಉದ್ಯೋಗಿಗಳಿಗೆ ಅನ್ವಯವಾಗಲಿದೆ. ಇದರಿಂದ ಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರಿಗೆ ಪ್ರಯೋಜನವಾಗಲಿದ್ದು, ಅಸಂಘಟಿತ ವಲಯದಲ್ಲಿ ಕೆಲಸ ಮಾಡುವ ಮಹಿಳೆಯರಿಗೂ ಅನ್ವಯವಾಗಬೇಕು ಎಂಬ ಒತ್ತಾಯ ಕೇಳಿಬಂದಿದೆ. ಕಾರ್ಮಿಕ ಕಲ್ಯಾಣ ಮಂಡಳಿ ಅಥವಾ ಇಂತಹದೇ ಬೇರೆ ವ್ಯವಸ್ಥೆಯ ಮೂಲಕ ಈ ನೀತಿಯ ಪ್ರಯೋಜನ ಅವರಿಗೂ ಸಿಗುವಂತೆ ಮಾಡಬೇಕು ಎಂಬುದು ಅಸಂಘಟಿತ ವಲಯದ ಕಾರ್ಮಿಕ ಸಂಘಟನೆಗಳ ಒತ್ತಾಯ.

ಅಸಂಘಟಿತ ವಲಯದ ಮಹಿಳೆಯರು ಕಠಿಣ ಕೆಲಸಗಳನ್ನು ನಿರ್ವಹಿಸುತ್ತಿರುತ್ತಾರೆ. ಮುಟ್ಟಿನ ಸಮಯದಲ್ಲಿ ನೋವು ತೀವ್ರವಾಗಿದ್ದರೆ ಕೆಲಸ ಮಾಡುವುದು ತುಂಬಾ ಕಷ್ಟ. ಸಂಘಟಿತ ವಲಯದ ಕೆಲವು ಮಹಿಳಾ ಉದ್ಯೋಗಿಗಳು ಆ ದಿನಗಳಂದು ಮನೆಯಿಂದಲೇ ಕೆಲಸ ಮಾಡಬಹುದು. ಆದರೆ, ಇವರಿಗೆ ಅಂತಹ ಅವಕಾಶ ಇಲ್ಲ. ಒಂದು ವೇಳೆ ರಜೆ ಮಾಡಿದರೂ, ಆ ದಿನದ ವೇತನ ಸಿಗುವುದಿಲ್ಲ. ಬಡ ಮಹಿಳಾ ಕಾರ್ಮಿಕರೇ ಹೆಚ್ಚಿರುವ ಈ ವಲಯದಲ್ಲಿ ವೇತನ ಸಹಿತ ಮುಟ್ಟಿನ ರಜೆ ನೀತಿ ಅನ್ವಯವಾದರೆ ತುಂಬಾ ಅನುಕೂಲವಾಗುತ್ತದೆ ಎಂಬುದು ಮಹಿಳಾ ಹೋರಾಟಗಾರರ ವಾದ.

ದುರುಪಯೋಗದ ವಾದ ಸರಿಯಲ್ಲ



ಮಹಿಳೆಯರಿಗೆ ಮುಟ್ಟು ಒಂದು ಜೈವಿಕ ಸ್ಥಿತಿ. ಆ ದಿನಗಳಲ್ಲಿ ಬಹುತೇಕ ಮಹಿಳೆಯರಿಗೆ ವಿಶ್ರಾಂತಿಯ ಅಗತ್ಯವಿರುತ್ತದೆ. ದುಡಿಯುವ ಮಹಿಳೆಯರಿಗಂತೂ ರಜೆ ತೀರಾ ಅವಶ್ಯಕ. ಗೃಹಿಣಿಯರಿಗೆ, ಕಾಲೇಜು ವಿದ್ಯಾರ್ಥಿನಿಯರಿಗೆ ವಿಶ್ರಾಂತಿ ಪಡೆಯುವ ಆಯ್ಕೆಯಾದರೂ ಇರುತ್ತದೆ. ಆದರೆ, ಉದ್ಯೋಗಸ್ಥ ಮಹಿಳೆಯರಿಗೆ ಅದು ಸಾಧ್ಯವಿಲ್ಲ. ಮಹಿಳೆಯರಿಗೆ ಈ ಸಂದರ್ಭದಲ್ಲಿ ಮೂರ್ನಾಲ್ಕು ದಿನ ನೋವು ಇರುತ್ತದೆ. ಎಷ್ಟು ದಿನ ರಜೆ ನೀಡುವುದು ಎನ್ನುವುದರ ಬಗ್ಗೆಯೂ ಸಮಿತಿಯಲ್ಲಿ ಚರ್ಚಿಸಿದೆವು. ಸಮಿತಿಯಲ್ಲಿ ಸ್ತ್ರೀರೋಗ ತಜ್ಞೆಯೂ ಇದ್ದರು. ಕೆಲವರಿಗೆ ಮೊದಲ ದಿನ ನೋವು ಬರುತ್ತೆ, ಕೆಲವರಿಗೆ ಎರಡನೇ ದಿನ, ಮತ್ತೆ ಕೆಲವರಿಗೆ ಮೂರನೇ ದಿನ ನೋವು ಕಾಡುತ್ತೆ ಎಂದು ವೈದ್ಯೆ ಹೇಳಿದರು. ಕೊನೆಗೆ, ಅವರ ಆಯ್ಕೆಯ ಒಂದು ದಿನ ರಜೆ ಹಾಕಲು ಅವಕಾಶ ನೀಡಬೇಕು ಎಂದು ತೀರ್ಮಾನಕ್ಕೆ ಬರಲಾಯಿತು.

ಮುಟ್ಟಿನ ರಜೆ ನೀತಿಯ ಜಾರಿಯಲ್ಲಿರುವ ತೊಡಕಿನ ಬಗ್ಗೆ ಕೆಲವರು ಮಾತನಾಡುತ್ತಿದ್ದಾರೆ. ಮಹಿಳೆಯರಿಗೆ ಉದ್ಯೋಗಾವಕಾಶಗಳು ಕಡಿಮೆಯಾಗುತ್ತವೆ, ಅವರ ಉತ್ಪಾದಕತೆ ಕಡಿಮೆ ಆಗುತ್ತದೆ ಎಂದು ಕೆಲವರು ಹೇಳುತ್ತಿದ್ದಾರೆ. ಯಾವುದೇ ಹೊಸ ಕಾನೂನು ಮಾಡಿದರೂ ಇಂಥ ಕೆಲವು ತೊಡಕುಗಳು ಇದ್ದೇ ಇರುತ್ತವೆ. ಹೆರಿಗೆ ರಜೆ ಕಾನೂನು ಮಾಡುವಾಗಲೂ ಕೆಲವರು ಇದೇ ರೀತಿಯ ಆಕ್ಷೇಪ ಎತ್ತಿದ್ದರು. ನಂತರ ಅದು ಜಾರಿಯಾಗಲಿಲ್ಲವೇ. ನಾವು ಮುಖ್ಯವಾಗಿ ಅರ್ಥ ಮಾಡಿಕೊಳ್ಳಬೇಕಾದದ್ದು ಏನೆಂದರೆ, ಮಹಿಳೆಯರು ಇರುವುದು ಕೇವಲ ಉದ್ಯಮಿಗಳ ಉತ್ಪಾದನೆ ಹೆಚ್ಚಿಸಲೋ ಅಥವಾ ಹೆಚ್ಚು ಕೆಲಸ ಮಾಡಲೋ ಅಲ್ಲ. ಮುಟ್ಟಿನ ರಜೆಯಿಂದ ಅವರ ಕೆಲಸದ ಕ್ಷಮತೆ ಹೆಚ್ಚಾಗುತ್ತದೆ, ಅವರ ಸಾಮಾಜಿಕ ಉತ್ಪಾದನೆ ಹೆಚ್ಚಾಗುತ್ತದೆ. ಮುಟ್ಟಿನ ರಜೆ ಪಡೆದ ಹೆಣ್ಣು, ಅದನ್ನು ತನಗಾಗಿ, ಕುಟುಂಬಕ್ಕಾಗಿ ಬಳಸುತ್ತಾಳೆ; ಅದು ಅವಳು ಸಮಾಜಕ್ಕೆ ವಾಪಸ್ ಕೊಡುವ ರೀತಿಯೂ ಆಗಿದೆ.

ಕೆಲವರು ಮುಟ್ಟಿನ ರಜೆ ನೀತಿ ದುರುಪಯೋಗವಾಗುತ್ತದೆ ಎಂದು ಹೇಳುತ್ತಿದ್ದಾರೆ. ಮಹಿಳೆಯರಿಗೆ ಏನಾದರೂ ಒಳ್ಳೆಯದು ಮಾಡುವ ಪ್ರಯತ್ನಗಳು ನಡೆದಾಗಲೆಲ್ಲ ಕೆಲವರು ದುರುಪಯೋಗದ ವಾದ ಮುಂದಿಡುತ್ತಾರೆ. ಮಹಿಳೆಯರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ ಎನ್ನುವಂಥ ನಕಾರಾತ್ಮಕ ವಾದಗಳೂ ಇವೆ. ಶಾಲೆಗಳಲ್ಲಿ, ಗಾರ್ಮೆಂಟ್ಸ್‌ನಲ್ಲಿ ಮಹಿಳೆಯರನ್ನೇ ಹೆಚ್ಚಾಗಿ ನೇಮಕ ಮಾಡಿಕೊಳ್ಳಲಾಗುತ್ತಿದೆ. ಗಾರ್ಮೆಂಟ್ಸ್‌ನಲ್ಲಿ ಸುಮಾರು ನಾಲ್ಕು ಲಕ್ಷ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಈ ವಲಯದಲ್ಲಿ ಪುರುಷರ್‍ಯಾರೂ ಕೆಲಸ ಮಾಡುವುದಿಲ್ಲ. ಇಂಥ ವಲಯಗಳಲ್ಲಿ ಉದ್ಯೋಗದಾತರು ಕೆಲಸಕ್ಕೆ ತೊಂದರೆಯಾಗದಂತೆ ಪರ್ಯಾಯ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು. ಉದಾಹರಣೆಗೆ, ಮಹಿಳಾ ಉದ್ಯೋಗಿಗಳ ಸಂಖ್ಯೆಯನ್ನು ಅಲ್ಪ ಪ್ರಮಾಣದಲ್ಲಿ ಹೆಚ್ಚಿಸುವುದು. ಸರ್ಕಾರವೂ ಇದೇ ಕ್ರಮ ಅನುಸರಿಸಬೇಕು.

ಮುಟ್ಟಿನ ರಜೆಯಿಂದ ಕೆಲವು ಸಣ್ಣಪುಟ್ಟ ಸಮಸ್ಯೆಗಳು ಉದ್ಭವವಾಗಬಹುದು. ಹಾಗೆಂದು ರಜೆ ನೀಡದೇ ಇರುವುದು ಉತ್ತಮ ಸಮಾಜ/ವ್ಯವಸ್ಥೆಯ ಲಕ್ಷಣವಲ್ಲ; ಮುಟ್ಟಿನ ರಜೆ ನೀಡಲೇಬೇಕು. ಯಾವುದೇ ಕಂಪನಿ/ಕಚೇರಿಯಲ್ಲಿ ಮುಟ್ಟಿನ ರಜೆ ನೀಡದೇ ಇರುವುದು ನಿಯಮದ ಉಲ್ಲಂಘನೆ ಆಗುತ್ತದೆ. ಅವರು ಅದಕ್ಕೆ ತಕ್ಕ ಶಿಕ್ಷೆ ಅನುಭವಿಸಬೇಕಾಗುತ್ತದೆ.

ಮಾನವ ಜನಾಂಗದ ಮುಂದುವರಿಕೆಗೆ ಕಾರಣವಾದ ಹೆಣ್ತನದ ನೋವಿನ ಬಗ್ಗೆ ಸಮಾಜ, ಸರ್ಕಾರಕ್ಕೆ ಸಹಾನುಭೂತಿ ಇರಬೇಕು. ಮುಟ್ಟಿನ ರಜೆ ಮಹಿಳೆಯರ ಹಕ್ಕು ಎನ್ನುವುದನ್ನು ಎಲ್ಲರೂ ನೆನಪಿಡಬೇಕು.

ಪ್ರತಿಭಾ ಆರ್., ಮುಟ್ಟಿನ ರಜೆ ನೀತಿ ಸಮಿತಿ ಸದಸ್ಯೆ, ಗಾರ್ಮೆಂಟ್ಸ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಅಧ್ಯಕ್ಷೆ

ಏಳು ರಾಷ್ಟ್ರಗಳಲ್ಲಿದೆ ರಜೆ ನೀತಿ

ಜಗತ್ತಿನಲ್ಲಿ ಏಳು ರಾಷ್ಟ್ರಗಳು ಮುಟ್ಟಿನ ರಜಾ ನೀತಿಯನ್ನು ರೂಪಿಸಿವೆ.

1. ಸ್ಪೇನ್: 2003ರಲ್ಲಿ ಈ ನೀತಿಯನ್ನು ಜಾರಿಗೆ ತಂದಿದ್ದು, ಋತುಚಕ್ರದ ಸಮಯದಲ್ಲಿ ಮಹಿಳಾ ಉದ್ಯೋಗಿಗಳು ಮೂರರಿಂದ ಐದು ದಿನ ರಜೆ ತೆಗೆದುಕೊಳ್ಳಬಹುದು. ಆದರೆ, ಇದಕ್ಕೆ ವೈದ್ಯರ ಟಿಪ್ಪಣಿ ಅಗತ್ಯ. ಇದು ವೇತನಸಹಿತ ರಜೆ ಆಗಿದ್ದರೂ, ಆ ದಿನಗಳಲ್ಲಿ ದಿನದ ಸಂಬಳದ ಶೇ 75ರಷ್ಟು ಮಾತ್ರ ಸರ್ಕಾರ ಪಾವತಿ ಮಾಡುತ್ತದೆ

2. ಇಂಡೋನೇಷ್ಯಾ: ಇಲ್ಲಿ 2003ರಿಂದಲೇ ಈ ನೀತಿ ಜಾರಿಯಲ್ಲಿದೆ. ಮುಟ್ಟಿನ ಸಮಯದಲ್ಲಿ ಮೊದಲ ಎರಡು ದಿನಗಳಿಗೆ ವೇತನಸಹಿತ ರಜೆ ನೀಡುವುದಕ್ಕೆ ಇದರಲ್ಲಿ ಅವಕಾಶ ಇದೆ. ಆದರೆ, ರಜೆ ನೀಡುವುದು ಪ್ರತಿ ಉದ್ಯೋಗದಾತ ಕಂಪನಿಯ ವಿವೇಚನೆಗೆ ಬಿಟ್ಟಿದ್ದು. ಹಾಗಾಗಿ ಕಂಪನಿಗಳು ಈ ನೀತಿಯನ್ನು ಕಡ್ಡಾಯವಾಗಿ ಅನುಷ್ಠಾನ ಮಾಡಬೇಕು ಎಂಬುದಿಲ್ಲ

3. ಜಪಾನ್: 1947ರಲ್ಲೇ ಈ ಸಂಬಂಧ ಶಾಸನ ಜಾರಿಗೆ ಬಂದಿದೆ. ಇದರ ಪ್ರಕಾರ, ಕಠಿಣ ಕೆಲಸ ಮಾಡುವ ಮಹಿಳೆಯರಿಗೆ ಋತುಚಕ್ರದ ಸಮಯದಲ್ಲಿ ಕೆಲಸ ಮಾಡುವಂತೆ ಕಂಪನಿಗಳು ಸೂಚಿಸುವಂತಿಲ್ಲ. ಅವರು ರಜೆ ತೆಗೆದುಕೊಳ್ಳಬಹುದು. ಆದರೆ, ರಜಾ ದಿನದ ವೇತನ ಪಾವತಿ ಮಾಡುವುದು ಕಡ್ಡಾಯವಲ್ಲ

4. ದಕ್ಷಿಣ ಕೊರಿಯಾ: 1953ರಿಂದಲೇ ನೀತಿ ಜಾರಿಯಲ್ಲಿದ್ದು, ಮಹಿಳೆಯರಿಗೆ ತಿಂಗಳಿಗೆ ಒಂದು ದಿನ ವೇತನರಹಿತ ರಜೆ ನೀಡುವ ವ್ಯವಸ್ಥೆ ಇದೆ. ಆದರೆ, 2017ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ, ಇಂತಹ ರಜೆ ತೆಗೆದುಕೊಳ್ಳುವ ಮಹಿಳೆಯರ ಪ್ರಮಾಣ ತುಂಬಾ ಕಡಿಮೆ

5. ತೈವಾನ್: ಮುಟ್ಟಿನ ದಿನಗಳಲ್ಲಿ ತೀವ್ರ ನೋವಿನಿಂದಾಗಿ ಕೆಲಸ ಮಾಡಲು ಸಾಧ್ಯವಿಲ್ಲದವರು ತಿಂಗಳಿಗೆ ಒಂದು ದಿನ ರಜೆ ಪಡೆಯುವುದಕ್ಕೆ ತೈವಾನ್‌ನಲ್ಲಿ ಅವಕಾಶ ಇದೆ. ಆ ದಿನದ ಅರ್ಧ ವೇತನ ನೀಡಲಾಗುತ್ತದೆ

6. ವಿಯೆಟ್ನಾಂ: ಪ್ರತಿ ತಿಂಗಳು ಮಹಿಳಾ ಉದ್ಯೋಗಿಗಳು ಮೂರು ದಿನ ರಜೆ ಪಡೆಯಬಹುದು. ಆ ದಿನದ ವೇತನ ಪಾವತಿ ಕಡ್ಡಾಯವಲ್ಲ. ಕೆಲಸಕ್ಕೆ ಬಂದರೆ ಪ್ರತಿ ದಿನ 30 ನಿಮಿಷಗಳಷ್ಟು ವಿಶ್ರಾಂತಿ ಪಡೆಯುವುದಕ್ಕೂ ಅವಕಾಶ ಇದೆ. ಆದರೆ, ರಜೆ ಪಡೆಯದಿದ್ದ ಉದ್ಯೋಗಿಗಳಿಗೆ ಹೆಚ್ಚುವರಿ ವೇತನ ನೀಡಲಾಗುತ್ತದೆ

7. ಝಾಂಬಿಯಾ: ಇಲ್ಲಿ ಪ್ರತಿ ತಿಂಗಳು 'ತಾಯಂದಿರ ದಿನ' ಆಚರಿಸಲಾಗುತ್ತದೆ. ಮಹಿಳಾ ಉದ್ಯೋಗಿಗಳು ಕಾರಣ ನೀಡದೇ ತಿಂಗಳಿಗೆ ಒಂದು ದಿನ ರಜೆ ತೆಗೆದುಕೊಳ್ಳಬಹುದು. ಕಂಪನಿಗಳು ಆ ದಿನದ ವೇತನ ನೀಡುವುದು ಕಡ್ಡಾಯವಲ್ಲ

ರಾಷ್ಟ್ರೀಯ

ಜನವರಿ 15ರಿಂದ 'ಜೈಪುರ ಸಾಹಿತ್ಯ ಉತ್ಸವ'

ನವದೆಹಲಿ (ಪಿಟಿಐ): 'ಅತ್ಯಂತ ಪ್ರತಿಷ್ಠಿತ ಜೈಪುರ ಸಾಹಿತ್ಯ ಉತ್ಸವವು 2026ರ ಜನವರಿ 15ರಿಂದ 19ರವರೆಗೆ ನಡೆಯಲಿದೆ. '19ನೇ ಆವೃತ್ತಿಯ ಈ ಉತ್ಸವದಲ್ಲಿ ಬುಕರ್ ಪ್ರಶಸ್ತಿ ವಿಜೇತೆ ಕರ್ನಾಟಕದ ಬಾನು ಮುಷ್ತಾಕ್ ಸೇರಿದಂತೆ ಸುಮಾರು 350 ಅತಿಥಿಗಳು ತಮ್ಮ ವಿಚಾರಗಳನ್ನು ಹಂಚಿಕೊಳ್ಳಲಿದ್ದಾರೆ' ಎಂದು ಉತ್ಸವದ ಆಯೋಜಕರು ಸೋಮವಾರ ತಿಳಿಸಿದರು.

ಜೈಪುರದ ಕ್ಲಾರ್ಕ್ಸ್ ಹೋಟೆಲ್‌ನಲ್ಲಿ ಉತ್ಸವ ನಡೆಯಲಿದೆ. ಕಾರ್ಯಕ್ರಮವನ್ನು 'ಟೀಮ್‌ವರ್ಕ್ಸ್ ಆರ್ಟ್ಸ್' ಮತ್ತು 'ವೇದಾಂತ' ಸಂಸ್ಥೆ ಆಯೋಜಿಸುತ್ತಿವೆ. ಎಂದಿನಂತೆ ಈ ಬಾರಿಯೂ ಜೈಪುರ ಬುಕ್‌ಮಾರ್ಕ್ ಉತ್ಸವ ನಡೆಯಲಿದೆ. ಇದು 13ನೇ ಆವೃತ್ತಿಯದ್ದಾಗಿದೆ.

'ಕವಿತೆ, ಕಥೆಗಳು, ಇತಿಹಾಸ, ಕಲೆ, ವಿಜ್ಞಾನ, ಗಣಿತ, ವೈದ್ಯಕೀಯ, ಮಾನಸಿಕ ಆರೋಗ್ಯ, ಹವಾಮಾನ ವೈಪರೀತ್ಯ, ಜಾಗತಿಕ ರಾಜಕಾರಣ, ಸಂಘರ್ಷಗಳು, ಲಿಂಗ, ಅನುವಾದ, ಸಿನಿಮಾ, ಸಮುದಾಯಗಳು, ವ್ಯಕ್ತಿಯ ಅಸ್ಮಿತೆ ಕುರಿತು ಚರ್ಚೆಗಳು ನಡೆಯಲಿವೆ' ಎಂದು ಆಯೋಜಕರು ಮಾಹಿತಿ ನೀಡಿದರು.

ಅತಿಥಿಗಳು ಯಾರು?: ಮಾಜಿ ರಾಜತಾಂತ್ರಿಕ ಅಧಿಕಾರಿ ಮತ್ತು ಲೇಖಕ ಗೋಪಾಲಕೃಷ್ಣ ಗಾಂಧಿ, ನೊಬೆಲ್ ಪ್ರಶಸ್ತಿ ಪುರಸ್ಕೃತೆ, ಪೋಲೆಂಡ್ ಬರಹಗಾರ್ತಿ ಒಗಾ ಟುಕಾರ್ಚುಕ್, ಚೆಸ್ ಪಟು ವಿಶ್ವನಾಥನ್ ಆನಂದ್, ಬ್ರಿಟನ್‌ನ ನಟ ಮತ್ತು ಲೇಖಕ ಸ್ಟೀಫನ್ ಫ್ರೈ, ಚಿಂತಕಿ ಅನುರಾಧಾ ರಾಯ್, ಸಿನಿಮಾ ವಿಮರ್ಶಕಿ ಭಾವನಾ ರಾಮಯ್ಯ, ಲೇಖಕರಾದ ಮನು ಜೋಸೆಫ್, ರುಚಿರ್ ಜೋಶಿ, ಕೆ.ಆರ್. ಮೀರಾ, ಕಾದಂಬರಿಗಾರ್ತಿ ಶೋಭಾ ಡೇ ಸೇರಿದಂತೆ ದೇಶ–ವಿದೇಶಗಳಿಂದಲೂ ಲೇಖಕರು ಪಾಲ್ಗೊಳ್ಳಲಿದ್ದಾರೆ.

ಬಿಲ್ಡಥಾನ್: 3 ಲಕ್ಷ ಶಾಲೆಗಳು ಭಾಗಿ

ನವದೆಹಲಿ (ಪಿಟಿಐ): ದೇಶದಾದ್ಯಂತ ಮೂರು ಲಕ್ಷ ಶಾಲೆಗಳ ಒಂದು ಕೋಟಿಗೂ ಹೆಚ್ಚು ವಿದ್ಯಾರ್ಥಿಗಳು ಸೋಮವಾರ ನಡೆದ ವಿಕಸಿತ ಭಾರತ ಬಿಲ್ಡಥಾನ್–2025ರಲ್ಲಿ ಪಾಲ್ಗೊಂಡರು.



ಧರ್ಮೇಂದ್ರ ಪ್ರಧಾನ್

ಆರನೇ ತರಗತಿಯಿಂದ 12ನೇ ತರಗತಿಯ ವಿದ್ಯಾರ್ಥಿಗಳನ್ನೊಳಗೊಂಡ ದೇಶದ ಬೃಹತ್ ಸುಸಂಘಟಿತ ಇನೋವೇಶನ್ ಹ್ಯಾಕಥಾನ್ ಅನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಉದ್ಘಾಟಿಸಿದರು.

'ಬಿಲ್ಡಥಾನ್ ಸ್ಪರ್ಧೆಯಷ್ಟೇ ಅಲ್ಲ. ಇದೊಂದು ಘನೋದ್ದೇಶ. ನಾವೀನ್ಯವನ್ನು ಉತ್ತೇಜಿಸುವ ಚಳವಳಿ. ಇಲ್ಲಿ ಮೊಳೆತ ಆಲೋಚನೆಗಳು ಹೊಸ ಮಾದರಿ ರಚಿಸಲು ಮತ್ತು ದೇಶೀಯ ಹಾಗೂ ಜಾಗತಿಕ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಲು ದಾರಿ ಮಾಡಿಕೊಡಲಿವೆ ಎಂಬ ವಿಶ್ವಾಸ ನನಗಿದೆ' ಎಂದು ಕೇಂದ್ರ ಶಿಕ್ಷಣ ಸಚಿವರು ಹೇಳಿದರು.

ದೇಶದಲ್ಲಿ ಇದುವರೆಗೂ ನಡೆದ ಶಾಲಾ ಹ್ಯಾಕಥಾನ್‌ಗಳಲ್ಲಿ ಇದೇ ಅತಿದೊಡ್ಡ ಕಾರ್ಯಕ್ರಮವಾಗಿ ದಾಖಲಾಯಿತು.

ನ.1ರಿಂದ 'ಡಿಜಿಟಲ್ ಜೀವಿತ ಪ್ರಮಾಣಪತ್ರ' ಅಭಿಯಾನ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಪಿಂಚಣಿದಾರರಿಗಾಗಿ ನವೆಂಬರ್ 1ರಿಂದ 30ರವರೆಗೆ ದೇಶದಾದ್ಯಂತ 'ಡಿಜಿಟಲ್ ಜೀವಿತ ಪ್ರಮಾಣಪತ್ರ' (ಡಿಎಲ್‌ಸಿ) ಅಭಿಯಾನವನ್ನು ಆಯೋಜಿಸಿದೆ.

'ಪಿಂಚಣಿ ವಿತರಿಸುವ 19 ಬ್ಯಾಂಕ್‌ಗಳು ಮತ್ತು ವಿವಿಧ ಇಲಾಖೆಗಳ ಸಹಯೋಗದಲ್ಲಿ 2,000 ಜಿಲ್ಲೆಗಳು ಮತ್ತು ಉಪ–ವಿಭಾಗ ಕಚೇರಿ ವ್ಯಾಪ್ತಿಯಲ್ಲಿ ಅಭಿಯಾನ ನಡೆಯಲಿದೆ' ಎಂದು ಅಧಿಕೃತ ಪ್ರಕಟಣೆ ಸೋಮವಾರ ತಿಳಿಸಿದೆ.

ದೇಶದ ಮೂಲೆ ಮೂಲೆಗಳಲ್ಲಿರುವ ಪಿಂಚಣಿದಾರರನ್ನು ತಲುಪಿ ಡಿಜಿಟಲ್ ಜೀವಿತ ಪ್ರಮಾಣಪತ್ರ ಬಗ್ಗೆ ಮಾಹಿತಿ ನೀಡುವ ಉದ್ದೇಶದಿಂದ ಪಿಂಚಣಿ ಇಲಾಖೆಯು ಆಯೋಜಿಸುತ್ತಿರುವ ನಾಲ್ಕನೇ ಅಭಿಯಾನ ಇದಾಗಿದೆ.

1.8 ಲಕ್ಷ ಪೋಸ್ಟ್‌ಮ್ಯಾನ್‌ಗಳು ಮತ್ತು ಗ್ರಾಮೀಣ ಡಾಕ್ ಸೇವಕರು(ಜಿಡಿಎಸ್) ಎಲ್ಲ ವಿಧದ ಪಿಂಚಣಿದಾರರ ಮನೆ ಬಾಗಿಲಿಗೆ ತೆರಳಿ ಡಿಎಲ್‌ಸಿ ಸೇವೆಗಳ ಬಗ್ಗೆ ತಿಳಿಸಲಿದ್ದಾರೆ.

ಪಿಂಚಣಿದಾರರು ತಮ್ಮ ಪಿಂಚಣಿಯನ್ನು ಮುಂದುವರಿಸಲು ಪ್ರತಿವರ್ಷ ನವೆಂಬರ್ ತಿಂಗಳಿನಲ್ಲಿ 'ಜೀವಿತ ಪ್ರಮಾಣಪತ್ರ'ವನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

ಪದಬಂಧ 6193


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಯಾವುದೇ ಕಳಂಕವಿಲ್ಲದ್ದು (4)
5.ಸಿಡುಬು ಮೊದಲದ್ದರೆ ಪ್ರಮುಖ ಘಟ್ಟ ಕಾಣುತ್ತದೆ! (4)
6.ಪಾನಕ ಕುಡಿದು ತಯಾರಿಸಿದ ಅಡುಗೆ (2)
8.ಪುರದಲ್ಲಿ ಸಿಕ್ಕಿರುವ ಸನ್ಮಾನ! (4)
9.ನಗರದಲ್ಲಿರುವ ಮನುಷ್ಯ ಕಾಣುತ್ತಿದ್ದಾನೆಯೇ? (2)
10.ಕಾದಾಡುವಾಗ ಅರಣ್ಯ ಕಾಣಿಸಿತಲ್ಲಾ! (2)
11.ಅತೀಘೋರವಾದ ವಿಷ (4)
12.ಹತ್ತಿರದಲ್ಲಿ ಕಾಣಿಸಿದ ಅರಳೆ (2)
13.ಸೋಲು ಈ ರೀತಿ ಬಂದಿದೆ (4)
15.ಈ ಪರಿ ನಡೆದ ಮದುವೆ (4)

ಮೇಲಿಂದ ಕೆಳಕ್ಕೆ

2.ಗ್ರಾನೈಟ್ ರಾಜಧಾನಿ ಎಂದು ಖ್ಯಾತಿ ಪಡೆದ ರಾಮನಗರ ಜಿಲ್ಲೆಯ ತಾಲೂಕು (5)
3.ತೋಟದ ಕೆಲಸ ಮಾಡುವವನು (2)
4.ದಂತ ಇಲ್ಲಿ ಕಾಣುತ್ತಿದೆ (2)
5.ದಂಡಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದ ಏಕೈಕ ಕನ್ನಡಿಗ ಈತ (7)
7.ನಿಸ್ಸಾರವಾದನ್ನು ಹೀಗೆನ್ನಿ (3)
9.ಕೈಯಲ್ಲಿರುವ ಹಣ (3)
10.ಸಮಯವನ್ನು ವ್ಯರ್ಥವಾಗಿ ಕಳೆಯುವುದು (5)
13.ಬಟ್ಟೆಯ ಅಗಲದ ಒಂದು ಪ್ರಮಾಣ (2)
14.ಈಟಿ ಇಲ್ಲಿದೆ (2)



6192ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಮಪದ 4.ಪರೋಕ್ಷ
5.ನಿಘಂಟು 6.ಸರಸ
10.ವಿನಿಯೋಗ 11.ಜೀವಚ್ಛವ
12.ಸುದಿನ 14.ವಲ್ಲಭ
16.ಬುರುಜು 17.ವಿಧಾನಸೌಧ

ಮೇಲಿಂದ ಕೆಳಕ್ಕೆ:
1.ಪಕ್ಷ 2.ಮಧುರ 3.ದನಿ
6.ಸವಿಗನಸು 7.ಸಹಜೀವನ
8.ಹವಿಸ್ಸು 9.ಧವಳ
13.ದಿವಾನ 15.ಭವಿ
16.ಬುಧ

ಸುಡೊಕು 6577

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7		4		5			9	
	2		1		9	6		5
		5		3			1	
					4	1		9
9		1	5	8			4	
4				1		3		7
		9	3		7			1
	6			9	1	7		
1				2			6	4

6576 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಪ್ರತಿಯೊಬ್ಬರಲ್ಲೂ ಸಾಮರ್ಥ್ಯವಿದೆ...



ಪಚ್ಚೆಯ ಹಸಿರಿನ ದಟ್ಟ ಅರಣ್ಯದ ನಟ್ಟನಡುವಿನಲ್ಲಿ ಹುಲಿಯೊಂದು ವಾಸಿಸುತ್ತಿತ್ತು. ಬೃಹತ್ ಆಕಾರದ ಹುಲಿ ಬಹಳ ಬಲಿಷ್ಠವಾಗಿಯೂ ಇತ್ತು. ಕಾಡಿನ ಎಲ್ಲ ಪ್ರಾಣಿಗಳೂ ಈ ಹುಲಿಗೆ ಹೆದರುತ್ತಿದ್ದವು. ಹುಲಿ ಒಂದು ಸಲ ಗರ್ಜಿಸಿದರೆ ಸಾಕು, ಪ್ರಾಣಿಗಳೆಲ್ಲ ಕಾಲಿಗೆ ಬುದ್ಧಿ ಹೇಳುತ್ತಿದ್ದವು. ಈ ಕಾರಣದಿಂದ ಹುಲಿಗೆ ತನ್ನ ಸಾಮರ್ಥ್ಯದ ಕುರಿತು ಬಹಳ ಅಹಂಕಾರವಿತ್ತು.

ಪ್ರತಿದಿನ ಬೆಳಿಗ್ಗೆ ಆ ಹುಲಿ ಕಾಡಿನ ನಡುವಿನ ಸ್ಫಟಿಕದಂತಹ ಸ್ವಚ್ಛ ನೀರಿನ ಕೊಳವೊಂದರಲ್ಲಿ ತನ್ನ ಪ್ರತಿಬಿಂಬವನ್ನು ನೋಡಿಕೊಳ್ಳುತ್ತಾ, 'ನನಗಿಂತ ಬಲಿಷ್ಠರಾದವರು ಯಾರಾದರೂ ಇದ್ದಾರೆಯೇ' ಎಂದು ಕೇಳುತ್ತಿತ್ತು. 'ಯಾರೂ ಇಲ್ಲ, ಈ ಇಡೀ ಅರಣ್ಯ ನನ್ನದು' ಎಂದು ತನ್ನ ಪ್ರಶ್ನೆಗೆ ತಾನೇ ಉತ್ತರ ಕೊಟ್ಟುಕೊಳ್ಳುತ್ತಿತ್ತು. ಈ ಹುಲಿಯ ಗರ್ಜನೆ, ಕೂಗಾಟಕ್ಕೆ ಭಯಪಟ್ಟು ಪ್ರಾಣಿಗಳು ಅದರ ಹತ್ತಿರಕ್ಕೂ ಸುಳಿಯುತ್ತಿರಲಿಲ್ಲ. ಆದರೆ, ಅದೇ ಅರಣ್ಯದಲ್ಲಿ ಒಂದು ಜಿಂಕೆಯಿತ್ತು. ಅದಕ್ಕೆ ಹುಲಿಯ ಈ ಜಂಬದ ಸ್ವಭಾವ ಇಷ್ಟವಾಗುತ್ತಿರಲಿಲ್ಲ. ಆದರೆ ಜಿಂಕೆಯೇನಾದರೂ ಮಾತಾಡಲು ಹೊರಟರೆ, ಅಪ್ಪ ಅಮ್ಮ ಅದರ ಬಾಯಿ ಮುಚ್ಚಿಸುತ್ತಿದ್ದರು.

ಒಮ್ಮೆ ಜಿಂಕೆ ಆ ಕಾಡಿನ ಅಂಚಿನಲ್ಲಿರುವ ಹೊಳೆಯೊಂದರ ದಾರಿಯಲ್ಲಿ ಹಾದುಹೋಗುತ್ತಿತ್ತು. ಮಳೆಯ ವಾತಾವರಣ. ಗಾಳಿ ಬೀಸುತ್ತಿತ್ತು. ಅದೇ ವೇಳೆಗೆ ಹುಲಿಯೂ ಅಲ್ಲಿಗೆ ಬಂದಿತು. ತನ್ನ ಪಾಡಿಗೆ ತಾನು ಹೋಗುತ್ತಿದ್ದ ಜಿಂಕೆಯನ್ನು ನೋಡಿ ಹುಲಿಗೆ ಸಿಟ್ಟು ಬಂತು, 'ಅಲ್ಲ, ನಾನು ಯಾರು ಎಂಬುದು ಗೊತ್ತಿದ್ದರೂ ನಿನ್ನಷ್ಟಕ್ಕೆ ನೀನು ಹೋಗುತ್ತಿದ್ದೀಯಲ್ಲ, ನಾನೆಷ್ಟು ಶಕ್ತಿಶಾಲಿ ಎಂಬುದು ನಿನಗೆ ಗೊತ್ತಿಲ್ಲವೇ?' ಎಂದಿತು ಹುಲಿ.

'ಖಂಡಿತ ನೀವು ಶಕ್ತಿಶಾಲಿಯೇ, ಆದರೆ ಶಕ್ತಿಯೇ ಮೇಲು ಎಂಬುದು ತಪ್ಪು. ಜ್ಞಾನವಿಲ್ಲದ ಶಕ್ತಿ ಕೆಲವೊಮ್ಮೆ ವಿಫಲವೂ ಆಗಬಹುದು' ಎಂದಿತು ಜಿಂಕೆ.

ಹುಲಿಗೆ ಕೋಪವುಕ್ಕಿತು, 'ಏನು ಮಾತಾಡ್ತಾ ಇದ್ದೀಯಾ. ನಾನು ಯಾರನ್ನು ಬೇಕಾದರೂ ಸೋಲಿಸಬಲ್ಲೆ' ಎಂದಿತು.

ಅಷ್ಟು ಹೊತ್ತಿಗೆ ಸಣ್ಣ ಗಾಳಿ ಬಿರುಗಾಳಿಯಾಗಿ ಮಾರ್ಪಟ್ಟು ತುಂಬಿ ಹರಿಯುತ್ತಿದ್ದ ಹೊಳೆ ಉಕ್ಕತೊಡಗಿತು. ಗಾಳಿಯ ರಭಸಕ್ಕೆ ಮರಗಳು ತೂರಾಡತೊಡಗಿದವು. ಹುಲಿ ಬೇಗನೆ ಹೊಳೆ ದಾಟಲು ಪ್ರಯತ್ನಿಸಿತು. ಆದರೆ ಪ್ರವಾಹದ ರಭಸಕ್ಕೆ ಈಜಲಾಗದೇ ಹೊಳೆಯಲ್ಲಿ ತೇಲಿಕೊಂಡು ಹೋಗಲಾರಂಭಿಸಿತು. ಜಿಂಕೆ ಅಲ್ಲಿಯೇ ಇದ್ದ ಮರದ ದಿಮ್ಮಿಯೊಂದನ್ನು ಕಷ್ಟಪಟ್ಟು ದೂಡಿಕೊಂಡು ಬಂದು ಕೊಚ್ಚಿಕೊಂಡು ಹೋಗುತ್ತಿದ್ದ ಹುಲಿಗೆ ಹಿಡಿದುಕೊಳ್ಳಲು ಸಹಾಯವಾಗುವಂತೆ ನೀರಿಗೆಸೆಯಿತು. ಅಷ್ಟು ಹೊತ್ತಿಗೆ ಇತರ ಪ್ರಾಣಿಗಳು ಬಂದವು. ದಿಮ್ಮಿಯನ್ನು ನಿಧಾನವಾಗಿ ಎಳೆಯುತ್ತ ಹುಲಿಯನ್ನು ದಡ ಸೇರಿಸಿದವು.

ಅಂತೂ ದಡ ಸೇರಿ ದೀರ್ಘವಾಗಿ ಉಸಿರಾಡಿದ ಹುಲಿ ಜಿಂಕೆಗೆಂದಿತು, 'ನೀನು ನನ್ನ ಪ್ರಾಣ ಉಳಿಸಿದೆ. ಬರೀ ಶಕ್ತಿ, ಅಧಿಕಾರವೇ ಮುಖ್ಯ ಎಂದು ನಾನು ನಂಬಿದ್ದೆ. ಆದರೆ ನಿನ್ನ ಸಮಯಪ್ರಜ್ಞೆ ನನ್ನ ಬಲಕ್ಕಿಂತ ದೊಡ್ಡದೆಂದು ಅರಿವಾಯಿತು'.

ಆಗ ಜಿಂಕೆ, 'ಹುಲಿರಾಯಾ, ಪ್ರತೀ ಪ್ರಾಣಿಗೂ ಅದರದ್ದೇ ಆದ ಸಾಮರ್ಥ್ಯವಿರುತ್ತದೆ. ಒಂದು ಇರುವೆಯಿಂದಲೂ ಕಲಿಯುವುದಿದೆ, ಒಂದು ಜೇನು ನೊಣವೂ ಪಾಠ ಕಲಿಸುತ್ತದೆ. ನಮ್ಮ ಸಾಮರ್ಥ್ಯದ ಮೇಲೆ ನಂಬಿಕೆ, ಇತರರ ಸಾಮರ್ಥ್ಯದ ಮೇಲೆ ಗೌರವ ಇದ್ದರೆ ಬದುಕು ಅರ್ಥಪೂರ್ಣ' ಎಂದಿತು.

ಪಾಠ ಕಲಿತ ಹುಲಿ ಅಹಂಕಾರ ಬಿಟ್ಟು ಉಳಿದ ಪ್ರಾಣಿಗಳೊಂದಿಗೆ ಹೊಂದಿಕೊಂಡು ಬದುಕಲಾರಂಭಿಸಿತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

14 ಅಕ್ಟೋಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಅಷ್ಟಮಿ ಗಂ. 11-10 ನಕ್ಷತ್ರ: ಪುನರ್ವಸು ಗಂ. 11-55, ಯೋಗ: ಸಿದ್ಧ ಗಂ. 28-11 ಕರಣ: ಕೌಲವ ಗಂ. 11-10 ಕನ್ಯಾ ಮಾಸದ 27 ನೇ ದಿನ. ಮಳೆ ನಕ್ಷತ್ರ : ಚಿತ್ತಾ 2 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 04-30 ಸೂರ್ಯೋದಯ : 06-24 ಸೂರ್ಯಾಸ್ತ : 06-09, ಮುಸ್ಲಿಂ ದಿನಾಂಕ : 21 ರಬಿಯುಸ್ಸಾನಿ , ಅದೃಷ್ಟ ಸಂಖ್ಯೆ : 5, 11

ಮೇಷ: ವ್ಯವಹಾರಗಳ ಬಗ್ಗೆ ಗಮನ ಹರಿಸುವುದು ಮುಖ್ಯ. ಹೊಸ ಸ್ಥಾನ ಅಥವಾ ಹೊಸ ಮನೆಗೆ ಹೋಗುವ ಯೋಚನೆ ಬರಲಿದೆ. ಪ್ರೀತಿ ಪಾತ್ರರೊಡನೆ ಸಮಯ ಕಳೆಯುವಿರಿ. ಮಕ್ಕಳಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವಿರಿ.

ವೃಷಭ: ಸಸ್ಯಗಳ ಉತ್ಪತ್ತಿ ವಸ್ತುಗಳ ಮಾರಾಟಗಾರರಿಗೆ ಹಾಗೂ ನರ್ಸರಿ ಹೊಂದಿರುವವರಿಗೆ ಲಾಭದ ದಿನ. ಹೆಚ್ಚುವರಿ ಜವಾಬ್ದಾರಿಗಳನ್ನು ನಿಭಾಯಿಸುವ ಹೊಣೆ ನಿಮ್ಮದಾಗುವುದು. ಹಣಕಾಸಿನ ಕೊರತೆ ಇರುವುದಿಲ್ಲ.

ಮಿಥುನ: ಅನೇಕ ವಿಚಾರಗಳನ್ನು ಸಮರ್ಥವಾಗಿ ನಿರ್ವಹಿಸುವ ಕಾರ್ಯ ನಿರ್ವಹಣಾವೈಖರಿಗೆ ಉತ್ತಮ ಮಾತುಗಳನ್ನು ಕೇಳುವಿರಿ. ಸಹೋದರ ಬಳಗದ ವ್ಯಕ್ತಿಗಳಿಂದ ಆರ್ಥಿಕ ಸಹಾಯದ ಯಾಚನೆ ಬರಲಿದೆ.

ಕರ್ಕಾಟಕ: ನೆಮ್ಮದಿಯ ವಿಷಯವೇನೆಂದರೆ ಖರ್ಚಿಗೆ ತಕ್ಕಂತೆ ಧನಾಗಮನ ಇರುವುದರಿಂದ ಚಿಂತೆ ಇರದು. ಕೆಲಸಗಳು ನಿಧಾನವಾಗಿ ಸಾಗಲಿವೆ. ಬಾಕಿ ಸಂದಾಯವಾಗುವುದು. ಶತ್ರುಗಳ ಬಲೆಗೆ ಬೀಳದಂತೆ ಎಚ್ಚರವಹಿಸಬೇಕು.

ಸಿಂಹ: ರಾಜಕಾರಣದಲ್ಲಿ ಸಮಯ ಕಳೆಯುವಿರಿ. ತಂದೆಯ ಆರೋಗ್ಯ ಪರಿಸ್ಥಿತಿಗಳು ಸದ್ಯದಲ್ಲೇ ಸುಧಾರಿಸಲಿವೆ. ಕೆಲಸಕ್ಕೆ ಸೂಕ್ತ ಗೌರವಾದರಗಳು ದೊರೆಯಲಿದ್ದು ಆಶ್ಚರ್ಯ ಎನಿಸಬಹುದು.

ಕನ್ಯಾ: ಮಹತ್ವಕಾಂಕ್ಷೆ ಈಡೇರಿಕೆಯತ್ತ ಸಕಾರಾತ್ಮಕ ದೃಷ್ಟಿಕೋನವಿರಲಿ. ಪರಿಸ್ಥಿತಿ ಅವಲೋಕಿಸಿಕೊಂಡು ಮುಂದಿನ ಹೆಜ್ಜೆ ಇರಿಸಿ. ವೃತ್ತಿರಂಗದಲ್ಲಿ ಸಮಾಧಾನದ ವಾತಾವರಣದಿಂದ ಕೆಲಸ ಕಾರ್ಯಗಳು ಸಾಗಲಿವೆ.

ತುಲಾ: ವ್ಯವಹಾರಿಕವಾಗಿ ಕೈ ತಪ್ಪಿದ ಅವಕಾಶಗಳು ಪುನಃ ದೊರೆಯಲಿದೆ. ಹಿಂಜರಿಕೆಯ ಸ್ವಭಾವ ಬಿಟ್ಟು ಕಾರ್ಯ ಕೈಗೊಳ್ಳಲು ಮುಂದಾಗಿ. ಗುತ್ತಿಗೆದಾರರಿಗೆ ಶುಭ ಸುದ್ದಿ ಕೇಳಿಬರಲಿದೆ. ದಿಢೀರ್ ಪ್ರಯಾಣ ಕೈಗೊಳ್ಳಬೇಕಾಗುವುದು.

ವೃಶ್ಚಿಕ: ಎಲ್ಲರೊಂದಿಗೆ ಬೆರೆಯುವ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಂದರ್ಭ ಬರಲಿದೆ. ಷೇರು ವ್ಯಾಪಾರವು ಅದೃಷ್ಟದಾಯಕ. ಆರೋಗ್ಯ ಉತ್ತಮವಾಗಿರುವುದು. ಬಿಳಿ ಬಣ್ಣ ಅದೃಷ್ಟ ತರುವುದು.

ಧನು: ಮೋಸದ ವ್ಯವಹಾರ ಹಾಗೂ ಕಾನೂನುಬಾಹಿರ ಸಂಗತಿಗಳಲ್ಲಿ ಕೈಹಾಕುವುದನ್ನು ಬಿಟ್ಟುಬಿಡಿ. ಮಕ್ಕಳ ದುಡಿಮೆಯಿಂದ ಬರುತ್ತಿರುವ ಹಣದ ಮೂಲದ ಬಗ್ಗೆ ಗಮನಹರಿಸಿ. ಹಳೆ ವಿಷಯ ನೆನಪಿಸಿಕೊಳ್ಳಬೇಡಿ

ಮಕರ: ಅಚ್ಚರಿಯನ್ನು ಉಂಟು ಮಾಡಬಹುದು. ಅಪರೂಪದ ಸಮಾರಂಭಕ್ಕೆ ಆಹ್ವಾನ ಬರುವುದು. ಹಾಲು ಮಾರಾಟಗಾರರಿಗೆ ಲಾಭವಿದೆ. ಪರರಿಗೆ ಸಹಾಯ ಮಾಡುವ ಮನೋಭಾವದಿಂದ ಮುನ್ನಡೆ ಇರುವುದು.

ಕುಂಭ: ವ್ಯವಹಾರಗಳಲ್ಲಿ ಹಿಡಿತವನ್ನು ಸಾಧಿಸಿದ್ದೀರಿ. ಉತ್ಸಾಹದಿಂದ ಹೆಜ್ಜೆಗಳನ್ನಿರಿಸುವಿರಿ. ಬಟ್ಟೆ ವ್ಯಾಪಾರಿಗಳಿಗೆ ಇಂದು ಉತ್ತಮ ಮಾರಾಟ, ಲಾಭವಾಗುವುದು. ಗೃಹ ವಿವಾದಗಳು ಉಪಶಮನವಾಗುವುದು.

ಮೀನ: ರಾಜಕಾರಣಿಗಳಿಗೆ ನಾಯಕತ್ವದಲ್ಲಿ ಬದಲಾವಣೆಯಾಗುವ ಸಂಭವ ಇದೆ. ಹಣದ ಕಡೆ ಪ್ರಾಮುಖ್ಯ ಕೊಡುವುದಕ್ಕಿಂತ ಹೆಸರು ಸಂಪಾದಿಸಲು ಗಮನಹರಿಸಿ. ಜಗಳದಲ್ಲಿ ಸಿಕ್ಕಿಹಾಕಿಕೊಳ್ಳುವಂತೆ ಆಗಬಹುದು.

ಗುಂಡಣ್ಣ



ಚಿಟಿಕೆ ಸುದ್ದಿ

ಸೆನ್ಸೆಕ್ಸ್ ಇಳಿಕೆ




ಮುಂಬೈ (ಪಿಟಿಐ): ಮಾಹಿತಿ ತಂತ್ರಜ್ಞಾನ ಮತ್ತು ಎಫ್‌ಎಂಸಿಜಿ ವಲಯದ ಕಂಪನಿಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಸೋಮವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿವೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಚೀನಾದಿಂದ ಆಮದಾಗುವ ಸರಕುಗಳ ಮೇಲೆ ಶೇ 100ರಷ್ಟು ಹೆಚ್ಚುವರಿ ಸುಂಕವನ್ನು ನವೆಂಬರ್ 1ರಿಂದ ವಿಧಿಸುವುದಾಗಿ ಹೇಳಿದ್ದಾರೆ. ಇದು ಮಾರುಕಟ್ಟೆಯಲ್ಲಿ ಅನಿಶ್ಚಿತತೆ ಉಂಟು ಮಾಡಿದೆ. ಇದು ಷೇರು ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 173 ಅಂಶ ಇಳಿಕೆಯಾಗಿ, 82,327ಕ್ಕೆ ವಹಿವಾಟು ಅಂತ್ಯಗೊಂಡಿದೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 58 ಅಂಶ ಕಡಿಮೆಯಾಗಿ, 25,227ಕ್ಕೆ ಕೊನೆಗೊಂಡಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,285
ಇಂದಿನ ಅಂತ್ಯ:	25,227
ದಿನದ ಕನಿಷ್ಠ:	25,152
	58

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹560
	12 ಕ್ಕೆ	₹75
ಮೈಸೂರು:	100 ಕ್ಕೆ	₹570

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹418-653
ದ್ವಿತಳಿ (ಬಿ.ವಿ)	₹432-772

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹183.50
ಆರ್‌ಎಸ್‌ಎಸ್-5	₹178.50
ಗುಡ್ ಲಾಟ್	₹165.50

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹27000-27200
ಬೆಂಗಳೂರು	₹28000-30000
ತಿಪಟೂರು	₹26000-28000

ಪಿ.ಎಫ್ ಹಿಂಪಡೆಯುವ ನಿಯಮ ಸರಳ

ನೌಕರರ ಭವಿಷ್ಯನಿಧಿ ಸಂಘಟನೆಯ ಧರ್ಮದರ್ಶಿಗಳ ಮಂಡಳಿಯ ತೀರ್ಮಾನ

ನವದೆಹಲಿ (ಪಿಟಿಐ): ನೌಕರರ ಭವಿಷ್ಯನಿಧಿ ಸಂಘಟನೆಯ (ಇಪಿಎಫ್‌ಒ) ಧರ್ಮದರ್ಶಿಗಳ ಮಂಡಳಿಯು ಪಿ.ಎಫ್ ಹಣ ಹಿಂಪಡೆಯಲು ಇರುವ ನಿಯಮಗಳನ್ನು ಸಡಿಲಗೊಳಿಸುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿದೆ.

ಕೇಂದ್ರ ಕಾರ್ಮಿಕ ಸಚಿವ ಮನಸುಖ್ ಮಾಂಡವೀಯ ನೇತೃತ್ವದಲ್ಲಿ ನಡೆದ ಮಂಡಳಿಯ ಸಭೆಯು ಹಲವು ತೀರ್ಮಾನಗಳನ್ನು ತೆಗೆದುಕೊಂಡಿದೆ ಎಂದು ಕಾರ್ಮಿಕ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಪಿ.ಎಫ್ ಮೊತ್ತವನ್ನು ಭಾಗಶಃ ಹಿಂದಕ್ಕೆ ಪಡೆಯುವುದಕ್ಕೆ ಸಂಬಂಧಿಸಿದ, ಸಂಕೀರ್ಣವಾದ 13 ಅಂಶಗಳನ್ನು ಮೂರು ವರ್ಗಗಳ ಅಡಿ ಒಗ್ಗೂಡಿಸಲು ಮಂಡಳಿ ತೀರ್ಮಾನಿಸಿದೆ. ಅತ್ಯಗತ್ಯವಾದವು (ಅನಾರೋಗ್ಯ, ಶಿಕ್ಷಣ, ಮದುವೆ ವೆಚ್ಚಗಳು), ಗೃಹ ಅಗತ್ಯಗಳು ಮತ್ತು ವಿಶೇಷ ಸಂದರ್ಭದ ಅಗತ್ಯಗಳು ಎಂಬುದು ಆ ಮೂರು ವರ್ಗಗಳು.

ಹಿಂಪಡೆಯಲು ಲಭ್ಯವಿರುವ ಅಷ್ಟೂ ಮೊತ್ತವನ್ನು ಪಡೆಯಲು ಇನ್ನು ಮುಂದೆ ಇಪಿಎಫ್‌ಒ ಚಂದಾದಾರರಿಗೆ ಸಾಧ್ಯವಾಗಲಿದೆ. ಭಾಗಶಃ ಹಿಂಪಡೆಯಬೇಕು ಎಂದಾದರೆ ನೌಕರರು ಕನಿಷ್ಠ 12 ತಿಂಗಳು ಕೆಲಸ ಮಾಡಿದ್ದರೆ ಸಾಕು. ಅಲ್ಲದೆ, ಶಿಕ್ಷಣ ಮತ್ತು ಮದುವೆ ಉದ್ದೇಶಕ್ಕೆ ಹೆಚ್ಚಿನ ಮೊತ್ತವನ್ನು ಹಿಂಪಡೆಯಲು ಸಾಧ್ಯವಾಗಲಿದೆ.

‘ವಿಶೇಷ ಸಂದರ್ಭ’ಗಳ ಅಡಿಯಲ್ಲಿ ಹಣ ಹಿಂಪಡೆಯುವಾಗ ನೌಕರರು ಕಾರಣವನ್ನು ಉಲ್ಲೇಖಿಸಬೇಕು ಎಂಬ ನಿಯಮ ಇತ್ತು. ಆದರೆ ಇನ್ನು ಮುಂದೆ ಅವರು ಯಾವುದೇ ಕಾರಣ ಉಲ್ಲೇಖಿಸದೆ ಈ ವರ್ಗದ ಅಡಿಯಲ್ಲಿ ಹಣವನ್ನು ಹಿಂಪಡೆಯಲು ಅರ್ಜಿ ಸಲ್ಲಿಸಬಹುದು.

ಸದಸ್ಯರ ಖಾತೆಯಲ್ಲಿನ ಶೇ 25ರಷ್ಟು ಮೊತ್ತವನ್ನು ಕಾಯ್ದುಕೊಳ್ಳಬೇಕಿರುವ ‘ಕನಿಷ್ಠ ಮೊತ್ತ’ ಎಂದು ವರ್ಗೀಕರಿಸಲು ಅವಕಾಶ ಕಲ್ಪಿಸಲು ತೀರ್ಮಾನಿಸಲಾಗಿದೆ. ಆಗ, ಆ ಮೊತ್ತಕ್ಕೆ ಹೆಚ್ಚಿನ ಬಡ್ಡಿಯ (ಈಗ ಶೇ 8.25ರಷ್ಟು ಇದೆ) ಪ್ರಯೋಜನ ಪಡೆಯಲು ಇಪಿಎಫ್‌ಒ ಚಂದಾದಾರರಿಗೆ ಸಾಧ್ಯವಾಗುತ್ತದೆ.

ಡಿಜಿಟಲ್ ಜೀವಿತ ಪ್ರಮಾಣ ಪತ್ರವನ್ನು ಮನೆಬಾಗಿಲಿಗೆ ತಲುಪಿಸುವ ಸೇವೆ ಒದಗಿಸಲು ಅಂಚೆ ಇಲಾಖೆಯ ಪೇಮೆಂಟ್ಸ್ ಬ್ಯಾಂಕ್ (ಐಪಿಪಿಬಿ) ಜೊತೆ ಒಪ್ಪಂದ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ. ಈ ಸೇವೆಯ ಮೂಲಕ ಇಪಿಎಸ್–95 ಪಿಂಚಣಿದಾರರಿಗೆ ಜೀವಿತ ಪ್ರಮಾಣಪತ್ರ ಪಡೆದುಕೊಳ್ಳಲು ಸಹಾಯ ಆಗುತ್ತದೆ. ಪ್ರಮಾಣಪತ್ರಕ್ಕೆ ಆಗುವ ₹50 ವೆಚ್ಚವನ್ನು ಇಪಿಎಫ್‌ಒ ಭರಿಸಲಿದೆ.

ಈ ಸೌಲಭ್ಯ ಜಾರಿಗೆ ಬಂದ ನಂತರದಲ್ಲಿ ಇಪಿಎಸ್–95 ಪಿಂಚಣಿದಾರರು ತಮ್ಮ ಜೀವಿತ ಪ್ರಮಾಣಪತ್ರವನ್ನು ಅಂಚೆ ಇಲಾಖೆಯ ಪೇಮೆಂಟ್ಸ್ ಬ್ಯಾಂಕ್‌ನ ಶಾಖೆಗಳ ಮೂಲಕ ಉಚಿತವಾಗಿ ಸಲ್ಲಿಸಲು ಸಾಧ್ಯವಾಗಲಿದೆ.

ಪಿಎಫ್‌ನಲ್ಲಿ ನೌಕರರ ನೋಂದಣಿಗೆ ಅಭಿಯಾನ

ನೌಕರರನ್ನು ಇಪಿಎಫ್‌ಒ ನೆರವಿನೊಂದಿಗೆ ಸಂಘಟಿತ ಸಾಮಾಜಿಕ ಭದ್ರತಾ ವ್ಯವಸ್ಥೆಯ ವ್ಯಾಪ್ತಿಗೆ ತರುವ ‘ನೌಕರರ ನೋಂದಣಿ ಅಭಿಯಾನ 2025’ಕ್ಕೆ ಚಾಲನೆ ನೀಡುವುದಾಗಿ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಸೋಮವಾರ ಹೇಳಿದೆ.

ಈ ಯೋಜನೆಯು ನವೆಂಬರ್ 1ರಿಂದ 2026ರ ಏಪ್ರಿಲ್ 30ರವರೆಗೆ ಜಾರಿಯಲ್ಲಿ ಇರಲಿದೆ ಎಂದು ಸಚಿವಾಲಯ ಹೇಳಿದೆ. ನೌಕರರ ಭವಿಷ್ಯ ನಿಧಿ ಕಾಯ್ದೆಯ ವ್ಯಾಪ್ತಿಯಲ್ಲಿ ಈಗಾಗಲೇ ಇರುವ, ಕಾಯ್ದೆಯ ವ್ಯಾಪ್ತಿಗೆ ಹೊಸದಾಗಿ ಬಂದಿರುವ ಉದ್ಯೋಗದಾತರು ತಮ್ಮಲ್ಲಿನ ಅರ್ಹ ಉದ್ಯೋಗಿಗಳ ಹೆಸರನ್ನು ಸ್ವಇಚ್ಛೆಯಿಂದ ನೋಂದಾಯಿಸುವುದಕ್ಕೆ ಪ್ರೋತ್ಸಾಹಿಸುವ ಉದ್ದೇಶವನ್ನು ಈ ಅಭಿಯಾನ ಹೊಂದಿದೆ.

2017ರ ಜುಲೈ 1ರಿಂದ 2025ರ ಅಕ್ಟೋಬರ್ 31ರ ನಡುವೆ ನೌಕರಿಗೆ ಸೇರಿದ, ನೌಕರಿಯಲ್ಲಿ ಮುಂದುವರಿದಿರುವ, ಆದರೆ ಇಪಿಎಫ್ ಯೋಜನೆಯ ಅಡಿ ಯಾವುದೇ ಕಾರಣದಿಂದ ನೋಂದಣಿ ಮಾಡಿಸದ ನೌಕರರ ಹೆಸರನ್ನು ಉದ್ಯೋಗದಾತರು ಈ ಅಭಿಯಾನದ ಸಂದರ್ಭದಲ್ಲಿ ನೀಡಬಹುದು.

ಈ ಅಭಿಯಾನದಲ್ಲಿ ಹೆಸರು ನೋಂದಾಯಿಸಿದರೆ, 2017ರ ಜುಲೈ 1ರಿಂದ 2025ರ ಅಕ್ಟೋಬರ್ 31ರವರೆಗಿನ ಅವಧಿಗೆ ಇಪಿಎಫ್‌ಒ ನಿಧಿಗೆ ಕೊಡಬೇಕಿರುವ ನೌಕರರ ಪಾಲನ್ನು ಮನ್ನಾ ಮಾಡಲಾಗುತ್ತದೆ. ನೌಕರರ ಸಂಬಳದಲ್ಲಿ ಪಿಎಫ್ ವಂತಿಗೆ ಮೊತ್ತ ಕಡಿತ ಆಗದಿದ್ದ ಸಂದರ್ಭದಲ್ಲಿ ಮಾತ್ರ ಈ ಮನ್ನಾ ಸೌಲಭ್ಯ ಅನ್ವಯ ಆಗುತ್ತದೆ. ಆದರೆ ಉದ್ಯೋಗದಾತರು ತಮ್ಮ ಪಾಲಿನ ಮೊತ್ತವನ್ನು ಕೊಡಬೇಕಾಗುತ್ತದೆ. ಅಭಿಯಾನದ ಅಡಿಯಲ್ಲಿ ಈ ಸೌಲಭ್ಯವನ್ನು ಪಡೆದುಕೊಳ್ಳುವ ಉದ್ಯೋಗದಾತರು ದಂಡದ ರೂಪದಲ್ಲಿ ₹100 ಪಾವತಿಸಿದರೆ ಸಾಕು.

ಗಣಿ ಕುಸಿತ: 6 ಸಾವು

ಪೇಶಾವರ (ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಕುರ್ರಂ ಜಿಲ್ಲೆಯಲ್ಲಿ ಸಂಭವಿಸಿದ ಸ್ಫೋಟದಿಂದ ಗಣಿಯೊಂದು ಕುಸಿದು, ಆರು ಕಾರ್ಮಿಕರು ಮೃತಪಟ್ಟಿದ್ದಾರೆ.

ಮಧ್ಯ ಕುರ್ರಂ ಜಿಲ್ಲೆಯ ಟೋರಾ ವಾರೈನಲ್ಲಿ ಭಾನುವಾರ ಈ ದುರ್ಘಟನೆ ಸಂಭವಿಸಿದೆ.

ಸ್ಫೋಟದ ನಂತರ ಗಣಿಯ ಭಾಗವೊಂದು ಕುಸಿದಿದೆ. ನೀರಿನ ಮಟ್ಟ ಏಕಾಏಕಿ ಏರಿಕೆಯಾಯಿತು. ಕೆಲಸ ಮಾಡುತ್ತಿದ್ದ ಕಾರ್ಮಿಕರು ಗಣಿಯೊಳಗೆ ಸಿಲುಕಿದರು ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಧನ್‌ತೇರಸ್ ವೇಳೆ 7 ಟನ್ ಚಿನ್ನ ಮಾರಾಟ ನಿರೀಕ್ಷೆ

ಬೆಂಗಳೂರು: ಕೆ.ಜಿ ಬೆಳ್ಳಿ ₹1.93 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧನ್‌ತೇರಸ್ ವೇಳೆಗೆ ಕೆ.ಜಿ ಬೆಳ್ಳಿ ದರ ₹2 ಲಕ್ಷಕ್ಕೆ ತಲುಪುವ ನಿರೀಕ್ಷೆ ಇದೆ’ ಎಂದು ಮಾರುಕಟ್ಟೆ ಪರಿಣತರು ಹೇಳಿದ್ದಾರೆ.



ಬೆಂಗಳೂರಿನ ಸಗಟು ಮಾರುಕಟ್ಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಕೆ.ಜಿ ಬೆಳ್ಳಿ ದರ ₹1.83 ಲಕ್ಷ (ಜಿಎಸ್‌ಟಿ ಹೊರತುಪಡಿಸಿ) ಇತ್ತು. ಇದೇ ವೇಳೆ 10 ಗ್ರಾಂ ಚಿನ್ನದ ದರ (24 ಕ್ಯಾರೆಟ್) ₹1.31 ಲಕ್ಷ ಆಗಿದೆ ಎಂದು ಬೆಂಗಳೂರು ಜ್ಯುವೆಲರ್ಸ್ ಅಸೋಸಿಯೇಷನ್ ಕಾರ್ಯದರ್ಶಿ ಆರ್. ಶ್ರೀನಿವಾಸ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಬೆಂಗಳೂರಿನ ರಿಟೇಲ್ ಮಾರುಕಟ್ಟೆಯಲ್ಲಿ ಕೆ.ಜಿ ಬೆಳ್ಳಿ ಧಾರಣೆ ₹1,93,600 ಆಗಿದೆ.

ಚಿನ್ನಾಭರಣಗಳ ಖರೀದಿಗೆ ಶುಭ ದಿನ ಎಂದು ಧನ್‌ತೇರಸ್ ಪರಿಗಣಿತವಾಗಿದೆ. ಕಳೆದ ಬಾರಿ ನಡೆದ ಧನ್‌ತೇರಸ್‌ನಲ್ಲಿ ರಾಜ್ಯದಲ್ಲಿ ಗರಿಷ್ಠ 10 ಟನ್‌ವರೆಗೆ ಚಿನ್ನ ಮಾರಾಟವಾಗಿತ್ತು. ಈ ಬಾರಿ ಧನ್‌ತೇರಸ್‌ಗೆ 5 ಟನ್‌ನಿಂದ 7 ಟನ್‌ವರೆಗೆ ಮಾರಾಟವಾಗುವ ನಿರೀಕ್ಷೆ ಇದೆ. ದರ ಏರಿಕೆಯಿಂದ ಈ ಬಾರಿ ಮಾರಾಟ ಪ್ರಮಾಣ ಕಳೆದ ವರ್ಷಕ್ಕೆ ಹೋಲಿಸಿದರೆ ಕಡಿಮೆ ಆಗಲಿದೆ ಎಂದರು.

ಗೃಹ ಪ್ರವೇಶ, ಮದುವೆ ಸೇರಿ ವಿವಿಧ ಶುಭ ಕಾರ್ಯಗಳಿಗೆ ಚಿನ್ನ ಮತ್ತು ಬೆಳ್ಳಿ ಖರೀದಿ ಮಾಡುವವರು ತಮ್ಮ ಬಜೆಟ್ ನೋಡಿಕೊಂಡು ಖರೀದಿ ಮಾಡುತ್ತಿದ್ದಾರೆ. ಹೀಗಾಗಿ ಕಳೆದ ಕೆಲ ತಿಂಗಳಿನಿಂದ ಆಭರಣ ಮಾರಾಟವು ಶೇ 50ರಷ್ಟು ಕಡಿಮೆ ಆಗಿದೆ ಎಂದು ಹೇಳಿದರು.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನೀತಿಗಳಿಂದ ಜಾಗತಿಕ ಆರ್ಥಿಕತೆಯಲ್ಲಿ ಏರಿಳಿತವಾಗುತ್ತಿದೆ. ಇದರಿಂದ ಹೂಡಿಕೆದಾರರು ಡಾಲರ್ ಬದಲು ಚಿನ್ನದ ಖರೀದಿಗೆ ಮುಂದಾಗಿದ್ದಾರೆ. ಜೊತೆಗೆ ಕೇಂದ್ರೀಯ ಬ್ಯಾಂಕ್‌ಗಳಿಂದ ಹಳದಿ ಲೋಹದ ಖರೀದಿ ಹೆಚ್ಚಳವಾಗಿದೆ. ಇದೇ ಚಿನ್ನದ ದರ ಏರಿಕೆಗೆ ಕಾರಣವಾಗಿದೆ ಎಂದು ಹೇಳಿದರು.

ಸೌರಫಲಕಗಳು ಮತ್ತು ವಿದ್ಯುತ್ ಚಾಲಿತ ವಾಹನಗಳಲ್ಲಿ ಬೆಳ್ಳಿ ಬಳಸಲಾಗುತ್ತಿದೆ. ಇದು ಬೆಳ್ಳಿ ದರ ಹೆಚ್ಚಳವಾಗಲು ಪ್ರಮುಖ ಕಾರಣವಾಗಿದೆ. ಜೊತೆಗೆ ಜಾಗತಿಕ ರಾಜಕೀಯ ವಿದ್ಯಮಾನಗಳು, ಇಸ್ರೇಲ್, ಉಕ್ರೇನ್ ಯುದ್ಧಗಳು ದರ ಏರಿಕೆ ಮೇಲೆ ಪರಿಣಾಮ ಬೀರಿವೆ ಎಂದರು.

ಬೆಳ್ಳಿ ಕೆ.ಜಿಗೆ ₹7,500 ಹೆಚ್ಚಳ

ನವದೆಹಲಿ (ಪಿಟಿಐ): ನವದೆಹಲಿಯ ಚಿನಿವಾರ ಪೇಟೆಯಲ್ಲಿ ಬೆಳ್ಳಿ ಧಾರಣೆ ಕೆ.ಜಿಗೆ ₹7,500 ಹೆಚ್ಚಳವಾಗಿ, ₹1.79 ಲಕ್ಷದಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ ದರವು (ಶೇ 99.9ರಷ್ಟು ಪರಿಶುದ್ಧತೆ) ₹1,950 ಹೆಚ್ಚಳವಾಗಿ, ₹1,27,950 ಆಗಿದೆ. ಆಭರಣ ಚಿನ್ನದ ಬೆಲೆಯು (ಶೇ 99.5ರಷ್ಟು ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಹೆಚ್ಚಳವಾಗಿ, ₹1,27,350ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

‘ಅಮೆರಿಕ ಮತ್ತು ಚೀನಾ ನಡುವೆ ವ್ಯಾಪಾರ ಬಿಕ್ಕಟ್ಟು ಸೃಷ್ಟಿಯಾಗಿದೆ. ಇದರಿಂದ ಹೂಡಿಕೆದಾರರು ಚಿನ್ನದಲ್ಲಿ ಹೂಡಿಕೆ ಮಾಡಲು ಮುಂದಾಗಿದ್ದರಿಂದ ಹಳದಿ ಲೋಹದ ದರ ಏರಿಕೆಯಾಗಿದೆ’ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ವಿಶ್ಲೇಷಕ ಜತೀನ್ ತ್ರಿವೇದಿ ಹೇಳಿದ್ದಾರೆ.

ಮುಂಬರಲಿರುವ ಹಬ್ಬಗಳ ಅಂಗವಾಗಿ ಹೆಚ್ಚಿದ ಬೇಡಿಕೆ ಮತ್ತು ಪೂರೈಕೆಯಲ್ಲಿನ ಕೊರತೆಯು ಸಹ ಬೆಲೆ ಏರಿಕೆಗೆ ಕಾರಣವಾಗಿದೆ ಎಂದು ಹೇಳಿದ್ದಾರೆ.

‘ಖೈಬರ್ ಪಖ್ತುಂಖ್ವಾ ನೂತನ ಮುಖ್ಯಮಂತ್ರಿ ಆಯ್ಕೆ’

ಪೇಶಾವರ್ (ಪಿಟಿಐ): ಪಾಕಿಸ್ತಾನದ ತೆಹ್ರೀಕ್–ಇ–ಇನ್ಸಾಫ್‌ನ ಅಭ್ಯರ್ಥಿ ಸುಹೈಲ್ ಅಫ್ರಿದಿ ಅವರನ್ನು ಖೈಬರ್ ಪಖ್ತುಂಖ್ವಾದ ನೂತನ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಲಾಯಿತು.



ಸುಹೈಲ್ ಅಫ್ರಿದಿ

ವಿರೋಧ ಪಕ್ಷಗಳ ಸಭಾತ್ಯಾಗದ ಹೊರತಾಗಿಯೂ ಸ್ಪೀಕರ್ ಬಾಬರ್ ಸಲೀಂ ಅವರು ಮತದಾನ ಪ್ರಕ್ರಿಯೆ ನಡೆಸಿದರು.

ಈ ವೇಳೆ ಅಫ್ರಿದಿ ಅವರಿಗೆ 145ರ ಮತಗಳ ಪೈಕಿ 90 ಮತಗಳು ಸಿಕ್ಕವು. ಪ್ರತಿಸ್ಪರ್ಧಿ ಜಮಾಅತ್ ಉಲೇಮಾ–ಇ–ಇಸ್ಲಾಂ, ಪಾಕಿಸ್ತಾನ ಮುಸ್ಲಿಂ ಲೀಗ್ ನವಾಜ್ ಪಕ್ಷ, ಪಾಕಿಸ್ತಾನ ಪೀಪಲ್ಸ್ ಪಕ್ಷದ ಅಭ್ಯರ್ಥಿಗಳು ಯಾವುದೇ ಮತಗಳನ್ನು ಪಡೆಯಲು ವಿಫಲರಾದರು.

ಚಿಲ್ಲರೆ ಹಣದುಬ್ಬರ ಇಳಿಕೆ



ನವದೆಹಲಿ (ಪಿಟಿಐ): ಸೆಪ್ಟೆಂಬರ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಎಂಟು ವರ್ಷಗಳ ಕನಿಷ್ಠ ಮಟ್ಟವಾದ ಶೇಕಡ 1.54ಕ್ಕೆ ಇಳಿಕೆ ಕಂಡಿದೆ. ತರಕಾರಿಗಳು, ಹಣ್ಣು ಮತ್ತು ದ್ವಿದಳ ಧಾನ್ಯಗಳ ಬೆಲೆಯಲ್ಲಿನ ಇಳಿಕೆಯು ಹಣದುಬ್ಬರ ಪ್ರಮಾಣ ಕಡಿಮೆ ಆಗಲು ಕಾರಣವಾಗಿದೆ.

ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರ ಪ್ರಮಾಣವು ಆಗಸ್ಟ್‌ನಲ್ಲಿ ಶೇ 2.07ರಷ್ಟು ಇತ್ತು. ಇದು ಕಳೆದ ಸೆಪ್ಟೆಂಬರ್‌ನಲ್ಲಿ ಶೇ 5.49ರಷ್ಟಿತ್ತು. 2017ರ ಜೂನ್‌ನಲ್ಲಿ ಹಣದುಬ್ಬರ ಪ್ರಮಾಣ ಶೇ 1.47 ರಷ್ಟಾಗಿತ್ತು. ಅದಾದ ನಂತರದ ಕನಿಷ್ಠ ಮಟ್ಟವು ಈ ಸೆಪ್ಟೆಂಬರ್‌ನಲ್ಲಿ ದಾಖಲಾಗಿದೆ.

ಈ ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 2ಕ್ಕಿಂತ ಕೆಳಗಿನ ಮಟ್ಟಕ್ಕೆ ಬಂದಿರುವುದು ಇದು ಎರಡನೆಯ ಬಾರಿ. ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇ 2ರಿಂದ ಶೇ 6ರ ಒಳಗೆ ನಿಯಂತ್ರಿಸುವ ಹೊಣೆಯು ಆರ್‌ಬಿಐ ಮೇಲಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಹಣದುಬ್ಬರ ಪ್ರಮಾಣ ಶೇ 1.07ರಷ್ಟು, ನಗರ ಪ್ರದೇಶಗಳಲ್ಲಿ ಇದು ಶೇ 2.04ರಷ್ಟು ಆಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ನೀಡಿರುವ ಅಂಕಿ–ಅಂಶಗಳು ಹೇಳುತ್ತಿವೆ.

ಕೇರಳದಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಹಣದುಬ್ಬರ (ಶೇ 9.05ರಷ್ಟು) ದಾಖಲಾಗಿದೆ. ಉತ್ತರ ಪ್ರದೇಶದಲ್ಲಿ ಶೇ (–)0.61ರಷ್ಟು ಹಣದುಬ್ಬರ ದಾಖಲಾಗಿದ್ದು, ಇದು ಅತ್ಯಂತ ಕನಿಷ್ಠ ಪ್ರಮಾಣ.

ಡಿಸೆಂಬರ್‌ನಲ್ಲಿ ಹಣಕಾಸು ನೀತಿ ಸಮಿತಿಯ ಸಭೆಯು ನಡೆಯಲಿದ್ದು, ಅಲ್ಲಿ ರೆಪೊ ದರವನ್ನು ಶೇ 0.25ರಷ್ಟು ಕಡಿಮೆ ಮಾಡುವ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಮೂವರಿಗೆ ಅರ್ಥಶಾಸ್ತ್ರದ ನೊಬೆಲ್

ಸ್ಟಾಕ್‌ಹೋಮ್ (ಎಪಿ): ಅಮೆರಿಕದ ನಾರ್ತ್‌ವೆಸ್ಟರ್ನ್ ವಿಶ್ವವಿದ್ಯಾಲಯದ ಜೋಯೆಲ್ ಮೊಕಿರ್, ಕಾಲೇಜ್ ಡಿ ಫ್ರಾನ್ಸ್ ಮತ್ತು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಫಿಲಿಪ್ ಅಘಿಯಾನ್ ಮತ್ತು ಅಮೆರಿಕದ ಬ್ರೌನ್ ವಿಶ್ವವಿದ್ಯಾಲಯದ ಪೀಟರ್ ಹೊವಿಟ್ ಅವರು ‘ನೊಬೆಲ್ ಅರ್ಥಶಾಸ್ತ್ರ ಪ್ರಶಸ್ತಿ’ಗೆ ಆಯ್ಕೆಯಾಗಿದ್ದಾರೆ.

‘ನಾವೀನ್ಯದೊಂದಿಗೆ ಆರ್ಥಿಕ ಬೆಳವಣಿಗೆ’ಗೆ ನೀಡಿದ ಕೊಡುಗೆಯನ್ನು ಪರಿಗಣಿಸಿ ನೊಬೆಲ್ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ ಎಂದು ನೊಬೆಲ್ ಸಮಿತಿಯು ಸೋಮವಾರ ತಿಳಿಸಿದೆ.

ಈವರೆಗೆ 96 ಮಂದಿಗೆ 56 ಬಾರಿ ಅರ್ಥಶಾಸ್ತ್ರದ ನೊಬೆಲ್ ನೀಡಲಾಗಿದೆ. ಈ ಪೈಕಿ ಮೂವರು ಮಾತ್ರ ಮಹಿಳೆಯರು. ಈ ಪ್ರಶಸ್ತಿಯನ್ನು ಡಿಸೆಂಬರ್ 10ರಂದು ಪ್ರದಾನ ಮಾಡಲಾಗುತ್ತದೆ.

ವೈದ್ಯವಿಜ್ಞಾನ ಮತ್ತು ಭೌತವಿಜ್ಞಾನ, ರಾಸಾಯನ ವಿಜ್ಞಾನ, ಸಾಹಿತ್ಯ ಮತ್ತು ಶಾಂತಿ ಕ್ಷೇತ್ರದ ನೊಬೆಲ್ ಪುರಸ್ಕಾರವನ್ನು ಈಗಾಗಲೇ ಘೋಷಿಸಲಾಗಿದೆ.

ಅಡಿಕೆ ಧಾರಣೆ

ಕಾರ್ಕಳ	
ಹೊಸತು	26000-36000
ಹಳತು	32500-50000
ಕುಮಟಾ	
ಚಾಲಿ	38969-46299
ಚಿಪ್ಪು	27169-34099
ಕೋಕ	8089-28989
ಫ್ಯಾಕ್ಟರಿ	6869-26899
ಹಳೆಚಾಲಿ	41089-45598
ಪುತ್ತೂರು	
ಕೋಕ	15000-28500
ಹೊಸತು	26000-35000
ಸಾಗರ	
ಬಿಳಿಗೋಟು	20199-34599
ಚಾಲಿ	31666-42519
ಕೋಕ	18989-35599
ಕೆಂಪುಗೋಟು	21899-43269
ರಾಶಿ	38399-67199
ಸಿಪ್ಪೆಗೋಟು	10109-23130
ಶಿವಮೊಗ್ಗ	
ಬೆಟ್ಟೆ	61019-71269
ಗೊರಬಲು	19005-43509
ಹೊಸತು	60009-66009
ರಾಶಿ	53099-65636
ಸರಕು	54669-93596
ಸಿದ್ದಾಪುರ	
ಬಿಳಿಗೋಟು	25199-33809
ಚಾಲಿ	37319-45199
ಕೋಕ	20619-30319
ಕೆಂಪುಗೋಟು	26899-32889
ರಾಶಿ	46899-61099
ತಟ್ಟಿಬೆಟ್ಟೆ	31611-45599
ಶಿರಸಿ	
ಬೆಟ್ಟೆ	43699-48518
ಬಿಳಿಗೋಟು	27709-37599
ಚಾಲಿ	42599-47299
ಕೆಂಪುಗೋಟು	21609-35999
ರಾಶಿ	53299-60199
ಯಲ್ಲಾಪುರ	
ಆಪಿ	62009-64168
ಬಿಳಿಗೋಟು	23511-36659
ಚಾಲಿ	36399-46639
ಕೋಕ	12786-27989
ಕೆಂಪುಗೋಟು	28609-34099
ರಾಶಿ	50289-61911
ತಟ್ಟಿಬೆಟ್ಟೆ	35110-50800

ಸುದ್ದಿ 2 ನಿಮಿಷ

ವ್ಯಾಪಾರ ಮಾತುಕತೆ ಅಮೆರಿಕಕ್ಕೆ ಭಾರತದ ತಂಡ

ನವದೆಹಲಿ (ಪಿಟಿಐ): ವ್ಯಾಪಾರ ಒಪ್ಪಂದ ಕುರಿತ ಮಾತುಕತೆಗಾಗಿ ಭಾರತದ ಹಿರಿಯ ಅಧಿಕಾರಿಗಳ ತಂಡವು ಅಮೆರಿಕಕ್ಕೆ ಇದೇ ವಾರ ಭೇಟಿ ನೀಡಲಿದೆ.

ಉಭಯ ದೇಶಗಳ ನಾಯಕರು ಪ್ರಸ್ತಾವಿತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಕುರಿತು ಮಾತುಕತೆ ನಡೆಸುವಂತೆ ಅಧಿಕಾರಿಗಳಿಗೆ ಈ ವರ್ಷದ ಫೆಬ್ರುವರಿಯಲ್ಲಿ ನಿರ್ದೇಶನ ನೀಡಿದ್ದರು.

ಅಕ್ಟೋಬರ್–ನವೆಂಬರ್ ವೇಳೆಗೆ ಒಪ್ಪಂದದ ಮೊದಲ ಹಂತದ ಮಾತುಕತೆ ಮುಕ್ತಾಯಗೊಳಿಸುವ ಆಲೋಚನೆ ಅಧಿಕಾರಿಗಳಿಗೆ ಇದೆ.

ಇದುವರೆಗೆ ಐದು ಸುತ್ತಿನ ಮಾತುಕತೆಗಳು ನಡೆದಿವೆ. ಈ ವಾರದಲ್ಲಿ ಭಾರತದ ತಂಡವು ಅಮೆರಿಕಕ್ಕೆ ಭೇಟಿ ನೀಡಲಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ನೇತೃತ್ವದ ಅಧಿಕಾರಿಗಳ ನಿಯೋಗ ವ್ಯಾಪಾರ ಒಪ್ಪಂದದ ಮಾತುಕತೆಗಾಗಿ ನ್ಯೂಯಾರ್ಕ್‌ಗೆ ಕಳೆದ ತಿಂಗಳು ಭೇಟಿ ನೀಡಿತ್ತು.

ಈಗ ಭಾರತದಿಂದ ಆಮದಾಗುವ ಸರಕುಗಳ ಮೇಲೆ ಅಮೆರಿಕವು ಶೇ 50ರಷ್ಟು ಸುಂಕ ವಿಧಿಸುತ್ತಿದೆ. ಇಂಥ ಸಂದರ್ಭದಲ್ಲಿ, ಈ ಮಾತುಕತೆ ಮುಖ್ಯವಾಗಿದೆ ಎನ್ನಲಾಗಿದೆ.



ಈಗ ಭಾರತ ಮತ್ತು ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಮೌಲ್ಯ ₹16.93 ಲಕ್ಷ ಕೋಟಿಯಾಗಿದೆ. 2030ರ ವೇಳೆಗೆ ಇದನ್ನು ₹44.33 ಲಕ್ಷ ಕೋಟಿಗೆ ಹೆಚ್ಚಿಸುವ ಗುರಿಯನ್ನು ಒಪ್ಪಂದವು ಹೊಂದಿದೆ ಎಂದು ತಿಳಿಸಿದ್ದಾರೆ.

‘ಅಫ್ಗನ್–ಪಾಕ್ ಸಂಘರ್ಷ: ಮಾತುಕತೆಯಿಂದ ಬಗೆಹರಿಸಿ’

ಬೀಜಿಂಗ್ (ಪಿಟಿಐ): ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನ ಸಂಯಮದಿಂದ ವರ್ತಿಸಿ, ಮಾತುಕತೆಯ ಮೂಲಕ ವಿವಾದಗಳನ್ನು ಬಗೆಹರಿಸಿಕೊಳ್ಳುವಂತೆ ಉಭಯ ದೇಶಗಳಿಗೆ ಚೀನಾ ಸೋಮವಾರ ಒತ್ತಾಯಿಸಿದೆ. ಎರಡೂ ದೇಶಗಳ ನಡುವಿನ ಗಡಿಗಳಲ್ಲಿ ನಡೆದ ತೀವ್ರ ಘರ್ಷಣೆಯಲ್ಲಿ ಎರಡೂ ಕಡೆಯ ಡಜನ್‌ಗಟ್ಟಲೆ ಸೈನಿಕರು ಮೃತಪಟ್ಟಿದ್ದಾರೆ.

ಇತ್ತೀಚೆಗಿನ ಘರ್ಷಣೆಗಳ ನಂತರ ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನ ನಡುವಿನ ಸಂಬಂಧಗಳು ಹದಗೆಟ್ಟಿರುವ ಬಗ್ಗೆ ನಮಗೆ ತೀವ್ರ ಕಳವಳವಿದೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಲಿನ್ ಜಿಯಾನ್ ಮಾಧ್ಯಮಗೋಷ್ಠಿಯಲ್ಲಿ ಹೇಳಿದ್ದಾರೆ.

‘ಎರಡೂ ದೇಶಗಳು ಶಾಂತವಾಗಿ ಮತ್ತು ಸಂಯಮದಿಂದ ವರ್ತಿಸಿ, ವಿವಾದಗಳನ್ನು ಮಾತುಕತೆಗಳು ಮತ್ತು ಸಂವಾದದಿಂದ ಬಗೆಹರಿಸಿಕೊಂಡು, ಘರ್ಷಣೆಯನ್ನು ತಪ್ಪಿಸಿ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆ ಕಾಪಾಡಿಕೊಳ್ಳಲಿ ಎಂದು ಚೀನಾ ಪ್ರಾಮಾಣಿಕವಾಗಿ ಬಯಸುತ್ತಿದೆ’ ಎಂದು ಅವರು ಹೇಳಿದ್ದಾರೆ.

ಪಾಕಿಸ್ತಾನ–ಅಫ್ಗಾನಿಸ್ತಾನ ಗಡಿಯಲ್ಲಿ ರಾತ್ರಿಯಿಡೀ ನಡೆದ ತೀವ್ರ ಘರ್ಷಣೆಯಲ್ಲಿ ಕನಿಷ್ಠ 23 ಸೈನಿಕರು ಮತ್ತು 200ಕ್ಕೂ ಹೆಚ್ಚು ಭಯೋತ್ಪಾದಕರು ಸಾವನ್ನಪ್ಪಿದ್ದಾರೆ ಎಂದು ಪಾಕಿಸ್ತಾನ ಸೇನೆ ಭಾನುವಾರ ತಿಳಿಸಿದೆ. ದಾಳಿಯಲ್ಲಿ 58 ಪಾಕಿಸ್ತಾನಿ ಸೈನಿಕರು ಮೃತಪಟ್ಟಿದ್ದು, ಸುಮಾರು 30 ಜನರು ಗಾಯಗೊಂಡಿದ್ದಾರೆ ಎಂದು ಅಫ್ಗನ್‌ನ ತಾಲಿಬಾನ್ ಸರ್ಕಾರ ಹೇಳಿದೆ.

ಮುಂಬೈ ಧಾರಣೆ (ಶೇಂಗಾ)

13-10-2025	
ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1410 (1390)
ಒಂದು ವಾರದ ಡೆಲಿವರಿ	1405 (1395)
ಪಾಮ್ ವಾರದ ಡೆಲಿವರಿ	1288 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1420 (1400)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,23,800 (1,22,450)
ಬೆಳ್ಳಿ ಕೆ.ಜಿಗೆ	1,75,600 (1,65,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ

(ಆವರಣದಲ್ಲಿ ಕಳೆದ ವಹಿವಾಟಿನ ದರ)

(10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1400 (1390)
ಸೋಯಾ (ರಿಫೈನ್ಡ್)	₹1285 (1280)
ಸೂರ್ಯಕಾಂತಿ (ರಿಫೈನ್ಡ್)	₹1475 (1450)
ಪಾಮೋಲಿನ್	₹1290 (1290)

8 ಭಾರತೀಯರ ಸೆರೆ

ಒಟ್ಟಾವ (ಪಿಟಿಐ): ಕ್ರೆಡಿಟ್ ಕಾರ್ಡ್‌ಗಳು, ಚೆಕ್‌ಗಳು ಇರುವ ಅಂಚೆ ಕಳ್ಳತನಕ್ಕೆ ಸಂಬಂಧಿಸಿದಂತೆ ಕೆನಡಾ ಪೊಲೀಸರು ಭಾರತ ಮೂಲದ 8 ವ್ಯಕ್ತಿಗಳನ್ನು ಬಂಧಿಸಿದ್ದಾರೆ. ಅವರ ಮೇಲೆ 300ಕ್ಕೂ ಹೆಚ್ಚು ಆರೋಪಗಳನ್ನು ಪೊಲೀಸರು ಹೊರಿಸಿದ್ದು, ಆರೋಪಿಗಳಲ್ಲಿ ಕೆಲವರು ಗಡಿಪಾರಾಗುವ ಅಪಾಯವಿದೆ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ಇಲ್ಲಿನ ಪೀಲ್‌ನ ಪೊಲೀಸರು ಶಂಕಿತರಿಂದ ಕ್ರೆಡಿಟ್ ಕಾರ್ಡ್‌ಗಳು ಮತ್ತು ಚೆಕ್‌ಗಳ ರೀತಿಯ 4 ಲಕ್ಷ ಕೆನಡಿಯನ್ ಡಾಲರ್ (₹2.53 ಕೋಟಿಗೂ ಹೆಚ್ಚು) ಮೌಲ್ಯದ 450ಕ್ಕೂ ಹೆಚ್ಚು ಅಂಚೆಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ವರದಿಯಾಗಿದೆ. ಪೊಲೀಸರು ಶಂಕಿತರನ್ನು ಸುಮನ್‌ಪ್ರೀತ್ ಸಿಂಗ್, ಗುರುದೀಪ್ ಚಟ್ಟಾ, ಜಶನ್‌ದೀಪ್ ಜಟ್ಟಾನಾ, ಹರ್ಮನ್ ಸಿಂಗ್, ಜಸನ್‌ಪ್ರೀತ್ ಸಿಂಗ್, ಮನ್‌ರೂಪ್ ಸಿಂಗ್, ರಾಜ್‌ಬೀರ್ ಸಿಂಗ್, ಉಪೀಂದರ್‌ಜಿತ್ ಸಿಂಗ್ ಎಂದು ಗುರುತಿಸಿದ್ದಾರೆ.

20 ಒತ್ತೆಯಾಳು ಬಿಡುಗಡೆ

ಒಂದನೇ ಪುಟದಿಂದ...

ಮೊದಲ ಹಂತದ ಒತ್ತೆಯಾಳುಗಳ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಂಡಿತು ಎಂಬ ಸುದ್ದಿ ಇಸ್ರೇಲ್ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದ್ದಂತೆಯೇ ‘ಹೋಸ್ಟೇಜಸ್ ಸ್ಕ್ವೇರ್’ನಲ್ಲಿ ಸೇರಿದ್ದ ಕುಟುಂಬಸ್ಥರು ಆನಂದಬಾಷ್ಪ ಸುರಿಸಿದರು. ಒತ್ತೆಯಾಳುಗಳು ತಮ್ಮ ಕುಟುಂಬ ಮತ್ತು ಮನೆಯನ್ನು ಸೇರುವ ಫೋಟೊವನ್ನು ಇಸ್ರೇಲ್ ಬಿಡುಗಡೆ ಮಾಡಿದೆ.

ಪ್ಯಾಲೆಸ್ಟೀನ್ ಕೈದಿಗಳ ಬಿಡುಗಡೆ: ಇನ್ನೊಂದೆಡೆ, ಇಸ್ರೇಲ್ ಜೈಲುಗಳಲ್ಲಿದ್ದ ಪ್ಯಾಲೆಸ್ಟೀನ್ ಕೈದಿಗಳನ್ನು ಹೊತ್ತ ಬಸ್‌ಗಳು ವೆಸ್ಟ್‌ಬ್ಯಾಂಕ್‌ನ ರಾಮಲ್ಲಾಹ್ ಮತ್ತು ಗಾಜಾಪಟ್ಟಿಗೆ ಬಂದಿವೆ ಎಂದು ಹಮಾಸ್‌ನ ಕೈದಿಗಳ ಕಚೇರಿಯು ತಿಳಿಸಿದೆ.

> ಶಾಂತಿ ಸ್ಥಾಪನೆ ಒಪ್ಪಂದಕ್ಕೆ ಬದ್ಧನಾಗಿದ್ದೇನೆ. ಎರಡು ವರ್ಷಗಳ ಯುದ್ಧವು ಇಂದು ಅಂತ್ಯಕಂಡಿದೆ
> **ಬೆಂಜಮಿನ್ ನೆತನ್ಯಾಹು,** ಇಸ್ರೇಲ್ ಪ್ರಧಾನಿ

ಹಮಾಸ್ ತನ್ನ ಬಳಿ ಒತ್ತೆಯಾಳಾಗಿ ಇರಿಸಿಕೊಂಡಿದ್ದ ಜನರನ್ನು ಬಿಡುಗಡೆ ಮಾಡಿದ ನಂತರ ಇಸ್ರೇಲ್ 1,900ಕ್ಕೂ ಹೆಚ್ಚು ಕೈದಿಗಳನ್ನು ಬಿಡುಗಡೆ ಮಾಡಿದೆ.

ಉಕ್ರೇನ್‌ಗೆ ಆಕ್ರಮಣಕಾರಿ ಕ್ಷಿಪಣಿ ಒದಗಿಸುವುದಾಗಿ ರಷ್ಯಾಕ್ಕೆ ಎಚ್ಚರಿಕೆ ನೀಡಿದ ಟ್ರಂಪ್

‘ಭಾರತ–ಪಾಕ್ ಸೇರಿ 8 ಯುದ್ಧ ತಡೆದಿರುವೆ’

ನ್ಯೂಯಾರ್ಕ್ (ಪಿಟಿಐ): ‘ಭಾರತ ಹಾಗೂ ಪಾಕಿಸ್ತಾನ ಸೇರಿದಂತೆ 8 ಯುದ್ಧಗಳನ್ನು ತಡೆದಿದ್ದೇನೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪುನರುಚ್ಚರಿಸಿದ್ದಾರೆ.

‘ನೊಬೆಲ್ ಶಾಂತಿ ಪ್ರಶಸ್ತಿ ಪಡೆಯಲು ಈ ಕೆಲಸ ಮಾಡಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

ಏರ್‌ಫೋರ್ಸ್ ಒನ್ ವಿಮಾನದಲ್ಲಿ ಪತ್ರಕರ್ತರ ಜೊತೆ ಭಾನುವಾರ ಮಾತನಾಡಿದ ಅವರು, ‘ಇದುವರೆಗೂ ಏಳು ಸಂಘರ್ಷಗಳನ್ನು ಕೊನೆಗೊಳಿಸಿದ್ದೇನೆ. ಇಸ್ರೇಲ್–ಗಾಜಾ ಸಂಘರ್ಷವನ್ನು ಕೊನೆಗೊಳಿಸುತ್ತಿದ್ದು, 8ನೇ ಯುದ್ಧ ಕೊನೆಗೊಳಿಸಿದಂತಾಗಿದೆ. ಪಾಕಿಸ್ತಾನ– ಅಫ್ಗಾನಿಸ್ತಾನ ಸಂಘರ್ಷವನ್ನು ಶಮನಗೊಳಿಸಲಿದ್ದೇನೆ’ ಎಂದು ತಿಳಿಸಿದ್ದಾರೆ.

‘ಇದುವರೆಗೂ ನಾನು ಎಂಟು ಯುದ್ಧಗಳನ್ನು ನಿಲ್ಲಿಸಿದ್ದೇನೆ. ಪಾಕಿಸ್ತಾನ–ಅಫ್ಗಾನಿಸ್ತಾನದಲ್ಲಿ ಯುದ್ಧ ನಡೆಯುತ್ತಿರುವ ಕುರಿತು ತಿಳಿದಿದ್ದೇನೆ. ನಾನು ಸ್ವಲ್ಪ ಕಾದು, ನಂತರ ಬರುತ್ತೇನೆ. ನಾನು ಯುದ್ಧ ತಡೆಯುವುದರಲ್ಲಿ, ಶಾಂತಿ ಸ್ಥಾಪನೆ ಮಾಡುವಲ್ಲಿ ಪರಿಣತಿ ಹೊಂದಿದ್ದೇನೆ’ ಎಂದು ಹೇಳಿದ್ದಾರೆ.

ಉಕ್ರೇನ್‌ಗೆ ಆಕ್ರಮಣಕಾರಿ ಕ್ಷಿಪಣಿ ನೀಡುವೆ–ರಷ್ಯಾಗೆ ಎಚ್ಚರಿಕೆ: ‘ಯುದ್ಧವನ್ನು ನಿಲ್ಲಿಸದಿದ್ದರೆ ಉಕ್ರೇನ್‌ಗೆ ದೂರಗಾಮಿ ಸಾಮರ್ಥ್ಯವಿರುವ ಟೊಮಹಾಕ್ ಕ್ಷಿಪಣಿಯನ್ನು ಕಳುಹಿಸಲಿದ್ದೇನೆ’ ಎಂದು ಟ್ರಂಪ್ ರಷ್ಯಾಕ್ಕೆ ಎಚ್ಚರಿಕೆ ನೀಡಿದ್ದಾರೆ.

‘ಯುದ್ಧವನ್ನು ಇತ್ಯರ್ಥ ಮಾಡದಿದ್ದರೆ, ಅವರಿಗೆ ನಾನು ಟೊಮಹಾಕ್ ಕಳುಹಿಸಲಿದ್ದೇನೆ. ಟೊಮಹಾಕ್ ಅತ್ಯಂತ ಅಕ್ರಮಣಕಾರಿ ಆಯುಧವಾಗಿದ್ದು, ಪ್ರಾಮಾಣಿಕವಾಗಿ ಹೇಳುವುದಿದ್ದರೆ, ರಷ್ಯಾ ಅದರ ಬಗ್ಗೆ ಎಚ್ಚರಿಕೆಯಿಂದಿರಲಿ’ ಎಂದು ಹೇಳಿದ್ದಾರೆ. ಉಕ್ರೇನ್ ಅಧ್ಯಕ್ಷರೊಂದಿಗೆ ದೂರವಾಣಿ ಮೂಲಕ ಮಾತನಾಡಿದ ನಂತರ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ.

ಗಾಜಾ ಒಪ್ಪಂದದ ಘೋಷಣೆಗೆ ಸಹಿ

ಶರ್ಮ್‌ಅಲ್ ಶೇಖ್ (ಎಎಫ್‌ಪಿ): ಎರಡು ವರ್ಷಗಳ ಯುದ್ಧವನ್ನು ಕೊನೆಗೊಳಿಸುವ ಗುರಿ ಹೊಂದಿರುವ ಗಾಜಾ ಒಪ್ಪಂದದ ಘೋಷಣೆಗೆ ಖಾತರಿದಾರರಾಗಿ ಅಮೆರಿಕ, ಈಜಿಪ್ಟ್, ಕತಾರ್ ಹಾಗೂ ಟರ್ಕಿ ದೇಶಗಳು ಸೋಮವಾರ ಸಹಿ ಹಾಕಿದವು.

ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸುಧಾರಿಸುವ ಭಾಗವಾಗಿ ಗಾಜಾ ಭವಿಷ್ಯ ಕುರಿತು ನಡೆಯುತ್ತಿರುವ ಜಾಗತಿಕ ಶೃಂಗ ಸಭೆಯಲ್ಲಿ ಈ ರಾಷ್ಟ್ರಗಳು ಸಹಿ ಹಾಕಿದವು.

‘ಈ ಘೋಷಣಾ ಪತ್ರವು ನಿಯಮ, ನಿಬಂಧನೆಗಳು ಹಾಗೂ ಇತರ ಹಲವು ವಿಷಯಗಳನ್ನು ವಿವರಿಸುತ್ತದೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸಹಿ ಹಾಕುವ ಮುನ್ನ ಹೇಳಿದರು.

ಭಾರತ ಶ್ರೇಷ್ಠ ರಾಷ್ಟ್ರ : ‘ಭಾರತವು ಶ್ರೇಷ್ಠ ದೇಶವಾಗಿದ್ದು, ನನ್ನ ಉತ್ತಮ ಸ್ನೇಹಿತ ಅಗ್ರಸ್ಥಾನದಲ್ಲಿದ್ದಾರೆ’ ಎಂದು ಡೊನಾಲ್ಡ್ ಟ್ರಂಪ್ ಅವರು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರು ಉಲ್ಲೇಖಿಸದೆಯೇ ಶ್ಲಾಘಿಸಿದರು.

‘ಭಾರತ ಹಾಗೂ ಪಾಕಿಸ್ತಾನವು ಒಟ್ಟಿಗೆ ಸಾಗುತ್ತವೆ ಎಂದು ಭಾವಿಸುವೆ’ ಎಂದು ಹೇಳಿದರು.

ಇಸ್ರೇಲ್‌ನಲ್ಲಿ ಟ್ರಂಪ್‌ಗೆ ಭವ್ಯ ಸ್ವಾಗತ

ಟೆಲ್ ಅವೀವ್ (ಎಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇಸ್ರೇಲ್‌ಗೆ ಸೋಮವಾರ ಭೇಟಿ ನೀಡಿದರು. ಅಮೆರಿಕದ ಮಧ್ಯಸ್ಥಿಕೆಯಲ್ಲಿ ನಡೆದ ಇಸ್ರೇಲ್ ಮತ್ತು ಹಮಾಸ್ ನಡುವಣ ಕದನ ವಿರಾಮ ಮತ್ತು ಒತ್ತೆಯಾಳುಗಳ ಬಿಡುಗಡೆ ಒಪ್ಪಂದದ ಫಲಿತಾಂಶವನ್ನು ಕಂಡು ಅವರು ಸಂಭ್ರಮಿಸಿದರು.

ಇಸ್ರೇಲ್ ಅಧ್ಯಕ್ಷ ಐಸಾಕ್ ಹರ್ಜಾಗ್ ಮತ್ತು ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಟ್ರಂಪ್ ಅವರಿಗೆ ಭವ್ಯ ಸ್ವಾಗತ ಕೋರಿದರು. ಟೆಲ್ ಅವೀವ್‌ನಲ್ಲಿರುವ ಹೋಸ್ಟೇಜಸ್ ಸ್ಕ್ವೇರ್‌ನಲ್ಲಿ (ಒತ್ತೆಯಾಳುಗಳ ಕುಟುಂಬಸ್ಥರು ಪ್ರತಿಭಟಿಸುತ್ತಿದ್ದ ಸ್ಥಳ) ಸೇರಿದ್ದ ಜನರು ಟ್ರಂಪ್ ಅವರನ್ನು ಕಂಡು ಘೋಷಣೆಗಳನ್ನು ಕೂಗಿದರು.

ಶಾಂತಿಸ್ಥಾಪನೆಗೆ ಕಾರ್ಯೋನ್ಮುಖರಾಗಿ: ‘ಯುದ್ಧಭೂಮಿಯಲ್ಲಿ ಸಾಧಿಸುವುದಕ್ಕೆ ಏನೂ ಇಲ್ಲ, ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆಗೆ ಕಾರ್ಯೋನ್ಮುಖರಾಗಿ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇಸ್ರೇಲ್ ಸಂಸದರಿಗೆ ಕರೆ ನೀಡಿದರು.

‘ಇಸ್ರೇಲ್ ಶಸ್ತ್ರ ಬಳಸಿ ಪಡೆಯಬೇಕಾಗಿದ್ದನ್ನು ನಮ್ಮ ನೆರವಿನಿಂದ ಪಡೆದುಕೊಂಡಿದೆ’ ಎಂದು ಹೇಳಿದರು. ಸಂಘರ್ಷದಿಂದ ನಲುಗಿರುವ ಗಾಜಾವನ್ನು ಮರುಸ್ಥಾಪಿಸುವುದಾಗಿ ಭರವಸೆ ನೀಡಿದರು. ಭಯೋತ್ಪಾದನೆ ಮತ್ತು ಹಿಂಸಾಚಾರದ ಪಥವನ್ನು ಬದಲಿಸುವಂತೆ ಪ್ಯಾಲೆಸ್ಟೀನಿಯನ್ನರನ್ನು ಒತ್ತಾಯಿಸಿದರು.

ಒತ್ತೆಯಾಳುಗಳ ಕುಟುಂಬಗಳನ್ನು ಟ್ರಂಪ್ ಅವರು ಇಸ್ರೇಲ್‌ನಲ್ಲಿ ಭೇಟಿ ಮಾಡಲಿದ್ದಾರೆ. ಬಳಿಕ ಅವರು ಅವರು ಈಜಿಪ್ಟ್‌ಗೆ ಭೇಟಿ ನೀಡಲಿದ್ದಾರೆ ಎಂದು ಶ್ವೇತಭವನವು ಮಾಹಿತಿ ನೀಡಿದೆ.

ಜಯದ ಸನಿಹ ಶುಭಮನ್ ಪಡೆ

- ಕ್ಯಾಂಪ್‌ಬೆಲ್, ಶಾಯ್ ಹೋಪ್ ಶತಕ
- ಕುಲದೀಪ್, ಬೂಮ್ರಾಗೆ ತಲಾ 3 ವಿಕೆಟ್

● ಸಿಡ್ನಿ ಕಿರಣ್

ನವದೆಹಲಿ: ವೆಸ್ಟ್ ಇಂಡೀಸ್ ತಂಡದ ಜಾನ್ ಕ್ಯಾಂಪ್‌ಬೆಲ್ ಮತ್ತು ಶಾಯ್ ಹೋಪ್ ಸೋಮವಾರವೂ ತಮ್ಮ ಹೋರಾಟವನ್ನು ಮುಂದುವರಿಸಿದರು. ಭಾರತದ ಎದುರು ಇಬ್ಬರೂ ಚೆಂದದ ಶತಕಗಳನ್ನು ದಾಖಲಿಸಿದರು. ಆದರೂ ಭಾರತ ತಂಡದವರೂ ತಮ್ಮ ಸಂಗ್ರಹದಲ್ಲಿದ್ದ ಪರಿಣಾಮಕಾರಿ 'ಶಸ್ತ್ರಾಸ್ತ್ರ'ಗಳನ್ನು ಪ್ರಯೋಗಿಸುವಲ್ಲಿ ಯಶಸ್ವಿಯಾದರು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಎರಡನೇ ಟೆಸ್ಟ್‌ನಲ್ಲಿ ಸುಲಭ ಜಯ ಸಾಧಿಸುವ ಭಾರತದ ಲೆಕ್ಕಾಚಾರ ಈಡೇರಲಿಲ್ಲ. ಗುರಿ ಸಣ್ಣದಾಗಿ ಕಂಡರೂ ಅತ್ಯುತ್ಸಾಹಿಯಾಗಿರುವ ಪ್ರವಾಸಿ ಬಳಗದ ಎದುರು ಎಚ್ಚರಿಕೆಯ ಹೆಜ್ಜೆಗಳನ್ನು ಇಡುತ್ತ ಗೆಲುವಿನತ್ತ ಸಾಗಬೇಕಿದೆ. ಆದ್ದರಿಂದ ಪಂದ್ಯದ ಕೊನೆಯ ದಿನವಾದ ಮಂಗಳವಾರ ಬೆಳಿಗ್ಗೆ ಮೊದಲ ಒಂದು ಗಂಟೆಯ ಆಟ ಕುತೂಹಲ ಕೆರಳಿಸಿದೆ.

ನಾಲ್ಕನೇ ದಿನದಾಟದಲ್ಲಿ 121 ರನ್‌ಗಳ ಗುರಿಯನ್ನು ಭಾರತ ಬೆನ್ನಟ್ಟಿದಾಗ 18 ಓವರ್‌ಗಳು ಉಳಿದಿದ್ದವು. ತಂಡವು ಟಿ20 ಮಾದರಿಯಲ್ಲಿ ಬ್ಯಾಟಿಂಗ್ ಮಾಡಿ ಪಂದ್ಯ ಮುಗಿಸುವ ನಿರೀಕ್ಷೆ ಇತ್ತು. ಆದರೆ, ವಿಶ್ವ

ಮುಖ್ಯಾಂಶಗಳು
- ಐದನೇ ದಿನಕ್ಕೆ ಎರಡನೇ ಟೆಸ್ಟ್ ಪಂದ್ಯ
- ಸರಣಿ 2–0 ಗೆಲುವಿನತ್ತ ಆತಿಥೇಯ ಭಾರತ ತಂಡ

ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಭಾಗವಾಗಿರುವ ಈ ಪಂದ್ಯದಲ್ಲಿ ಜಯಿಸುವುದು ಮುಖ್ಯವಾಗಿರುವುದರಿಂದ ತಾಳ್ಮೆಯಿಂದ ಮುಂದುವರಿಯಲು ಕೆ.ಎಲ್. ರಾಹುಲ್ (ಬ್ಯಾಟಿಂಗ್ 25) ಮತ್ತು ಸಾಯಿ ಸುದರ್ಶನ್ (ಬ್ಯಾಟಿಂಗ್ 30) ಒತ್ತು ಕೊಟ್ಟರು. ಇದರಿಂದಾಗಿ ದಿನದಾಟದ ಮುಕ್ತಾಯಕ್ಕೆ ತಂಡವು 1 ವಿಕೆಟ್‌ಗೆ 63 ರನ್ ಗಳಿಸಿತು. ಸರಣಿಯನ್ನು 2–0ಯಿಂದ ಜಯಿಸಲು ಭಾರತಕ್ಕೆ ಇನ್ನೂ 58 ರನ್‌ಗಳ ಅವಶ್ಯಕತೆ ಇದೆ.

ಕ್ಯಾಂಪ್‌ಬೆಲ್, ಹೋಪ್ ಶತಕ: ಭಾನುವಾರ ಸಂಜೆ ಅರ್ಧಶತಕಗಳನ್ನು ಗಳಿಸಿ ಕ್ರೀಸ್‌ನಲ್ಲಿದ್ದ ಕ್ಯಾಂಪ್‌ಬೆಲ್ ಮತ್ತು ಹೋಪ್ ಸೋಮವಾರ ಬೆಳಿಗ್ಗೆಯೂ ತಮ್ಮ ಲಯ ಮುಂದುವರಿಸಿದರು. ಬೆಳಗಿನ ಅವಧಿಯಲ್ಲಿಯೇ ವಿಂಡೀಸ್ ಇನಿಂಗ್ಸ್‌ಗೆ ತೆರೆಯೆಳೆಯುವ 'ಅತಿ ಆತ್ಮವಿಶ್ವಾಸ'ದಲ್ಲಿದ್ದ ಭಾರತಕ್ಕೆ ನಿರಾಸೆ ಮೂಡಿಸುವಲ್ಲಿ ಇಬ್ಬರೂ ಬ್ಯಾಟರ್‌ಗಳು ಯಶಸ್ವಿಯಾದರು.



ಭಾರತದ ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್ ಮತ್ತು ಜಸ್‌ಪ್ರೀತ್ ಬೂಮ್ರಾ — ಪಿಟಿಐ ಚಿತ್ರಗಳು

ಕ್ಯಾಂಪ್‌ಬೆಲ್ 199 ಎಸೆತಗಳಲ್ಲಿ 115 ಮತ್ತು ಹೋಪ್ 214 ಎಸೆತಗಳಲ್ಲಿ 103 ರನ್ ಗಳಿಸಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 177 ರನ್ ಕಲೆಹಾಕಿದರು. ಅದೃಷ್ಟವೂ ಅವರಿಗೆ ಜೊತೆ ನೀಡಿತು. ಡಿಆರ್‌ಎಸ್ ತೀರ್ಪುಗಳು ಅವರ ಪರ ಬಂದವು.

ಊಟದ ವಿರಾಮಕ್ಕೂ ಮುನ್ನವೇ ಈ ಜೊತೆಯಾಟಕ್ಕೆ ತಡೆಯೊಡ್ಡುವಲ್ಲಿ ಸ್ಪಿನ್ನರ್ ರವೀಂದ್ರ ಜಡೇಜ ಯಶಸ್ವಿಯಾದರು. ಕ್ಯಾಂಪ್‌ಬೆಲ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಬೀಳಿಸಿದ ಜಡೇಜ ಭಾರತ ತಂಡದತ್ತ ಗೆಲುವಿನ ಅವಕಾಶ ವಾಲುವಂತೆ ಮಾಡಿದರು.

ಬೌಲರ್‌ಗಳ ದಾಳಿ ಮತ್ತಷ್ಟು ಚುರುಕಾಯಿತು. ಇದರಿಂದಾಗಿ ಮಧ್ಯಮ ಕ್ರಮಾಂಕ ಕುಸಿಯಿತು. ಇದೆಲ್ಲದರ ನಡುವೆ ಜಸ್ಟಿನ್ ಗ್ರೀವ್ಸ್ (ಔಟಾಗದೇ 50) ಮತ್ತು ಜೇಡನ್ ಸೀಲ್ಸ್ (32 ರನ್) ಬೀಸಾಟವಾಡಿದರು. ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದರು. ಈ ಜಿದ್ದಾಜಿದ್ದಿಯಲ್ಲಿ ಚಹಾ ವಿರಾಮದ ನಂತರ ವಿಂಡೀಸ್ ಇನಿಂಗ್ಸ್‌ಗೆ ತೆರೆಬಿತ್ತು. ವಿಂಡೀಸ್ ಮೊದಲ ಇನಿಂಗ್ಸ್‌ನಲ್ಲಿ ಫಾಲೋ ಆನ್ ಪಡೆದ ನಂತರ ಆಡಿದ ಇನಿಂಗ್ಸ್‌ನಲ್ಲಿ 118.5 ಓವರ್‌ಗಳಲ್ಲಿ 390 ರನ್ ಗಳಿಸಿದ್ದು ವಿಶೇಷ. ವೇಗಿ ಮೊಹಮ್ಮದ್ ಸಿರಾಜ್ (43ಕ್ಕೆ2), ಸ್ಪಿನ್ನರ್ ಕುಲದೀಪ್ ಯಾದವ್ (104ಕ್ಕೆ3) ಮತ್ತು ಜಸ್‌ಪ್ರೀತ್ ಬೂಮ್ರಾ (44ಕ್ಕೆ3) ವಿಂಡೀಸ್ ಬ್ಯಾಟಿಂಗ್ ಪಡೆಗೆ ಪೆಟ್ಟುಕೊಟ್ಟರು.

ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಎರಡನೇ ಓವರ್‌ನಲ್ಲಿ ಆಘಾತ ಕಾದಿತ್ತು. ಜೊಮೆಲ್ ವಾರಿಕನ್ ಎಸೆತವನ್ನು ಹೊಡೆಯುವ ಭರದಲ್ಲಿ ಯಶಸ್ವಿ ಜೈಸ್ವಾಲ್ (8; 7ಎ, 4X2) ಅವರು ಆ್ಯಂಡರ್ಸನ್ ಫಿಲಿಪ್‌ಗೆ ಕ್ಯಾಚಿತ್ತರು. ನಂತರ ರಾಹುಲ್ ಮತ್ತು ಸಾಯಿ ಆಟ ಮುಂದುವರಿಸಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ: 5ಕ್ಕೆ518 ಡಿಕ್ಲೇರ್ಡ್
ವೆಸ್ಟ್ ಇಂಡೀಸ್: 248
ಎರಡನೇ ಇನಿಂಗ್ಸ್: ವೆಸ್ಟ್ ಇಂಡೀಸ್ (ಫಾಲೊ ಆನ್) 390 (118.5 ಓವರುಗಳಲ್ಲಿ)
(ಭಾನುವಾರ: 2ಕ್ಕೆ 173)
ಕ್ಯಾಂಪ್‌ಬೆಲ್ ಎಲ್‌ಬಿಡಬ್ಲ್ಯು ಬಿ ಜಡೇಜ 115 (199ಎ, 4x12, 6x3)
ಹೋಪ್ ಬಿ ಸಿರಾಜ್ 103 (214ಎ, 4x12, 6x2)
ಚೇಸ್ ಸಿ ಸಬ್ (ಪಡಿಕ್ಕಲ್) ಬಿ ಕುಲದೀಪ್ 40 (72ಎ, 4x4, 6x1)
ಇಮ್ಲಾಕ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 12 (13ಎ, 4x1, 6x1)
ಗ್ರೀವ್ಸ್ ಔಟಾಗದೇ 50 (85ಎ, 4x3)
ಪಿಯರ್ ಸಿ ನಿತೀಶ್ ರೆಡ್ಡಿ ಬಿ ಕುಲದೀಪ್ 0 (2ಎ)
ವಾರಿಕನ್ ಬಿ ಬೂಮ್ರಾ 3 (6ಎ)
ಫಿಲಿಪ್ ಸಿ ಜುರೆಲ್ ಬಿ ಬೂಮ್ರಾ 2 (10ಎ)
ಸೀಲ್ಸ್ ಸಿ ವಾಷಿಂಗ್ಟನ್ ಬಿ ಬೂಮ್ರಾ 32 (67ಎ, 4x1, 6x1)
ಇತರೆ: 16 (ಬೈ 7, ಲೆಗ್ ಬೈ 7, ನೋಬಾಲ್ 2)
ವಿಕೆಟ್ ಪತನ: 3–212 (ಜಾನ್ ಕ್ಯಾಂಪ್‌ಬೆಲ್, 63.3), 4–271 (ಶಾಯ್ ಹೋಪ್, 83.5), 5–293 (ಟೆವಿನ್ ಇಮ್ಲಾಕ್, 89.3), 6–298 (ರೋಸ್ಟನ್ ಚೇಸ್, 91.3), 7–298 (ಖಾರಿ ಪಿಯರ್, 91.5), 8–307 (ಜೊಮೆಲ್ ವಾರಿಕನ್, 94.2), 9–311 (ಆ್ಯಂಡರ್ಸನ್ ಫಿಲಿಪ್, 96.5), 10–390 (ಜೇಡನ್ ಸೀಲ್ಸ್, 118.5)
ಬೌಲಿಂಗ್: ಮೊಹಮ್ಮದ್ ಸಿರಾಜ್ 15–3–43–2; ರವೀಂದ್ರ ಜಡೇಜ 33–10–102–1; ವಾಷಿಂಗ್ಟನ್ ಸುಂದರ್ 23–3–80–1; ಕುಲದೀಪ್ ಯಾದವ್ 29–4–104–3; ಜಸ್‌ಪ್ರೀತ್ ಬೂಮ್ರಾ 17.5–5–44–3; ಯಶಸ್ವಿ ಜೈಸ್ವಾಲ್ 1–0–3–0.
ಭಾರತ: 1ಕ್ಕೆ 63 (18 ಓವರುಗಳಲ್ಲಿ) (ಗುರಿ 121)
ಜೈಸ್ವಾಲ್ ಸಿ ಫಿಲಿಪ್ ಬಿ ವಾರಿಕನ್ 8 (7ಎ, 4x2)
ರಾಹುಲ್ ಬ್ಯಾಟಿಂಗ್ 25 (54ಎ, 4x2)
ಸುದರ್ಶನ್ ಬ್ಯಾಟಿಂಗ್ 30 (47ಎ, 4x5)
ವಿಕೆಟ್ ಪತನ: 1–9 (ಯಶಸ್ವಿ ಜೈಸ್ವಾಲ್, 1.3)
ಬೌಲಿಂಗ್: ಜೇಡನ್ ಸೀಲ್ಸ್ 3–0–14–0; ಜೊಮೆಲ್ ವಾರಿಕನ್ 7–1–15–1; ಖಾರಿ ಪಿಯರ್ 6–0–24–0; ರೋಸ್ಟನ್ ಚೇಸ್ 2–0–10–0



ವೆಸ್ಟ್ ಇಂಡೀಸ್ ತಂಡದ ಜಾನ್ ಕ್ಯಾಂಪ್‌ಬೆಲ್ ಶತಕ ದಾಖಲಿಸಿ ಸಂಭ್ರಮಿಸಿದರು

ಮರೈಝಾನ್, ಟ್ರಯನ್ ಅರ್ಧಶತಕ: ಬಾಂಗ್ಲಾಗೆ ನಿರಾಸೆ

ದಕ್ಷಿಣ ಆಫ್ರಿಕಾಕ್ಕೆ ರೋಚಕ ಜಯ

ವಿಶಾಖಪಟ್ಟಣ: ಆಲ್‌ರೌಂಡರ್ ಕ್ಲೊಯೆ ಟ್ರಯನ್ ಮತ್ತು ನದೀನ್ ಡಿ ಕ್ಲರ್ಕ್ ಅವರ ಅಮೋಘ ಆಟದಿಂದಾಗಿ ದಕ್ಷಿಣ ಆಫ್ರಿಕಾ ತಂಡವು ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಬಾಂಗ್ಲಾದೇಶದ ವಿರುದ್ಧ ರೋಚಕ ಜಯಸಾಧಿಸಿತು.

ಎಸಿಎ–ವಿಡಿಸಿಎ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 233 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವು 49.3 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 235 ರನ್ ಗಳಿಸಿತು. ಅದಕ್ಕೆ ಕಾರಣವಾಗಿದ್ದು ಮರೈಝಾನ್ ಕಾಪ್ (56; 71ಎ) ಹಾಗೂ ಟ್ರಯನ್ (62; 69ಎ) ಅರ್ಧಶತಕಗಳು. ಅಲ್ಲದೇ ಕೊನೆಯ ಹಂತದಲ್ಲಿ ನದೀನ್ ಡಿ ಕರ್ಕ್ (ಔಟಾಗದೇ 37; 29ಎ) ಅವರು ತಂಡದ ಗೆಲುವಿಗೆ ಮಹತ್ವದ ಕಾಣಿಕೆ ನೀಡಿದರು.

ಕೊನೆಯ ಹಂತದ ಓವರ್‌ಗಳಲ್ಲಿ ಬಾಂಗ್ಲಾದ ಫೀಲ್ಡರ್‌ಗಳು ಫೀಲ್ಡಿಂಗ್‌ನಲ್ಲಿ ಮಾಡಿದ ಕೆಲವು ಲೋಪಗಳು ಮತ್ತು ಕ್ಯಾಚ್‌ಗಳನ್ನು ನೆಲಕ್ಕೆ ಚೆಲ್ಲಿದ್ದು ಸೋಲಿಗೆ ಕಾರಣವಾದವು. ಬಾಂಗ್ಲಾದ ಬೌಲರ್‌ಗಳ ಉತ್ತಮ ದಾಳಿಯಿಂದ ದಕ್ಷಿಣ ಆಫ್ರಿಕಾ ತಂಡವು 78 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತ್ತು. ಈ ಹಂತದಲ್ಲಿ ಹಿಡಿತ ಸಾಧಿಸುವಲ್ಲಿ ಬಾಂಗ್ಲಾ ಎಡವಿತು.

ಕಾಪ್ ಮತ್ತು ಟ್ರಯನ್ ಅವರು 6ನೇ ವಿಕೆಟ್ ಜೊತೆಯಾಟದಲ್ಲಿ 85 ರನ್ ಸೇರಿಸಿದರು. ಕಾಪ್ ಔಟಾದ ನಂತರ ಟ್ರಯನ್ ಮತ್ತು ನದೀನ್ 7ನೇ ವಿಕೆಟ್ ಜೊತೆಯಾಟದಲ್ಲಿ 35 ರನ್ ಕಲೆಹಾಕಿದರು. ಇದರಿಂದಾಗಿ ಗೆಲುವು ಸಾಧ್ಯವಾಯಿತು.

ಶೊರ್ನಾ–ಶರ್ಮಿನ್ ಅರ್ಧಶತಕ: ಟಾಸ್ ಗೆದ್ದ ಬಾಂಗ್ಲಾದೇಶ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಶರ್ಮಿನ್ ಅಖ್ತರ್ ಮತ್ತು ಶೊರ್ನಾ ಅಖರ್ ಅವರ ಅರ್ಧಶತಕಗಳ ಬಲದಿಂದ 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 232 ರನ್ ಗಳಿಸಿತು.

ಶರ್ಮಿನ್ ಅಖ್ತರ್ (50;77ಎ, 4X5) ಮತ್ತು ನಿಗಾರ್ ಸುಲ್ತಾನ (32; 42ಎ, 4X5) ಅವರಿಬ್ಬರೂ ಮೂರನೇ ವಿಕೆಟ್ ಜೊತೆಯಾಟದಲ್ಲಿ 77 ರನ್ ಕಲೆಹಾಕಿದರು. ಆದರೆ ಅಷ್ಟೊತ್ತಿಗೆ 40 ಓವರ್‌ಗಳು ಮುಗಿದಿದ್ದವು. ನಿಗಾರ್ ವಿಕೆಟ್ ಪಡೆದ ಮ್ಲಾಬಾ ಜೊತೆಯಾಟಕ್ಕೆ ತಡೆಯೊಡ್ಡಿದರು. ಆಗ ಕ್ರೀಸ್‌ಗೆ ಬಂದ ಶೊರ್ನಾ ಅವರ ಬೀಸಾಟಕ್ಕೆ ರನ್‌ಗಳು ವೇಗವಾಗಿ ಹರಿದುಬಂದವು. ಅವರು 3 ಬೌಂಡರಿ ಮತ್ತು 3 ಸಿಕ್ಸರ್ ಹೊಡೆದರು.



ದಕ್ಷಿಣ ಆಫ್ರಿಕಾ ತಂಡದ ಅನಕ್ ಬಾಷ್ ಮತ್ತು ಕ್ಲೊಯೆ ಟ್ರಯನ್ — ಎಎಫ್‌ಪಿ ಚಿತ್ರ

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ಇಂದಿನ ಪಂದ್ಯ
ಶ್ರೀಲಂಕಾ Vs ನ್ಯೂಜಿಲೆಂಡ್ — ಮಧ್ಯಾಹ್ನ 3
ಲೈವ್: ಸ್ಟಾರ್ ಸ್ಪೋರ್ಟ್ಸ್, ಜಿಯೊಸ್ಟಾರ್

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 50 ಓವರ್‌ಗಳಲ್ಲಿ 6ಕ್ಕೆ232 (ಫರ್ಗಾನಾ ಹಕ್ 30, ರುಬಿಯಾ ಹೈದರ್ 25, ಶರ್ಮಿನ್ ಅಖ್ತರ್ 50, ನಿಗಾರ್ ಸುಲ್ತಾನ 32, ಶೋರ್ನಾ ಅಖ್ತರ್ ಔಟಾಗದೇ 51, ರಿತು ಮೋನಿ ಔಟಾಗದೇ 19, ನಾನ್‌ಕುಲುಲೆಕೊ ಮ್ಲಾಬಾ 42ಕ್ಕೆ2) **ದಕ್ಷಿಣ ಆಫ್ರಿಕಾ:** 49.3 ಓವರ್‌ಗಳಲ್ಲಿ 7ಕ್ಕೆ235 (ಲಾರಾ ವೊಲ್ವಾರ್ಟ್ 31, ಅನಕ್ ಬಾಷ್ 28, ಮರೈಝಾನ್ ಕಾಪ್ 56, ಕ್ಲೊಯೆ ಟ್ರಯನ್ 62, ನದೀನ್ ಡಿ ಕರ್ಕ್ ಔಟಾಗದೇ 37, ನಹೀದಾ ಅಖ್ತರ್ 44ಕ್ಕೆ2)
ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕಿಕೆ 3 ವಿಕೆಟ್‌ಗಳ ಜಯ

2027ರ ಏಕದಿನ ವಿಶ್ವಕಪ್: ರವಿ ಶಾಸ್ತ್ರಿ ಹೇಳಿಕೆ

'ಫಾರ್ಮ್, ಫಿಟ್ನೆಸ್ ಮೇಲೆ ರೋಕೊ ಭವಿಷ್ಯ'

ಸಿಡ್ನಿ (ಪಿಟಿಐ): ಮುಂದಿನ (2027ರ) ಏಕದಿನ ವಿಶ್ವಕಪ್‌ನಲ್ಲಿ ಆಡುವ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ವಿಶ್ವಾಸವು 'ಫಾರ್ಮ್, ಫಿಟ್ನೆಸ್ ಮತ್ತು ಆಡಬೇಕೆಂಬ ಹಸಿವು' ಇವುಗಳನ್ನು ಅವಲಂಬಿಸಿದೆ ಎಂದು ಭಾರತ ತಂಡದ ಮಾಜಿ ಹೆಡ್ ಕೋಚ್ ರವಿ ಶಾಸ್ತ್ರಿ ಅಭಿಪ್ರಾಯ ಪಟ್ಟಿದ್ದಾರೆ.



ರವಿ ಶಾಸ್ತ್ರಿ

ಆಸ್ಟ್ರೇಲಿಯಾ ವಿರುದ್ಧ ಮುಂಬರುವ ಸರಣಿಯು ಈ ಮೂರು ವಿಷಯಗಳಲ್ಲಿ ರೋಹಿತ್ ಮತ್ತು ಕೊಹ್ಲಿ (ರೋಕೊ) ಅವರಿಗೆ ಪರೀಕ್ಷೆಯಾಗಲಿದೆ ಎಂದಿದ್ದಾರೆ ರವಿ ಶಾಸ್ತ್ರಿ. ಆಸ್ಟ್ರೇಲಿಯಾ ವಿರುದ್ಧ ಮೂರು ಪಂದ್ಯಗಳ ಸರಣಿಯಲ್ಲಿ ಪರಿಣಾಮಕಾರಿ ಪ್ರದರ್ಶನ ನೀಡಿದಲ್ಲಿ ಇಬ್ಬರೂ ದಿಗ್ಗಜರು ತಮ್ಮ ಸ್ಥಾನ ಗಟ್ಟಿಗೊಳಿಸಬಹುದು ಎಂದು 63 ವರ್ಷ ವಯಸ್ಸಿನ ಶಾಸ್ತ್ರಿ ಹೇಳಿದ್ದಾರೆ. ಶಾಸ್ತ್ರಿ 2017 ರಿಂದ 2021ರವರೆಗೆ ಕೋಚ್ ಆಗಿದ್ದರು.

'ಇದೇ ಕಾರಣಕ್ಕೆ ಇವರಿಬ್ಬರು (ಆಸ್ಟ್ರೇಲಿಯಾ ವಿರುದ್ಧದ ಏಕದಿನ ಸರಣಿ) ಆಡಲು ಮನಸ್ಸು ಮಾಡಿದ್ದಾರೆ' ಎಂದು ಶಾಸ್ತ್ರಿ ಅವರನ್ನು ಉದ್ಧರಿಸಿ ಕ್ರಿಕೆಟ್.ಕಾಂ.ಎಯು ವರದಿ ಮಾಡಿದೆ.

ಕೊಹ್ಲಿ ಮತ್ತು ರೋಹಿತ್ ಅವರು ಉಳಿದೆರಡು ಮಾದರಿಗಳಿಂದ ನಿವೃತ್ತಿ ಪಡೆದಿದ್ದಾರೆ. ಏಕದಿನ ವಿಶ್ವಕಪ್ ಇನ್ನೆರಡು ವರ್ಷ ದೂರ ಇದೆ. ಆ ವೇಳೆಗೆ ರೋಹಿತ್ ಅವರಿಗೆ 40 ವರ್ಷ ಮತ್ತು ಕೊಹ್ಲಿ ಅವರಿಗೆ 38 ವರ್ಷ ವಯಸ್ಸು ಆಗಲಿದೆ. ಏಕದಿನ ಮಾದರಿಯಲ್ಲಿ ರೋಹಿತ್ ಅವರನ್ನು ನಾಯಕತ್ವದಿಂದ ಕೆಳಗಿಳಿಸಿ ಶುಭಮನ್ ಗಿಲ್ ಅವರಿಗೆ ಸಾರಥ್ಯ ವಹಿಸಲಾಗಿದೆ.

ಚಾಂಪಿಯನ್ಸ್ ಟ್ರೋಫಿಯಲ್ಲಿ ಇವರಿಬ್ಬರು ಕೊನೆಯ ಬಾರಿ ತಂಡದಲ್ಲಿ ಆಡಿದ್ದರು. ರೋಹಿತ್ ಅವರು ಫೈನಲ್‌ನಲ್ಲಿ 'ಪಂದ್ಯದ ಪುರುಷೋತ್ತಮ'ರಾಗಿದ್ದರು. ಕೊಹ್ಲಿ ಅಗ್ರ ಐವರು ಬ್ಯಾಟರ್‌ಗಳಲ್ಲಿ ಸ್ಥಾನ ಪಡೆದಿದ್ದರು. 'ಆದರೆ ಮಹತ್ವದ ಪಂದ್ಯಗಳ ವಿಷಯಕ್ಕೆ ಬದಾಗ ಅನುಭವಕ್ಕೆ ಪರ್ಯಾಯ ಇಲ್ಲ' ಎಂದೂ ಹೇಳಿದರು.

ಸಂಕ್ಷಿಪ್ತ ಸುದ್ದಿ

ಪಾಕಿಸ್ತಾನದ ಅತಿ ಹಿರಿಯ ಕ್ರಿಕೆಟಿಗ ವಝೀರ್ ನಿಧನ



ಕರಾಚಿ (ಪಿಟಿಐ): ಪಾಕಿಸ್ತಾನದ ಅತಿ ಹಿರಿಯ ಟೆಸ್ಟ್ ಆಟಗಾರ ವಝೀರ್ ಮೊಹಮ್ಮದ್ (95) ಅವರು ಸೋಮವಾರ ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ ನಿಧನರಾದರು.

ಮೊಹಮ್ಮದ್ ಸಹೋದರರಲ್ಲಿ ಅವರು ಹಿರಿಯರು. ಹನೀಫ್ ಮೊಹಮ್ಮದ್, ಮುಷ್ತಾಕ್ ಮೊಹಮ್ಮದ್ ಮತ್ತು ಸಾದಿಕ್ ಮೊಹಮ್ಮದ್ ಅವರ ತಮ್ಮಂದಿರು. ವಝೀರ್ ಅವರಂತೆ ಈ ಮೂವರೂ ಟೆಸ್ಟ್ ಪಂದ್ಯಗಳನ್ನು ಆಡಿದವರು. 1952ರಲ್ಲಿ ಪಾಕಿಸ್ತಾನ ಮೊದಲ ಬಾರಿ ಭಾರತ ವಿರುದ್ಧ ತನ್ನ ಚೊಚ್ಚಲ ಟೆಸ್ಟ್ ಆಡಿದ್ದಾಗ ಬ್ಯಾಟರ್ ವಝೀರ್ ಆ ತಂಡದಲ್ಲಿದ್ದರು. 1952 ರಿಂದ 59ರವರೆಗಿನ ಅವಧಿಯಲ್ಲಿ ಅವರು 20 ಟೆಸ್ಟ್‌ಗಳನ್ನು ಆಡಿದ್ದರು.

ನಿವೃತ್ತಿ ನಂತರ ಅವರು ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ಸಲಹೆಗಾರರಾಗಿದ್ದರು. ನಂತರ ಇಂಗ್ಲೆಂಡ್‌ನಲ್ಲಿ ನೆಲೆ ಕಂಡುಕೊಂಡಿದ್ದರು.

ಪೋರ್ಟ್ ಆಫ್ ಸ್ಪೇನ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ದೀರ್ಘ ಇನಿಂಗ್ಸ್ ಆಡಿ 189 ರನ್ ಹೊಡೆದಿದ್ದು ಅವರ ಅವಿಸ್ಮರಣೀಯ ಇನಿಂಗ್ಸ್ ಆಗಿದೆ. 1954ರಲ್ಲಿ ಓವಲ್‌ನಲ್ಲಿ ಇಂಗ್ಲೆಂಡ್ ತಂಡವನ್ನು 24 ರನ್‌ಗಳಿಂದ ಪಾಕಿಸ್ತಾನ ಸೋಲಿಸಿದ ವೇಳೆಯೂ ಅವರು ಗಳಿಸಿದ್ದ ಅಜೇಯ 42 ರನ್ ತಂಡದ ಗರಿಷ್ಠ ವೈಯಕ್ತಿಕ ಮೊತ್ತವೆನಿಸಿತ್ತು.

ಬ್ಯಾಡ್ಮಿಂಟನ್: ಭಾರತದ ಆಟಗಾರರ ಜಯದ ಓಟ

ಗುವಾಹಟಿ: ಭಾರತದ ಬ್ಯಾಡ್ಮಿಂಟನ್ ಆಟಗಾರರು ಇಲ್ಲಿ ನಡೆಯುತ್ತಿರುವ ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದರು.

ಸೋಮವಾರ ನಡೆದ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಲಾಲ್‌ತಜುವಾಲ ಹಮರ್ 15–4, 15–4ರಿಂದ ಉಗಾಂಡದ ಡೆನಿಸ್ ಮುಕಾಸಾ ವಿರುದ್ಧ ಗೆದ್ದರು. ಇನ್ನೊಂದು ಪಂದ್ಯದಲ್ಲಿ ಜ್ಞಾನ ದತ್ತು ಟಿಟಿ 5–15, 15–7, 15–7ರಿಂದ ಹಂಗರಿಯ ಮಿಲನ್ ಮೆಸ್ತರಾಜಿ ವಿರುದ್ಧ ಜಯಗಳಿಸಿದರು. ಬಾಲಕಿಯರ ಸಿಂಗಲ್ಸ್‌ನಲ್ಲಿ ಕೆ. ವೆನಾಲಾ 15–1, 15–6ರಿಂದ ಐರ್ಲೆಂಡ್‌ನ ಸಿಯಾಫ್ರಾ ಫ್ಲೈಯಿನ್ ವಿರುದ್ಧ ಗೆದ್ದರು.

ಮಿಶ್ರ ಡಬಲ್ಸ್‌ನಲ್ಲಿ ವಿಷ್ಣು ಕೇದಾರ್ ಖೋಡೆ ಮತ್ತು ಕೀರ್ತಿಮಂಚಾಲಾ 15-7, 15-8ರಿಂದ ಘಾನಾದ ಒಬಾಪೊಂಬಾ ಅದು ಮತ್ತು ಮಿಂಥಾ/ಮೊಸ್ಲೇನಾ ಅಮಾ ಕೊರಾಮಾ ವಿರುದ್ಧ ಗೆದ್ದರು.

ಆರನೇ ಸ್ಥಾನಕ್ಕೇರಿದ ಹರಿಯಾಣ ಸ್ಟೀಲರ್ಸ್

ಪಿಕೆಎಲ್: ಪಟ್ನಾ ಪೈರೇಟ್ಸ್ ವಿರುದ್ಧ ಏಳು ಅಂಕಗಳ ಜಯ

ನವದೆಹಲಿ (ಪಿಟಿಐ): ಹರಿಯಾಣ ಸ್ಟೀಲರ್ಸ್ ತಂಡ, ಸೋಮವಾರ ನಡೆದ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡದ ಮೇಲೆ 39–32 ರಲ್ಲಿ ಏಳು ಪಾಯಿಂಟ್‌ಗಳ ಜಯಪಡೆಯಿತು.

ತ್ಯಾಗರಾಜ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರೇಡರ್ ಶಿವಂ ಪತಾರೆ ಅವರ ಸೂಪರ್ ಟೆನ್ (12 ಪಾಯಿಂಟ್ಸ್) ಮತ್ತು ನಾಯಕ ಜೈದೀಪ್ (6 ಪಾಯಿಂಟ್ಸ್) ಅವರ ರಕ್ಷಣಾ ಕೌಶಲ ಸ್ಟೀಲರ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತು. ಪಟ್ನಾ ಪರ ಅಯಾನ್ (17 ಪಾಯಿಂಟ್ಸ್) ಅವರ ರೇಡಿಂಗ್ ಸಾಹಸ ಫಲ ನೀಡಲಿಲ್ಲ.

ಹರಿಯಾಣ ಸ್ಟೀಲರ್ಸ್ ಆಡಿರುವ 14 ಪಂದ್ಯಗಳಲ್ಲಿ ಏಳು ಗೆದ್ದು, ಅಷ್ಟೇ ಪಂದ್ಯಗಳನ್ನು ಸೋತಿದೆ. 14 ಪಾಯಿಂಟ್‌ಗಳೊಂದಿಗೆ ಆರನೇ ಸ್ಥಾನಕ್ಕೇರಿತು ಪಟ್ನಾ ಪೈರೇಟ್ಸ್‌ಗೆ ಇದು 12 ಪಂದ್ಯಗಳಲ್ಲಿ 9ನೇ ಸೋಲು. ಆರು ಪಾಯಿಂಟ್‌ಗಳೊಂದಿಗೆ ಕೊನೆಯ ಸ್ಥಾನದಲ್ಲಿದೆ.



ಹರಿಯಾಣ ಸ್ಟೀಲರ್ಸ್‌ನ ರೇಡರ್‌ನನ್ನು ಹಿಡಿಯಲು ಯತ್ನಿಸಿದ ಪಟ್ನಾ ಪೈರೇಟ್ಸ್ ಆಟಗಾರರು

ಯೋಧಾಸ್‌ಗೆ ಸುಲಭ ಜಯ: ಯುಪಿ ಯೋಧಾಸ್ ದಿನದ ಎರಡನೇ ಪಂದ್ಯದಲ್ಲಿ ಯು ಮುಂಬಾ ತಂಡವನ್ನು 40–24 ಪಾಯಿಂಟ್‌ಗಳಿಂದ ಸೋಲಿಸಿತು. ವಿರಾಮದ ವೇಳೆ 13–11 ಅಂಕಗಳಿಂದ ಮುಂದಿದ್ದ ಯೋಧಾಸ್ ನಂತರ ಹಿಡಿತ ಬಿಗಿಗೊಳಿಸಿತು.

ಯೋಧಾಸ್ ಪರ ಗುಮನ್ ಸಿಂಗ್ 12 ಅಂಕ, ಭವಾನಿ ರಜಪೂತ್ 5 ಅಂಕ ಗಳಿಸಿದರು. ಮುಂಬಾ ಪರ ಸಂದೀಪ್ 7 ಮತ್ತು ಅಂಕಿತ್ 5 ಅಂಕ ಗಳಿಸಿದರು. ಮುಂಬಾ 14 ಪಂದ್ಯಗಳಲ್ಲಿ ಏಳು ಗೆದ್ದು, ಏಳು ಸೋತಿದ್ದು 14 ಪಾಯಿಂಟ್‌ಗಳೊಂದಿಗೆ ಐದನೇ ಸ್ಥಾನದಲ್ಲಿದೆ. ಯೋಧಾಸ್‌ಗೆ ಇದು 14 ಪಂದ್ಯಗಳಲ್ಲಿ ಐದನೇ ಜಯ.

ಟಾರ್ಪಿಡೋಸ್‌ಗೆ ಸತತ ನಾಲ್ಕನೇ ಜಯ

ಹೈದರಾಬಾದ್ (ಪಿಟಿಐ): ಬೆಂಗಳೂರು ಟಾರ್ಪಿಡೋಸ್ ತಂಡ ಗೆಲುವಿನ ಓಟವನ್ನು ಮುಂದುವರಿಸಿದ್ದು, ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಸೋಮವಾರ ಚೆನ್ನೈ ಬ್ಲಿಟ್ಜ್ ತಂಡವನ್ನು 3–1 ಸೆಟ್‌ಗಳಿಂದ ಸೋಲಿಸಿತು.

ಟಾರ್ಪಿಡೋಸ್ ತಂಡವು ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 17–15, 14–16, 17–15, 16–14 ರಿಂದ ಚೆನ್ನೈ ತಂಡವನ್ನು ಸೋಲಿಸಿ ಹಾಲಿ ಲೀಗ್‌ನಲ್ಲಿ ಸತತ ನಾಲ್ಕನೇ ಗೆಲುವನ್ನು ದಾಖಲಿಸಿತು. ದಾಳಿ ವಿಭಾಗದಲ್ಲಿ ಮಿಂಚಿದ ಟಾರ್ಪಿಡೋಸ್‌ನ ಜೋಯೆಲ್ ಬೆಂಜಮಿನ್ 'ಪಂದ್ಯದ ಆಟಗಾರ' ಗೌರವ ಪಡೆದರು.

15, 17 ವರ್ಷದೊಳಗಿನವರ ರಾಜ್ಯ ಬ್ಯಾಡ್ಮಿಂಟನ್

ಮೂರನೇ ಸುತ್ತಿಗೆ ಭಾರ್ಗವ್, ದರ್ಶನ್

ಪ್ರಜಾವಾಣಿ ವಾರ್ತೆ

ದಾವಣಗೆರೆ: ಬೆಂಗಳೂರಿನ ಭಾರ್ಗವ್ ರೆಡ್ಡಿ ಮತ್ತು ದರ್ಶನ್ ಮಣಿಕಂಠನ್ ಅವರು ರಾಜ್ಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ 17 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಮೂರನೇ ಸುತ್ತು ಪ್ರವೇಶಿಸಿದ್ದಾರೆ.

ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ) ಹಾಗೂ ದಾವಣಗೆರೆ ಜಿಲ್ಲಾ ಬ್ಯಾಡ್ಮಿಂಟನ್ ಸಂಸ್ಥೆಯ (ಡಿಡಿಬಿಎ) ಆಶ್ರಯದಲ್ಲಿ ಇಲ್ಲಿನ ನೇತಾಜಿ ಸುಭಾಷ್‌ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ಭಾರ್ಗವ್ 15–12, 13–15, 15–12ರಿಂದ ಬೆಂಗಳೂರಿನವರೇ ಆದ ಎಚ್.ಪ್ರಲ್ಹಾದ್ ಅವರನ್ನು ಸೋಲಿಸಿದರು.

ಇನ್ನೊಂದು ಪಂದ್ಯದಲ್ಲಿ ದರ್ಶನ್ 15–6, 15–9ರಿಂದ ಧಾರವಾಡದ ಜೈ ಹುರಕಡ್ಲಿ ಅವರನ್ನು ಮಣಿಸಿದರು. ಇತರ ಪ್ರಮುಖ ಪಂದ್ಯಗಳಲ್ಲಿ ವೈಭವ್ ಸಾಯಿ ಗೌಡ 15–13, 15–7ರಿಂದ ಎಚ್.ಪುರವ್ ಎದುರೂ, ಅಮೋಘ್ ಪೊಲೀಸ್ ಪಾಟೀಲ 15–12, 15–12ರಿಂದ ಅಕ್ಷಯ್ ಅನಿರುದ್ಧ್ ವಿರುದ್ಧವೂ ಗೆದ್ದರು.

17 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪ್ರಮುಖ ಪಂದ್ಯಗಳಲ್ಲಿ ವರ್ಷಿತಾ ಕಾರ್ಯಪ್ಪ 15–13, 15–13ರಿಂದ ಜೆಸ್ಸಿಲ್ ಜೆರಿನ್ ಎದುರೂ, ಅನ್ವಿ ಮಿಶ್ರಾ 15–13, 13–15, 15–8ರಿಂದ ಅದಿತಿ ಬಿ.ಎಸ್. ವಿರುದ್ಧವೂ ಹಾಗೂ ದೀಕ್ಷಾ ಎಂ.ಎಚ್ 16–14, 13–15, 21–20ರಿಂದ ಅಕ್ಷಿತಾ ಎದುರೂ ಜಯಿಸಿದರು.

15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯಗಳಲ್ಲಿ ಶೌರ್ಯ ವಿ.ಪಾಟೀಲ 15–2, 15–12ರಿಂದ ಚಿನ್ಮಯ್ ಎದುರೂ, ಪ್ರಣವ್ ಅಗರವಾಲ್ 15–10, 15–7ರಿಂದ ವಿಹಾನ್ ನಿಶ್ಚಿತ್ ಮೇಲೂ, ವೇದಾಂತ್ ರಾಜೀವ 14–16, 15–9, 15–7ರಿಂದ ಎಲ್ಡನ್ ಪಿಂಟೊ ವಿರುದ್ಧವೂ ಜಯ ಕಂಡರು.

ಬಾಲಕಿಯರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯಗಳಲ್ಲಿ ಮಾನ್ಯ ಶ್ರೀಕಾಂತ್ ಹೊಳ್ಳ 16–14, 15–17, 15–13ರಿಂದ ಆರ್.ಅರ್ಣ ಸಾಗರ್ ಎದುರೂ, ಅರ್ಸಿಯಾ ಬಾಬು 15–3, 15–1ರಿಂದ ವೇದಶ್ರೀ ಟಿ.ಪಟೇಲ್ ವಿರುದ್ಧವೂ ಗೆದ್ದರು.



17 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ ಗೆದ್ದ ದರ್ಶನ್ ಮಣಿಕಂಠನ್ ಷಟಲ್ ಹಿಂತಿರುಗಿಸಿದ ವೈಖರಿ —ಪ್ರಜಾವಾಣಿ ಚಿತ್ರ; ಸತೀಶ್ ಬಡಿಗೇರ

ಕುಸ್ತಿ: ನಿಷೇಧ ಮರುಪರಿಶೀಲನೆಗೆ ಅಮನ್ ಮನವಿ

ನವದೆಹಲಿ (ಪಿಟಿಐ): ಝಾಗ್ರೆಬ್ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ತಮ್ಮ ತೂಕವನ್ನು ಕಾಪಾಡಿಕೊಳ್ಳಲು ವಿಫಲರಾದ ಅಮನ್ ಸೆಹ್ರಾವತ್ ಅವರು ತಮ್ಮ ಮೇಲೆ ಹೇರಿರುವ ಒಂದು ವರ್ಷದ ನಿಷೇಧವನ್ನು ಪುನರ್‌ಪರಿಶೀಲಿಸುವಂತೆ ಭಾರತ ಕುಸ್ತಿ ಫೆಡರೇಷನ್‌ಗೆ ಸೋಮವಾರ ಮನವಿ ಸಲ್ಲಿಸಿದ್ದಾರೆ.

ಸೆಪ್ಟೆಂಬರ್‌ನಲ್ಲಿ ನಡೆದ ಈ ಚಾಂಪಿಯನ್‌ಷಿಪ್‌ನ 57 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ್ದ ಅಮನ್ ಅವರು ಸ್ಪರ್ಧೆಯ ದಿನ 1.7 ಕೆ.ಜಿ. ಹೆಚ್ಚು ತೂಗಿದ್ದರು. ಇದರಿಂದ ತಂಡ ಮುಜುಗರ ಅನುಭವಿಸಬೇಕಾಯಿತು. ಹೀಗಾಗಿ ಅವರ ಮತ್ತು ತಂಡದ ಮೂವರು ಕೋಚ್‌ಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿತ್ತು. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದಿದ್ದ 22 ವರ್ಷ ವಯಸ್ಸಿನ ಅಮನ್ ವಿಶ್ವ ಕೂಟದಲ್ಲೂ ಪದಕದ ಭರವಸೆಯಾಗಿದ್ದರು.

ಹೋದ ಮಂಗಳವಾರ ಅವರ ವಿರುದ್ಧ ಸೆ. 23 ರಿಂದ ಆರಂಭವಾಗುವಂತೆ ಒಂದು ವರ್ಷದ ನಿಷೇಧ ಹೇರಲಾಗಿತ್ತು.

'ನನ್ನಿಂದ ತಪ್ಪಾಗಿದೆ. ಇಂಥ ದೊಡ್ಡ ಚಾಂಪಿಯನ್‌ಷಿಪ್‌ನಲ್ಲಿ ತೂಕ ಕಾಪಾಡಿಕೊಳ್ಳಬೇಕಿತ್ತು' ಎಂದು ಅವರು ಹೇಳಿದರು. ಕುಸ್ತಿ ಫೆಡರೇಷನ್ ಮುಖ್ಯಸ್ಥ ಸಂಜಯ್ ಸಿಂಗ್ ಅವರನ್ನು ಭೇಟಿ ಮಾಡಿ ನಿರ್ಧಾರವನ್ನು ಮರು ಪರಿಶೀಲಿಸುವಂತೆ ಕೋರುವುದಾಗಿ ಅಮನ್ ತಿಳಿಸಿದರು.

ನಗದು ಬಹುಮಾನ ಪ್ರದಾನ ಮಾಡಿದ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ

ಒಲಿಂಪಿಕ್ಸ್ ಪದಕ ವಿಜೇತರ ಪುರಸ್ಕರಿಸಿದ ಐಒಎ

ನವದೆಹಲಿ (ಪಿಟಿಐ): ಜಾವೆಲಿನ್ ತಾರೆ ನೀರಜ್ ಚೋಪ್ರಾ ಮತ್ತು ಶೂಟರ್ ಮನು ಭಾಕರ್ ಸೇರಿದಂತೆ ಪ್ಯಾರಿಸ್ ಒಲಿಪಿಕ್ಸ್‌ನಲ್ಲಿ ಪದಕಗಳನ್ನು ಗೆದ್ದ ಭಾರತದ ಕ್ರೀಡಾಪಟುಗಳಿಗೆ ಭಾರತ ಒಲಿಂಪಿಕ್ ಸಂಸ್ಥೆ ಸೋಮವಾರ ನಡೆದ ಸಮಾರಂಭದಲ್ಲಿ ನಗದು ಬಹುಮಾನ ನೀಡಿ ಪುರಸ್ಕರಿಸಿತು.

ಜಾವೆಲಿನ್‌ನಲ್ಲಿ ಬೆಳ್ಳಿ ಗೆದ್ದಿದ್ದ ಚೋಪ್ರಾ ಅವರು ದೇಶದಿಂದ ಹೊರಗಿದ್ದ ಕಾರಣ ಅವರ ಪರವಾಗಿ ಭಾರತ ಅಥ್ಲೆಟಿಕ್ ಫೆಡರೇಷನ್ ಅಧಿಕಾರಿಯೊಬ್ಬರು ₹75 ಲಕ್ಷ ಮೊತ್ತದ ಚೆಕ್ ಅನ್ನು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರಿಂದ ಸ್ವೀಕರಿಸಿದರು.

ಚೋಪ್ರಾ ಅವರ ಅಂದಿನ ಕೋಚ್ ಆಗಿದ್ದ ಜರ್ಮನಿಯ ಬಾರ್ತೊನೀಝ್ ಅವರಿಗೆ ₹20 ಲಕ್ಷ ಬಹುಮಾನ ನೀಡಲಾಯಿತು. ಚೋಪ್ರಾ ಅವರು ಪ್ರಸ್ತುತ ಝೆಕ್ ಗಣರಾಜ್ಯದ ಯಾನ್ ಜೆಲೆಜ್ನಿ ಅವರಿಂದ ತರಬೇತಿ ಪಡೆಯುತ್ತಿದ್ದಾರೆ.



2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದುಕೊಂಡಿದ್ದ ಭಾರತ ಹಾಕಿ ತಂಡದ ಆಟಗಾರರು, ವೈಯಕ್ತಿಕ ಪದಕ ಗೆದ್ದ ಕ್ರೀಡಾಪಟುಗಳನ್ನು ಸೋಮವಾರ ನವದೆಹಲಿಯಲ್ಲಿ ಭಾರತ ಒಲಿಂಪಿಕ್ ಸಂಸ್ಥೆ ಆಶ್ರಯದಲ್ಲಿ ನಡೆದ ಸಮಾರಂಭದಲ್ಲಿ ನಗದು ಬಹುಮಾನ ನೀಡಿ ಗೌರವಿಸಲಾಯಿತು. ಈ ವೇಳೆ ಕ್ರೀಡಾಪಟುಗಳು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಮತ್ತು ಐಒಎ ಅಧ್ಯಕ್ಷೆ ಪಿ.ಟಿ.ಉಷಾ ಜೊತೆ ಚಿತ್ರಕ್ಕೆ ಪೋಸ್ ನೀಡಿದರು — ಪಿಟಿಐ ಚಿತ್ರ

ಮನು ಭಾಕರ್ ಅವರು 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಗೆದ್ದ ವೈಯಕ್ತಿಕ ಕಂಚಿನ ಪದಕಕ್ಕೆ ₹50 ಲಕ್ಷ ಬಹುಮಾನ ಪಡೆದರು. 10 ಮೀ. ಮಿಶ್ರ ಪಿಸ್ತೂಲ್ ವಿಭಾಗದಲ್ಲಿ ಗೆದ್ದ ಕಂಚಿನ ಪದಕಕ್ಕಾಗಿ ಸರಬ್ಜೋತ್ ಸಿಂಗ್ ಜೊತೆ ₹50 ಲಕ್ಷ ಹಂಚಿಕೊಂಡರು. ಮನು ಅವರ ಕೋಚ್ ಜಸ್ಪಾಲ್ ರಾಣಾ ಅವರಿಗೆ ₹10 ಲಕ್ಷ ನೀಡಿ ಗೌರವಿಸಲಾಯಿತು. ಮಿಶ್ರ ತಂಡ ವಿಭಾಗದಲ್ಲಿ ಅವರು ₹15 ಲಕ್ಷ ಮೊತ್ತವನ್ನು ಅಭಿಷೇಕ್ ರಾಣಾ (ಸರಬ್ಜೋತ್ ಅವರ ಕೋಚ್) ಜೊತೆ ಹಂಚಿಕೊಂಡರು.

57 ಕೆ.ಜಿ. ಫ್ರೀಸ್ಟೈಲ್‌ನಲ್ಲಿ ಕಂಚಿನ ಪದಕ ಗೆದ್ದ ಕುಸ್ತಿಪಟು ಅಮನ್ ಸೆಹ್ರಾವತ್ ಅವರು ₹50 ಲಕ್ಷ ಬಹುಮಾನ ಪಡೆದರು. ತಮ್ಮ ಕೋಚ್ ಅಲಿ ಶಬನೋವ್ ಪರವಾಗಿ ಅಮನ್ ₹15 ಲಕ್ಷ ಮೊತ್ತ ಸ್ವೀಕರಿಸಿದರು.

50 ಮೀ. ರೈಫಲ್ 3 ಪೊಷಿಷನ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಶೂಟರ್ ಸ್ವಪ್ನಿಲ್ ಕುಸಳೆ ಅವರು ₹50 ಲಕ್ಷ ಬಹುಮಾನ ಪಡೆದರು. ಅವರ ಕೋಚ್ ದೀಪಾಲಿ ದೇಶಪಾಂಡೆ ಅವರಿಗೆ ₹15 ಲಕ್ಷ ನೀಡಿ ಪುರಸ್ಕರಿಸಲಾಯಿತು.

ಕಂಚಿನ ಪದಕ ಗೆದ್ದ ಪುರುಷರ ಹಾಕಿ ತಂಡದ ಸದಸ್ಯರಿಗೆ ತಲಾ ₹10 ಲಕ್ಷ ಬಹುಮಾನ ನೀಡಲಾಯಿತು. ಕೋಚ್ ಕ್ರೇಗ್ ಫುಲ್ಟನ್ ಅವರಿಗೆ ₹20 ಲಕ್ಷ ನೀಡಲಾಯಿತು.

ಮಾಂಡವೀಯ ಜೊತೆ ಪಿ.ಟಿ. ಉಷಾ ಅವರೂ ಪದಕ ವಿಜೇತರನ್ನು ಗೌರವಿಸಿದರು. ಒಲಿಂಪಿಕ್ ಸಂಸ್ಥೆಯ ಬಹುತೇಕ ಕಾರ್ಯಕಾರಿ ಸಮಿತಿ ಸದಸ್ಯರು ಹಾಜರಿದ್ದರು.

ಸಿಂಗಪುರ ವಿರುದ್ಧ ಭಾರತಕ್ಕೆ ಮಾಡು–ಮಡಿ ಪಂದ್ಯ ಇಂದು

ಮಡಗಾಂವ್ (ಪಿಟಿಐ): ಎಎಫ್‌ಸಿ ಏಷ್ಯನ್ ಕಪ್ 2027ರ ಪ್ರಧಾನ ಟೂರ್ನಿಯಲ್ಲಿ ಆಡುವ ಭಾರತ ತಂಡದ ಆಸೆ ಕ್ಷೀಣವಾಗಿ ಉಳಿದಿದೆ. ಇದು ಜೀವಂತವಾಗಿರಬೇಕಾದರೆ ಮಂಗಳವಾರ ಸಿಂಗಪುರ ವಿರುದ್ಧ ನಡೆಯುವ ರಿಟರ್ನ್ ಲೆಗ್ ಪಂದ್ಯವನ್ನು ಗೆಲ್ಲಲೇಬೇಕಾದ ಅನಿವಾರ್ಯತೆಯಲ್ಲಿ ಭಾರತ ತಂಡವಿದೆ.

ಗೆದ್ದರೂ, ಮುನ್ನಡೆಯುವ ಆಸೆ ಖಚಿತವೇನೂ ಇಲ್ಲ. ಅದು ಉಳಿದ ತಂಡಗಳ ಫಲಿತಾಂಶವನ್ನು ಅವಲಂಬಿಸಿದೆ. ಇದೇ ವೇಳೆ ತಂಡಕ್ಕೆ ನೆಮ್ಮದಿ ಮೂಡಿಸುವಂತೆ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ಡಿಫೆಂಡರ್ ಸುಭಾಶಿಷ್ ಬೋಸ್ ಮತ್ತು ಮಿಡ್‌ಫೀಲ್ಡರ್ ಲಾಲೆಂಗ್‌ಮವಿಯಾ ರಾಲ್ಟೆ ಅವರನ್ನು ಕೋಚ್ ಖಾಲಿದ್ ಜಮಿಲ್ ತಂಡಕ್ಕೆ ಸೇರ್ಪಡೆಗೊಳಿಸಿದ್ದಾರೆ. ಈ ಮಹತ್ವದ ಪಂದ್ಯಕ್ಕೆ ಇವರಿಬ್ಬರ ಸೇರ್ಪಡೆ 'ಬ್ಲೂ ಟೈಗರ್ಸ್' ತಂಡದ ಬಲ ಹೆಚ್ಚಿಸಿದೆ.

ಸಿಂಗಪುರ ತಂಡದ ಮಿಂಚಿನ ವೇಗದ ಫಾರ್ವರ್ಡ್‌ಗಳಾದ ಇಖ್ಸಾನ್ ಫಂದಿ ಮತ್ತು ಶಾವಲ್ ಅನ್ವರ್ ಅವರನ್ನು ನಿಯಂತ್ರಿಸಲು ಈ ಅನುಭವಿಗಳ ಸೇರ್ಪಡೆ ನೆರವಾಗಲಿದೆ.

ಇವೆರಡು ತಂಡಗಳ ಮಧ್ಯೆ ಸಿಂಗ ಪುರದಲ್ಲಿ 9ರಂದು ನಡೆದ ಸಿ ಗುಂಪಿನ ಪಂದ್ಯ 1–1 ಡ್ರಾ ಆಗಿತ್ತು. ಸಿಂಗಪುರ ತಂಡದ ರಕ್ಷಣಾ ಲೋಪದಿಂದ ರಹೀಮ್ ಅಲಿ 90ನೇ ನಿಮಿಷ ಹೊಡೆದ ಗೋಲು ಭಾರತ ತಂಡಕ್ಕೆ ಸೋಲು ತಪ್ಪಿಸಲು ನೆರವಾಯಿತು. ಭಾರತ ಈ ಡ್ರಾದಿಂದ ಒಟ್ಟು 2 ಪಾಯಿಂಟ್‌ಗಳೊಂದಿಗೆ ಗುಂಪಿನಲ್ಲಿ ಮೂರನೇ ಸ್ಥಾನದಲ್ಲಿದೆ.

ಹಾಂಗ್‌ಕಾಂಗ್ ಮತ್ತು ಚೀನಾ ತಲಾ ಏಳು ಪಾಯಿಂಟ್ಸ್ ಪಡೆದಿವೆ. ಸಿಂಗಪುರ 5 ಪಾಯಿಂಟ್ಸ್ ಗಳಿಸಿದೆ. ಬಾಂಗ್ಲಾದೇಶ (1) ಕೊನೆಯ ಸ್ಥಾನದಲ್ಲಿದೆ. ಭಾರತ ಈ ಪಂದ್ಯ ಗೆಲ್ಲಬೇಕಷ್ಟೇ ಅಲ್ಲ, ಚೀನಾ, ಹಾಂಗ್‌ಕಾಂಗ್ ಮತ್ತಷ್ಟು ಪಾಯಿಂಟ್ಸ್ ಗಳಿಸದಂತೆ ಹಾರೈಸಬೇಕಾಗಿದೆ.

ಸಿಂಗಪುರ ಅಥವಾ ಬಾಂಗ್ಲಾದೇಶ ಎದುರು ಹಿನ್ನಡೆ ಕಂಡರೆ, ಭಾರತ ತಂಡದ ಸವಾಲು ಎರಡು ಪಂದ್ಯಗಳ ಮೊದಲೇ ಮುಗಿಯಲಿದೆ.



ವೈಷ್ಣವಿ ರಾವಲ್



ಚಿರಂತ್

ಅಥ್ಲೆಟಿಕ್ಸ್: ವೈಷ್ಣವಿ, ಚಿರಂತ್‌ಗೆ ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ವೈಷ್ಣವಿ ರಾವಲ್ ಮತ್ತು ಚಿರಂತ್ ಅವರು ಭುವನೇಶ್ವರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ಚಿನ್ನದ ಪದಕಗಳಿಗೆ ಕೊರಳೊಡ್ಡಿದರು.

20 ವರ್ಷದೊಳಗಿನ ಮಹಿಳೆಯರ 800 ಮೀಟರ್ ಓಟದ ಫೈನಲ್‌ನಲ್ಲಿ ವೈಷ್ಣವಿ 2 ನಿಮಿಷ 07.84 ಸೆಕೆಂಡುಗಳಲ್ಲಿ ಗುರಿ ತಲುಪಿ ಚಾಂಪಿಯನ್ ಆದರು. 19 ವರ್ಷದ ರಾವಲ್ ಅವರಿಗೆ ಇದು ಎರಡನೇ ಸ್ವರ್ಣ ಪದಕವಾಗಿದೆ. 1500 ಮೀಟರ್ ಓಟದಲ್ಲೂ ಪ್ರಶಸ್ತಿ ಗೆದ್ದಿದ್ದರು.

18 ವರ್ಷದೊಳಗಿನ ಪುರುಷರ 200 ಮೀಟರ್ ಓಟದ ಫೈನಲ್‌ನಲ್ಲಿ ಚಿರಂತ್ 21.81 ಸೆಕೆಂಡುಗಳಲ್ಲಿ ಗುರಿ ತಲುಪಿ ಅಗ್ರಸ್ಥಾನ ಪಡೆದರು. 17 ವರ್ಷದ ಚಿರಂತ್ ಅವರಿಗೂ ಇದು ಎರಡನೇ ಪದಕ. ಅವರು 100 ಮೀ. ಓಟದಲ್ಲಿ ಬೆಳ್ಳಿ ಪದಕ ಜಯಿಸಿದ್ದರು.

20 ವರ್ಷದೊಳಗಿನ ಮಹಿಳೆಯರ 400 ಮೀಟರ್ ಹರ್ಡಲ್ಸ್‌ನಲ್ಲಿ ರಾಜ್ಯದ ಅಪೂರ್ವಾ ನಾಯಕ್ (1 ನಿ.02.56 ಸೆ) ಬೆಳ್ಳಿ ಪದಕ ಗೆದ್ದರು. ಹರಿಯಾಣದ ಮುಸ್ಕಾನ್ (1:01.75) ಚಿನ್ನದ ಪದಕ ಗೆದ್ದರು.

20 ವರ್ಷದೊಳಗಿನ ಪುರುಷರ 400 ಮೀಟರ್ ಹರ್ಡಲ್ಸ್‌ನಲ್ಲಿ ಕರ್ನಾಟಕದ ಭೂಷಣ್ ಪಾಟೀಲ(52.07ಸೆ) ಕಂಚಿನ ಪದಕ ಗೆದ್ದರು. ತಮಿಳುನಾಡಿನ ವಿಷ್ಣು (51.74), ಗುರುದೀಪ್ ಎಸ್. (52.02) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಜಯಿಸಿದರು.

ರೇಸ್: ಅತೀಕಾ ದಾಖಲೆ



ಪ್ರಶಸ್ತಿಯೊಂದಿಗೆ ಅತೀಕಾ ಮೀರ್

ಅಲ್ ಐನ್ (ಯುಎಇ), (ಪಿಟಿಐ): ಭಾರತದ ಅತೀಕಾ ಮೀರ್ ಅವರು ಇಲ್ಲಿ ನಡೆದ ಆರ್‌ಎಂಸಿ ಯುಎಇ ಕಾರ್ಟಿಂಗ್ ಚಾಂಪಿಯನ್‌ಷಿಪ್‌ನ ಮಿನಿಮ್ಯಾಕ್ಸ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಮೊದಲ ಮಹಿಳಾ ರೇಸಿಂಗ್‌ಪಟು ಎಂಬ ಹಿರಿಮೆಗೆ ಪಾತ್ರವಾದರು.

ಶ್ರೀನಗರದ 10 ವರ್ಷದ ಅತೀಕಾ ಅವರು ಭಾನುವಾರ ಅಲ್ ಐನ್ ರೇಸ್‌ವೇಯಲ್ಲಿ ನಾಲ್ಕು ಸೆಕೆಂಡುಗಳ ಅಂತರದಿಂದ ಗೆಲುವು ಸಾಧಿಸಿದರು. ಪುರುಷರು ಸೇರಿದಂತೆ 15 ದೇಶಗಳ ರೇಸ್‌ಪಟುಗಳಿದ್ದ ಸ್ಪರ್ಧೆಯ ನಾಲ್ಕನೇ ಲ್ಯಾಪ್‌ನಲ್ಲಿ ಅತೀಕಾ ಮುನ್ನಡೆ ಸಾಧಿಸಿದರು.

‘ಮೊದಲ ನಾಲ್ಕು ಲ್ಯಾಪ್‌ಗಳು ನನ್ನ ಪಾಲಿಗೆ ಕಠಿಣವಾಗಿದ್ದವು. ಆದರೆ, ನಾನು ಹೋರಾಟವನ್ನು ಬಿಡದೇ ವೇಗವನ್ನು ಹೆಚ್ಚಿಸುತ್ತಾ ಮುನ್ನುಗ್ಗಿದ್ದರಿಂದ ಗೆಲುವು ಸಾಧ್ಯವಾಯಿತು. ಮಾರ್ಕ್ ಬೈನ್ಸ್ ನೇತೃತ್ವದ ಆಕ್ಸೆಲ್ ಜಿಪಿ ತಂಡ ಮತ್ತು ಮೆಕ್ಯಾನಿಕ್ ಸಿಆರ್‌ಎ ಅವರಿಗೆ ಧನ್ಯವಾದಗಳು’ ಎಂದು ಜಮ್ಮು ಕಾಶ್ಮೀರದ ಅತೀಕಾ ಪ್ರತಿಕ್ರಿಯಿಸಿದರು.

ಕಳೆದ ವಾರಾಂತ್ಯದಲ್ಲಿ ಅತೀಕಾ ಕೈಗೆ ಗಾಯಗೊಂಡರೂ, ಯುಎಇ ಐಎಎಂಇ ಸರಣಿಯಲ್ಲಿ ಅಗ್ರ 10ರಲ್ಲಿ ಸ್ಥಾನ ಪಡೆದಿದ್ದರು.

ಟೆನಿಸ್: ಕಾಶ್ವಿ ರನ್ನರ್ ಅಪ್



ಬೆಂಗಳೂರು: ಕರ್ನಾಟಕದ ಕಾಶ್ವಿ ವೆಂಕಟ್ ಕೋಣಂಕಿ ಅವರು ಜೈಪುರದಲ್ಲಿ ನಡೆದ ಎಐಟಿಎ 12 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಬಾಲಕಿಯರ ಸಿಂಗಲ್ಸ್‌ನಲ್ಲಿ ರನ್ನರ್‌ಅಪ್ ಪ್ರಶಸ್ತಿ ಗೆದ್ದುಕೊಂಡರು.

ಬೆಂಗಳೂರಿನ 9 ವರ್ಷ ವಯಸ್ಸಿನ ಈ ಆಟಗಾರ್ತಿ, ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ 0–6, 2–6 ರಿಂದ ಅಗ್ರ ಶ್ರೇಯಾಂಕದ ಪ್ರಿಯಾಂಶಿ ಚಟರ್ಜಿ ಎದುರು ಪರಾಭವಗೊಂಡರು.

ಬಿಟ್ಟು ಬಿಟ್ಟು ಬರುತ್ತಿದ್ದ ಮಳೆಯ ನಡುವೆ ಪಶ್ಚಿಮ ಬಂಗಾಳದ ಆಟಗಾರ್ತಿ ಪ್ರಿಯಾಂಶಿ ಸುಲಭವಾಗಿ ಜಯಿಸಿದರು.

ಈ ಋತುವಿನಲ್ಲಿ ಎರಡು ಸೂಪರ್ ಸರಣಿ ಪ್ರಶಸ್ತಿ ಗೆದ್ದಿದ್ದ ಕಾಶ್ವಿ ಅವರಿಗೆ ಮೂರನೇ ಪ್ರಶಸ್ತಿ ಹೊಸ್ತಿಲಲ್ಲಿ ನಿರಾಸೆಯಾಯಿತು.